ಶುಕ್ರವಾರ, ಏಪ್ರಿಲ್ 19, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಾಗೃತಿ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಮ್ಮುವಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಅಭಿಯಾನದಲ್ಲಿ ಶಾಲಾ ಮಕ್ಕಳು ಭಾಗವಹಿಸಿದ್ದರು



ಮಹಿಳಾ ಆಯೋಗದ ತಾರತಮ್ಯ: ಜೆಡಿಎಸ್‌ನಿಂದ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಹಿಳಾ ಆಯೋಗ ತಾರತಮ್ಯ ಮಾಡುತ್ತಿದೆ ಎಂದು ಜೆಡಿಎಸ್ ರಾಜ್ಯ ಘಟಕ ಆರೋಪಿಸಿದೆ.

ಈ ಕುರಿತು 'ಎಕ್ಸ್‌'ನಲ್ಲಿ ಮಾಹಿತಿ ಹಂಚಿಕೊಂಡಿರುವ ಜೆಡಿಎಸ್, 'ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರ ಹೇಳಿಕೆ ವಿರುದ್ಧ ವಿದ್ಯುತ್ ವೇಗದಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಿ ಕೊಂಡಿರುವ ಆಯೋಗ, ಕಾಂಗ್ರೆಸ್ ನಾಯಕರ ವಿಚಾರದಲ್ಲಿ ಮೌನವಹಿಸಿದೆ' ಎಂದು ದೂರಿದೆ.

'ಕುಮಾರಸ್ವಾಮಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಮಹಿಳಾ ಆಯೋಗದ ಅಧ್ಯಕ್ಷರು ಅತ್ಯುತ್ಸಾಹದಿಂದ ಮಾಧ್ಯಮಗಳಿಗೆ ಹೇಳಿಕೆ ಕೊಟ್ಟಿದ್ದಾರೆ. ನಟಿ–ಸಂಸದೆ ಹೇಮಾಮಾಲಿನಿ ಅವರ ಬಗ್ಗೆ ಹೇಳಿಕೆ ಕೊಟ್ಟ ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಬಗ್ಗೆ ಚಕಾರ ಎತ್ತಿಲ್ಲ. 'ಮಹಿಳೆಯರು ಅಡುಗೆ ಮನೆಗೇ ಲಾಯಕ್ಕು' ಎಂದಿದ್ದ ದಾವಣಗೆರೆ ಶಾಸಕ ಶಾಮನೂರು ಶಿವಶಂಕರಪ್ಪ ಬಗ್ಗೆ ಜಾಣ ಮೌನವಹಿಸಿದ್ದಾರೆ' ಎಂದು ಟೀಕಿಸಿದೆ.

ಸಿ.ಸಿ.ಟಿ.ವಿ. ಕ್ಯಾಮೆರಾ ಕಣ್ಗಾವಲಿನಲ್ಲಿ ರಾಜ್ಯದ 737 ಕೇಂದ್ರಗಳಲ್ಲಿ ನಡೆದ ಪರೀಕ್ಷೆ

ಸಿಇಟಿ: ಮೊದಲ ದಿನ ಸುಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಗುರುವಾರ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಸುಸೂತ್ರವಾಗಿ ನೆರವೇರಿತು.

ಸಿ.ಸಿ.ಟಿ.ವಿ. ಕ್ಯಾಮೆರಾ ಕಣ್ಗಾವಲಿನ ನಡುವೆ ರಾಜ್ಯದ 737 ಕೇಂದ್ರಗಳಲ್ಲಿ ಬೆಳಿಗ್ಗೆ ಜೀವಶಾಸ್ತ್ರ, ಮಧ್ಯಾಹ್ನದ ನಂತರ ಗಣಿತ ಪತ್ರಿಕೆಗಳ ಪರೀಕ್ಷೆಗಳು ನಡೆದವು. ಹೆಸರು ನೋಂದಾಯಿಸಿಕೊಂಡಿದ್ದ 3.49 ಲಕ್ಷ ಅಭ್ಯರ್ಥಿಗಳಲ್ಲಿ ಶೇ 80ರಷ್ಟು ಹಾಜರಾಗಿದ್ದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್‌. ರಮ್ಯಾ ಮಲ್ಲೇಶ್ವರದ ಸರ್ಕಾರಿ ಪಿಯು ಕಾಲೇಜಿಗೆ ಭೇಟಿ ನೀಡಿ ಪರೀಕ್ಷಾ ವ್ಯವಸ್ಥೆ ವೀಕ್ಷಿಸಿದರು. ಕುಡಿಯುವ ನೀರು ಸೇರಿದಂತೆ ವಿದ್ಯಾರ್ಥಿಗಳಿಗೆ ಒದಗಿಸಿದ್ದ ಮೂಲಸೌಲಭ್ಯಗಳ ಮಾಹಿತಿ ಪಡೆದುಕೊಂಡರು.



ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಪಿಯು ಕಾಲೇಜು ಕೇಂದ್ರಕ್ಕೆ ಗುರುವಾರ ಸಿಇಟಿ ಬರೆಯಲು ಬಂದಿದ್ದ ವಿದ್ಯಾರ್ಥಿಗಳು
–ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಇಂದಿನ ವಿಷಯಗಳು: ಭೌತಶಾಸ್ತ್ರ, ರಸಾಯನಶಾಸ್ತ್ರ (ಏ.19)
ಪರೀಕ್ಷಾ ಸಮಯ: ಬೆಳಿಗ್ಗೆ 10.30–11.50 ಮಧ್ಯಾಹ್ನ 2.30–3.50

20ರಂದು ಕನ್ನಡ ಪರೀಕ್ಷೆ: ಹೊರನಾಡು ಮತ್ತು ಗಡಿನಾಡು ಕನ್ನಡ ಅಭ್ಯರ್ಥಿಗಳಿಗೆ ಬೆಳಗಾವಿ, ಮಂಗಳೂರು ಮತ್ತು ಬೆಂಗಳೂರು ಕೇಂದ್ರಗಳಲ್ಲಿ ಇದೇ 20ರಂದು ಬೆಳಿಗ್ಗೆ 11.30ರಿಂದ 12.30ರ ವರೆಗೆ ಕನ್ನಡ ಪರೀಕ್ಷೆ ನಡೆಯಲಿದೆ. ಈ ಬಾರಿ ಒಟ್ಟು 1,545 ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲಿದ್ದಾರೆ.

ಪಠ್ಯದ ಹೊರಗಿನ ಪ್ರಶ್ನೆ: ಆಕ್ಷೇಪಣೆಗೆ ನಾಳೆ ವ್ಯವಸ್ಥೆ

ಜೀವವಿಜ್ಞಾನ ಮತ್ತು ಗಣಿತ ಪ್ರಶ್ನೆಪತ್ರಿಕೆಗಳಲ್ಲಿ ಪಠ್ಯ ಹೊರತಾದ ಹಲವು ಪ್ರಶ್ನೆಗಳನ್ನು ಕೇಳಲಾಗಿದೆ. ಹಾಗಾಗಿ, ಮರು ಪರೀಕ್ಷೆ ನಡೆಸಬೇಕು ಎಂದು ಮಂಗಳೂರು, ಬೀದರ್, ರಾಯಚೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅಭ್ಯರ್ಥಿಗಳು ಹಾಗೂ ಅಧ್ಯಾಪಕರು ಒತ್ತಾಯಿಸಿದರು.

'ಜೀವ ವಿಜ್ಞಾನ ವಿಷಯದಲ್ಲಿ 13 ಹಾಗೂ ಗಣಿತ ವಿಷಯದಲ್ಲಿ 16 ಪ್ರಶ್ನೆಗಳು ಕಳೆದ ವರ್ಷ ಪಠ್ಯಕ್ರಮದಿಂದ ಕೈಬಿಟ್ಟಿದ್ದ ಪಾಠಗಳಿಗೆ ಸಂಬಂಧಿಸಿವೆ. ಅಂಥ ಪ್ರಶ್ನೆಗಳನ್ನು ಬಿಡಿಸಲು ಸಮಯ ವ್ಯರ್ಥವಾಗಿದೆ. ಇದರಿಂದ ಕೆಲ ಪ್ರಶ್ನೆಗಳಿಗೆ ಉತ್ತರಿಸಲು ಸಮಯ ಸಾಕಾಗಲಿಲ್ಲ' ಎಂದು ಹಲವು ವಿದ್ಯಾರ್ಥಿಗಳು ದೂರಿದರು.

'ಆಯೋಗದ ವೆಬ್‌ಸೈಟ್‌ನಲ್ಲಿ, ಕಡಿತಗೊಂಡ ಪಠ್ಯಕ್ರಮ ಹೊರತುಪಡಿಸಿ, ಹೊಸ ಪಠ್ಯಕ್ರಮದ ಪ್ರಕಾರವೇ ಸಿಇಟಿ ಪರೀಕ್ಷೆಗಳು ನಡೆಯುತ್ತವೆ ಎಂದು ಪ್ರಕಟಿಸಲಾಗಿತ್ತು. ಈಗ ಗ್ರೇಸ್ ಅಂಕ ಕೊಟ್ಟರೆ ಪ್ರಯೋಜನವಿಲ್ಲ. ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕಾದರೆ, ಪುನರ್ ಪರೀಕ್ಷೆ ನಡೆಸಬೇಕು' ಎಂದು ಒತ್ತಾಯಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ, 'ಅನುಮಾನಗಳು ಇದ್ದರೆ ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಆಕ್ಷೇಪಣೆ ಸಲ್ಲಿಸಲು ಏ.20ರಂದು ಕೆಇಎ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗುವುದು. ವಿಷಯ ತಜ್ಞರ ತಂಡ ಸಲಹೆಯ ನೀಡಿದ ನಂತರ ಪ್ರಾಧಿಕಾರ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಲಿದೆ. ಈ ವಿಷಯದಲ್ಲಿ ಆತಂಕಪಡುವ ಅಗತ್ಯ ಇಲ್ಲ' ಎಂದರು.

ಸುದ್ದಿ 2 ನಿಮಿಷ

ಕಾಂಗ್ರೆಸ್ ಗೆದ್ದರೆ ಅಲ್ಲಾಹ್ ಎಂದು ಕೂಗಬೇಕಾಗುತ್ತದೆ: ರುದ್ರೇಶ್

ಚಾಮರಾಜನಗರ: 'ಇದೇ 26ರಂದು ನಡೆಯಲಿರುವ ಮತದಾನದ ಸಂದರ್ಭದಲ್ಲಿ ಹಿಂದೂಗಳು ಒಂದು ಕ್ಷಣ ಮೈಮರೆತರೆ, ರಾಜ್ಯದಲ್ಲಿ ಜೈ ಶ್ರೀರಾಮ್, ಭಾರತ ಮಾತಾ ಕೀ ಜೈ ಎಂದು ಘೋಷಣೆ ಕೂಗುವುದಕ್ಕೆ ಆಗುವುದಿಲ್ಲ. ಅಲ್ಲಾಹು ಅಕ್ಬರ್ ಎಂದು ಕೂಗಬೇಕಾಗುತ್ತದೆ' ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಎಂ.ರುದ್ರೇಶ್ ಗುರುವಾರ ಪ್ರತಿಪಾದಿಸಿದರು.



ಬೆಂಗಳೂರಿನಲ್ಲಿ ಜೈಶ್ರೀರಾಮ್ ಎಂದು ಕೂಗಿದವರ ಮೇಲೆ ನಡೆದ ಹಲ್ಲೆ ಪ್ರಕರಣದ ಕುರಿತು ಪ್ರತಿಕ್ರಿಯಿಸಿ, 'ಈ ಘಟನೆಯನ್ನು ನೋಡಿದರೆ ನಾವು ಕರ್ನಾಟಕದಲ್ಲಿ ದ್ದೇವೆಯೋ ಅಥವಾ ಪಾಕಿಸ್ತಾನದಲ್ಲಿದ್ದೇವೆಯೋ ಎಂದೆನಿಸುತ್ತದೆ. ಇಲ್ಲಿ ಜೈ ಶ್ರೀರಾಮ್ ಎಂದು ಹೇಳುವುದಕ್ಕೆ ಸ್ವಾತಂತ್ರ್ಯವಿಲ್ಲ. ನಾಳೆ ದಿನ ಕಾಂಗ್ರೆಸ್ ಗೆದ್ದರೆ ಹಾಗೆ ಕೂಗಲಾಗುವುದಿಲ್ಲ' ಎಂದರು.

'ಕಾಂಗ್ರೆಸ್ ಪಕ್ಷವು ಕೆಟ್ಟ ಮುಸ್ಲಿಮರನ್ನು ಓಲೈಸಿಕೊಂಡು ಬಂದಿದೆಯೇ ವಿನಾ ಅಬ್ದುಲ್ ಕಲಾಂ ಅವರಂತಹ ಒಳ್ಳೆಯ ಮುಸಲ್ಮಾನರನ್ನಲ್ಲ. ನಾಳೆ ದಿನ ಚಾಮರಾಜನಗರದ ಹಿಂದೂ ಮಕ್ಕಳ ಮೇಲೆ ಹಲ್ಲೆಯೂ ಆಗುತ್ತದೆ, ಕೊಲೆಯೂ ನಡೆಯುತ್ತದೆ' ಎಂದು ಹೇಳಿದರು.

ನಾಮಪತ್ರ ಸಲ್ಲಿಕೆಯ ಜತೆ ಅಭ್ಯರ್ಥಿಗಳ ಶಕ್ತಿ ಪ್ರದರ್ಶನ

ಬೆಂಗಳೂರು: ರಾಜ್ಯದಲ್ಲಿ ನಡೆಯುವ ಎರಡನೇ ಹಂತದ 14 ಲೋಕಸಭಾ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಸುವ ಅವಧಿ ಮುಕ್ತಾಯಕ್ಕೆ ಮುನ್ನಾದಿನವಾದ ಗುರುವಾರ ವಿವಿಧ ಪಕ್ಷಗಳ ಪ್ರಮುಖ ಅಭ್ಯರ್ಥಿಗಳ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಯಿತು.

7 ಮಹಿಳೆಯರು ಸೇರಿದಂತೆ ಒಂದೇ ದಿನ 90 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಇದರೊಂದಿಗೆ ಈ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದವರ ಒಟ್ಟು ಸಂಖ್ಯೆ 241 ತಲುಪಿದೆ. ಏ. 19 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ.

ಶಿವಮೊಗ್ಗದಲ್ಲಿ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ರಾಘವೇಂದ್ರ ನಾಮಪತ್ರ ಸಲ್ಲಿಸುವ ಮೊದಲು ನಡೆಸಿದ ಮೆರವಣಿಗೆ ಬಿಜೆಪಿ–ಜೆಡಿಎಸ್ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆಯಾಯಿತು. ಯಡಿಯೂರಪ್ಪ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ, ಶಾಸಕ ಬಸವರಾಜ ಬೊಮ್ಮಾಯಿ, ಮಾಜಿ ಶಾಸಕರಾದ ಸಿ.ಟಿ. ರವಿ, ಕುಮಾರ್ ಬಂಗಾರಪ್ಪ ಮತ್ತಿತರರರು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಬೀದರ್‌ನಲ್ಲಿ ಕೇಂದ್ರ ಸಚಿವರೂ ಆದ ಬಿಜೆಪಿ ಅಭ್ಯರ್ಥಿ ಭಗವಂತ ಖೂಬಾ, ಬಾಗಲಕೋಟೆಯಲ್ಲಿ ಪಿ.ಸಿ. ಗದ್ದಿಗೌಡರ್, ಧಾರವಾಡದಲ್ಲಿ ಪಕ್ಷೇತರ ಅಭ್ಯರ್ಥಿ ದಿಂಗಾಲೇಶ್ವರ ಶ್ರೀ, ದಾವಣಗೆರೆಯಲ್ಲಿ ಕಾಂಗ್ರೆಸ್‌ನ ಪ್ರಭಾ ಮಲ್ಲಿಕಾರ್ಜುನ್, ಚಿಕ್ಕೋಡಿಯಲ್ಲಿ ಪ್ರಿಯಾಂಕಾ ಜಾರಕಿಹೊಳಿ ಅವರು ಕಾರ್ಯಕರ್ತರ ಜೈಕಾರದ ಮಧ್ಯೆ ನಾಮಪತ್ರ ಸಲ್ಲಿಸಿದರು.

ಅನಿರ್ಬಂಧಿತ ವಿದ್ಯುತ್ ಸರ್ಕಾರಕ್ಕೆ ಅಂತಿಮ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹ ಬಳಕೆದಾರರಿಗೆ ಮಾಲಿನ್ಯರಹಿತ, ಸುರಕ್ಷಿತ, ಶುದ್ಧ ಹಾಗೂ ಕೈಗೆಟುಕುವ ದರದಲ್ಲಿ ಅನಿರ್ಬಂಧಿತ ವಿದ್ಯುತ್ ಪೂರೈಸಲು ಕ್ರಿಯಾ ಯೋಜನೆ ರೂಪಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಉತ್ತರಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕೊನೆಯ ಅವಕಾಶ ನೀಡಿದೆ.

ಈ ಸಂಬಂಧ ಕೋರಮಂಗಲದ ಮುರಳೀಧರ ರಾವ್ 2022ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಇದು ಕೊನೆಯ ಅವಕಾಶ. ಇನ್ನು ಮುಂದೆ ಕಾಲಾವಕಾಶ ನೀಡಲಾಗುವುದಿಲ್ಲ' ಎಂದು ಪ್ರತಿವಾದಿಗಳಿಗೆ ತಾಕೀತು ಮಾಡಿದ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಉತ್ತರಿಸುವಂತೆ ಸೂಚಿಸಿದೆ. ವಿಚಾರಣೆಯನ್ನು ಜೂನ್ 14ಕ್ಕೆ ಮುಂದೂಡಲಾಗಿದೆ.

ಅರ್ಜಿಯಲ್ಲಿ ಏನಿದೆ?: 'ಮಾಲಿನ್ಯರಹಿತ, ಸುರಕ್ಷಿತ, ಶುದ್ಧ ಹಾಗೂ ಕೈಗೆಟುಕುವ ದರದಲ್ಲಿ ಅನಿರ್ಬಂಧಿತ ವಿದ್ಯುತ್ ಪಡೆಯುವುದು ಗೃಹ ಬಳಕೆದಾರರ ಹಕ್ಕು. ಅದನ್ನು ಪೂರೈಸುವುದು ಬೆಸ್ಕಾಂನ ಜವಾಬ್ದಾರಿ. ಆದರೆ, ಬೆಸ್ಕಾಂನ ಅಸಾಮರ್ಥ್ಯದಿಂದಾಗಿ ಗ್ರಾಹಕರಿಗೆ ಸಾಕಷ್ಟು ತೊಂದರೆ ಉಂಟಾಗುತ್ತಿದೆ. ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳದ ಕಾರಣ 2015ರಿಂದ 2022ರವರೆಗೆ ನೂರಕ್ಕೂ ಹೆಚ್ಚು ಸಾರ್ವಜನಿಕರು ವಿದ್ಯುತ್ ಅವಘಡಗಳಿಗೆ ಈಡಾಗಿ ಪ್ರಾಣ ಕಳೆದುಕೊಂಡಿದ್ದಾರೆ. ವಿದ್ಯುತ್ ಬಳಕೆಯಲ್ಲಿನ ದುರ್ಬಲ ವ್ಯವಸ್ಥೆಯಿಂದಾಗಿ ಸಾರ್ವಜನಿಕರು ಡೀಸೆಲ್ ಜನರೇಟರ್‌ಗಳನ್ನು ಹೆಚ್ಚಾಗಿ ಅವಲಂಬಿಸುವಂತಾಗಿದೆ. ಇದು ದುಬಾರಿ ವೆಚ್ಚ ಮತ್ತು ಮಾಲಿನ್ಯಕ್ಕೂ ಕಾರಣವಾಗುತ್ತಿದೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

'ಬೆಸ್ಕಾಂ ಸೇರಿದಂತೆ ರಾಜ್ಯದಾದ್ಯಂತ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಪುನರ್‌ರಚಿಸುವ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಇದಕ್ಕಾಗಿ ದೆಹಲಿ ಮಾದರಿಯನ್ನು ಅನುಸರಿಸುವಂತೆ ಸರ್ಕಾರ ಹಾಗೂ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಅಂಗವಿಕಲ ಪ್ರಾಧ್ಯಾಪಕರ ಎಚ್‌ಆರ್‌ಎ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾಂಖ್ಯಿಕ ಸಂಸ್ಥೆಯಲ್ಲಿ (ಐಎಸ್‌ಐ) ಪ್ರಾಧ್ಯಾಪಕ ಆಗಿ ಕಾರ್ಯನಿರ್ವಹಿಸುತ್ತಿರುವ ಅಂಗವಿಕಲರೂ ಆದ ಕೌಶಿಕ್ ಮಜುಂದಾರ್ ಅವರ ಎಚ್‌ಆರ್‌ಎ (ಮನೆ ಬಾಡಿಗೆ ಭತ್ಯೆ) ತಡೆ ಹಿಡಿದ ಕೇಂದ್ರ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಎಚ್‌ಆರ್‌ಎ ತಡೆ ಹಿಡಿದಿದ್ದ ಕ್ರಮವನ್ನು ಪ್ರಶ್ನಿಸಿ ಕೌಶಿಕ್ ಮಜುಂದಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅಂಗವಿಕಲರಿಗೆ ಅಗತ್ಯವಾದ ಮೂಲಸೌಕರ್ಯ ಕಲ್ಪಿಸುವುದು ನೈತಿಕ ಅಗತ್ಯ ಮಾತ್ರವಲ್ಲ. ಶಾಸನಾತ್ಮಕ ಬಾಧ್ಯತೆಯೂ ಆಗಿದೆ. ಹಾಗಾಗಿ, ಅರ್ಜಿದಾರರು ನಿರ್ಮಿಸುತ್ತಿರುವ ಹೊಸ ಕಟ್ಟಡ ನಿರ್ಮಾಣದ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಬೇಕು ಮತ್ತು 2016ರ ಅಂಗವಿಕಲರ ಹಕ್ಕುಗಳ ಕಾಯ್ದೆಯ ಅಡಿ ಉಲ್ಲೇಖಿಸಿರುವಂತೆ ಅವರಿಗೆ ಎಲ್ಲಾ ಅಗತ್ಯ ಮೂಲಸೌಕರ್ಯ ಒದಗಿಸಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಸಿ.ಸೀತಾರಾಮ ರಾವ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಪೋಲಿಯೊ ಪೀಡಿತ ಕೌಶಿಕ್ ಮಜುಂದಾರ್ ಶೇ 85ರಷ್ಟು ಅಂಗವಿಕಲತೆ ಹೊಂದಿದ್ದಾರೆ. ಅವರು 2006ರಲ್ಲಿ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. 2008ರಲ್ಲಿ ಸಹಾಯಕ ಪ್ರಾಧ್ಯಾಪಕ ಆಗಿ ಆಯ್ಕೆಯಾಗಿದ್ದರು. ಕೋಲ್ಕತ್ತ ಕೇಂದ್ರವನ್ನು ಆಯ್ಕೆ ಮಾಡಿದ್ದರೂ ಅವರನ್ನು ಬೆಂಗಳೂರು ಕೇಂದ್ರಕ್ಕೆ ನಿಯೋಜಿಸಲಾಗಿತ್ತು. ಸೇವೆಗೆ ಸೇರುವ ಮೊದಲೇ ಅವರು ತಮ್ಮ ದೈಹಿಕ ಸ್ಥಿತಿಗತಿ ಮತ್ತು ಬೆಂಗಳೂರು ಕೇಂದ್ರದಲ್ಲಿ ವಸತಿ ಅಗತ್ಯತೆ ಬಗ್ಗೆ ಇ–ಮೇಲ್ ಮೂಲಕ ಮಾಹಿತಿ ನೀಡಿದ್ದರು.

ಬೆಂಗಳೂರಿಗೆ ಬಂದಮೇಲೆ ಅವರಿಗೆ ಕ್ಯಾಂಪಸ್ ಅತಿಥಿ ಗೃಹದಲ್ಲಿ ಒಂದು ಕೋಣೆಯಲ್ಲಿ ವಸತಿ ಸೌಲಭ್ಯ ಒದಗಿಸಲಾಗಿತ್ತು. 2009ರಿಂದಲೂ ಅವರು ಅದೇ ಅತಿಥಿ ಗೃಹದಲ್ಲಿದ್ದರೂ ದೈಹಿಕ ಸ್ಥಿತಿಗತಿಗೆ ಅನುಕೂಲಕರ ವಾತಾವರಣ ಇರುವ ವ್ಯವಸ್ಥೆಯನ್ನು ಕಲ್ಪಿಸಿರಲಿಲ್ಲ. ಏತನ್ಮಧ್ಯೆ, ಅವರಿಗೆ ನೀಡಲಾಗುತ್ತಿದ್ದ ಎಚ್‌ಆರ್‌ಎ ಅನ್ನೂ ತಡೆ ಹಿಡಿಯಲಾಗಿತ್ತು.


ಕೇಂದ್ರ ಚುನಾವಣಾ ಆಯುಕ್ತರಿಗೆ ಹೈಕೋರ್ಟ್ ನೋಟಿಸ್

ದಾರುಕೇಶ್ವರಯ್ಯ ನಿರ್ಬಂಧಕ್ಕೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗೆ (ಎಸ್‌ಸಿ) ಮೀಸಲಾದ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಬೇಡ ಜಂಗಮ ಜಾತಿಯ ಪ್ರಮಾಣಪತ್ರ ಪಡೆದು ಸ್ಪರ್ಧಿಸಿ ಕಣದಲ್ಲಿ ಉಳಿದಿರುವ ಎಂ.ಪಿ. ದಾರುಕೇಶ್ವರಯ್ಯ ಅವರ ನಾಮಪತ್ರ ಸ್ವೀಕಾರ ಮಾಡಿರುವುದನ್ನು ವಜಾಗೊಳಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಗೂಳಿಹಟ್ಟಿಯ ಆರ್‌.ಕೃಷ್ಣಮೂರ್ತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ, 'ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರ ಅಣ್ಣನಾದ ದಾರುಕೇಶ್ವರಯ್ಯ ಬೋಗಸ್ ಜಾತಿ ಪ್ರಮಾಣಪತ್ರ ಪಡೆದು ಚುನಾವಣಾ ಕಣದಲ್ಲಿ ಉಳಿದಿದ್ದಾರೆ. ಎಸ್‌ಸಿಗೆ ಮೀಸಲಾದ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಹೊಣೆ ಹೊತ್ತ ಚುನಾವಣಾಧಿಕಾರಿ ಅವರ ನಾಮಪತ್ರ ಸ್ವೀಕಾರ ಮಾಡಿರುವುದು ಕಾನೂನುಬಾಹಿರ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ದಾರುಕೇಶ್ವರಯ್ಯ ಲಿಂಗಾಯತ ಜಂಗಮ ಜಾತಿಗೆ ಸೇರಿದವರಾಗಿದ್ದಾರೆ. ಆದರೆ, ಅವರು ಬೇಡ ಜಂಗಮದ ಪರಿಶಿಷ್ಟ ಜಾತಿಯ ಪ್ರಮಾಣಪತ್ರವನ್ನು ಸುಳ್ಳು ದಾಖಲೆ ನೀಡಿ ಪಡೆಯುವ ಮೂಲಕ ಪರಿಶಿಷ್ಟ ಜಾತಿಯ ಸೌಲಭ್ಯ ಕಬಳಿಸಿದ್ದಾರೆ. ಅವರ ನಾಮಪತ್ರ ಸ್ವೀಕಾರ ಅಕ್ರಮ. ಆದ್ದರಿಂದ, ಅವರ ಹೆಸರನ್ನು ಮತಪತ್ರ ಅಥವಾ ಇವಿಎಂ, ವಿವಿ ಪ್ಯಾಟ್‌ನಲ್ಲಿ ಪ್ರದರ್ಶಿಸದಂತೆ ಕೇಂದ್ರದ ಮುಖ್ಯ ಚುನಾವಣಾ ಆಯುಕ್ತರು ಮತ್ತು ರಾಜ್ಯ ಚುನಾವಣಾ ಆಯುಕ್ತರಿಗೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ದಾರುಕೇಶ್ವರಯ್ಯ, ಕೇಂದ್ರ ಮುಖ್ಯ ಚುನಾವಣಾ ಆಯುಕ್ತರು, ರಾಜ್ಯದ ಮುಖ್ಯ ಚುನಾವಣಾಧಿಕಾರಿ, ಚಿತ್ರದುರ್ಗ ಜಿಲ್ಲಾ ಚುನಾವಣಾಧಿಕಾರಿ ಸೇರಿದಂತೆ ಪ್ರಕರಣದ ಎಲ್ಲಾ ಆರು ಜನ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ವಿಚಾರಣೆಯನ್ನು ಶುಕ್ರವಾರಕ್ಕೆ (ಏ.19) ಮುಂದೂಡಿದೆ. ಅರ್ಜಿದಾರರ ಪರ ಜಿ.ಎಸ್‌.ಕಾವ್ಯ ಅವರು ವಕಾಲತ್ತು ವಹಿಸಿದ್ದಾರೆ.

ಬೆಂಬಲಿಗರಿಂದ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ರಾಯಚೂರು: ಮಾಜಿ ಸಂಸದ ಬಿ.ವಿ. ನಾಯಕ ಬೆಂಬಲಿಗರು ಬಿ.ವಿ.ನಾಯಕ ಹೆಸರಿನಲ್ಲಿ ಬಿಜೆಪಿ ಅಭ್ಯರ್ಥಿ ಎಂದು ಗುರುವಾರ ನಾಮಪತ್ರ ಸಲ್ಲಿಸಿದ್ದಾರೆ. ಈ ಬೆಳವಣಿಗೆಯು ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಿದೆ.



ಬಿ.ವಿ.ನಾಯಕ

ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನದಾಸ ಅಗರವಾಲ್ ಏ. 13ರಂದು ರಾಯಚೂರಿಗೆ ಬಂದು ಟಿಕೆಟ್ ಆಕಾಂಕ್ಷಿಗಳು ಹಾಗೂ ಬಿಜೆಪಿ ಮುಖಂಡರ ಸಭೆ ನಡೆಸಿ ರಾಜಾ ಅಮರೇಶ್ವರ ನಾಯಕ ಅವರೇ ಅಧಿಕೃತ ಅಭ್ಯರ್ಥಿ ಎಂದು ಘೋಷಿಸಿದ್ದರು. ಬಿ.ವಿ.ನಾಯಕ ಅವರ ಮೂಲಕವೇ ರಾಜಾ ಅಮರೇಶ್ವರ ನಾಯಕ ಅವರಿಗೆ ಬಿ.ಫಾರ್ಮ್ ಕೊಡಿಸಿದ್ದರು.

ಆದರೆ, ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ್ದ ಬಿ.ವಿ ನಾಯಕ, 'ಪಕ್ಷದ ಟಿಕೆಟ್‌ಗಾಗಿ ಕೊನೆಯ ಕ್ಷಣದವರೆಗೂ ಕಾಯುವೆ' ಎಂದು ಹೇಳಿಕೆ ನೀಡಿದ್ದರು.

ರಾಜಾ ಅಮರೇಶ್ವರ ನಾಯಕ ಅವರು ಗುರುವಾರ ನಾಮಪತ್ರ ಸಲ್ಲಿಸುವ ವೇಳೆಗೆ ಬರಬೇಕಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಗೈರಾಗಿದ್ದರು. ಪಕ್ಷದ ಜಿಲ್ಲೆಯ ಮುಖಂಡರು ಸಹ ಸಭೆಗೆ ಬಂದಿರಲಿಲ್ಲ. ಕೊನೆಯ ಕ್ಷಣದಲ್ಲಿ ಮೆರವಣಿಗೆಯನ್ನೂ ರದ್ದುಪಡಿಸಲಾಯಿತು.

ಟಿಕೆಟ್ ಗೊಂದಲ ಇನ್ನೂ ನಿವಾರಣೆಯಾಗಿಲ್ಲ. ಪ್ರಚಾರ ಸಭೆಗೆ ಬರಲು ಕಾರ್ಯಕರ್ತರೂ ಹಿಂದೇಟು ಹಾಕುತ್ತಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ.

'ಸೂಚಕ ಕೆ. ಮಲ್ಲಿಕಾರ್ಜುನ ಅವರು ನನ್ನ ಸೂಚನೆಯ ಮೇರೆಗೇ ಗುರುವಾರ ಬಿಜೆಪಿಯಿಂದ ನನ್ನ ಹೆಸರಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಕಲಬುರಗಿ ಹೈಕೋರ್ಟ್ ಪೀಠದಲ್ಲಿ ರಾಜಾ ಅಮರೇಶ್ವರ ನಾಯಕ ಅವರ ಜಾತಿ ಪ್ರಮಾಣಪ್ರತದ ವಿಚಾರಣೆ ಇದೆ. ತೀರ್ಪು ಹೊರ ಬಂದ ನಂತರ ಅಂತಿಮ ತೀರ್ಮಾನ ಕೈಗೊಳ್ಳುವೆ' ಎಂದು ಬಿ.ವಿ.ನಾಯಕ ಪ್ರತಿಕ್ರಿಯಿಸಿದ್ದಾರೆ.

'ಕೈ ಅಭ್ಯರ್ಥಿಗಳು ಗೆಲ್ಲದಿದ್ದರೆ ಸಿದ್ದರಾಮಯ್ಯ ಸ್ಥಾನಕ್ಕೆ ಕಂಟಕ'

ಪ್ರಜಾವಾಣಿ ವಾರ್ತೆ

ಕೋಲಾರ: ಈ ಲೋಕಸಭಾ ಚುನಾವಣೆಯಲ್ಲಿ ಬೇರೆ ಪಕ್ಷದ ಅಭ್ಯರ್ಥಿಗಳು ಗೆದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಾನಕ್ಕೆ ಕಂಟಕ ಬರುತ್ತದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಮನವಿ ಮಾಡಿದರು.

ಕುರುಬ ಸಮುದಾಯದವರು ಸಿದ್ದರಾಮಯ್ಯ ಅವರ ಕೈ ಬಲಪಡಿಸಬೇಕು. ಕೋಲಾರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ.ಗೌತಮ್ ಗೆಲ್ಲಿಸಲು ಸಹಾಯ ಮಾಡಬೇಕು ಎಂದು ಗುರುವಾರ ನಗರದಲ್ಲಿ ಆಯೋಜಿಸಿದ್ದ ಕುರುಬ ಸಮುದಾಯದ ಮುಖಂಡರ ಸಭೆಯಲ್ಲಿ ಅವರು ಕೋರಿದರು.

'ಸಿದ್ದರಾಮಯ್ಯ ನಿತ್ಯ ಬಿಜೆಪಿ, ಮೋದಿ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಅವರು ಆಸ್ತಿ ಮಾಡಿದ್ದರೆ, ಹಣ ಹೊಡೆದಿದ್ದರೆ ಮೋದಿ, ಬಿಜೆಪಿಯವರು, ಇ.ಡಿ, ಐ.ಟಿ, ಸಿಬಿಐನವರು ಸಿದ್ದರಾಮಯ್ಯ ಅವರನ್ನು ಬಿಡುತ್ತಿರಲಿಲ್ಲ. ಪ್ರಾಮಾಣಿಕ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನೇ ಬಿಜೆಪಿಯವರು ಬಿಟ್ಟಿಲ್ಲ' ಎಂದು ಹೇಳಿದರು.

'ಸಿದ್ದರಾಮಯ್ಯ ಬಳಿ 200ರಿಂದ 300 ಶರ್ಟ್, ಪಂಚೆಗಳಿವೆ ಅಷ್ಟೇ. ಒಂದೂ ಕಪ್ಪು ಚುಕ್ಕೆ ಇಲ್ಲದೆ ರಾಜಕಾರಣ ಮಾಡಿರುವ ಏಕೈಕ ವ್ಯಕ್ತಿ. ಅವರಂಥ ನಾಯಕನನ್ನು ಉಳಿಸಿಕೊಳ್ಳುವುದು ಎಲ್ಲರ ಕರ್ತವ್ಯ' ಎಂದರು.

'ಲೋಕಸಭೆ ಚುನಾವಣೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಿತ್ತೊಗೆಯುವುದಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳುತ್ತಿದ್ದಾರೆ. ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಬೇಡಿ' ಎಂದು ಮನವಿ ಮಾಡಿದರು.

'ಎರಡನೇ ಬಾರಿ ಹಣ ನೀಡಿ ಮುಖ್ಯಮಂತ್ರಿ ಆದವರು ಬೇರೆ ಪಕ್ಷಗಳಲ್ಲಿ ಇದ್ದಾರೆ. ಧೈರ್ಯ, ನಾಯಕತ್ವ, ಸ್ವಂತ ಪರಿಶ್ರಮದಿಂದ ಮುಖ್ಯಮಂತ್ರಿ ಆಗುವುದು ಬೇರೆ. ಸಿದ್ದರಾಮಯ್ಯ ನಿಷ್ಠಾವಂತ, ಧೈರ್ಯವಂತ ರಾಜಕಾರಣಿ. ಜಿಲ್ಲಾ ಪಂಚಾಯಿತಿ ಸದಸ್ಯರು, ಕಾರ್ಪೊರೇಟ್ ಆದವರು ಸಿದ್ದರಾಮಯ್ಯ ಅವರಿಗಿಂತ ಹೆಚ್ಚು ಹಣ ಮಾಡಿಕೊಂಡಿದ್ದಾರೆ' ಎಂದು ಸುರೇಶ್ ಹೇಳಿದರು.



ತಣ್ಣೀರಿನ ಪುಳಕ

ಕಲಬುರಗಿಯ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಉಮೇಶ ಜಾಧವ ಅವರು ಗುರುವಾರ ನಾಮಪತ್ರ ಸಲ್ಲಿಸುವ ಮುನ್ನ ನಡೆಸಿದ ಮೆರವಣಿಗೆಯಲ್ಲಿ ಬಂಜಾರ ಸಮಾಜದ ಮಹಿಳೆಯರು ಬಿಸಿಲಿನ ತಾಪ ಹೆಚ್ಚಿದ್ದರಿಂದ ಪರಸ್ಪರ ನೀರು ಎರಚಿಕೊಂಡರು
–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಕೊಂಡದಕುಳಿ ರಾಮಚಂದ್ರ ಹೆಗಡೆಗೆ 'ಯಕ್ಷ ವಿದ್ಯಾಮಾನ್ಯ' ಪ್ರಶಸ್ತಿ




ಉಡುಪಿ: ವಿದ್ಯಾಮಾನ್ಯ ತೀರ್ಥ ಶ್ರೀಗಳ ಹೆಸರಿನಲ್ಲಿ ಪಲಿಮಾರು ಮಠಾಧೀಶರಾದ ವಿದ್ಯಾಧೀಶತೀರ್ಥ ಶ್ರೀಗಳು ಕೊಡಮಾಡುವ 'ಯಕ್ಷ ವಿದ್ಯಾಮಾನ್ಯ' ಪ್ರಶಸ್ತಿಗೆ ಬಡಗುತಿಟ್ಟಿನ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ಫಲಕ ಹಾಗೂ ₹ 50 ಸಾವಿರ ನಗದು ಒಳಗೊಂಡಿದೆ. ಬಡಗುತಿಟ್ಟಿನ ಪರಂಪರೆಯ ಪ್ರಾತಿನಿಧಿಕ ವೇಷಧಾರಿಯಾಗಿರುವ ಕೊಂಡದಕುಳಿ ಗುಂಡುಬಾಳ, ಪಂಚಲಿಂಗ, ಸಾಲಿಗ್ರಾಮ ಮೇಳಗಳಲ್ಲಿ ನಾಲ್ಕುವರೆ ದಶಕಗಳ ಕಲಾಸೇವೆ ಮಾಡಿದ್ದಾರೆ. ಪೂರ್ಣಚಂದ್ರ ಯಕ್ಷಕಲಾ ಪ್ರತಿಷ್ಠಾನ ಮೇಳ ಸ್ಥಾಪಿಸಿ ಕಾಲಮಿತಿಯ ಪ್ರದರ್ಶನಗಳನ್ನು ನೀಡುತ್ತಾ ಬಂದಿದ್ದಾರೆ.

ಏ.23ರಂದು ಬೆಳಿಗ್ಗೆ 10.30ಕ್ಕೆ ಪಲಿಮಾರಿನಲ್ಲಿ ನಡೆಯುವ ವಿದ್ಯಾಮಾನ್ಯ ತೀರ್ಥರ ಆರಾಧನಾ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪಲಿಮಾರು ಮಠದ ದಿವಾನರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಪಿಎಸ್‌ಸಿ: 5ನೇ ಪ್ರಯತ್ನದಲ್ಲಿ ಕಾರ್ತಿಕ್ ಯಶಸ್ವಿ

ಬಳ್ಳಾರಿ: ಬಳ್ಳಾರಿ ಮೂಲದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಕಾರ್ತಿಕ್ ಡಿ. ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 949ನೇ ರ‍್ಯಾಂಕ್ ಗಳಿಸಿದ್ದಾರೆ. ಐದನೇ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.



ಕಾರ್ತಿಕ್ ಡಿ.

ಕಾರ್ತಿಕ್ ಅವರು ಬಳ್ಳಾರಿಯ ವಿಮ್ಸ್‌ನಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದರು. ನಂತರ ಅವರು ಬೆಂಗಳೂರಿನ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ, ಬಿಬಿಎಂಪಿಯ 'ನಮ್ಮ ಕ್ಲಿನಿಕ್'ನಲ್ಲಿ ಕೆಲಸ ಮಾಡಿದ್ದರು. ಅವರ ತಂದೆ ಜಗನ್ನಾಥ ನಿವೃತ್ತ ವೈದ್ಯರು. ತಾಯಿ ಜಾನಕಿ ಗೃಹಿಣಿ. 'ಗೆದ್ದೇ ಗೆಲ್ಲುವೆ ಎಂಬ ದೃಢ ವಿಶ್ವಾಸ ಮತ್ತು ನಿರಂತರ ಪರಿಶ್ರಮದಿಂದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಸಾಧ್ಯವಾಯಿತು' ಎಂದು ಕಾರ್ತಿಕ 'ಪ್ರಜಾವಾಣಿ'ಗೆ ತಿಳಿಸಿದರು.

ಮಲೆ ಮಹದೇಶ್ವರ ವನ್ಯಧಾಮದಲ್ಲಿ ಬತ್ತಿದ ಜಲಮೂಲಗಳು, ಅರಣ್ಯ ಇಲಾಖೆಯಿಂದ ಪರ್ಯಾಯ ವ್ಯವಸ್ಥೆ

ಕಾಡಲ್ಲಿ ನೀರಿನ ಅಭಾವ: ಜಿಂಕೆಗಳ ಸಾವು

• ಬಿ. ಬಸವರಾಜು

ಹನೂರು (ಚಾಮರಾಜನಗರ): ತಾಲ್ಲೂಕಿನ ಮಲೆಮಹದೇಶ್ವರ ವನ್ಯಧಾಮದಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿ ತಲೆದೋರಿದ್ದು, ನೀರು ಅರಸಿ ಕಾಡಂಚಿಗೆ ಬರುತ್ತಿರುವ ಜಿಂಕೆಗಳು ಅಸ್ವಸ್ಥಗೊಂಡು ಮೃತಪಡುತ್ತಿವೆ. ಅಲ್ಲದೇ, ಬೀದಿನಾಯಿಗಳ ದಾಳಿಯಿಂದಲೂ ಸಾವಿಗೀಡಾಗುತ್ತಿವೆ.

ವನ್ಯಧಾಮದ ಕೊಳ್ಳೇಗಾಲ ಬಫರ್, ಹನೂರು ಬಫರ್, ಪಿ.ಜಿ ಪಾಳ್ಯ, ಹೂಗ್ಯಂ, ರಾಮಾಪುರ, ಮಹದೇಶ್ವರ ಬೆಟ್ಟ ಹಾಗೂ ಪಾಲಾರ್ ವನ್ಯಜೀವಿ ವಲಯಗಳಲ್ಲಿರುವ ಕೆರೆಕಟ್ಟೆಗಳು, ಹಳ್ಳ-ಕೊಳ್ಳಗಳು ಸಂಪೂರ್ಣವಾಗಿ ಬತ್ತಿವೆ. ಕೆಲವು ಕೆರೆಗಳಲ್ಲಿ ನೀರು ತಳಸೇರಿದ್ದು, ಕೆಸರಿನಿಂದ ಕೂಡಿದೆ. ಹೀಗಾಗಿ ವನ್ಯಪ್ರಾಣಿಗಳು ನೀರಿಗಾಗಿ ಅಲೆದಾಡುವಂತಾಗಿದೆ.

ಕಳೆದ ವರ್ಷ ಸಮರ್ಪಕ ಮಳೆಯಾಗದ ಕಾರಣ, ಜಲಮೂಲಗಳು ಮಾರ್ಚ್ ವೇಳೆಗೇ ಬತ್ತಿ ಹೋಗಿವೆ. ಹೀಗಾಗಿ ನೀರಿಗೆ ಹಾಹಾಕಾರ ಉಂಟಾಗಿದೆ.

'ಮಲೆಮಹದೇಶ್ವರ ವನ್ಯಧಾಮಕ್ಕೆ ಹೊಂದಿಕೊಂಡು ತಮಿಳುನಾಡಿನ ಅರಣ್ಯವೂ ಇದ್ದು, ಅಲ್ಲಿಂದಲೂ ಪ್ರಾಣಿಗಳು ಬಂದು ನೀರಿಗಾಗಿ ಗ್ರಾಮಗಳಿಗೆ ನುಗ್ಗುತ್ತಿವೆ. ಇಲಾಖೆ ವತಿಯಿಂದ ನೀರು ಪೂರೈಕೆಗಾಗಿ ಕ್ರಮ ಕೈಗೊಳ್ಳಲಾಗಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಬಿಗಡಾಯಿಸಲಿದೆ' ಎನ್ನುತ್ತಾರೆ ಇಲಾಖೆ ಸಿಬ್ಬಂದಿ.



ನೀರು ಅರಸಿಕೊಂಡು ಕಾಡಂಚಿಗೆ ಬಂದ ಜಿಂಕೆಯೊಂದು ಮೃತಪಟ್ಟಿದೆ


ಜಿಂಕೆಗಳ ಸಾವು: ನೀರನ್ನು ಹುಡುಕುತ್ತಾ ಜಿಂಕೆಗಳು ಜಮೀನುಗಳ ಕಡೆಗೆ ಹೆಚ್ಚು ಬರುತ್ತಿದ್ದು, ನಿರ್ಜಲೀಕರಣದಿಂದಾಗಿ ಮೃತಪಡುತ್ತಿವೆ. ಹನೂರು ಬಫರ್, ರಾಮಾಪುರ, ಹೂಗ್ಯಂ ಹಾಗೂ ಪಿ.ಜಿ. ಪಾಳ್ಯ ವನ್ಯಜೀವಿ ವಲಯಗಳಲ್ಲಿ ಇಂತಹ ಘಟನೆಗಳು ನಡೆದಿರುವುದನ್ನು ಅಧಿಕಾರಿಗಳು ಮತ್ತು ಸಿಬ್ಬಂದಿ ದೃಢಪಡಿಸಿದ್ದಾರೆ. ನಾಡಿನತ್ತ ಬರುವ ಜಿಂಕೆಗಳ ಮೇಲೆ ಬೀದಿ ನಾಯಿಗಳು ದಾಳಿ ಮಾಡುತ್ತಿದ್ದು, ಇದರಿಂದಾಗಿಯೂ ಮೃತಪಡುತ್ತಿವೆ. ಈ ಭಾಗದಲ್ಲಿ 25ಕ್ಕೂ ಹೆಚ್ಚು ಜಿಂಕೆಗಳು ಮೃತಪಟ್ಟಿವೆ ಎಂದು ಮೂಲಗಳು ತಿಳಿಸಿವೆ.



ನೀರಿನ ಸಮಸ್ಯೆ ಭೀಕರವಾಗಿದೆ. ಮಳೆಯಾಗುವವರೆಗೆ ಪ್ರಾಣಿಗಳಿಗೆ ತೊಂದರೆಯಾಗದಂತೆ ಸಾಧ್ಯವಾದಷ್ಟು ಮಟ್ಟಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ.
ಜಿ ಸಂತೋಷ್ ಕುಮಾರ್, ಡಿಸಿಎಫ್, ಮಲೆ ಮಹದೇಶ್ವರ ವನ್ಯಧಾಮ

ಆನೆ ಸಾವು: ವನ್ಯಧಾಮದ ಹೂಗ್ಯ ವಲಯದಲ್ಲಿ ಇತ್ತೀಚೆಗೆ ಆನೆಯೊಂದು ಆಹಾರ ಜೀರ್ಣವಾಗದೆ ಮೃತಪಟ್ಟಿದೆ ಎನ್ನಲಾಗಿದೆ. ಕುಡಿಯಲು ಸಾಕಷ್ಟು ನೀರು ಸಿಗದಿರುವುದರಿಂದಲೇ ಹೀಗಾಗಿರಬಹುದು ಎಂದು ಶಂಕಿಸಲಾಗಿದೆ.

ಬತ್ತಿದ ಪಾಲಾರ್ ಹಳ್ಳ



ಪ್ರಾಣಿಗಳಿಗೆ ಜಲಮೂಲವಾಗಿರುವ ಪಾಲಾರ್ ಹಳ್ಳ ಸಂಪೂರ್ಣವಾಗಿ ಬತ್ತಿ ಹೋಗಿದೆ


ರಾಜ್ಯ ಗಡಿಯಂಚಿನಲ್ಲಿರುವ ಪಾಲಾರ್ ಹಳ್ಳ ವನ್ಯಪ್ರಾಣಿಗಳಿಗೆ ಜೀವನಾಡಿಯಾಗಿದೆ. ಹೂಗ್ಯಂ, ರಾಮಾಪುರ ಹಾಗೂ ಪಾಲಾರ್ ವನ್ಯಜೀವಿ ವಲಯಗಳ ಸಮೀಪವೇ ಹರಿಯುವ ಈ ಹಳ್ಳದಲ್ಲಿ ಈಗ ನೀರು ಬತ್ತಿದೆ.

ಮಲೆಮಹದೇಶ್ವರ ವನ್ಯಧಾಮದೊಳಗೆ ಬರುವ ಉಡುತೊರೆ ಜಲಾಶಯ, ಮಿಣ್ಯತ್ತಳ್ಳ ಜಲಾಶಯ, ರಾಮನಗುಡ್ಡೆ ಜಲಾಶಯ, ಹುಬ್ಬೆಹುಣಸೆ ಕೆರೆಗಳಲ್ಲಿ ನೀರಿನ ಪ್ರಮಾಣವೂ ಕುಸಿದಿದೆ.

ಟ್ಯಾಂಕರ್ ನೀರು: ಪ್ರಾಣಿಗಳಿಗೆ ನೀರಿನ ಕೊರತೆಯಾಗದಂತೆ, ಅರಣ್ಯ ಇಲಾಖೆ ಟ್ಯಾಂಕರ್ ಮೂಲಕ ಕೆರೆಗಳನ್ನು ತುಂಬಿಸುತ್ತಿದೆ. ಸಿಮೆಂಟ್ ತೊಟ್ಟಿ, ತಾತ್ಕಾಲಿಕ ತೊಟ್ಟಿ ನಿರ್ಮಿಸಿ, ನೀರು ಪೂರೈಸುತ್ತಿದೆ. ಐದು ಕಡೆ ಸೋಲಾರ್ ವ್ಯವಸ್ಥೆ ಮೂಲಕ ಕೊಳವೆ ಬಾವಿಗಳಿಂದ ನೀರೆತ್ತಿ ನೀರು ಪೂರೈಸಲಾಗುತ್ತಿದೆ. ಆದರೆ, ಬಿಸಿಲಿನ ತೀವ್ರತೆ ಹೆಚ್ಚುತ್ತಿರುವುದರಿಂದ ಪೂರ್ಣ ಪ್ರಮಾಣದಲ್ಲಿ ನೀರು ಪೂರೈಕೆಯೂ ಸಾಧ್ಯವಾಗುತ್ತಿಲ್ಲ.

ಗದ್ದಿಗೌಡರ ಆಸ್ತಿ, ಸಾಲ ಹೆಚ್ಚಳ

ಒಟ್ಟು ಆಸ್ತಿಯ ಮೌಲ್ಯ
₹4.05 ಕೋಟಿ
ಪತ್ನಿ: ಸಾವಿತ್ರಿ ₹17.12 ಲಕ್ಷ



ಪಿ.ಸಿ. ಗದ್ದಿಗೌಡರ

ಬಾಗಲಕೋಟೆ: ಬಿಜೆಪಿ ಅಭ್ಯರ್ಥಿ ಪಿ.ಸಿ. ಗದ್ದಿಗೌಡರ ಅವರ ಕುಟುಂಬದ ಆಸ್ತಿ ಮತ್ತು ಸಾಲ ಐದು ವರ್ಷದಲ್ಲಿ ಹೆಚ್ಚಾಗಿದೆ.

2019ರಲ್ಲಿ ₹4.39 ಕೋಟಿ ಇದ್ದ ಕುಟುಂಬದ ಆಸ್ತಿ ಈಗ ₹7.57 ಕೋಟಿಗೆ ಏರಿಕೆಯಾಗಿದೆ. ಸಾಲ ₹79 ಲಕ್ಷದಿಂದ ₹2.44 ಕೋಟಿಗೆ ಹೆಚ್ಚಿದೆ. ಗದ್ದಿಗೌಡರ ಬಳಿ ₹82.62 ಲಕ್ಷ ಚರಾಸ್ತಿ, ₹4.05 ಕೋಟಿ ಸ್ಥಿರಾಸ್ತಿ ಇದೆ. ಇನ್ನೋವಾ ವಾಹನವಿದೆ. ಅವರ ಪತ್ನಿ ಸಾವಿತ್ರಿ ಬಳಿ ₹17.12 ಲಕ್ಷ ಚರಾಸ್ತಿ ಇದ್ದು, ಯಾವುದೇ ಸ್ಥಿರಾಸ್ತಿ ಇಲ್ಲ. ಪುತ್ರ ಚಂದನಗೌಡ ಬಳಿ ₹40.80 ಲಕ್ಷ ಚರಾಸ್ತಿ, ₹2.13 ಕೋಟಿ ಸ್ಥಿರಾಸ್ತಿ ಇದೆ. ಜೊತೆಗೆ ₹1.12 ಕೋಟಿ ಸಾಲ ಇದೆ. ಅವರ ಹೆಸರಿನಲ್ಲಿ ಕಾರು, ಟ್ರ್ಯಾಕ್ಟರ್ ಸೇರಿ ನಾಲ್ಕು ವಾಹನಗಳಿವೆ.

ಬಿ.ವೈ.ರಾಘವೇಂದ್ರ ಆಸ್ತಿ ಇಳಿಕೆ; ಪತ್ನಿ ಆಸ್ತಿ ಹೆಚ್ಚಳ

ಒಟ್ಟು ಆಸ್ತಿಯ ಮೌಲ್ಯ
₹55.85 ಕೋಟಿ
ಪತ್ನಿ: ತೇಜಸ್ವಿನಿ ₹17.86 ಕೋಟಿ



ಬಿ.ವೈ. ರಾಘವೇಂದ್ರ

ಶಿವಮೊಗ್ಗ: ಸಂಸದ ಬಿ.ವೈ.ರಾಘವೇಂದ್ರ ದಂಪತಿಯ ಒಟ್ಟು ಆಸ್ತಿ ಮೌಲ್ಯ ₹ 73.71 ಕೋಟಿ. 2019ರ ಲೋಕಸಭಾ ಚುನಾವಣೆಯಲ್ಲಿ ಸಲ್ಲಿಸಿದ್ದ ಆಸ್ತಿ ವಿವರದಲ್ಲಿ ರಾಘವೇಂದ್ರ ಕುಟುಂಬದ ಒಟ್ಟು ಆಸ್ತಿ ₹ 67.04 ಕೋಟಿ ಇತ್ತು. ಐದು ವರ್ಷಗಳಲ್ಲಿ ₹ 6 ಕೋಟಿ ಮೌಲ್ಯದ ಆಸ್ತಿ ಹೆಚ್ಚಳಗೊಂಡಿದೆ. ವಿಶೇಷವೆಂದರೆ ರಾಘವೇಂದ್ರ ಅವರಿಗಿಂತ ಪತ್ನಿ ತೇಜಸ್ವಿನಿ ಹೆಸರಲ್ಲಿ ಅಧಿಕ ಸಾಲ ಇದೆ. ಪತಿಯಿಂದಲೇ ₹ 5.49 ಕೋಟಿ ಸಾಲ ಪಡೆದಿದ್ದಾರೆ. ರಾಘವೇಂದ್ರ ಆಸ್ತಿ ಕಳೆದ ಚುನಾವಣೆಯಲ್ಲಿ ₹ 58.85 ಕೋಟಿ ಇತ್ತು. ಈಗ ಅದು ₹ 55.85 ಕೋಟಿಗೆ ಇಳಿಕೆಯಾಗಿದೆ. ಪತ್ನಿ ತೇಜಸ್ವಿನಿ ಅವರ ಆಸ್ತಿ ₹ 8.49 ಕೋಟಿ ಇದ್ದದ್ದು ಈಗ ₹17.86 ಕೋಟಿಗೆ ಹೆಚ್ಚಳವಾಗಿದೆ.

ಪ್ರಿಯಾಂಕಾಗೆ ಹೆತ್ತವರಿಂದ ₹1.57 ಕೋಟಿ ಸಾಲ

ಒಟ್ಟು ಆಸ್ತಿಯ ಮೌಲ್ಯ ₹9.11 ಕೋಟಿ



ಪ್ರಿಯಾಂಕಾ ಜಾರಕಿಹೊಳಿ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಚಿಕ್ಕೋಡಿ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ಜಾರಕಿಹೊಳಿ ಗುರುವಾರ ನಾಮಪತ್ರ ಸಲ್ಲಿಸಿದರು. ಅವರ ಒಟ್ಟು ಆಸ್ತಿ ₹9.11 ಕೋಟಿ.

₹7.29 ಕೋಟಿ ಚರಾಸ್ತಿ, ₹1.82 ಕೋಟಿ ಸ್ಥಿರಾಸ್ತಿ ಇದೆ. ಅವರ ಬಳಿ ₹4.87 ಲಕ್ಷ ನಗದು, ₹6.24 ಲಕ್ಷ ಮೌಲ್ಯದ ಚಿನ್ನಾಭರಣ ಇವೆ. 2018-19ರಲ್ಲಿ ಅವರಿಗೆ ₹32.90 ಲಕ್ಷ ವಾರ್ಷಿಕ ಆದಾಯವಿತ್ತು. 2022–23ರಲ್ಲಿ ಅದು ₹1.64 ಕೋಟಿಗೆ ಏರಿಕೆಯಾಗಿದೆ. ₹1.57 ಕೋಟಿ ಸಾಲ ಮಾಡಿದ್ದಾರೆ. ಇವರ ತಂದೆ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರಿಂದ ₹1.47 ಕೋಟಿ ಹಾಗೂ ತಾಯಿ ಎಸ್.ಎಸ್. ಜಾರಕಿಹೊಳಿ ಅವರಿಂದ ₹10.25 ಲಕ್ಷ ಸಾಲ ಪಡೆದಿದ್ದಾಗಿ ತಿಳಿಸಿದ್ದಾರೆ. ಅವರ ಬಳಿ ಯಾವುದೇ ವಾಹನ ಇಲ್ಲ. ಅಪರಾಧ ಪ್ರಕರಣಗಳೂ ಇಲ್ಲ.

ಶುಕ್ರವಾರ, ಏಪ್ರಿಲ್ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 109 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ನಟ ರಿಷಿ ತೆಲುಗಿನಲ್ಲಿ ಎರಡು ಪ್ರಾಜೆಕ್ಟ್‌ಗಳನ್ನು ಒಪ್ಪಿಕೊಂಡಿದ್ದಾರೆ

'ವಂಶವೃಕ್ಷ' ಕಾದಂಬರಿ ತಮಿಳಲ್ಲೂ ಲಭ್ಯ 5
ಮೋದಿ ಸೋಲಿಸುವಷ್ಟು ಸಂಖ್ಯೆ 'ಇಂಡಿಯಾ'ಕ್ಕೆ ಸಿಗಲಿದೆ– ಖರ್ಗೆ ಸಂದರ್ಶನ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,488	21,995	₹75,510 (ಬೆಂಗಳೂರು)	₹85,800 (ಬೆಂಗಳೂರು)	83.52

ಲೋಕಸಭೆ ಕಣ: 8 ಮಂದಿ ಕೇಂದ್ರ ಸಚಿವರು, ಇಬ್ಬರು ಮಾಜಿ ಮುಖ್ಯಮಂತ್ರಿಗಳ ಭವಿಷ್ಯ ನಿರ್ಧಾರ

ಮೊದಲ ಹಂತ ಮತದಾನ ಇಂದು

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನಕ್ಕೆ ದೇಶದ 102 ಕ್ಷೇತ್ರಗಳು ಸಜ್ಜಾಗಿವೆ. ಈ ಕ್ಷೇತ್ರಗಳಲ್ಲಿ ಶುಕ್ರವಾರ ಮತದಾನ ನಡೆಯಲಿದ್ದು, 1,600ಕ್ಕೂ ಹೆಚ್ಚು ಅಭ್ಯರ್ಥಿಗಳು ಜನಾದೇಶ ಬಯಸಿದ್ದಾರೆ. ಮೊದಲ ಹಂತದ ಮತದಾನ ಪ್ರಕ್ರಿಯೆಯಲ್ಲಿ ಮತ ಚಲಾಯಿಸಲು 16.63 ಕೋಟಿಗೂ ಹೆಚ್ಚು ಮಂದಿ ಅರ್ಹತೆ ಪಡೆದಿದ್ದಾರೆ.

ಈ ಕ್ಷೇತ್ರಗಳಿಂದ ಅದೃಷ್ಟ ಪರೀಕ್ಷೆಗೆ ಇಳಿದವರಲ್ಲಿ ಎಂಟು ಮಂದಿ ಕೇಂದ್ರ ಸಚಿವರು, ಇಬ್ಬರು ಮಾಜಿ ಮುಖ್ಯ-ಮಂತ್ರಿಗಳು ಹಾಗೂ ಮಾಜಿ ರಾಜ್ಯಪಾಲೆ ಕೂಡ ಇದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆಯನ್ನು ನೆಚ್ಚಿಕೊಂಡಿದೆ. 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಎನ್‌ಡಿಎಗೆ ಸವಾಲು ಒಡ್ಡುವ ಪಣ ತೊಟ್ಟಿವೆ.


ಹತ್ತು ವರ್ಷಗಳ ಆಡಳಿತ, 'ಮೋದಿಯವರ ಗ್ಯಾರಂಟಿಗಳು' ಹಾಗೂ 'ವಿಕಸಿತ ಭಾರತ'ದ ಹೆಸರಿನಲ್ಲಿ ಬಿಜೆಪಿಯು ಮತ ಯಾಚಿಸುತ್ತಿದೆ. 'ಇಂಡಿಯಾ' ಮೈತ್ರಿಕೂಟದ ಪ್ರಮುಖ ಪಕ್ಷವಾಗಿರುವ ಕಾಂಗ್ರೆಸ್, ವಿವಿಧ 'ನ್ಯಾಯ'ಗಳನ್ನು ಜಾರಿಗೆ ತರುವ ಭರವಸೆ ಕೊಟ್ಟು ಮತ ಕೇಳಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಹತ್ತು ವರ್ಷಗಳಲ್ಲಿ ಉದ್ಯೋಗ ಸೃಷ್ಟಿಯಲ್ಲಿ ವಿಫಲವಾಗಿದೆ, ಹಣದುಬ್ಬರ ನಿಯಂತ್ರಿಸಿಲ್ಲ, ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಕೂಡ ಅದು ಆರೋಪಿಸಿದೆ.

ಏಳು ಹಂತಗಳಲ್ಲಿ ನಡೆಯಲಿರುವ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ, ಶುಕ್ರವಾರ ನಡೆಯಲಿರುವ ಹಂತವು ಅತಿದೊಡ್ಡದು. ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂ ವಿಧಾನಸಭೆಗಳ ಒಟ್ಟು 92 ಕ್ಷೇತ್ರಗಳಿಗೆ ಕೂಡ ಶುಕ್ರವಾರ ಮತದಾನ ನಡೆಯಲಿದೆ.

ಮತದಾನವು ಬೆಳಿಗ್ಗೆ 7 ಗಂಟೆಗೆ ಶುರುವಾಗಲಿದ್ದು, ಸಂಜೆ 6ಕ್ಕೆ ಮುಕ್ತಾಯವಾಗಲಿದೆ. ಚುನಾವಣಾ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಯನ್ನು ಒಂದೆಡೆಯಿಂದ ಇನ್ನೊಂದೆಡೆ ಕರೆದೊಯ್ಯಲು 41 ಹೆಲಿಕಾಪ್ಟರ್‌ಗಳು, 84 ವಿಶೇಷ ರೈಲುಗಳು ಹಾಗೂ ಸರಿಸುಮಾರು ಒಂದು ಲಕ್ಷ ವಾಹನಗಳ ವ್ಯವಸ್ಥೆ ಮಾಡಲಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗವು ಮಾಹಿತಿ ನೀಡಿದೆ. ಶೇಕಡ 50ಕ್ಕೂ ಹೆಚ್ಚಿನ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಇರಲಿದೆ. ಅಲ್ಲದೆ, ಎಲ್ಲ ಮತಗಟ್ಟೆಗಳಿಗೆ ಸೂಕ್ಷ್ಮ ಪರಿವೀಕ್ಷಕರನ್ನು ನೇಮಿಸಲಾಗುತ್ತದೆ.

ಮತದಾನದ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶದಿಂದ ಚುನಾವಣಾ ಆಯೋಗವು, ಮತದಾನ ಈ ಹಿಂದೆ ಕಡಿಮೆ ಆಗಿದ್ದ ಕ್ಷೇತ್ರಗಳನ್ನು ಗಮನದಲ್ಲಿ ಇರಿಸಿಕೊಂಡು ಕಾರ್ಯಕ್ರಮವನ್ನು ಕೂಡ ಆಯೋಜಿಸಿದೆ.

ಕಣದಲ್ಲಿರುವ ಪ್ರಮುಖರು 11





ಭಾರಿ ಮಳೆ ದುಬೈನಲ್ಲಿ ಗುರುವಾರವೂ ವಿಪರೀತ ಮಳೆಯಾಗಿದ್ದು, ಪ್ರವಾಹದ ಸ್ಥಿತಿ ನಿರ್ಮಾಣವಾಗಿದೆ. ವಾಹನಗಳೆಲ್ಲ ನೀರಿನಲ್ಲಿ ಮುಳುಗಡೆಯಾಗಿವೆ –ಎಎಫ್‌ಪಿ ಚಿತ್ರ

ಇವಿಎಂ ಮತ್ತು ವಿವಿ–ಪ್ಯಾಟ್ ಮತಗಳ ತಾಳೆ

ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಮತಎಣಿಕೆ ವೇಳೆ ಇವಿಎಂ ಗಳಲ್ಲಿನ ಮತ್ತು ಎಲ್ಲಾ ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಗಳನ್ನು ಪರಸ್ಪರ ತಾಳೆ ಮಾಡಿ ನೋಡಬೇಕು ಎಂದು ಕೋರಿದ್ದ ಅರ್ಜಿಗಳಿಗೆ ಸಂಬಂಧಿಸಿದ ತೀರ್ಪನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ.

ಇವಿಎಂಗಳಲ್ಲಿನ ಮತಗಳನ್ನು ತಿರು-ಚಲಾಗುತ್ತಿದೆ. ಹೀಗಾಗಿ ಮತದಾನ ಸರಿಯಾಗಿ ನಡೆದಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಗಳನ್ನೂ ಎಣಿಕೆ ಮಾಡಬೇಕು ಎಂದು ಎಡಿಆರ್

> **ಚುನಾವಣಾ ಪ್ರಕ್ರಿಯೆಯು ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆಯಬೇಕು. ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವ ಅಗತ್ಯವಿದೆ**
> **ಸುಪ್ರೀಂ ಕೋರ್ಟ್ ಪೀಠ**

ಸ್ವಯಂಸೇವಾ ಸಂಸ್ಥೆ, ಹಲವು ಸಾಮಾಜಿಕ ಕಾರ್ಯಕರ್ತರು ಅರ್ಜಿಗಳನ್ನು ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ದೀಪಂಕರ್ ದತ್ತಾ ಅವರಿದ್ದ ಪೀಠ ಅರ್ಜಿಗಳ ವಿಚಾರಣೆ ನಡೆಸಿತ್ತು.

ಗುರುವಾರ ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ವಿಚಾರಣೆ ನಡೆಸಿತು. ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನವು ಶುಕ್ರವಾರ ನಡೆಯಲಿದೆ. ಹೀಗಾಗಿ ತೀರ್ಪನ್ನು ತ್ವರಿತವಾಗಿ ನೀಡಬೇಕು ಎಂದು ಕೆಲವು ಅರ್ಜಿದಾರರು ಆಗ್ರಹಿಸಿದರು. ಪೀಠವು ವಿಚಾರಣೆಯನ್ನು ಪೂರ್ಣಗೊಳಿಸಿ, ತೀರ್ಪನ್ನು ಕಾಯ್ದಿರಿಸಿತು.

ಆಳ–ಅಗಲ
ವಿವಿ– ಪ್ಯಾಟ್: ಪೂರ್ಣ ಎಣಿಕೆ ಸಾಧ್ಯವೇ?

ದಿಂಗಾಲೇಶ್ವರ ಆಸ್ತಿ ಮೌಲ್ಯ ₹9.75 ಕೋಟಿ



ಧಾರವಾಡ: ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಗದಗ ಜಿಲ್ಲೆಯ ಶಿರಹಟ್ಟಿ ಭಾವೈಕ್ಯಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರು ₹9.75 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ₹1.22 ಕೋಟಿ ಚರಾಸ್ತಿ ಮತ್ತು ₹8.52 ಕೋಟಿ ಸ್ಥಿರಾಸ್ತಿ ಇದೆ. ಒಂದು ಕಾರು, ಶಾಲಾ ವಾಹನ ಮತ್ತು ಟ್ರ್ಯಾಕ್ಟರ್ ಹೊಂದಿದ್ದಾರೆ. 19 ಗ್ರಾಂ ಚಿನ್ನ ಮತ್ತು 7.8 ಕೆಜಿ ಬೆಳ್ಳಿ ಇದೆ.

ಸ್ವಾಮೀಜಿ ವಿರುದ್ಧ ಕೊಲೆ ಯತ್ನ, ಜೀವ ಬೆದರಿಕೆ, ಜಾತಿ ನಿಂದನೆ, ಹಲ್ಲೆ, ಹೆಣ್ಣುಮಕ್ಕಳಿಗೆ ಕೈಯಿಂದ ಹೊಡೆದು, ದೂಡಿದ ಆರೋಪದ ಪ್ರಕರಣಗಳಿವೆ.

ಶಿಲ್ಪಾ ಶೆಟ್ಟಿ, ರಾಜ್ ಕುಂದ್ರಾಗೆ ಸೇರಿದ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮತ್ತು ಅವರ ಪತಿ ರಾಜ್ ಕುಂದ್ರಾ ಅವರಿಗೆ ಸೇರಿದ ₹97.79 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ಹೇಳಿದೆ. 11

ಶಿಕ್ಷಕರ ವರ್ಗಾವಣೆ: 24ಕ್ಕೆ ಅರ್ಹರ ಅಂತಿಮ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರು–ಮುಖ್ಯ ಶಿಕ್ಷಕರ ವರ್ಗಾವಣೆಗೆ ಶಾಲಾ ಶಿಕ್ಷಣ ಇಲಾಖೆ ಪರಿಷ್ಕೃತ ಸುತ್ತೋಲೆ ಹೊರಡಿಸಿದ್ದು, ವರ್ಗಾವಣೆಗೆ ಅರ್ಹರಾದ ಶಿಕ್ಷಕರ ಅಂತಿಮ ಪಟ್ಟಿ ಇದೇ 24ರಂದು ಪ್ರಕಟವಾಗಲಿದೆ.

ಒಂದೇ ಸ್ಥಳ–ಒಂದೇ ಹುದ್ದೆಯಲ್ಲಿ ಕನಿಷ್ಠ ಮೂರು ಹಾಗೂ ಗರಿಷ್ಠ ಐದು ವರ್ಷ ಪೂರೈಸಿದ (ಇದೇ ಮೇ 31ಕ್ಕೆ ಅನ್ವಯವಾಗುವಂತೆ) ಶಿಕ್ಷಕರು ವರ್ಗಾವಣೆಗೆ ಅರ್ಹರಾಗಿ-ರುತ್ತಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಕರ ಸೇವಾ ವಿವರಗಳನ್ನು ಪಡೆದು, ಸೇವಾ ಪುಸ್ತಕದ ವಿವರಗಳನ್ನು ಪರಿಶೀಲಿಸಿದ ನಂತರ ಇದೇ 19ರ ಒಳಗೆ ಅಪ್‌ಲೋಡ್ ಮಾಡುವರು. 20ರಂದು ತಾತ್ಕಾಲಿಕ ಕರಡು ಪಟ್ಟಿ ಪ್ರಕಟಿಸಲಾಗುವುದು. ಆಕ್ಷೇಪಣೆಗಳಿದ್ದಲ್ಲಿ ಶಿಕ್ಷಕರು 22ರ ಒಳಗೆ ಸಲ್ಲಿಸಬೇಕು.

23ರಂದು ಆಕ್ಷೇಪಣೆಗ-ಳನ್ನು ಪರಿಶೀಲಿಸಿದ ನಂತರ 24ರಂದು ವಲಯವಾರು ವರ್ಗಾವಣೆಗೆ ಅರ್ಹರಾದ ಶಿಕ್ಷಕರ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ. ಶೇ 4ರಷ್ಟು (ಶೈಕ್ಷಣಿಕ ತಾಲ್ಲೂಕಿನ ಒಳಗೆ) ವಲಯವಾರು, ಜಿಲ್ಲೆಯ ಒಳಗೆ ಶೇ 7ರಷ್ಟು ಕೋರಿಕೆ ವರ್ಗಾವಣೆ, ಶೇ 2ರಷ್ಟು ವಿಭಾಗವಾರು ವರ್ಗಾವಣೆ, ವಿಭಾಗದ ಹೊರಗೆ ಶೇ 2ರಷ್ಟು ಕೋರಿಕೆ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ. ಶಾಲೆ ಆರಂಭವಾಗುವ ಮೇ 29ರ ಒಳಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಆಯುಕ್ತೆ ಬಿ.ಬಿ. ಕಾವೇರಿ ಅವರು ತಿಳಿಸಿದ್ದಾರೆ.

ತನಿಖೆಗೆ ಆದೇಶಿಸಿದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ

'ಸೆರೆಲಾಕ್'ನಲ್ಲಿ ಸಕ್ಕರೆ ಅಂಶ ಅಧಿಕ

ನವದೆಹಲಿ (ಪಿಟಿಐ): ಬಹುರಾಷ್ಟ್ರೀಯ ಕಂಪನಿ ನೆಸ್ಲೆ ಇಂಡಿಯಾವು, ಭಾರತ ಸೇರಿ ವಿಶ್ವದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾರಾಟ ಮಾಡುತ್ತಿರುವ ತನ್ನ ಶಿಶು ಆಹಾರ ಉತ್ಪನ್ನಗಳಲ್ಲಿ ಅಧಿಕ ಪ್ರಮಾಣದಲ್ಲಿ ಸಕ್ಕರೆ ಅಂಶ ಸೇರಿಸುತ್ತಿದೆ ಎಂಬ ಆರೋಪವು ವಿವಾದ ಸೃಷ್ಟಿಸಿದೆ.

ಮಕ್ಕಳ ಪೋಷಕರು ಹಾಗೂ ಗ್ರಾಹಕರಿಂದ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಈ ಕುರಿತು ಪರಿಶೀಲನೆ ನಡೆಸಲು ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಮುಂದಾಗಿದೆ.

11ನೇ ಪುಟ ನೋಡಿ

ಒಂದೇ ದಿನ ₹8,137 ಕೋಟಿ ನಷ್ಟ

ನವದೆಹಲಿ (ಪಿಟಿಐ): ಶಿಶು ಆಹಾರ ಉತ್ಪನ್ನಗಳಲ್ಲಿ ಸಕ್ಕರೆ ಅಂಶ ಬೆರೆಸಿದ ಆರೋಪ ಕೇಳಿಬಂದ ಬೆನ್ನಲ್ಲೇ ಜಾಗತಿಕ ಪ್ರಮುಖ ಎಫ್‌ಎಂಸಿಜಿಯಾದ ನೆಸ್ಲೆ ಕಂಪನಿಯ ಷೇರಿನ ಮೌಲ್ಯ ಗುರುವಾರ ಶೇ 3ರಷ್ಟು ಕುಸಿತ ಕಂಡಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 3.33ರಷ್ಟು ಕುಸಿತ ಕಂಡಿದ್ದು, ಪ್ರತಿ ಷೇರಿನ ಬೆಲೆ ₹2,462.75 ಆಗಿದೆ. ದಿನದ ವಹಿವಾಟಿನಲ್ಲಿ ಒಂದು ಸಂದರ್ಭದಲ್ಲಿ ಷೇರಿನ ಮೌಲ್ಯವು ಶೇ 5.40ರಷ್ಟು ಕುಸಿತ ಕಂಡಿತ್ತು.

ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 2.94ರಷ್ಟು ಕುಸಿತ ಕಂಡಿದ್ದು, ಪ್ರತಿ ಷೇರಿನ ಬೆಲೆಯು ₹2,471ಕ್ಕೆ ತಲುಪಿದೆ.

ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹8,137 ಕೋಟಿಯಷ್ಟು ಕರಗಿದೆ. ಒಟ್ಟು ಎಂ–ಕ್ಯಾಪ್ ₹2.37 ಲಕ್ಷ ಕೋಟಿ ಆಗಿದೆ.

'ಶೇ 30ರಷ್ಟು ಸಕ್ಕರೆ ಅಂಶ ಕಡಿತ'

ನವದೆಹಲಿ (ಪಿಟಿಐ): 'ಕಳೆದ ಐದು ವರ್ಷಗಳಿಂದ ಭಾರತದಲ್ಲಿ ಮಾರಾಟ ಮಾಡುವ ತನ್ನ ಉತ್ಪನ್ನಗಳಿಗೆ ಸಕ್ಕರೆ ಅಂಶ ಬೆರೆಸುವ ಪ್ರಮಾಣವನ್ನು ಶೇ 30ರಷ್ಟು ಕಡಿತಗೊಳಿಸಲಾಗಿದೆ' ಎಂದು ನೆಸ್ಲೆ ಇಂಡಿಯಾ ಕಂಪನಿ ಸ್ಪಷ್ಟಪಡಿಸಿದೆ.

'ಕಂಪನಿಯು ಆಹಾರ, ಗುಣಮಟ್ಟ, ಸುರಕ್ಷತೆ ಹಾಗೂ ರುಚಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವು-ದಿಲ್ಲ. ಸಕ್ಕರೆ ಅಂಶವನ್ನು ಕಡಿಮೆಗೊಳಿಸುವ ಸಂಬಂಧ ನಿಯಮಿತವಾಗಿ ಉತ್ಪನ್ನಗಳನ್ನು ಪರೀಕ್ಷಿಸಲಾಗುತ್ತಿದೆ' ಎಂದು ಕಂಪನಿಯ ವಕ್ತಾರರು ತಿಳಿಸಿದ್ದಾರೆ.

'ವಿಶ್ವ ಆರೋಗ್ಯ ಸಂಸ್ಥೆ ಹಾಗೂ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ ರೂಪಿಸಿರುವ ಮಾನದಂಡದ ಅನ್ವಯವೇ ಭಾರತದಲ್ಲಿ ಶಿಶು ಆಹಾರ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

'ಭ್ರಮಾಧೀನ ಪ್ರಧಾನಿ: ದೇಶದ ದುರಂತ'

ಮೈಸೂರು: 'ದೇಶದ ಚುಕ್ಕಾಣಿ ಹಿಡಿದವರು ವಾಸ್ತವದ ಅರಿವಿಲ್ಲದ ಭ್ರಮಾಧೀನರಾಗಬಾರದು. ಪ್ರಧಾನಿಯೇ ಭ್ರಮಾ-ಧೀನರಾದರೆ, ಅದು ಒಬ್ಬ ವ್ಯಕ್ತಿಯ ದುರಂತವಲ್ಲ, ಈ ಭಾರತದ ಘೋರ ದುರಂತ' ಎಂದು ಚಿಂತಕ ದೇವನೂರ ಮಹಾದೇವ ಟೀಕಿಸಿದರು. 8

'ಅಧಿಕ ಸಕ್ಕರೆ ಅಂಶವುಳ್ಳ ಆಹಾರ ಸೇವನೆ'

ನವದೆಹಲಿ(ಪಿಟಿಐ): 'ತಮಗೆ ಟೈಪ್ 2 ಮಧುಮೇಹ ಇದ್ದರೂ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಾವಿನ ಹಣ್ಣುಗಳು ಹಾಗೂ ಆಲೂ ಪೂರಿ ಸೇರಿದಂತೆ ಅಧಿಕ ಸಕ್ಕರೆ ಅಂಶ ಹೊಂದಿರುವ ಖಾದ್ಯಗಳನ್ನು ನಿತ್ಯವೂ ಸೇವಿಸುತ್ತಿದ್ದಾರೆ. ವೈದ್ಯಕೀಯ ಕಾರಣಗಳನ್ನು ನೀಡಿ ಜಾಮೀನು ಪಡೆಯುವುದಕ್ಕಾಗಿ ಅವರು ಈ ರೀತಿ ಮಾಡುತ್ತಿದ್ದಾರೆ' ಎಂದು ಇ.ಡಿ ಇಲ್ಲಿನ ನ್ಯಾಯಾಲಯಕ್ಕೆ ಗುರುವಾರ ತಿಳಿಸಿದೆ. 11

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನಾಲ್ವರು ಬಾಂಗ್ಲಾ ಅಕ್ರಮ ವಲಸಿಗರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಿಕ್ಷಾಟನೆ ನಡೆಸುತ್ತಿದ್ದ ನಾಲ್ವರು ಅಕ್ರಮ ವಲಸಿಗರನ್ನು ಸುದ್ದುಗುಂಟೆಪಾಳ್ಯ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಶಮೀಮ್ ಅಹಮದ್, ನೂರ್‌ಜಾನ್, ಅಬ್ದುಲ್ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ.

'ಠಾಣಾ ವ್ಯಾಪ್ತಿಯ ಬಿಸ್ಮಿಲಾನಗರದಲ್ಲಿ ನಾಲ್ವರು ಭಿಕ್ಷಾಟನೆ ನಡೆಸುತ್ತಿದ್ದರು. ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಎಲ್ಲರೂ ಬಾಂಗ್ಲಾ ವಲಸಿಗರು ಎಂದು ವಿಚಾರಣೆಯಿಂದ ಗೊತ್ತಾಗಿದೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಐದು ದಿನಗಳ ಕಾಲ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಹೇಳಿದರು.



ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಮತ

'ಪೊಲೀಸರಿಗೆ ಸಾಂಸ್ಕೃತಿಕ ಪ್ರಜ್ಞೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸರಿಗೂ ಸಾಂಸ್ಕೃತಿಕ ಪ್ರಜ್ಞೆ ಅಗತ್ಯ. ಈ ಪ್ರಜ್ಞೆಯು ಅವರನ್ನು ಮನುಷ್ಯರನ್ನಾಗಿ ಮಾಡುತ್ತದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಕನ್ನಡ ಜನಶಕ್ತಿ ಕೇಂದ್ರ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ. ಶಿವರಾಂ ಅವರಿಗೆ 'ವರನಟ ಡಾ.ರಾಜಕುಮಾರ್ ಸಿರಿಗನ್ನಡ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ರಾಜಕಾರಣಿಗಳಿಗೂ ಸಾಂಸ್ಕೃತಿಕ ಪ್ರಜ್ಞೆ ಇರಬೇಕೆಂದು ಬಯಸುತ್ತೇವೆ. ಆದರೆ, ಅವರಿಗೆ ಎಷ್ಟೋ ಸಾರಿ ಈ ಪ್ರಜ್ಞೆ ಇರುವುದಿಲ್ಲ. ಪೊಲೀಸರಿಗೆ ಸಾಂಸ್ಕೃತಿಕ ಪ್ರಜ್ಞೆಯಿದ್ದರೆ ಮಾನವೀಯತೆ ತಾನಾಗಿಯೇ ಬರುತ್ತದೆ. ಪೊಲೀಸರು ಎಂದರೇ ಏಕವಚನ ಎಂಬ ಭಾವನೆಯಿದೆ. ಅವರು ಯಾವಾಗ ಬಹುವಚನ ಬಳಸುತ್ತಾರೆ ಎಂದು ನೋಡುತ್ತಾ ಇರುತ್ತೇವೆ. ಸಾಂಸ್ಕೃತಿಕ ಪ್ರಜ್ಞೆ ಹೊಂದಿರುವ ಶಿವರಾಂ ಅವರು ನಿವೃತ್ತಿಯ ಬಳಿಕವೂ ಮಲ್ಲೇಶ್ವರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದಾರೆ' ಎಂದು ಹೇಳಿದರು.

'ರಾಜಕುಮಾರ್ ಅವರು ಈಗಲೂ ಜನಮಾನಸದಲ್ಲಿ ಉಳಿದಿದ್ದಾರೆ. ಅವರು ಜನರನ್ನು ಗೌರವದಿಂದ ಕಂಡಿದ್ದರು. ಜನಸಾಮಾನ್ಯರ ಬಗ್ಗೆ ಗೌರವ ಇರುವವರು ಪ್ರಬುದ್ಧ ನಾಯಕರಾಗುತ್ತಾರೆ. ಕರ್ನಾಟಕದ ಭಕ್ತಿ ಪರಂಪರೆಗೆ ಅವರು ಜನಪ್ರಿಯತೆ ತಂದುಕೊಟ್ಟರು. ತಾರಾ ಮೌಲ್ಯವಿರುವ ಕಲಾವಿದ ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ರಾಜಕುಮಾರ್ ತೋರಿಸಿಕೊಟ್ಟರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಐಜಿಪಿ ಗೋಪಾಲ್ ಬಿ. ಹೊಸೂರು, 'ಪೊಲೀಸ್ ಇಲಾಖೆಯಲ್ಲಿ ನಾಯಕತ್ವ ಗುಣ ಮುಖ್ಯ. ಈ ಗುಣ ಉನ್ನತ ಹುದ್ದೆಯಿಂದ ಮಾತ್ರ ಬರುವುದಿಲ್ಲ. ಬದಲಾಗಿ ವ್ಯಕ್ತಿಗತವಾಗಿ ಬರುತ್ತದೆ. ನಾಯಕತ್ವ ಗುಣದ ಕೊರತೆಯಿಂದ ಪೊಲೀಸ್ ಇಲಾಖೆಗೆ ಸಮರ್ಥವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ನೇಮಕಾತಿ ಪ್ರಕ್ರಿಯೆ, ವರ್ಗಾವಣೆ ಸೇರಿದಂತೆ ವಿವಿಧ ಕಾರಣಗಳಿಂದಲೂ ಕೆಲವರು ನಾಯಕತ್ವ ಗುಣವನ್ನು ಕಳೆದುಕೊಳ್ಳುತ್ತಿದ್ದಾರೆ. ಪೊಲೀಸ್ ಅಧಿಕಾರಿಗಳು ತಮ್ಮಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಸಿಬ್ಬಂದಿಯನ್ನು ಪ್ರೀತಿ ಮತ್ತು ಗೌರವದಿಂದ ಕಾಣಬೇಕು' ಎಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ ಬಿ.ಕೆ.ಶಿವರಾಂ ಅವರಿಗೆ 'ವರನಾಟ ಡಾ.ರಾಜಕುಮಾರ್ ಸಿರಿಗನ್ನಡ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಗೋಪಾಲ್ ಬಿ.ಹೊಸೂರು, ಬರಗೂರು ರಾಮಚಂದ್ರಪ್ಪ, ಹೋಟೆಲ್ ನವಯುಗ ಮಾಲೀಕ ಕೆ.ಮೋಹನ್ ರಾವ್, ಕನ್ನಡ ಜನಶಕ್ತಿ ಕೇಂದ್ರದ ಸಲಹೆಗಾರ ಪಿ.ಮಲ್ಲಿಕಾರ್ಜುನಪ್ಪ, ಸಾಂಸ್ಕೃತಿ ಚಿಂತಕ ಮೋಹನದೇವ ಆಳ್ವ ಮತ್ತು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ತೊಟ್ಟಿಯಲ್ಲಿ ಮುಳುಗಿ ತಾಯಿ, ಮಗು ಸಾವು

ಬೆಂಗಳೂರು: ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಸುಗ್ಗಪ್ಪಲೇಔಟ್‌ನ ಖಾಲಿ ನಿವೇಶನದಲ್ಲಿದ್ದ ನೀರಿನ ತೊಟ್ಟಿಯಲ್ಲಿ ಮುಳುಗಿ ತಾಯಿ ಹಾಗೂ ಮಗು ಮೃತಪಟ್ಟಿದ್ದಾರೆ.

ಕಾರ್ಮಿಕ ಮಹಿಳೆ ಕವಿತಾ (30) ಹಾಗೂ ಅವರ ಆರು ವರ್ಷದ ಮಗ ಪವನ್ ಮೃತಪಟ್ಟವರು. 'ಗುರುವಾರ ಸಂಜೆ ಘಟನೆ ನಡೆದಿದೆ. ಖಾಲಿ ನಿವೇಶನದಲ್ಲಿ ಮಗು ಆಟ ಆಡುತ್ತಿತ್ತು. ಆಗ ಆಕಸ್ಮಿಕವಾಗಿ ನೀರಿನ ತೊಟ್ಟಿಗೆ ಬಿದ್ದಿದೆ. ಮಗುವನ್ನು ರಕ್ಷಿಸಲು ತಾಯಿ ಸಹ ನೀರಿನ ತೊಟ್ಟಿಗೆ ಇಳಿದಿದ್ದರು. ಇಬ್ಬರೂ ಮೇಲಕ್ಕೆ ಬರಲು ಸಾಧ್ಯವಾಗದೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕವಿತಾ ಅವರ ಮನೆಯಲ್ಲಿದ್ದ ಸಂಬಂಧಿಯೊಬ್ಬರ ಮಗು ಪಕ್ಕದ ಮನೆಯವರಿಗೆ ಮಾಹಿತಿ ನೀಡಿತ್ತು. ಅವರು ಬಂದು ರಕ್ಷಿಸುವಷ್ಟರಲ್ಲಿ ಇಬ್ಬರೂ ಮೃತಪಟ್ಟಿದ್ದರು' ಎಂದು ಹೇಳಿದರು.

ಗೌರಿಬಿದನೂರಿನ ಚೆಂದನೂರಿನ ಕವಿತಾ ಅವರು ಯಲಹಂಕದ ನ್ಯೂಟೌನ್‌ನ ಸುಗ್ಗಪ್ಪಲೇಔಟ್‌ನ ಮಾಲೀಕರೊಬ್ಬರ ಮನೆಯಲ್ಲಿ ಕೆಲಸಕ್ಕಿದ್ದರು. ಮಾಲೀಕರಿಗೆ ಸೇರಿದ ನಿವೇಶನದಲ್ಲಿ ನೀರಿನ ತೊಟ್ಟಿಯಿತ್ತು. ಅದರಲ್ಲಿ ಬಿದ್ದು ಇಬ್ಬರೂ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಭೂಮಿಕಾ ಓದಿರಿ

ಶಿಕ್ಷಕರ ಮೇಲೆ ಹೆಜ್ಜೇನು ದಾಳಿ

ಪ್ರಜಾವಾಣಿ ವಾರ್ತೆ

ಮಧುಗಿರಿ: ಪಟ್ಟಣದ ಚೇತನ ಆಂಗ್ಲ ಪ್ರೌಢಶಾಲೆಯಲ್ಲಿ ಗುರುವಾರ ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆಮೌಲ್ಯಮಾಪನ ಮಾಡುತ್ತಿದ್ದ ಶಿಕ್ಷಕರ ಮೇಲೆ ಹೆಜ್ಜೇನು ನೊಣಗಳು ದಾಳಿ ನಡೆಸಿವೆ.

ಶಾಲಾಕಟ್ಟಡದಲ್ಲಿದ್ದ ಹೆಜ್ಜೇನು ನೊಣಗಳು ಮಧ್ಯಾಹ್ನ ದಿಢೀರ್ ದಾಳಿ ನಡೆಸಿದಾಗ ಶಿಕ್ಷಕರಾದ ಮಂಜುನಾಥ್ (42), ಮಾರುತೀಶ್ ಕುಮಾರ(35) ಹಾಗೂ ರಾಜಬಾಬು (52) ಗಾಯಗೊಂಡರು. ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

'9 ಸಾವಿರ ಜಲಮಿತ್ರರ ನೋಂದಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಿತ್ರ ಯೋಜನೆಗೆ ಉತ್ತಮ ಸ್ಪಂದನೆ ದೊರೆತಿದ್ದು, 30 ದಿನಗಳಲ್ಲಿ 9 ಸಾವಿರಕ್ಕೂ ಹೆಚ್ಚು ಜನರು ಜಲಮಿತ್ರರಾಗಿ ನೋಂದಣಿಯಾಗಿದ್ದಾರೆ ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷ ಡಾ.ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಜಲಮಿತ್ರರಿಗಾಗಿ ಆಯೋಜಿಸಲಾಗಿದ್ದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಜಲಮಿತ್ರರಿಗೆ ವಲಯವಾರು ತರಬೇತಿ ಕಾರ್ಯಾಗಾರವನ್ನು ನಡೆಸಲಾಗುತ್ತಿದೆ. ಇವರು 'ವಾಟರ್ ಸರ್‌ಪ್ಲಸ್ ಬೆಂಗಳೂರು' ಅಭಿಯಾನದ ರಾಯಭಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ನೀರು ಉಳಿಸಿ - ಬೆಂಗಳೂರು ಬೆಳೆಸಿ' ಅಭಿಯಾನದ ಭಾಗವಾಗಿ ಜಲಮಿತ್ರ ನೊಂದಣಿಗೆ ಮಾರ್ಚ್ 14 ರಂದು ಚಾಲನೆ ನೀಡಲಾಗಿತ್ತು ಎಂದು ವಿವರಿಸಿದರು.

ನೀರಿನ ಪ್ರಾಮುಖ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಮತ್ತು ಜಲಮಂಡಳಿಯ ಜನಸ್ನೇಹಿ ಕಾರ್ಯಕ್ರಮಗಳು ಮತ್ತು ನೀರು ಸರಬರಾಜು, ಒಳಚರಂಡಿ ನಿರ್ವಹಣೆ, ನೀರು ಸಂರಕ್ಷಣೆ, ಮಳೆ ನೀರು ಸಂಗ್ರಹ ಮುಂತಾದ ಚಟುವಟಿಕೆಗೆ ಸಂಬಂಧಿಸಿ ಜಾಗೃತಿ ಮೂಡಿಸಲು ಸ್ವಯಂ ಸೇವಕರಾಗಿ ಕೆಲಸ ಮಾಡುವವರನ್ನು ಜಲಮಿತ್ರರನ್ನಾಗಿ ನೇಮಿಸುವ ಅಭಿಯಾನ ಇದಾಗಿದೆ. ಸಂಸ್ಕರಿಸಿದ ತ್ಯಾಜ್ಯ ನೀರಿನ ಮರುಬಳಕೆ, ಸಾರ್ವಜನಿಕರಿಂದ ನೀರು ವ್ಯರ್ಥವಾಗುವ ವಿವರಗಳನ್ನು ಸಂಗ್ರಹಿಸುವುದು, ಒಳಚರಂಡಿ ಸಮಸ್ಯೆಗಳು, ನೀರಿನ ಸಂಗ್ರಹ ಸಂಪ್‌ಗಳು ಮತ್ತು ಟ್ಯಾಂಕ್‌ಗಳಿಂದ ನೀರು ವ್ಯರ್ಥವಾಗಿ ಹರಿಯುವುದನ್ನು ತಡೆಯುವುದು. ಇದರ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡುವುದು ಜಲಮಿತ್ರರ ಕರ್ತವ್ಯ ಎಂದು ಅವರು ತಿಳಿಸಿದರು.

ಬೆಂಗಳೂರು ದಕ್ಷಿಣ ವಲಯದ ಮುಖ್ಯ ಎಂಜಿನಿಯರ್ ವೆಂಕಟೇಶ್, 500ಕ್ಕೂ ಹೆಚ್ಚು ಜಲಮಿತ್ರರು ಉಪಸ್ಥಿತರಿದ್ದರು.

ಜೈ ಶ್ರೀರಾಮ್ ಘೋಷಣೆ ಕೂಗಿದ್ದವರ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣ • ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

7 ದಿನ ಪೊಲೀಸ್ ಕಸ್ಟಡಿಗೆ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈಶ್ರೀರಾಮ್ ಘೋಷಣೆ ಕೂಗಿಕೊಂಡು ಕಾರಿನಲ್ಲಿ ಹೋಗುತ್ತಿದ್ದ ಯುವಕರನ್ನು ಅಡ್ಡಗಟ್ಟಿ ಹಲ್ಲೆ ನಡೆಸಿದ್ದ ಆರೋಪದ ಮೇಲೆ ಬಂಧಿಸಲಾಗಿರುವ ಆರೋಪಿಗಳಾದ ಫರ್ಮಾನ್ ಹಾಗೂ ಸಮೀರ್ ಎಂಬುವರನ್ನು ಹೆಚ್ಚಿನ ವಿಚಾರಣೆಗಾಗಿ ಪೊಲೀಸರು, ಏಳು ದಿನಗಳ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಮತ್ತಿಬ್ಬರು ಬಾಲಕರನ್ನು ಬಾಲಮಂದಿರಕ್ಕೆ ಕಳುಹಿಸಿದ್ದು, ಇನ್ನೊಬ್ಬ ಆರೋಪಿ ಪತ್ತೆಗೆ ಶೋಧ ಮುಂದುವರಿಸಿದ್ದಾರೆ. ಗುರುವಾರ ಸಂಜೆ ಆರೋಪಿಗಳನ್ನು ಪೊಲೀಸರು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು.

ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಘಟನೆಯ ಹಿಂದಿರುವ ವ್ಯಕ್ತಿಗಳನ್ನೂ ಬಂಧಿಸಬೇಕು ಎಂದು ಆಗ್ರಹಿಸಿ ಠಾಣೆ ಎದುರು ಬಿಜೆಪಿ ಹಾಗೂ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಗುರುವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದರು. ಹಲ್ಲೆಗೆ ಒಳಗಾದ ರಾಹುಲ್ ಹಾಗೂ ಪವನ್ ಸಹ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪೊಲೀಸ್ ಠಾಣಾ ಆವರಣದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಪ್ರತಿಭಟನೆ ಹಿನ್ನೆಲೆಯಲ್ಲಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.



ಬಂಧಿತ ಆರೋಪಿಗಳಾದ ಫರ್ಮಾನ್ ಹಾಗೂ ಸಮೀರ್

ಸಹಕಾರನಗರದ ಪವನ್‌ಕುಮಾರ್, ಸಂಜೀವಿನಿನಗರದ ವಿನಾಯಕ್ ಹಾಗೂ ರಾಹುಲ್ ಮೇಲೆ ಹಲ್ಲೆ ನಡೆಸಿದ್ದ ಆರೋಪದ ಮೇಲೆ ಫರ್ಮಾನ್ ಹಾಗೂ ಸಮೀರ್ ಸೇರಿದಂತೆ ಇಬ್ಬರು ಬಾಲಕರನ್ನು ಪೊಲೀಸರು ಬುಧವಾರ ರಾತ್ರಿಯೇ ಬಂಧಿಸಿದ್ದರು.

'ಹಲ್ಲೆ ನಡೆಸುವ ಯಾವುದೇ ಉದ್ದೇಶವೂ ಇರಲಿಲ್ಲ. ಸ್ಥಳದಲ್ಲಿ ನಡೆದ ಘರ್ಷಣೆಯಿಂದ ಹಲ್ಲೆ ನಡೆಸಲಾಯಿತೆಂದು ಆರೋಪಿಗಳು ಒಪ್ಪಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜೈಶ್ರೀರಾಮ್ ಹೇಳುವಂತೆ ಒತ್ತಾಯ': 'ಬುಧವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಎಂ.ಎಸ್.ಪಾಳ್ಯ ರಸ್ತೆಯಲ್ಲಿ ಬೈಕ್‌ನಲ್ಲಿ ಬರುತ್ತಿದ್ದೆವು. ಅದೇ ವೇಳೆಯಲ್ಲಿ ಕಾರಿನಲ್ಲಿ ಮೂವರು ಯುವಕರು ಜೈಶ್ರೀರಾಮ್ ಘೋಷಣೆ ಕೂಗುತ್ತಾ ಬರುತ್ತಿದ್ದರು. ಅವರು ಜೈಶ್ರೀರಾಮ್ ಘೋಷಣೆ ಕೂಗುತ್ತಾ ಕಾರಿನಲ್ಲಿ ಜೋರಾಗಿ ಹಾಡು ಹಾಕಿಕೊಂಡಿದ್ದರು. ಜೈಶ್ರೀರಾಮ್ ಹೇಳುವಂತೆ ನಮ್ಮನ್ನು ಒತ್ತಾಯಿಸಿದರು. ಅದಕ್ಕೆ ಪ್ರತಿಯಾಗಿ ನಾವು ಅಲ್ಲಾ ಹು ಅಕ್ಬರ್ ಎಂದು ಕೂಗುವಂತೆ ಒತ್ತಾಯಿಸಿದೆವು. ಆಗ ಗಲಾಟೆ ನಡೆಯಿತು ಎಂದು ಆರೋಪಿಗಳು ಒಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರಲ್ಲಿ ಇಬ್ಬರು ಮದ್ಯ ಸೇವಿಸಿ ಗಲಾಟೆ ನಡೆಸಿರುವುದು ದೃಢಪಟ್ಟಿದೆ' ಎಂದು ಮೂಲಗಳು ತಿಳಿಸಿವೆ.

ಕಾರ್ಯಕರ್ತರ ಆಕ್ರೋಶ: 'ಪ್ರಕರಣದ ಹಿಂದೆ ಕಿಡಿಗೇಡಿಗಳ ಷಡ್ಯಂತ್ರ ಇದೆ. ಪ್ರಕರಣದ ಕುರಿತು ಉನ್ನತಮಟ್ಟದ ತನಿಖೆ ನಡೆಸಬೇಕು' ಎಂದು ಬಿಜೆಪಿ ಮುಖಂಡ ಎ.ರವಿ ಆಗ್ರಹಿಸಿದರು.

'ಹಲ್ಲೆಗೊಳಗಾದ ಯುವಕರು ಯಾವುದೇ ಘೋಷಣೆ ಕೂಗಿಲ್ಲ. ಬಂಧಿತರ ವಿರುದ್ಧ ಕಾನೂನು ಕ್ರಮ ಆಗದಿದ್ದರೆ ಮತ್ತೆ ಹೋರಾಟ ನಡೆಸುತ್ತೇವೆ' ಎಂದು ಎಚ್ಚರಿಸಿದರು.

'ಬುಧವಾರ ಮಧ್ಯಾಹ್ನ ಶ್ರೀರಾಮನವಮಿ ಮುಗಿಸಿ ಕಾರಿನಲ್ಲಿ ಬರುತ್ತಿದ್ದೆವು. ಬೈಕ್‌ನಲ್ಲಿ ಬಂದ ಇಬ್ಬರು ಕಾರಿಗೆ ಕಟ್ಟಿದ್ದ ಶ್ರೀರಾಮನ ಧ್ವಜ ನೋಡಿ ನಮ್ಮನ್ನು ಅಡ್ಡಗಟ್ಟಿದ್ದರು. ಅಲ್ಲಾ ಹು ಅಕ್ಬರ್ ಕೂಗುವಂತೆ ಬಲವಂತ ಮಾಡಿದರು. ನಾವು ಜೈಶ್ರೀರಾಮ್ ಹೇಳುವಂತೆ ಒತ್ತಾಯಿಸಿಲ್ಲ' ಎಂದು ರಾಹುಲ್ ಹೇಳಿದರು.

'ಆರೋಪಿಗಳು ಹಲ್ಲೆ ನಡೆಸಲು ಮುಂದಾದ ವೇಳೆ ನಾನು ತಪ್ಪಿಸಿಕೊಂಡು ಬಿಎಂಟಿಸಿ ಬಸ್ ಹತ್ತಿದೆ. ಆದರೆ, ವಿನಾಯಕ್ ಹಾಗೂ ರಾಹುಲ್ ಅವರ ಕೈಗೆ ಸಿಕ್ಕಿದರು. ದೊಣ್ಣೆಯಿಂದ ಹಲ್ಲೆ ನಡೆಸಿದರು. ಹಲ್ಲೆ ನಡೆಸುತ್ತಿದ್ದರೂ ಯಾರೂ ರಕ್ಷಣೆಗೆ ಬರಲಿಲ್ಲ' ಎಂದು ಪವನ್‌ಕುಮಾರ್ ಅವರು ಹೇಳಿದರು.

ದೇಶ ದ್ರೋಹ ಪ್ರಕರಣ ದಾಖಲಿಸಿ: ಆರ್. ಅಶೋಕ

'ಬೆಂಗಳೂರಿನಲ್ಲಿ 'ಜೈಶ್ರೀರಾಮ್' ಘೋಷಣೆ ಕೂಗಿದವರ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ ಮುಸ್ಲಿಂ ಮೂಲಭೂತವಾದಿಗಳ ವಿರುದ್ಧ ದೇಶ ದ್ರೋಹದ ಪ್ರಕರಣ ದಾಖಲಿಸಿ ಕಠಿಣ ಕ್ರಮ ಜರುಗಿಸಬೇಕು. ಇಲ್ಲವಾದರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬುಧವಾರ ಕೆಲ ಯುವಕರು ರಾಮನವಮಿ ಮುಗಿಸಿ ಬರುವಾಗ ಜೈಶ್ರೀರಾಮ್ ಘೋಷಣೆ ಕೂಗಿದ ಕಾರಣಕ್ಕೆ ಕಾರನ್ನು ಅಡ್ಡಗಟ್ಟಿ, ಹಲ್ಲೆ ಮಾಡಿ 'ಅಲ್ಲಾಹು ಅಕ್ಬರ್' ಎಂದು ಘೋಷಣೆ ಕೂಗುವಂತೆ ಬೆದರಿಕೆ ಹಾಕಿದ್ದಾರೆ. ನಾವು ಭಾರತದಲ್ಲಿದ್ದೇವೋ ಪಾಕಿಸ್ತಾನದಲ್ಲಿದ್ದೇವೆಯೋ' ಎಂದು ಅವರು ಪ್ರಶ್ನಿಸಿದರು.

'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದ ನಂತರ ಮುಸ್ಲಿಂ ಮೂಲಭೂತವಾದಿಗಳ ಅಟಾಟೋಪ ಮೇರೆ ಮೀರಿದೆ. ಪಾಕಿಸ್ತಾನ ಬೆಂಬಲಿಗರು, ಟಿಪ್ಪು ಸಿದ್ಧಾಂತವಾದಿಗಳು ಹೆಚ್ಚಾಗಿದ್ದಾರೆ. ಕರ್ನಾಟಕದಲ್ಲಿ ಇಸ್ಲಾಮಿಕ್ ಭಯೋತ್ಪಾದನೆ ಬೇರು ಬಿಡುತ್ತಿದೆ. ಇದಕ್ಕೆ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ, ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಹಾಕಿರುವ ಪ್ರಕರಣಗಳೇ ನಿದರ್ಶನ. ಇವೆಲ್ಲ ಆತಂಕಕಾರಿ ಬೆಳವಣಿಗೆ' ಎಂದು ಹೇಳಿದರು.

'ವೋಟ್‌ಬ್ಯಾಂಕ್‌ಗಾಗಿ ಮುಸ್ಲಿಂ ಮೂಲಭೂತವಾದಿಗಳ ಮೇಲೆ ಕಾಟಾಚಾರಕ್ಕೆ ಪ್ರಕರಣ ದಾಖಲಿಸಿ ನಂತರ ಬಿಡುಗಡೆ ಮಾಡುತ್ತಿದ್ದಾರೆ. ಹಿಂದೂಗಳ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡುತ್ತಿದೆ. ಇಂಥವರ ರಕ್ಷಣೆಗೆ ನಿಲ್ಲುವುದು, ಮುಂದಿನ ದಿನಗಳಲ್ಲಿ ರಾಜ್ಯ ಬೆಲೆ ತೆರಬೇಕಾಗುತ್ತದೆ. ರಾಜ್ಯ ಸರ್ವಜನಾಂಗದ ತೋಟವಾಗಿ ಇರಬೇಕೆಂದೇ ನಾವು ಬಯಸುತ್ತೇವೆ' ಎಂದು ಅವರು ಹೇಳಿದರು.

ಕಾಂಗ್ರೆಸ್ ಸಂಸದರ ಕೊಡುಗೆ ಏನು?: ಸಿದ್ದರಾಮಯ್ಯ ಬಿಜೆಪಿ ಸಂಸದ ಬಗ್ಗೆ ಮಾತನಾಡುತ್ತಾರೆ. ಆದರೆ, ಡಿ.ಕೆ.ಸುರೇಶ್ ಮತ್ತು ಮಲ್ಲಿಕಾರ್ಜುನ ಖರ್ಗೆ ಸಂಸತ್ತಿನಲ್ಲಿ ರಾಜ್ಯದ ಪರವಾಗಿ ಯಾವ ವಿಷಯಗಳ ಬಗ್ಗೆ ಮಾತನಾಡಿದ್ದಾರೆ ಎಂಬುದನ್ನು ಹೇಳಲಿ. ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ರಾಜ್ಯಕ್ಕೆ ದಾರಿದ್ರ್ಯ ಬಂದಿದೆ. ನೌಕರರಿಗೆ ಸಂಬಳ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಅಭಿವೃದ್ಧಿಗೆ ಹಣವೂ ಇಲ್ಲವಾಗಿದೆ ಎಂದು ಅಶೋಕ ದೂರಿದರು.

ಇಂದಿನಿಂದ ಲೋಕಸಭೆ ಮೊದಲ ಹಂತದ ಚುನಾವಣೆ ಆರಂಭ !

ನವ ವಿವಾಹಿತ ವೈದ್ಯ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಯಲಹಂಕ ರೈಲು ನಿಲ್ದಾಣದ ಸಮೀಪ ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ವೈದ್ಯರೊಬ್ಬರು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಅನಂತ್ ಪ್ರಸಾದ್

ಅನಂತ್ ಪ್ರಸಾದ್ (38) ಆತ್ಮಹತ್ಯೆ ಮಾಡಿಕೊಂಡ ವೈದ್ಯ. 'ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ಅನಂತ್ ಪ್ರಸಾದ್ ಅವರು 'ಬೆಂಗಳೂರು ನಾರ್ಥ್ ಆಸ್ಪತ್ರೆ'ಯಲ್ಲಿ ಮಕ್ಕಳ ತಜ್ಞರಾಗಿ ಕೆಲಸ ಮಾಡುತ್ತಿದ್ದರು. ಮೂರು ತಿಂಗಳ ಹಿಂದಷ್ಟೇ ಮದುವೆಯಾಗಿದ್ದು, ಪತ್ನಿ ಜತೆ ಹೆಬ್ಬಾಳ ಬಳಿಯ ಕೆಂಪಾಪುರದಲ್ಲಿ ವಾಸವಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ನನ್ನ ಸಾವಿಗೆ ನಾನೇ ಕಾರಣ ಎಂದು ಬರೆದಿಟ್ಟಿರುವ ಡೆತ್‌ನೋಟ್, ಅವರ ಪ್ಯಾಂಟಿನ ಜೇಬಿನಲ್ಲಿ ಸಿಕ್ಕಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ' ಎಂದು ರೈಲ್ವೆ ಮಾಹಿತಿ ನೀಡಿದರು. ಯಶವಂತಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸಂಗೀತ ಕಛೇರಿ ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮ ಸೇವಾ ಮಂಡಲಿ ಮತ್ತು ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿರುವ ರಾಮನವಮಿ ಸಂಗೀತೋತ್ಸವದಲ್ಲಿ ಗುರುವಾರ ಸಿಕ್ಕಿಲ್ ಗುರುಚರಣ್ ಮತ್ತು ಅವರ ತಂಡದವರು ಸಂಗೀತ ಕಛೇರಿ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಸಾರಕ್ಕಿಯಲ್ಲಿ ಜೋಡಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಇಲ್ಲಿನ ಸಾರಕ್ಕಿ ಉದ್ಯಾನದಲ್ಲಿ ಗುರುವಾರ ಸಂಜೆ ಜೋಡಿ ಕೊಲೆ ನಡೆದಿದ್ದು, ಈ ಸಂಬಂಧ ಜೆ.ಪಿ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೊರಗುಂಟೆಪಾಳ್ಯದ ಸುರೇಶ್ (46) ಹಾಗೂ ಶಾಕಾಂಬರಿ ನಗರದ (25) ಅನುಷಾ ಕೊಲೆಯಾದವರು. ಪ್ರಕರಣ ಸಂಬಂಧ ಅನುಷಾ ಅವರ ತಾಯಿ ಗೀತಾ ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಸುರೇಶ್ ಹಾಗೂ ಅನುಷಾ ನಡುವೆ ಸ್ನೇಹವಿತ್ತು. ಸ್ನೇಹವು ಪ್ರೇಮಕ್ಕೆ ತಿರುಗಿತ್ತು. ಇಬ್ಬರೂ ಆಗಾಗ್ಗೆ ಭೇಟಿ ಆಗುತ್ತಿದ್ದರು. ತಮ್ಮಿಬ್ಬರ ಸಂಬಂಧ ಮುಂದುವರಿಸುವುದು ಬೇಡವೆಂದು ಇತ್ತೀಚೆಗೆ ನಿರ್ಧರಿಸಿದ್ದ ಅನುಷಾ ಆತನಿಂದ ದೂರವಾಗಿದ್ದಳು. ಗುರುವಾರ ಸಂಜೆ ಸಾರಕ್ಕಿ ಉದ್ಯಾನದಲ್ಲಿ ಭೇಟಿಯಾದ ವೇಳೆ ಅನುಷಾಳನ್ನು ಸುರೇಶ್ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ' ಎಂದು ಹೇಳಿದರು.

'ಘಟನೆ ನಡೆದಾಗ ಅನುಷಾ ಅವರ ತಾಯಿ ಗೀತಾ ಸ್ಥಳದಲ್ಲೇ ಇದ್ದರು. ಮಗಳ ಕೊಲೆಗೆ ಪ್ರತೀಕಾರವಾಗಿ ಸುರೇಶ್ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿಹಾಕಿ ಕೊಲೆ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಸುರೇಶ್ ಈವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ. ಅದೇ ಸಂಸ್ಥೆಯಲ್ಲಿ ಅನುಷಾ ಕೂಡ ಕೆಲಸ ಮಾಡುತ್ತಿದ್ದರು. ಸುರೇಶ್‌ಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದರು. ಈ ನಡುವೆ ಅನುಷಾ ಜತೆ ಸುರೇಶ್‌ಗೆ ಪ್ರೇಮಾಂಕುರವಾಗಿತ್ತು' ಎಂದು ಮೂಲಗಳು ಹೇಳಿವೆ.

'ಇತ್ತೀಚೆಗೆ ಅನುಷಾ, ತನ್ನಿಂದ ಅಂತರ ಕಾಯ್ದುಕೊಳ್ಳುವಂತೆ ಸುರೇಶ್‌ಗೆ ಸೂಚಿಸಿ, ಕೆಲಸ ಬಿಟ್ಟಿದ್ದಳು. ಹೀಗಾಗಿ ಜೀವನ ನಿರ್ವಹಣೆಗಾಗಿ ಆಕೆ, ಮಕ್ಕಳ ಕೇರ್‌ಟೇಕರ್ ಆಗಿ ಕೆಲಸ ಮಾಡಿಕೊಂಡಿದ್ದಳು. ಆದರೂ ಸುರೇಶ್ ಆಗಾಗ್ಗೆ ಕರೆ ಮಾಡಿ ತೊಂದರೆ ಕೊಡುತ್ತಿದ್ದ. ತೊಂದರೆ ನೀಡಿದರೆ ಪೊಲೀಸರಿಗೆ ದೂರು ನೀಡುವುದಾಗಿ ಎಚ್ಚರಿಕೆ ನೀಡಿದ್ದಳು' ಎಂದು ಪೊಲೀಸರು ತಿಳಿಸಿದರು.

'ಕಿರುಕುಳದಿಂದ ಬೇಸತ್ತಿದ್ದ ಅನುಷಾ ಜೆ.ಪಿ.ನಗರ ಠಾಣೆಗೆ ಸುರೇಶ್ ವಿರುದ್ಧ ದೂರು ನೀಡಿದ್ದಳು. ಗುರುವಾರ ಮಧ್ಯಾಹ್ನ ಸುರೇಶ್‌ನನ್ನು ಠಾಣೆಗೆ ಕರೆಸಿದ್ದ ಪೊಲೀಸರು ತೊಂದರೆ ಕೊಡದಂತೆ ಎಚ್ಚರಿಕೆ ನೀಡಿದ್ದರು. ಇದೇ ವರ್ತನೆ ಮುಂದುವರಿಸಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದರು. ಕೊನೆಯದಾಗಿ ಮಾತನಾಡುವುದಾಗಿ ಹೇಳಿ ಅನುಷಾಳನ್ನು ಉದ್ಯಾನಕ್ಕೆ ಕರೆಸಿಕೊಂಡು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ' ಎಂದು ಹೇಳಿದರು.

'ಉದ್ಯಾನದಲ್ಲಿ ಇಬ್ಬರ ನಡುವೆ ಗಲಾಟೆ ನಡೆದು ಆರೋಪಿ ಕೃತ್ಯ ಎಸಗಲೆಂದ ತಂದಿದ್ದ ಚಾಕುವಿನಿಂದ ಅನುಷಾಗೆ ಐದಾರು ಬಾರಿ ಇರಿದು ಕೊಲೆ ಮಾಡಿದ್ದಾನೆ. ಪುತ್ರಿ ರಕ್ಷಣೆಗೆ ಧಾವಿಸಿದ ಗೀತಾ ಅವರಿಗೂ ಆರೋಪಿ ಚಾಕುವಿನಿಂದ ಇರಿಯಲು ಯತ್ನಿಸಿದ. ಆಕೆ ತಪ್ಪಿಸಿಕೊಂಡು ಅಲ್ಲೇ ಇದ್ದ ಸಿಮೆಂಟ್ ಇಟ್ಟಿಗೆಯಿಂದ ತಲೆಗೆ ಹೊಡೆದು ಕೊಲೆ ಮಾಡಿದ್ದಾರೆ' ಎಂದು ತಿಳಿಸಿದರು.

ಚಿನ್ನದ ಸರ ಕಳವು: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಶುದ್ಧೀಕರಣ ಘಟಕದಲ್ಲಿ ಕ್ಯಾನ್‌ಗೆ ನೀರು ತುಂಬಿಸುತ್ತಿದ್ದ ಯುವಕನ ಚಿನ್ನದ ಸರ ಕಸಿದು ಪರಾರಿಯಾಗಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾಳಿಕಾನಗರ ನಿವಾಸಿ ಶ್ರೀಧರ (21) ಬಂಧಿತ ಆರೋಪಿ.

ಆರೋಪಿಯಿಂದ ₹80 ಸಾವಿರ ಮೌಲ್ಯದ 13 ಗ್ರಾಂ ಚಿನ್ನದ ಸರ, ಒಂದು ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ. ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಆತನಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು. ಮಾರ್ಚ್ 19ರಂದು ರಾತ್ರಿ ಮಾರುತಿನಗರದ ನಿವಾಸಿ ಪ್ರತಾಪ್, ಚಕ್ರನಗರ ಮುಖ್ಯರಸ್ತೆಯ ವಾಲ್ಮೀಕಿ ನಗರದಲ್ಲಿರುವ ನೀರು ಶುದ್ಧೀಕರಣ ಘಟಕದಲ್ಲಿ ನೀರು ತುಂಬಿಸುತ್ತಿದ್ದರು. ಆಗ ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು ಸರ ಕಸಿದು ಪರಾರಿಯಾಗಿದ್ದರು.

ಈ ಸಂಬಂಧ ದಾಖಲಾದ ದೂರು ಆಧರಿಸಿ ಕಾರ್ಯಾಚರಣೆ ಕೈಗೊಂಡು ಆರೋಪಿಯನ್ನು ಬಂಧಿಸವಾಗಿದೆ. ಆರೋಪಿಯ ಬಂಧನದಿಂದ ತಾವರೆಕೆರೆ ಠಾಣೆಯಲ್ಲಿ ದಾಖಲಾಗಿದ್ದ ವಾಹನ ಕಳವು ಪ್ರಕರಣ ಪತ್ತೆಯಾಗಿದೆ. ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಪ್ರವೇಶಪತ್ರಕ್ಕೂ ಕ್ಯೂಆರ್ ಕೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇನ್ನು ಮುಂದೆ ನಡೆಸುವ ಎಲ್ಲ ಪರೀಕ್ಷೆಗಳಿಗೂ ಕ್ಯೂಆರ್ ಕೋಡ್ ಒಳಗೊಂಡ ಪ್ರವೇಶಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಿದೆ.

ಪರೀಕ್ಷಾ ಅಕ್ರಮ ತಡೆಯುವ ಹಾಗೂ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸಲು ಸಹಕಾರಿಯಾಗುವ ಈ ಹೊಸ ಪದ್ಧತಿ ಇದೇ ಏಪ್ರಿಲ್‌ನಿಂದ ಆರಂಭವಾಗುವ ಪರೀಕ್ಷೆಗಳಿಗೂ ಅನ್ವಯವಾಗಲಿದೆ. ವಿಶ್ವವಿದ್ಯಾಲಯದ ಜತೆಗೆ ಎಲ್ಲ ಸಂಯೋಜಿತ ಕಾಲೇಜುಗಳು ನಡೆಸುವ ಪರೀಕ್ಷೆಗಳಲ್ಲೂ ಇದೇ ಮಾದರಿ ಬಳಸಲಾಗುತ್ತದೆ ಎಂದು ಕುಲಪತಿ ಎಂ.ಕೆ. ರಮೇಶ್ ಹೇಳಿದ್ದಾರೆ.

ಪ್ರತಿ ಪ್ರವೇಶಪತ್ರದಲ್ಲೂ ಆಯಾ ವಿದ್ಯಾರ್ಥಿಗಳ ಭಾವಚಿತ್ರ, ಸಂಪೂರ್ಣ ಮಾಹಿತಿ ಒಳಗೊಂಡ ವಿಶಿಷ್ಟ ಕ್ಯೂಆರ್ ಕೋಡ್ ಅಳವಡಿಸಲಾಗಿರುತ್ತದೆ. ಪರೀಕ್ಷಾ ಮೇಲ್ವಿಚಾರಕರು, ವಿಚಕ್ಷಣ ದಳದ ಸಿಬ್ಬಂದಿ ಸ್ಕ್ಯಾನ್ ಮಾಡುವ ಮೂಲಕ ವಿದ್ಯಾರ್ಥಿಗಳ ಖಚಿತ ವಿವರ ಪಡೆಯಬಹುದು ಎಂದು ಹೇಳಿದ್ದಾರೆ.

ರೈಲು ಹಳಿ ಮೇಲೆ ಯುವಕನ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದೀಪಾಂಜಲಿ ನಗರ ಸಮೀಪದ ರೈಲ್ವೆ ಹಳಿಯ ಮೇಲೆ ಗುರುವಾರ ಬೆಳಿಗ್ಗೆ ಯುವಕನ ಶವ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.



ಅಶೋಕ್

ವಿಜಯಪುರ ಜಿಲ್ಲೆಯ ಕಾರಜೋಳ ಗ್ರಾಮದ ಚನ್ನಬಸು ಅಶೋಕ್ ಯಳಮೇಲಿ (22) ಅವರ ಮೃತದೇಹ ಎಂದು ಗುರುತಿಸಲಾಗಿದೆ. ಜೇಬಿನಲ್ಲಿ ಪತ್ತೆಯಾದ ಆಧಾರ್ ಹಾಗೂ ಪ್ಯಾನ್ ಕಾರ್ಡ್ ಆಧರಿಸಿ ಗುರುತು ಪತ್ತೆ ಮಾಡಲಾಗಿದೆ.

'5 ತಿಂಗಳ ಹಿಂದೆ ನರ್ಸಿಂಗ್ ಕೋರ್ಸ್ ಮುಗಿಸಿದ್ದ ಅಶೋಕ್‌ಗೆ ಕೆಲಸ ಸಿಕ್ಕಿತ್ತು. 15 ದಿನಗಳ ಹಿಂದೆ ನಗರಕ್ಕೆ ಬಂದು, ಅವರ ಚಿಕ್ಕಮ್ಮನ ಮನೆಯಲ್ಲಿ ಉಳಿದುಕೊಂಡಿದ್ದರು. ನಿತ್ಯ ದೀಪಾಂಜಲಿ ನಗರದ ಮೆಟ್ರೊ ನಿಲ್ದಾಣಕ್ಕೆ ಬಂದು, ಕೆಲಸದ ಸ್ಥಳಕ್ಕೆ ತೆರಳುತ್ತಿದ್ದರು. ಬುಧವಾರ ಬೆಳಿಗ್ಗೆ ಕೆಲಸಕ್ಕೆ ಹೋಗುವಾಗ ಸಂಜೆ ಮನೆಗೆ ಬರುವುದಿಲ್ಲ. ಸ್ನೇಹಿತರ ಮನೆಗೆ ಹೋಗುವುದಾಗಿ ಚಿಕ್ಕಮ್ಮನಿಗೆ ತಿಳಿಸಿದ್ದರು. ರಾತ್ರಿ ಚಿಕ್ಕಮ್ಮ, ಅಶೋಕ್ ಮೊಬೈಲ್‌ಗೆ ಕರೆ ಮಾಡಿದಾಗ ಸ್ವಿಚ್ಡ್ ಆಫ್ ಬರುತ್ತಿತ್ತು' ಎಂದು ಮೂಲಗಳು ಹೇಳಿವೆ.

'ಚಲಿಸುತ್ತಿದ್ದ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಹಳಿಯ ಮೇಲೆ ಬ್ಯಾಗ್‌ವೊಂದು ಪತ್ತೆಯಾಗಿದೆ. ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ. ಕೊನೆಯದಾಗಿ ಯಾರಿಗೆ ಕರೆ ಮಾಡಿದ್ದರು. ಬುಧವಾರ ಯಾವ ಸ್ಥಳಕ್ಕೆ ತೆರಳಿದ್ದರು ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಪಾದಯಾತ್ರೆ, ಮೆರವಣಿಗೆ, ಲವಲವಿಕೆಯ ಮಾತಿನಲ್ಲಿ ಮತಯಾಚನೆ

ರಾಜೀವ್ ಗೌಡರ 'ಪ್ರೊಫೆಸರ್' ಶೈಲಿ ಪ್ರಚಾರ

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಮತ್ತು ಅವರ ಮಗಳು ರಿಷಿಕಾ ಜೊತೆ ಮಲ್ಲೇಶ್ವರದ ಸಿ.ಟಿ.ಆರ್ ಹೋಟೆಲಿನಲ್ಲಿ ಮತಯಾಚನೆ ಮಾಡಿದರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: 'ನಾನು ಪ್ರೊ. ರಾಜೀವ್ ಗೌಡ, ಐಐಎಂನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕನಾಗಿದ್ದೆ, ಈಗ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡುತ್ತಿದ್ದೇನೆ. ಕ್ಷೇತ್ರದ ಜನರ ಅಭಿವೃದ್ಧಿಗಾಗಿ ನನಗೆ ಮತ ನೀಡಿ..'

ಹೀಗೆ ತಮ್ಮನ್ನು ಪೂರ್ಣವಾಗಿ ಪರಿಚಯಿಸಿಕೊಳ್ಳುತ್ತಾ, ಪಕ್ಕಾ 'ಪ್ರೊಫೆಸರ್' ಶೈಲಿಯಲ್ಲಿ ಮತಯಾಚಿಸಿದರು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ.ರಾಜೀವ್ ಗೌಡ.

ಹಲವು ಚುನಾವಣೆಗಳಲ್ಲಿ ನೂರಾರು ಅಭ್ಯರ್ಥಿಗಳು ಮತ ಕೇಳುತ್ತಿದ್ದ ಪರಿಯನ್ನು ಕಂಡಿದ್ದ ನಾಗರಿಕರು, ರಾಜೀವ್ ಗೌಡರು ಭಿನ್ನ ಶೈಲಿಯಲ್ಲಿ ಮತಯಾಚಿಸುವುದನ್ನು ಅಚ್ಚರಿಯಿಂದ ನೋಡುತ್ತಿದ್ದರು.

ಗುರುವಾರ ಬೆಳಿಗ್ಗೆ 7.40ಕ್ಕೆ ಮಗಳು ರಿಷಿಕಾ ಜೊತೆಗೆ ಬೆಳಗಿನ ಉಪಾಹಾರಕ್ಕಾಗಿ ಮಲ್ಲೇಶ್ವರದ ಸಿಟಿಆರ್ ಹೋಟೆಲ್‌ಗೆ ಬಂದರು. ಮಸಾಲದೋಸೆ, 'ಬ್ಲ್ಯಾಕ್ ಟಿ'ಗೆ ಆರ್ಡರ್ ಮಾಡಿದರು. ಅದು ಬರುವವರೆಗೆ, ಗ್ರಾಹಕರೊಂದಿಗೆ ಮಾತಿಗಿಳಿದರು. ಇಂಗ್ಲಿಷ್, ಕನ್ನಡ ಹೀಗೆ ಎರಡೂ ಭಾಷೆಯಲ್ಲೂ ಜನರೊಟ್ಟಿಗೆ ಮಾತನಾಡಿದರು. ಜನರು ಅಷ್ಟೇ ಆಪ್ತವಾಗಿ ಪ್ರತಿಕ್ರಿಯಿಸಿದರು. ಪಕ್ಕದ ಟೇಬಲ್‌ನಲ್ಲಿ ಕುಟುಂಬವೊಂದು ಉಪಾಹಾರ ಸೇವಿಸುತ್ತಿತ್ತು. ಆ ಗುಂಪಿನಲ್ಲಿ ತಾತನೊಂದಿಗಿದ್ದ ಮಗುವನ್ನು ರಾಜೀವ್‌ಗೌಡರು ಮಾತನಾಡಿಸಿದರು. ಆಗ ಎದುರು ಕುಳಿತಿದ್ದವರು 'ಅದು ನಮ್ಮ ಮಗು' ಎಂದು ತಿಳಿಸಿದರು. 'ಓ ಹೌದಾ... ನೋಡಿ, ಇದು ನನ್ನ ಮಗು' ಎಂದು ಮಗಳು ರಿಷಿಕಾರನ್ನು ತೋರಿಸಿ ಪ್ರೊಫೆಸರ್ ನಗೆ ಚಟಾಕಿ ಹಾರಿಸಿದರು!

ದೋಸೆ ಸವಿಯುತ್ತಲೇ ತಮ್ಮ ಪಕ್ಷದವರೊಂದಿಗೆ ಮತದಾರರನ್ನು ಸೆಳೆಯುವ ತಂತ್ರಗಳ ಬಗ್ಗೆ ಚರ್ಚೆ ನಡೆಸಿದರು. ಸಿನಿಮಾ ರಂಗದಲ್ಲಿ ಕೆಲಸ ಮಾಡುತ್ತಿರುವ ರಿಷಿಕಾ ಕೂಡಾ ಅಪ್ಪನ ಪರವಾಗಿ ಪ್ರಚಾರ ನಡೆಸಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಲ್ಲೇಶ್ವರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಅನೂಪ್ ಅಯ್ಯಂಗಾರ್, ಕಾಂಗ್ರೆಸ್ ವಕ್ತಾರರಾದ ನಂದನ್, ನಟರಾಜ್ ಗೌಡ ಸಹಿತ ಕಾಂಗ್ರೆಸ್ ಮುಖಂಡರು ಪ್ರೊಫೆಸರ್‌ಗೆ ಸಾಥ್ ನೀಡಿದರು.

ಅಭ್ಯರ್ಥಿ ಜತೆ ಒಂದು ದಿನ

ಮಲ್ಲೇಶ್ವರದಿಂದ ಗುಟ್ಟಹಳ್ಳಿ ವಾರ್ಡ್‌ಗೆ ತೆರಳಿದ ರಾಜೀವ್ ಗೌಡರಿಗೆ, ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ, ಜೈಕಾರ ಕೂಗಿ ಸ್ವಾಗತಿಸಿದರು. ಅಲ್ಲಿಂದ ಸ್ವಲ್ಪ ದೂರ ಪಾದಯಾತ್ರೆ ಮೂಲಕವೇ ಮತಯಾಚಿಸಿದರು. ಬಳಿಕ ತೆರೆದ ವಾಹನ ಏರಿ, ಜನರತ್ತ ಕೈ ಮುಗಿಯುತ್ತಾ ಸಾಗಿದರು. ಬೀದಿ, ಬೀದಿಗಳಲ್ಲಿ ಪ್ರಚಾರದ ಮೆರವಣಿಗೆ ಸಾಗಿತು. ಕಾರ್ಯಕರ್ತರು ಮನೆ ಮನೆಗೆ ಕರಪತ್ರ ಹಂಚಿದರು. ರಾಜೀವ್ ಗೌಡರನ್ನು ಗುಣಗಾನ ಮಾಡುವ ಗೀತೆಗಳು ಮೊಳಗಿದವು. ಬಿಸಿಲಿನ ಬೇಗೆಗೆ ಬಾಯಾರದಂತೆ ಅಲ್ಲಲ್ಲಿ ಪಾನೀಯ ಸೇವಿಸಿದರು. ಕಾಡು ಮಲ್ಲೇಶ್ವರ ಸುತ್ತಮುತ್ತ ಪ್ರಚಾರ ಮುಗಿಸಿ ಬ್ಯಾಟರಾಯನಪುರಕ್ಕೆ ತೆರಳಿದರು.

ಮಧ್ಯಾಹ್ನ ಬ್ಯಾಟರಾಯನಪುರ ಕೋದಂಡರಾಮ ಸ್ವಾಮಿ ಜಾತ್ರೆಯಲ್ಲಿ ತೇರು ಎಳೆಯುವ ಕಾರ್ಯಕ್ರಮದಲ್ಲಿ ಸಚಿವ ಕೃಷ್ಣ ಬೈರೇಗೌಡರೊಂದಿಗೆ ಪಾಲ್ಗೊಂಡರು. ವಿಶೇಷ ಪೂಜೆ, ಪ್ರಾರ್ಥನೆಗಳನ್ನು ನೆರವೇರಿಸಿದ ಬಳಿಕ ಭಕ್ತರಿಗೆ ಅನ್ನ ಪ್ರಸಾದ ಬಡಿಸಿದರು. ಹೆಣ್ಣೂರು, ಹೊರಮಾವಿನಲ್ಲಿ ರೋಡ್ ಶೋ, ವಿವಿಧ ಪಕ್ಷಗಳ ಮುಖಂಡರು ಕಾಂಗ್ರೆಸ್ ಸೇರುವ ಕಾರ್ಯಕ್ರಮದಲ್ಲಿ ಭಾಗಿಯಾದರು.

'ಟ್ರೆಡಿಷನಲ್ ಜೊತೆಗೆ ಅಡಿಷನಲ್ ವೋಟು ನನಗೆ ಬರಲಿದೆ'

ಕಾಂಗ್ರೆಸ್‌ನ ಸಾಂಪ್ರದಾಯಿಕ (ಟ್ರೆಡಿಷನಲ್) ಮತಗಳ ಜೊತೆಗೆ, ಬಿಜೆಪಿಗೆ ಹೋಗುತ್ತಿದ್ದ ಮತಗಳು ಹೆಚ್ಚುವರಿಯಾಗಿ(ಅಡಿಷನಲ್) ನನಗೆ ಬರಲಿವೆ' ಎಂದು ಎಂ.ವಿ. ರಾಜೀವ್ ಗೌಡ ವಿಶ್ವಾಸ ವ್ಯಕ್ತಪಡಿಸಿದರು.

'ಕ್ಷೇತ್ರದಲ್ಲಿ ಜನರ ಪ್ರತಿಕ್ರಿಯೆ ಚೆನ್ನಾಗಿದೆ. ಜನರು ತಮ್ಮ ಬಗ್ಗೆ ಕಾಳಜಿ ತೋರುವ, ತಿಳಿವಳಿಕೆ ಹೊಂದಿರುವ, ಉತ್ತಮ ಶೈಕ್ಷಣಿಕ ಹಿನ್ನೆಲೆಯಿರುವ, ಕ್ಷೇತ್ರಕ್ಕಾಗಿ ದುಡಿಯುವ ಅಭ್ಯರ್ಥಿಯ ನಿರೀಕ್ಷೆಯಲ್ಲಿದ್ದರು. ಈಗ ನಾನು ಅಭ್ಯರ್ಥಿ ಆಗಿರುವುದನ್ನು ಕಂಡ ಮೇಲೆ, 'ನಿರೀಕ್ಷೆಗಳು ಈಡೇರುತ್ತವೆ' ಎಂಬ ಭರವಸೆ ಜನರಲ್ಲಿ ಮೂಡಿದೆ' ಎಂದು ಹೇಳಿದರು.

'ಒಕ್ಲಹೋಮ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕನಾಗಿ, ಐಐಎಂ ಬೆಂಗಳೂರಿನಲ್ಲಿ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ್ದೇನೆ. ಇನ್ನೊಂದೆಡೆ ರಾಜ್ಯ ನೀತಿ ಮತ್ತು ಆಯೋಗದ ಉಪಾಧ್ಯಕ್ಷನಾಗಿ, ಕೆಪಿಸಿಸಿ ಅಪಾರ್ಟ್‌ಮೆಂಟ್ ಸೆಲ್ ಅಧ್ಯಕ್ಷನಾಗಿ, ರಾಜ್ಯಸಭೆ ಸದಸ್ಯನಾಗಿ, ಆರ್‌ಬಿಐ ಕೇಂದ್ರೀಯ ಮಂಡಳಿ ನಿರ್ದೇಶಕನಾಗಿ, ಕೆಪಿಸಿಸಿ ಪ್ರಣಾಳಿಕೆ ಸಮಿತಿ ಸದಸ್ಯನಾಗಿ, ಸಾರ್ವಜನಿಕ ನೀತಿ ಕೇಂದ್ರ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವವಿದೆ. ಇವೆಲ್ಲವನ್ನೂ ಬಳಸಿಕೊಳ್ಳಬೇಕು ಎಂಬುದು ಮತದಾರರ ಅಪೇಕ್ಷೆಯಾಗಿದೆ' ಎಂದು ವಿವರಿಸಿದರು.

'10 ವರ್ಷಗಳಲ್ಲಿ ಜನರು ಅನುಭವಿಸಿದ ಸಂಕಷ್ಟಗಳು ಮತ್ತು ಕಳೆದ 10 ತಿಂಗಳಲ್ಲಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಸಂಕಷ್ಟದಿಂದ ಪಾರು ಮಾಡಿರುವುದು ಜನರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಅದೇ ನನ್ನ ಗೆಲುವಿನ ಅಡಿಪಾಯ' ಎಂದು ವಿಶ್ಲೇಷಿಸಿದರು.

ಸುದ್ದಿ 2 ನಿಮಿಷ

ಆಮಿಷಗಳಿಗೆ ಒಳಗಾಗದಿರಿ ತುಷಾರ್ ಗಿರಿನಾಥ್

ಬೆಂಗಳೂರು: ಪ್ರತಿಯೊಬ್ಬ ಯುವ ಮತದಾರರು ಚುನಾವಣಾ ರಾಯಭಾರಿಗಳಾಗಿದ್ದು, ಯಾವುದೇ ಆಮಿಷಗಳಿಗೆ ಒಳಗಾಗದೆ ಮತಚಲಾಯಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಎಂ.ಎಸ್ ರಾಮಯ್ಯ ವೈದ್ಯಕೀಯ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ನಮ್ಮ ನಡೆ ಮತಗಟ್ಟೆಯ ಕಡೆ ಜಾಗೃತಿ' ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.



'ಕೆವೈಸಿ ತಂತ್ರಾಂಶದ ಮೂಲಕ ಕ್ಷೇತ್ರದ ಅಭ್ಯರ್ಥಿ ಬಗ್ಗೆ ತಿಳಿದುಕೊಂಡು ಮತದಾನ ಮಾಡಬೇಕು. ಯಾವುದೇ ಅಭ್ಯರ್ಥಿಗೆ ಮತದಾನ ಮಾಡಲು ಇಷ್ಟವಿಲ್ಲದಿದ್ದಲ್ಲಿ ನೋಟಾಗೆ ಮತ ಚಲಾಯಿಸುವ ಅವಕಾಶವಿದೆ. ನಮ್ಮ ಒಂದು ಮತದಿಂದ ಏನೂ ಬದಲಾವಣೆ ಆಗುವುದಿಲ್ಲ ಎಂಬ ಮನೋಭಾವದಿಂದ ಹೊರಬರಬೇಕು' ಎಂದು ತಿಳಿಸಿದರು.

ಚುನಾವಣಾ ರಾಯಭಾರಿ ನೀತು ವನಜಾಕ್ಷಿ, 'ಪ್ರಜಾಪ್ರಭುತ್ವದಲ್ಲಿ ಚುನಾವಣೆಯು ಆತ್ಮವಿದ್ದಂತೆ. ಮತಗಳು ಉಸಿರಿದ್ದಂತೆ, ಅದಕ್ಕೆ ಜೀವ ಬರಬೇಕಾದರೆ ನೀವೆಲ್ಲರೂ ತಪ್ಪದೆ ಮತದಾನ ಮಾಡಬೇಕು' ಎಂದು ಹೇಳಿದರು.

ಮತದಾನ: ನಂದಿ ಗಿರಿಧಾಮ ಪ್ರವೇಶಕ್ಕೆ ನಿಷೇಧ

ಚಿಕ್ಕಬಳ್ಳಾಪುರ: ಪ್ರಸಿದ್ಧ ಪ್ರವಾಸಿ ತಾಣ ನಂದಿ ಗಿರಿಧಾಮಕ್ಕೆ ಏ. 25ರ ಸಂಜೆ 6ರಿಂದ ಏ. 26ರ ರಾತ್ರಿ 8ರವರೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಮುಂಗಡವಾಗಿ ಕೊಠಡಿಗಳನ್ನು ಕಾಯ್ದಿರಿಸುವುದನ್ನೂ ನಿಷೇಧಿಸಿ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಆದೇಶಿಸಿದ್ದಾರೆ.

ಲೋಕಸಭೆ ಚುನಾವಣೆಗೆ ಏ.26ರಂದು ಮತದಾನ ನಡೆಯಲಿದೆ. ಮತದಾರರು ಮತದಾನ ಮಾಡಬೇಕಾಗಿರುವುದರಿಂದ ಈ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮಾಲೀಕಯ್ಯ ಗುತ್ತೇದಾರ ಇಂದು ಕಾಂಗ್ರೆಸ್ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಾಜಿ ಸಚಿವ, ಬಿಜೆಪಿ ಮುಖಂಡ ಮಾಲೀಕಯ್ಯ ಗುತ್ತೇದಾರ ಅವರು ಏಪ್ರಿಲ್ 19ರಂದು ಬೆಂಗಳೂರಿನಲ್ಲಿ ಅಧಿಕೃತವಾಗಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ ಎಂದು ಮಾಲೀಕಯ್ಯ ಆಪ್ತರು ತಿಳಿಸಿದ್ದಾರೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ನೇತೃತ್ವದಲ್ಲಿ ಬೆಳಿಗ್ಗೆ 9.30ಕ್ಕೆ ತಮ್ಮ ಬೆಂಬಲಿಗರ ಜತೆಗೆ 'ಕೈ' ಹಿಡಿಯುವರು.

ಮಾಲೀಕಯ್ಯ ಅವರು ಕಾಂಗ್ರೆಸ್ ಸೇರುವ ದಿನ ನಿಗದಿ ಆಗುತ್ತಿದ್ದಂತೆ ಗುರುವಾರವೇ ಅಫಜಲಪುರ ಕ್ಷೇತ್ರದ ನೂರಾರು ಆಪ್ತರು, ಬೆಂಬಲಿಗರು ಬಸ್, ರೈಲು ಮತ್ತು ಕಾರಿನಲ್ಲಿ ಬೆಂಗಳೂರಿಗೆ ಪ್ರಯಾಣಿಸಿದರು. ಅವರ ಬೆಂಬಲಿಗರು ಕಾಂಗ್ರೆಸ್ ಸೇರುವರೆಂದು ಗೊತ್ತಾಗಿದೆ.

'ದ್ವೇಷ ಬಿಟ್ಟು, ದೇಶ ಕಟ್ಟುವವರಿಗೆ ಮತ ನೀಡಿ'

'ಸಂವಿಧಾನ ಉಳಿಸಿ, ಜಾಗೃತಿ ನಡಿಗೆ'ಯಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಅಭಿಮತ

ಪ್ರಜಾವಾಣಿ ವಾರ್ತೆ



ಜಾಗೃತ ನಾಗರಿಕರು ಕರ್ನಾಟಕ ಗುರುವಾರ ಆಯೋಜಿಸಿದ್ದ 'ಸಂವಿಧಾನ ಉಳಿಸಿ, ಜಾಗೃತಿ ನಡಿಗೆ'ಯಲ್ಲಿ ಹಂಸಲೇಖ, ಲೇಖಕಿಯರಾದ ವಿಜಯಾ, ಕೆ. ಶರೀಫಾ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ದ್ವೇಷ ಬಿಟ್ಟು, ದೇಶ ಕಟ್ಟುವವರಿಗೆ ಮತ ನೀಡಬೇಕು' ಎಂದು ಸಂಗೀತ ನಿರ್ದೇಶಕ ಹಂಸಲೇಖ ಕರೆ ನೀಡಿದರು.

ಜಾಗೃತ ನಾಗರಿಕರು ಕರ್ನಾಟಕ ಗುರುವಾರ ಆಯೋಜಿಸಿದ್ದ 'ಸಂವಿಧಾನ ಉಳಿಸಿ, ಜಾಗೃತಿ ನಡಿಗೆ'ಗೆ ಚಾಲನೆ ನೀಡಿದ ಅವರು ಮಾತನಾಡಿದರು.

'ಸ್ನೇಹ, ಪ್ರೀತಿ, ಸೌಹಾರ್ದ ಎಂಬ ಭಾರತದ ಸಂಸ್ಕೃತಿ–ಪರಂಪರೆಗಳನ್ನು ಬೆಳೆಸುವ ಮನೋಧರ್ಮದವರನ್ನು ಈ ಚುನಾವಣೆಯಲ್ಲಿ ಆಯ್ಕೆ ಮಾಡಬೇಕಿದೆ. ಸಂವಿಧಾನಕ್ಕೆ ವಿರುದ್ಧವಾಗಿ ಹೆಜ್ಜೆ ಹಾಕಿದವರನ್ನು ತಿರಸ್ಕರಿಸಬೇಕು. ಸಂವಿಧಾನ ಬದಲಾಯಿಸುವ ಅವಕಾಶವನ್ನು ಯಾರಿಗೂ ನೀಡಬಾರದು. ಸಂವಿಧಾನ ಉಳಿಯದಿದ್ದರೆ ನಾವು ಯಾರು ಉಳಿಯುವುದಿಲ್ಲ' ಎಂದು ಹೇಳಿದರು.

ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ, 'ಬಹುತ್ವ ಭಾರತದೊಳಗೆ ಒಕ್ಕೂಟ ವ್ಯವಸ್ಥೆ ಇದೆ. ಏಕ ದೇಶ, ಏಕ ಸಂಸ್ಕೃತಿ, ಏಕ ಧರ್ಮ ಎನ್ನುವುದು ಸಂವಿಧಾನ ವಿರೋಧಿ ನಡೆಯಾಗಿದೆ. ಈ ನಡೆಯನ್ನು ಅನುಸರಿಸುವವರು ದೇಶದ ಸಂವಿಧಾನದ ರಕ್ಷಕರಾಗುವುದಿಲ್ಲ. ಆದ್ದರಿಂದ, ಈ ಚುನಾವಣೆಯಲ್ಲಿ ಸಂವಿಧಾನ ರಕ್ಷಿಸುವವರನ್ನು ಆಯ್ಕೆ ಮಾಡುವುದರ ಮೂಲಕ ಸಂವಿಧಾನ ವಿರೋಧಿಗಳನ್ನು ತಿರಸ್ಕರಿಸಬೇಕು' ಎಂದು ಕರೆ ನೀಡಿದರು.

ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, 'ಕಳೆದ ಹತ್ತು ವರ್ಷಗಳಲ್ಲಿ ಅನುಭವಿಸಿದ್ದ ಕಷ್ಟ, ಸಂಕಟಗಳಿಗೆ ಈ ಚುನಾವಣೆಯಲ್ಲಿ ಅಂತ್ಯ ಹಾಡಬೇಕಿದೆ. ಸಂವಿಧಾನ ಉಳಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭದ್ರಗೊಳಿಸಬೇಕಿದೆ. ನಾವು ರಾಜ್ಯದಾದ್ಯಂತ ಈ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಿದೆ' ಎಂದರು.

ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಸುತ್ತಮುತ್ತಲಿನ ಪ್ರದೇಶದಲ್ಲಿ 'ಪ್ರಜಾಪ್ರಭುತ್ವ–ಸಂವಿಧಾನ ಉಳಿಸಿ' ಎಂಬ ಘೋಷಣಾ ಫಲಕಗಳನ್ನು ಹಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಸಾಹಿತಿಗಳಾದ ಬಂಜಗೆರೆ ಜಯಪ್ರಕಾಶ್, ಜಿ. ರಾಮಕೃಷ್ಣ, ಎಚ್. ದಂಡಪ್ಪ, ಸಾಮಾಜಿಕ ಹೋರಾಟಗಾರ್ತಿ ಕೆ.ಎಸ್. ವಿಮಲಾ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಭಾಗವಹಿಸಿದ್ದರು.

ಹೋಟೆಲ್‌ಗಳಲ್ಲಿ ಮತದಾನ ಜಾಗೃತಿ: ಪಿ.ಸಿ. ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಹೋಟೆಲ್‌ಗಳಿಗೆ ಬರುವ ಗ್ರಾಹಕರಿಗೆ ಮತದಾನ ಜಾಗೃತಿ ಮೂಡಿಸುವುದಕ್ಕಾಗಿ 'ಮತದಾನ ನಮ್ಮ ಕರ್ತವ್ಯ' ಎಂಬ ಅಭಿಯಾನವನ್ನು ಆರಂಭಿಸುತ್ತಿದ್ದೇವೆ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

'ಹೋಟೆಲ್‌ಗೆ ಬರುವ ಗ್ರಾಹಕರಲ್ಲಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸುತ್ತೇವೆ. ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಮನವರಿಕೆ ಮಾಡುತ್ತೇವೆ. ನಗರದ ಹೋಟೆಲ್‌ಗಳಲ್ಲಿ 'ಮತದಾನ ನಮ್ಮ ಹಕ್ಕು' ಎನ್ನುವ ಫಲಕಗಳನ್ನು ಅಳವಡಿಸುತ್ತಿದ್ದೇವೆ' ಎಂದರು.

'ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ನಗರದ ಮತದಾನ ಪ್ರಮಾಣ ಶೇ 54ರಷ್ಟು ಆಗಿತ್ತು. ಈ ಬಾರಿ ಮತದಾನ ಪ್ರಮಾಣ ಹೆಚ್ಚಿಸಲು ಮತ್ತು ಪ್ರಜಾಪ್ರಭುತ್ವದ ಮಹತ್ವ ಸಾರುವ ಉದ್ದೇಶದಿಂದ ಈ ಅಭಿಯಾನ ಕೈಗೊಂಡಿದ್ದೇವೆ' ಎಂದು ಅವರು ಹೇಳಿದರು.



ದಟ್ಟಣೆ... ತಮಿಳುನಾಡಿನತ್ತ ಮತದಾರರು... ತಮಿಳುನಾಡಿನಲ್ಲಿ ಶುಕ್ರವಾರ ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನ ನಡೆಯಲಿದ್ದು, ಬೆಂಗಳೂರಿನಿಂದ ತಮಿಳುನಾಡಿಗೆ ಮತದಾರರು ಹೊರಟ ಕಾರಣ ಹೊಸೂರು ಮುಖ್ಯರಸ್ತೆಯಲ್ಲಿ ಗುರುವಾರ ರಾತ್ರಿ ಕಂಡುಬಂದ ದಟ್ಟಣೆ

ಕಾಂಗ್ರೆಸ್ ಸರ್ಕಾರ ಪತನ ಖಚಿತ: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ವಿಶ್ವಾಸ

ಚುನಾವಣೆ ಬಳಿಕ ರಾಜ್ಯದಲ್ಲಿ ಮೈತ್ರಿ ಸರ್ಕಾರ

ಪ್ರಜಾವಾಣಿ ವಾರ್ತೆ

ಆನೇಕಲ್: ಲೋಕಸಭಾ ಚುನಾ ವಣೆ ಮುಗಿದ ಕೆಲವೇ ದಿನಗಳಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗಿ ಬಿಜೆಪಿ-ಜೆಡಿಎಸ್ ಮೈತ್ರಿಯ ಹೊಸ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಸುಳಿವು ನೀಡಿದ್ದಾರೆ.

ರಾಜ್ಯದ ಜನತೆಯನ್ನು ಕಾಂಗ್ರೆಸ್ ಸರ್ಕಾರ ಲೂಟಿ ಮಾಡುತ್ತಿದೆ. ಲೂಟಿ ಸರ್ಕಾರ ಅಂತ್ಯಗೊಳಿಸಲು ಬಿಜೆಪಿ ಮತ್ತು ಜೆಡಿಎಸ್ ಒಂದಾಗಿವೆ. ಬಿಜೆಪಿ-ಜೆಡಿಎಸ್ ಮೈತ್ರಿಯ ಹೊಸ ಸರ್ಕಾರ ರಾಜ್ಯದ ಜನರ ಹಿತ ಕಾಯಲಿದೆ ಎಂದು ಭರವಸೆ ನೀಡಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಪರ ಗುರುವಾರ ಪಟ್ಟಣದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.



ಆನೇಕಲ್‌ನಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ–ಜೆಡಿಎಸ್ ಸಭೆಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರು

'ನನಗೆ 91ವರ್ಷ ಆಗಿದ್ದರೂ ಅಳಿಯನಿಗೋಸ್ಕರ ಬಂದಿದ್ದೇನೆ. ಸಜ್ಜನ ವೈದ್ಯರೊಬ್ಬರು ಲೋಕಸಭೆಗೆ ಆಯ್ಕೆಯಾಗಬೇಕು. ರಾಷ್ಟ್ರಾದ್ಯಂತ ಆರೋಗ್ಯ ಕ್ರಾಂತಿಯಾಗಬೇಕು ಎಂಬುದು ನನ್ನ ಆಶಯವಾಗಿದೆ' ಎಂದರು.

'ಮಂಜುನಾಥ್ ಸ್ವಾರ್ಥಕ್ಕಾಗಿ ರಾಜಕಾರಣಕ್ಕೆ ಬಂದಿಲ್ಲ. ಬದಲಿಗೆ ರಾಜ್ಯ ಮತ್ತು ರಾಷ್ಟ್ರದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗೋಸ್ಕರ ಚುನಾವಣೆಗೆ ಸ್ಪರ್ಧಿಸಿದ್ದಾರೆ' ಎಂದರು.

ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ, ಶಾಸಕ ಸಿ.ಎನ್.ಅಶ್ವತ್ಥ ನಾರಾಯಣ ಮತ್ತು ಸಿ.ಪಿ.ಯೋಗೇಶ್ವರ ದೇವೇಗೌಡರಿಗೆ ಸಾಥ್ ನೀಡಿದರು.

ರಾಜ್ಯ ರಾಜಕಾರಣಕ್ಕೆ ನಾರಾಯಣಸ್ವಾಮಿ

'ಕೇಂದ್ರ ಸಚಿವ ನಾರಾಯಣಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮರಳಬೇಕು. ಆನೇಕಲ್ ಪ್ರತಿನಿಧಿಯಾಗಿ ವಿಧಾನಸಭೆಯಲ್ಲಿ ಇರಬೇಕು ಎಂಬುದು ನಮ್ಮ ಆಶಯವಾಗಿದೆ' ಎಂದು ಎಚ್.ಡಿ.ದೇವೇಗೌಡ ಹೇಳಿದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಾರಾಯಣಸ್ವಾಮಿ ಅವರು ಆನೇಕಲ್‌ನಿಂದ ಆಯ್ಕೆಯಾಗಿ ಮಂತ್ರಿಯಾಗಲಿದ್ದಾರೆ ಎಂದರು.

ಅಪಾರ್ಟ್‌ಮೆಂಟ್ ವಾಸಿಗಳಿಗೆ ಡಿಕೆಶಿ ಬೆದರಿಕೆ: ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ಗೆ ಮತ ಹಾಕದಿದ್ದರೆ ಯಾವುದೇ ಸೌಲಭ್ಯ ಕೊಡುವುದಿಲ್ಲ ಎಂದು ಅಪಾರ್ಟ್‌ಮೆಂಟ್ ವಾಸಿಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರೆಸ್ಟೀಜ್ ಫಾಲ್ಕನ್ ಮತ್ತು ಇತರ ಅಪಾರ್ಟ್‌ಮೆಂಟ್‌ಗಳಲ್ಲಿ ಪ್ರಚಾರ ಮಾಡುವ ಸಂದರ್ಭದಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಡಿ.ಕೆ.ಸುರೇಶ್ ಅವರಿಗೆ ಮತ ನೀಡಿದರೆ ಸಿ.ಎ ನಿವೇಶನ ಸೇರಿ ಎಲ್ಲ ರೀತಿಯ ಸೌಲಭ್ಯ ನೀಡುತ್ತೇವೆ. ಇಲ್ಲವಾದರೆ ಸೌಲಭ್ಯ ಸಿಗುವುದಿಲ್ಲ ಎಂದು ನೇರವಾಗಿ ಬೆದರಿಕೆ ಹಾಕಿದ್ದಾರೆ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ಈ ರೀತಿ ಬೆದರಿಕೆ ಹಾಕುತ್ತಿದ್ದಾರೆ. ಆದ್ದರಿಂದ ಸ್ಟಾರ್ ಪ್ರಚಾರಕ ಪಟ್ಟಿಯಿಂದ ಡಿ.ಕೆ. ಶಿವಕುಮಾರ್ ಅವರನ್ನು ತೆಗೆಯುವಂತೆ ಸೂಚಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕುಣಿಗಲ್ ತಾಲ್ಲೂಕಿನ ಚಿಕ್ಕ ಅರ್ಜೇನಹಳ್ಳಿ ಗ್ರಾಮದ ಪ್ರೇಮ್ ಕುಮಾರ್ ಅವರ ತೋಟಕ್ಕೆ ರಾಜಕೀಯ ವೈಷಮ್ಯದ ಕಾರಣಕ್ಕೆ ಬೆಂಕಿ ಹಚ್ಚಲಾಗಿದೆ. ಈ ಘಟನೆಗೆ ಕಾರಣಕರ್ತರಾದ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಅಶ್ವತ್ಥನಾರಾಯಣ ಒತ್ತಾಯಿಸಿದರು.

ಪ್ರಿಯಾಂಕ್ ಖರ್ಗೆ ವಿರುದ್ಧವೂ ದೂರು

ಕಲಬುರ್ಗಿಯಲ್ಲಿ ₹ 39 ಕೋಟಿ ವೆಚ್ಚದಲ್ಲಿ ಅಗ್ರಿಕಲ್ಚರ್ ಹಬ್ ಮಾಡುವುದಾಗಿ ಚುನಾವಣಾ ಪ್ರಚಾರ ಸಭೆಯಲ್ಲಿ ಹೇಳಿಕೆ ನೀಡುವ ಮೂಲಕ ಸಚಿವ ಪ್ರಿಯಾಂಕ್ ಖರ್ಗೆ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ. ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಬಿಜೆಪಿ ನಿಯೋಗ ಒತ್ತಾಯಿಸಿದೆ.

ಮನವಿ ಸಲ್ಲಿಸುವ ನಿಯೋಗದಲ್ಲಿ ರಾಜ್ಯದ ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವಥನಾರಾಯಣ್, ರಾಜ್ಯ ವಕ್ತಾರ ಮೋಹನ್ ವಿಶ್ವ, ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ವಸಂತ್ ಕುಮಾರ್, ಸದಸ್ಯ ಯಶವಂತ್ ಮತ್ತು ಪಕ್ಷದ ಪ್ರಮುಖರು ಇದ್ದರು.

ಮತ ಯಾಚಿಸಿದ ಅಭ್ಯರ್ಥಿಗಳು: ಬೆಂಬಲಕ್ಕೆ ಮೊರೆ

'ಕಾರ್ಮಿಕರ ಧ್ವನಿ ಎಸ್‌ಯುಸಿಐ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿಗಳು ಗುರುವಾರ ಪ್ರಚಾರ ನಡೆಸಿದರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ನಿರ್ಮಲಾ ಎಚ್. ಎಲ್. ಅವರು ನಾಗಸಂದ್ರ, ಕೆಂಪಾಪುರ, ಕೃಷ್ಣಾನಂದ ನಗರದಲ್ಲಿ ಮತಯಾಚನೆ ಮಾಡಿದರು. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶಿವಪ್ರಕಾಶ್ ಎಚ್.ಪಿ., ಬೆಂಗಳೂರು ಗ್ರಾಮಾಂತರದ ಅಭ್ಯರ್ಥಿ ಹೇಮಾವತಿ ಕೆ., ಚಿಕ್ಕಬಳ್ಳಾಪುರದ ಅಭ್ಯರ್ಥಿ ಕಲಾವತಿ ಆಯಾ ಕ್ಷೇತ್ರದಲ್ಲಿ ಮತ ಯಾಚಿಸಿದರು.

'ಶಿಕ್ಷಣ ಹಾಗೂ ಆರೋಗ್ಯ ಮಾರಾಟದ ವಸ್ತು ಆಗಿದೆ. ದುಡ್ಡಿದ್ದರೆ ಶಿಕ್ಷಣ ಮತ್ತು ಆರೋಗ್ಯ ಎನ್ನುವ ಈ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆದು ಕಾರ್ಮಿಕ ರಾಜ್ಯವನ್ನು ಸ್ಥಾಪಿಸುವ ಜವಾಬ್ದಾರಿ ಕಾರ್ಮಿಕ ವರ್ಗದ ಮೇಲಿದೆ. ಕಾರ್ಮಿಕರ ಧ್ವನಿಯಾಗಿರುವ ನೈಜ ಕಮ್ಯುನಿಸ್ಟ್ ಪಕ್ಷವಾದ ಎಸ್‌ಯುಸಿಐ(ಸಿ) ಪಕ್ಷದ ಅಭ್ಯರ್ಥಿ ಬೆಂಬಲಿಸಬೇಕು' ಎಂದು ನಿರ್ಮಲಾ ಎಚ್.ಎಲ್. ಮನವಿ ಮಾಡಿದರು.



ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ನಿರ್ಮಲಾ ಎಚ್.ಎಲ್. ಅವರು ಬೀದಿ ಬದಿ ವ್ಯಾಪಾರಸ್ಥರನ್ನು ಉದ್ದೇಶಿಸಿ ಮಾತನಾಡಿದರು

'10 ವರ್ಷಗಳಿಂದ ದೇಶವನ್ನು ಆಳುತ್ತಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜನರ ಬದುಕನ್ನು ಮೂರಾಬಟ್ಟೆ ಮಾಡಿದೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದ ಮೇಲೆ ಮರೆತುಬಿಟ್ಟಿದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದರಿಂದ ಯುದ್ಧಪೀಡಿತ ದೇಶಗಳಿಗೆ ಯುವಜನರು ಹೋಗುವಂತಾಗಿದೆ. ಬೆಲೆ ಏರಿಕೆ ವಿಪರೀತವಾಗಿದೆ. ಇದನ್ನು ತಡೆಯುವ ಬದಲು ಕೋಮುವಾದದ ಮೂಲಕ ಮತ ಧ್ರುವೀಕರಣಕ್ಕೆ ಹೊರಟಿದೆ' ಎಂದು ಆರೋಪಿಸಿದರು.

'ಇನ್ನೊಂದು ಬಂಡವಾಳಶಾಹಿ ಪಕ್ಷ ಕಾಂಗ್ರೆಸ್ ವಿವಿಧ ಅವಕಾಶವಾದಿ ಪ್ರಾದೇಶಿಕ ಪಕ್ಷಗಳ ಕೂಟವಾದ 'ಇಂಡಿಯಾ' ನೈಜ ಧರ್ಮ ನಿರಪೇಕ್ಷ, ಪ್ರಜಾತಾಂತ್ರಿಕ ಪರ್ಯಾಯವನ್ನು ನೀಡಲು ಸಾಧ್ಯವಿಲ್ಲ. ಸಮಾಜವಾದವೇ ನೈಜ ಪರಿಹಾರವಾಗಿತ್ತು. ಕೆಲವೇ ಸೀಟಿಗಾಗಿ ಸಿಪಿಐ, ಸಿಪಿಐಎಂ ನಂತಹ ಎಡವಾದಿ ಪಕ್ಷಗಳು 'ಇಂಡಿಯಾ' ಮೈತ್ರಿಕೂಟವನ್ನು ಸೇರಿರುವುದು ವಿಪರ್ಯಾಸ. ಜನಪರ ಧ್ವನಿಯ ಸಮಾಜವಾದಿ ಸಿದ್ಧಾಂತದ ಎಸ್‌ಯುಸಿಐ (ಸಿ)ಯನ್ನು ಬೆಂಬಲಿಸಬೇಕು' ಎಂದು ತಿಳಿಸಿದರು.

'ಆರೋಪಿಗಳ ಜೊತೆ ಬಿಜೆಪಿ ಅಭ್ಯರ್ಥಿ ನಂಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಎಸ್‌ಐ ಹಗರಣದಲ್ಲಿ ಜೈಲು ಪಾಲಾಗಿದ್ದ ಆರೋಪಿಗಳ ಮನೆಗೆ ಭೇಟಿ ನೀಡಿ, ಭರ್ಜರಿ ಊಟ ಮಾಡಿ ಮೆರವಣಿಗೆಯಲ್ಲಿ ಭಾಗವಹಿಸುವ ಮೂಲಕ ಕಲಬುರಗಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ, ಹಾಲಿ ಸಂಸದ ಉಮೇಶ ಜಾಧವ, ಈ ಹಗರಣದ ಆರೋಪಿಗಳ ಜೊತೆ ಬಿಜೆಪಿಯ ನಾಯಕರು ಹೊಂದಿರುವ ನಿಕಟ ಸಂಬಂಧವನ್ನು ಬಹಿರಂಗಗೊಳಿಸಿದ್ದಾರೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಹೇಳಿದ್ದಾರೆ.

'ಈ ಹಗರಣದಲ್ಲಿ ಬಿಜೆಪಿ ನಾಯಕರು ಶಾಮೀಲಾಗಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರವೂ ಶಾಮೀಲಾಗಿದೆ ಎಂದು ಕಾಂಗ್ರೆಸ್ ಪಕ್ಷ ಇದುವರೆಗೂ ಮಾಡಿದ ಆರೋಪಗಳಿಗೆ ಜಾಧವ ಅವರ ನಡೆ ಸಾಕ್ಷಿಯಾಗಿ ಕಾಣಿಸಿಕೊಂಡಿದೆ. ಭ್ರಷ್ಟಾಚಾರಿಗಳ ಜೊತೆ ವೇದಿಕೆ ಹಂಚಿಕೊಳ್ಳುವುದು, ಫೋಟೊ ಹಾಕಿಕೊಳ್ಳುವುದು, ಊಟ ಮಾಡುವುದು ಬಿಜೆಪಿ ಅಭ್ಯರ್ಥಿಗಳ ಮತ್ತು ನಾಯಕರ ಚುನಾವಣಾ ಪ್ರಚಾರದ ಭಾಗವೇ' ಎಂದು ಅವರು ಪ್ರಶ್ನಿಸಿದ್ದಾರೆ.



ರಮೇಶ್ ಬಾಬು

'ಚುನಾ ವಣಾ ಬಾಂಡ್ ಹಗರಣದಲ್ಲಿ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಭ್ರಷ್ಟಾಚಾರದ ಆರೋಪವನ್ನು ಮೈತುಂಬ ಮೆತ್ತಿಕೊಂಡಿರುವುದರಿಂದ ಪಿಎಸ್‌ಐ ಹಗರಣದ ಆರೋಪಿಗಳ ಜೊತೆ ಇರುವ ನಂಟಿನ ವಿಚಾರದಲ್ಲಿ ಉತ್ತರ ಕೊಡುವ ನೈತಿಕತೆಯನ್ನು ರಾಜ್ಯದ ಬಿಜೆಪಿ ನಾಯಕರು ಕಳೆದುಕೊಂಡಿದ್ದಾರೆ. ಕಳಂಕಿತರ ಜೊತೆಗೆ ಇರುವ ನಂಟನ್ನು ಬಹಿರಂಗವಾಗಿ ತೋರಿಸುತ್ತಿರುವ ಕಲಬುರಗಿ ಕ್ಷೇತ್ರ ಮತ್ತು ರಾಜ್ಯದ ಇತರ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳಿಗೆ ಮತದಾರರು ತಕ್ಕ ಪಾಠ ಕಲಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಸೋಲು, ಗೆಲುವು ತೀರ್ಮಾನಿಸುವುದು ಮತದಾರರೇ ಹೊರತು ಮೋದಿ–ಶಾ ಅಲ್ಲ: ಡಿ.ಕೆ. ಸುರೇಶ್

‘ಅಭಿವೃದ್ಧಿ, ಗ್ಯಾರಂಟಿ ನನ್ನ ಚುನಾವಣಾ ಅಸ್ತ್ರ’

• ಓದೇಶ ಸಕಲೇಶಪುರ

ಪ್ರಜಾವಾಣಿ ಸಂದರ್ಶನ



‘ಯಾವುದೇ ಸವಾಲು ಕಾಣಿಸುತ್ತಿಲ್ಲ. ಯಾರೇ ತಮ್ಮನ್ನು ಟಾರ್ಗೆಟ್ ಮಾಡಿದರೂ ಅಸ್ತ್ರವಿರುವುದು ಜನರ ಕೈಯಲ್ಲಿ. ಕ್ಷೇತ್ರಕ್ಕೆ ತಾವು ಮಾಡಿರುವ ಕೆಲಸ ಹಾಗೂ ಸರ್ಕಾರದ ಗ್ಯಾರಂಟಿಗಳು ಹಿಡಿಯಲಿವೆ’ ಎಂದು ವಿಶ್ವಾಸ ವ್ಯಕ್ತಪಡಿಸುವ ರಾಜ್ಯದ ಏಕೈಕ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್, ಚುನಾವಣೆ, ರಾಜ್ಯದ ರಾಜಕೀಯ ಕುರಿತು ಮಾತನಾಡಿದ್ದಾರೆ.

‘ಪ್ರಜಾವಾಣಿ’ಗೆ ಅವರು ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• **ಈ ಸಲದ ಚುನಾವಣೆಯಲ್ಲಿ ನಿಮಗಿರುವ ಸವಾಲುಗಳೇನು? ಮೈತ್ರಿಯಿಂದ ಸ್ಪರ್ಧೆ ತುರುಸುಗೊಂಡಿದೆಯೇ?**

ಅಂತಹ ಯಾವುದೇ ಸವಾಲು ನನಗೆ ಕಾಣುತ್ತಿಲ್ಲ. ನನ್ನ ಚುನಾವಣಾ ರಾಜಕೀಯ ಕಾರ್ಯಶೈಲಿಯಲ್ಲೂ ಬದಲಾವಣೆ ಆಗಿಲ್ಲ. ಜನರು ಕೊಟ್ಟ ಅಧಿಕಾರದಿಂದ ಅವರ ಜೊತೆಗಿದ್ದುಕೊಂಡು ಕೆಲಸ ಮಾಡಿಕೊಂಡು ಬಂದಿದ್ದೇನೆ. ಈಗ ಅವರ ಬಳಿಗೆ ಹೋಗಿ ಮಾಡಿದ ಕೆಲಸಕ್ಕೆ ಕೂಲಿ ಕೇಳುತ್ತಿದ್ದೇನೆ. ಬಿಜೆಪಿ–ಜೆಡಿಎಸ್ ಮೈತ್ರಿ ಹೊಸತೇನಲ್ಲ. ಹಿಂದಿನ ಚುನಾವಣೆಗಳಲ್ಲಿ ಅವರಿಬ್ಬರ ಅಧಿಕೃತ ಮತ್ತು ಅನಧಿಕೃತ ಹೊಂದಾಣಿಕೆಯ ರಾಜಕೀಯ ಎದುರಿಸಿ ಗೆದ್ದಿದ್ದೇನೆ. ಅಸ್ತಿತ್ವಕ್ಕಾಗಿ ಬಿಜೆಪಿ ಅಪ್ಪಿಕೊಂಡಿರುವ ಜೆಡಿಎಸ್ ಪಕ್ಷವನ್ನು ಜನ ತಿರಸ್ಕರಿಸಿದ್ದಾರೆ.

• **ತೆರಿಗೆ ಅನ್ಯಾಯದ ಕುರಿತು ನೀವು ಎತ್ತಿದ ದನಿಯು ಗೆಲುವಿಗೆ ಪೂರಕವೇ?**

ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ತೆರಿಗೆ ಹಂಚಿಕೆ ಸೇರಿದಂತೆ ಹಲವು ವಿಷಯಗಳಲ್ಲಿ ಆಗಿರುವ ಅನ್ಯಾಯದ ಕುರಿತು ನಾನು ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಬೇರೇನೂ ಅಲ್ಲ. ನನ್ನ ಮಾತುಗಳ ಸತ್ಯಾಸತ್ಯತೆಯನ್ನು ದಾಖಲೆ ಸಮೇತ ಜನರ ಮುಂದಿಟ್ಟಿದ್ದೇನೆ. ರಾಜ್ಯಕ್ಕಾಗಿರುವ ಅನ್ಯಾಯದ ವಿರುದ್ಧ ಮತ ಚಲಾಯಿಸುತ್ತಾರೆಂಬ ವಿಶ್ವಾಸವಿದೆ.

• **ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಜೋಡಿ ನಿಮ್ಮನ್ನು ಟಾರ್ಗೆಟ್ ಮಾಡಿದ್ದಾರೆ ಎಂಬ ಮಾತುಗಳಿವೆ?**

ಯಾರನ್ನು ಗೆಲ್ಲಿಸಬೇಕು ಮತ್ತು ಸೋಲಿಸಬೇಕು ಎಂದು ತೀರ್ಮಾನಿಸುವುದು ಜನ. ಮೋದಿ–ಅಮಿತ್ ಶಾ ಜೋಡಿ ಅಲ್ಲ. ಯಾರೇ ಟಾರ್ಗೆಟ್ ಮಾಡಿದರೂ ಅಂತಿಮ ಅಸ್ತ್ರವಿರುವುದು ಜನರ ಕೈಯಲ್ಲಿ.

• **ನೀವು ದರ್ಪ, ದೌರ್ಜನ್ಯ ಮಾಡುತ್ತಿದ್ದೀರಿ ಎಂದು ಆಪಾದಿಸಿರುವ ಮೈತ್ರಿಕೂಟ, ಹೃದಯವಂತರಾಗಿರುವ ಸಿ.ಎನ್. ಮಂಜುನಾಥ್ ಪಕ್ಷಾತೀತವಾಗಿ ಮನ್ನಣೆ ಪಡೆಯುತ್ತಿದ್ದಾರೆಂದು ಪ್ರಚಾರ ಮಾಡುತ್ತಿದೆಯಲ್ಲ?**

ಬಿಜೆಪಿಯವರು ಜನರ ಭಾವನೆ ಕೆರಳಿಸುವ ಹಾಗೂ ವೈಯಕ್ತಿಕ ವಿಷಯ ಬಿಟ್ಟರೆ ಎಂದಾದರೂ ಅಭಿವೃದ್ಧಿ ವಿಷಯಗಳ ಕುರಿತು ಮಾತನಾಡಿದ್ದಾರೆಯೇ? ಮತದಾರರಿಂದ ಸಿಗುತ್ತಿರುವ ಪ್ರತಿಕ್ರಿಯೆ ಮತ್ತು ಎರಡೂ ಪಕ್ಷಗಳ ಮುಖಂಡರು ಕಾಂಗ್ರೆಸ್‌ನತ್ತ ಬರುತ್ತಿರುವುದು ಮೈತ್ರಿ ಪಕ್ಷಗಳ ನಿದ್ದೆಗೆಡಿಸಿದೆ. ಅದಕ್ಕಾಗಿಯೇ, ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ.

• **ಗ್ಯಾರಂಟಿ ಯೋಜನೆಗಳು ನಿಮ್ಮ ಕೈ ಹಿಡಿಯಲಿವೆಯೇ?**

ಸಂಕಷ್ಟದಲ್ಲಿದ್ದ ಜನರನ್ನು ಯೋಜನೆಗಳು ತಲುಪಿವೆ. ಮಹಿಳೆಯರಷ್ಟೇ ಅಲ್ಲದೆ ಇಡೀ ಕುಟುಂಬದ ಸಬಲೀಕರಣಕ್ಕೆ ಕಾರಣವಾಗಿವೆ. ಕೊಟ್ಟ ಮಾತಿನಂತೆ ನಡೆದುಕೊಂಡಿರುವ ಕಾಂಗ್ರೆಸ್‌ಗೆ ಮತದಾರರು ಗೆಲುವಿನ ಕಾಣಿಕೆ ಕೊಡಲಿದ್ದಾರೆ. ಏನೂ ಕೆಲಸ ಮಾಡದ ಬಿಜೆಪಿ–ಜೆಡಿಎಸ್‌ನವರು ಪ್ರಧಾನಿ ಮೋದಿ ಹೆಸರಿನಲ್ಲಿ ಮತ ಕೇಳುತ್ತಿದ್ದಾರೆ.

> **ಇಷ್ಟಕ್ಕೂ ಮಂಜುನಾಥ್ ಒಬ್ಬರೇ ಹೃದಯವಂತರೇ. ಅವರಿಗೆ ಮಾತ್ರ ಹೃದಯವಿದೆಯೇ? ಉಳಿದವರಿಗೆ ಇಲ್ಲವೆ? ಜನರ ಕಷ್ಟಕ್ಕೆ ಮಿಡಿಯುವವರು ನಿಜವಾದ ಹೃದಯವಂತರು. ಆ ಕೆಲಸವನ್ನು ನಾನು ಮತ್ತು ನನ್ನ ಪಕ್ಷ ಮಾಡಿಕೊಂಡು ಬಂದಿದೆ**
> **ಡಿ.ಕೆ. ಸುರೇಶ್,** ಬೆಂ.ಗ್ರಾಮಾಂತರ ಕಾಂಗ್ರೆಸ್ ಅಭ್ಯರ್ಥಿ

• **ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿರುವ ನಿಮ್ಮ ಸಹೋದರ ಶಿವಕುಮಾರ್ ಅವರಿಗೆ ಚುನಾವಣೆ ಪ್ರತಿಷ್ಠೆ ಅಲ್ಲವೆ?**

ಹಾಗೇನಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದು, ಅವರ ನಾಯಕತ್ವದಲ್ಲಿ ಎಲ್ಲರೂ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ಮುಖ್ಯಮಂತ್ರಿ ಹುದ್ದೆ ಕುರಿತು ಸದ್ಯ ಯಾವುದೇ ಚರ್ಚೆ ನಡೆದಿಲ್ಲ. ಆದರೆ, ಶಿವಕುಮಾರ್ ಅವರು ಸಹ ಮುಂದೊಂದು ದಿನ ಈ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಅಭಿಪ್ರಾಯ ಜನರಲ್ಲಿದೆ.

• **ಕ್ಷೇತ್ರಕ್ಕೆ ನಿಮ್ಮ ಅಭಿವೃದ್ಧಿ ಅಜೆಂಡಾ ಏನು? ಜನ ಯಾಕೆ ಮತ ಹಾಕಬೇಕು?**

ನಾನು ಕೆಲಸ ಮಾಡಿದ್ದೇನೆ. ಅದಕ್ಕಾಗಿ ಮತ ಹಾಕಿ ಎಂದು ಕೇಳುತ್ತಿದ್ದೇನೆ. ನಾನು ಕೈಗೆತ್ತಿಕೊಂಡಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕಿದೆ. ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬದಲಾವಣೆ ತರಲು ಮುಂದಡಿ ಇಟ್ಟಿದ್ದೇನೆ. ಇವೆಲ್ಲವೂ ಸಾಕಾರವಾಗಬೇಕಾದರೆ ಜನ ಮತ್ತೊಮ್ಮೆ ನನಗೆ ಅವಕಾಶ ನೀಡಬೇಕು.

• **ನಿಮ್ಮ ಎದುರಾಳಿ ಕುರಿತು ನಿಮ್ಮ ಅಭಿಪ್ರಾಯವೇನು?**

ಅವರೊಬ್ಬ ಉತ್ತಮ ವೈದ್ಯರು. ಎಚ್.ಡಿ. ದೇವೇಗೌಡರ ಅಳಿಯ, ಎಚ್.ಡಿ. ಕುಮಾರಸ್ವಾಮಿ ಅವರ ಬಾಮೈದ ಅಷ್ಟೆ.

ಲೋಕಾಯುಕ್ತ ತನಿಖೆ ಕಣ್ಣೊರೆಸುವ ತಂತ್ರ: ಸಿಬಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆದಾಯ ಮೀರಿ ಆಸ್ತಿಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣವನ್ನು ಸಿಬಿಐನಿಂದ ಲೋಕಾಯುಕ್ತದ ಸುಪರ್ದಿಗೆ ನೀಡಿರುವುದು ಕಣ್ಣೊರೆಸುವ ತಂತ್ರ’ ಎಂದು ಸಿಬಿಐ, ರಾಜ್ಯ ಸರ್ಕಾರದ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಆದಾಯ ಮೀರಿದ ಆಸ್ತಿ ಗಳಿಕೆ ಆರೋಪದ ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ನೀಡಿದ್ದ ಅನುಮತಿ ಹಿಂಪಡೆದ ಕ್ರಮವನ್ನು ಪ್ರಶ್ನಿಸಿ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿ, ‘ಪ್ರಕರಣದ ತನಿಖೆಯನ್ನು ಸಿಬಿಐನಿಂದ ಲೋಕಾಯುಕ್ತಕ್ಕೆ ವರ್ಗಾಯಿಸಿರುವುದಕ್ಕೆ ಯಾವುದೇ ಕಾನೂನಿನ ಬೆಂಬಲವಿಲ್ಲ. ಇದು ಹಿಂದೆಂದೂ ಕಂಡು ಕೇಳರಿಯದ ನಿರ್ಧಾರ. ಇಡೀ ತನಿಖೆಯನ್ನು ದಾರಿ ತಪ್ಪಿಸುವ ಮೂಲಕ ಡಿ.ಕೆ. ಶಿವಕುಮಾರ್‌ಗೆ ಅನುಕೂಲ ಮಾಡಿಕೊಡುವ ಉದ್ದೇಶ ಸರ್ಕಾರದ್ದಾಗಿದೆ’ ಎಂದು ಬಲವಾದ ವಿರೋಧ ವ್ಯಕ್ತಪಡಿಸಿದರು.

‘ಸಿಬಿಐ ಹಲವು ತಿಂಗಳ ಕಾಲ ಪ್ರಾಥಮಿಕ ತನಿಖೆ ನಡೆಸಿದೆ. ಹೀಗಾಗಿ, ಸಿಬಿಐಗೆ ನೀಡಿರುವ ಅನುಮತಿ ಹಿಂಪಡೆದಿರುವ ರಾಜ್ಯ ಸರ್ಕಾರದ ಆದೇಶವನ್ನು ವಜಾ ಮಾಡಬೇಕು. ತನಿಖೆ ಪೂರ್ಣಗೊಳಿಸಿ, ವಿಚಾರಣಾ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲು ಅನುಮತಿ ನೀಡಬೇಕು’ ಎಂದು ಕೋರಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಪರ ವಾದ ಮಂಡಿಸಿದ ವಕೀಲ ವೆಂಕಟೇಶ್ ಪಿ.ದಳವಾಯಿ, ‘ಉಪಮುಖ್ಯಮಂತ್ರಿ ವಿರುದ್ಧದ ಪ್ರಕರಣವನ್ನು ದಾರಿ ತಪ್ಪಿಸುತ್ತಿರುವುದು ಆಘಾತಕಾರಿ ಬೆಳವಣಿಗೆ. ನಾವು ಅರ್ಜಿ ಸಲ್ಲಿಸಿದ ಬಳಿಕ ರಾಜ್ಯ ಸರ್ಕಾರ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಿದೆ’ ಎಂದರು.

‘ರಾಜ್ಯ ಸರ್ಕಾರದ ಆದೇಶ ಸ್ವೇಚ್ಛೆಯಿಂದ ಕೂಡಿದೆ. ಪ್ರಕರಣವನ್ನು ಸಿಬಿಐಯಿಂದ ಹಿಂಪಡೆಯುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಇದರಲ್ಲಿ ಸರ್ಕಾರ ಡಿ.ಕೆ.ಶಿವಕುಮಾರ್ ರಕ್ಷಿಸುವ ಕೆಲಸ ಮಾಡಿದೆ. ಇಂತಹ ನಿರ್ಧಾರ ಕೈಗೊಳ್ಳುವುದಕ್ಕೂ ಮುನ್ನ ನ್ಯಾಯಾಲಯದ ಆದೇಶಗಳನ್ನು ಸಂಪುಟ ಸಭೆಯ ಮುಂದೆ ಇರಿಸಿರಲಿಲ್ಲ’ ಎಂದು ಆಕ್ಷೇಪಿಸಿದರು.

ವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಮೇ 27ಕ್ಕೆ ಮುಂದೂಡಿತು.

ರಾಜ್ಯ ಸರ್ಕಾರದ ಪರ ವಿಶೇಷ ಪ್ರತಿನಿಧಿಯಾಗಿ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಕಪಿಲ್ ಸಿಬಲ್ ಹಾಗೂ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮತ್ತು ಡಿ.ಕೆ. ಶಿವಕುಮಾರ್ ಪರ ಹಿರಿಯ ವಕೀಲ ಉದಯ ಹೊಳ್ಳ ಹಾಜರಿದ್ದರು.

ಸಿ.ಎಂ ಪ್ರಚಾರದಲ್ಲಿಯೂ ಬಣ ರಾಜಕಾರಣ

ಗೌರಿಬಿದನೂರು: ಗೌರಿಬಿದನೂರು ವಿಧಾನಸಭಾ ಕ್ಷೇತ್ರದಲ್ಲಿ ಬಣ ರಾಜಕಾರಣ ಗುರುವಾರ ನಡೆದ ಮುಖ್ಯಮಂತ್ರಿ ರೋಡ್ ಷೋನಲ್ಲಿಯೂ ಎದ್ದು ಕಂಡಿತು. ಶಾಸಕ ಪುಟ್ಟಸ್ವಾಮಿಗೌಡ ಮತ್ತು ಮಾಜಿ ಸಚಿವ ಶಿವಶಂಕರ ರೆಡ್ಡಿ ಅವರ ಬೆಂಬಲಿಗರ ಜಿದ್ದಾಜಿದ್ದಿ ಮುಂದುವರಿದಿದೆ ಎನ್ನುವುದನ್ನು ಎತ್ತಿ ತೋರಿತು.

ಬಾಗೇಪಲ್ಲಿಯಲ್ಲಿ ಪ್ರಚಾರ ಸಭೆ ಮುಗಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಿಗೆ ಗೌರಿಬಿದನೂರಿನ ಶನಿಮಹಾತ್ಮ ದೇವಾಲಯದ ಬಳಿ ಬಂದರು. ಅದಾಗಲೇ ಪುಟ್ಟಸ್ವಾಮಿಗೌಡ ರು ರೋಡ್ ಷೊ ವಾಹನ ಏರಿದ್ದರು. ಮಾಜಿ ಸಚಿವ ಶಿವಶಂಕರ ರೆಡ್ಡಿ ಸಿದ್ದರಾಮಯ್ಯ ಅವರನ್ನು ಕರೆತಂದರು.

ರೋಡ್ ಷೊ ವೇಳೆ ಪುಟ್ಟಸ್ವಾಮಿಗೌಡ ಮತ್ತು ಶಿವಶಂಕರ ರೆಡ್ಡಿ ಅವರ ಬೆಂಬಲಿಗರು ಪ್ರತ್ಯೇಕವಾಗಿ ವಾಹನಗಳಲ್ಲಿ ಡಿ.ಜೆ ಅಳವಡಿಸಿದ್ದರು. ಬೆಂಗಳೂರು ವೃತ್ತದಲ್ಲಿ ಶಿವಶಂಕರ ರೆಡ್ಡಿ ಮತ್ತು ಅವರ ಬೆಂಬಲಿಗರು ಬೃಹತ್ ಗಾತ್ರದ ಹೂವಿನ ಹಾರ ಹಾಕಿದರೆ, ಗಾಂಧಿ ಸರ್ಕಲ್‌ನಲ್ಲಿ ಪುಟ್ಟಸ್ವಾಮಿಗೌಡ ಅವರ ಬೆಂಬಲಿಗರು ಸೇಬಿನ ಹಾರ ಹಾಕಿದರು.

ಸಿದ್ದರಾಮಯ್ಯ ಆಯ್ಕೆ ಅಸಿಂಧು ಕೋರಿಕೆ–ಗ್ಯಾರಂಟಿಗಳಿಗೆ ತಕರಾರು

‘ಕುಕ್ಕರ್ ಹಂಚಿಕೆ ಹಳೆಯ ವಿಧಾನವಲ್ಲವೇ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಚುನಾವಣೆ ವೇಳೆ ಮತದಾರರಿಗೆ ಆಮಿಷ ಒಡ್ಡುವ ಕುಕ್ಕರ್ ಹಂಚಿಕೆ ಪದ್ಧತಿ ಹಳೆಯದು. ಈಗೆಲ್ಲಾ ಇವುಗಳ ವಿಧಾನ ಬದಲಾಗಿದೆ...!’ ಎಂದು ಹೈಕೋರ್ಟ್ ಕಟಕಿಯಾಡಿದೆ.

‘ವರುಣ ಕ್ಷೇತ್ರದ ಶಾಸಕರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣೆಗೂ ಮುನ್ನ ಮತದಾರರಿಗೆ ಗ್ಯಾರಂಟಿ ಆಮಿಷಗಳನ್ನು ಒಡ್ಡಿ ಗೆದ್ದಿದ್ದಾರೆ’ ಎಂದು ಆರೋಪಿಸಿ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಿ ಮೈಸೂರಿನ ವರುಣ ಹೋಬಳಿಯ ಕೂಡನಹಳ್ಳಿಯ ಕೆ.ಎಂ.ಶಂಕರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿದ್ದರಾಮಯ್ಯ ಪರ ವಾದ ಮಂಡಿಸಿದ ಹಿರಿಯ ವಕೀಲ ರವಿವರ್ಮ ಕುಮಾರ್, ‘ಸಿದ್ದರಾಮಯ್ಯ ತಮ್ಮ ಕ್ಷೇತ್ರದಲ್ಲಿ ಯಾರಿಗೆ ಯಾವತ್ತು, ಎಲ್ಲಿ, ಎಷ್ಟು ಹೊತ್ತಿಗೆ, ಏನು ಆಮಿಷ ಒಡ್ಡಿದರು ಎಂಬುದಕ್ಕೆ ಅರ್ಜಿದಾರರ ಬಳಿ ಯಾವುದೇ ಪುರಾವೆಗಳಿಲ್ಲ. ಅರ್ಜಿಯಲ್ಲಿ ವಿವರಿಸಲಾಗಿರುವ ಅಂಶಗಳೆಲ್ಲಾ ತಪ್ಪುತಪ್ಪಾಗಿವೆ’ ಎಂದು ಆಕ್ಷೇಪಿಸಿದರು.

ಇದನ್ನು ಮಧ್ಯದಲ್ಲೇ ತಡೆದು ಮೌಖಿಕವಾಗಿ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, ‘ಹಂಚಿದ ಕುಕ್ಕರ್‌ಗಳನ್ನು ಜಪ್ತಿ ಮಾಡಲಾಗಿದೆಯಲ್ಲವೇ? ಆದಾಗ್ಯೂ, ಇಂತಹ ವಿಧಾನಗಳೆಲ್ಲಾ ಈಗ ಹಳೆಯದಾಗಿವೆಯಲ್ಲಾ’ ಎಂದು ಚುಚ್ಚಿದರು. ವಾದ ಮುಂದುವರಿಸಿದ ರವಿವರ್ಮ ಕುಮಾರ್, ‘ಅರ್ಜಿದಾರರ ಕ್ಷೇತ್ರದಲ್ಲಿ ಅಂತಹ ಯಾವುದೇ ಕುಕ್ಕರ್ ಹಂಚಿಲ್ಲ’ ಎಂದು ಸಮಜಾಯಿಷಿ ನೀಡುವ ಪ್ರಯತ್ನ ಮಾಡಿದರು.

‘ಚುನಾವಣಾ ಪ್ರಣಾಳಿಕೆಗಳು ಭವಿಷ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿಯುವ ಸರ್ಕಾರದ ನೀತಿಗಳ ಘೋಷಣೆ. ಇವುಗಳಲ್ಲಿ ನೀಡಲಾದ ಭರವಸೆಗಳು ಮತ್ತು ಗ್ಯಾರಂಟಿಗಳನ್ನು ಚುನಾವಣಾ ಅಕ್ರಮ ಅಥವಾ ಭ್ರಷ್ಟಾಚಾರ ಎಂದು ಪರಿಗಣಿಸಲು ಸಾಧ್ಯವಿಲ್ಲ’ ಎಂದು ಸುದೀರ್ಘವಾಗಿ ವಿವರಿಸಿದರು. ಕಲಾಪದ ಅವಧಿ ಮುಗಿದ ಕಾರಣ ವಿಚಾರಣೆಯನ್ನು ಮುಂದೂಡಲಾಯಿತು. ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಹಾಜರಿದ್ದರು.

ವಿಐಟಿ ಪ್ರವೇಶ ಪರೀಕ್ಷೆ 19 ರಿಂದ 30ರವರೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಶಿಕ್ಷಣ ಸಂಸ್ಥೆ ದೇಶದ ವಿವಿಧ ರಾಜ್ಯಗಳಲ್ಲಿರುವ ಹಾಗೂ ವಿದೇಶಗಳಲ್ಲಿರುವ ತಮ್ಮ ಸಮೂಹ ಸಂಸ್ಥೆಗಳಲ್ಲಿ ಬಿ.ಟೆಕ್ ಪದವಿ ಪ್ರವೇಶಕ್ಕಾಗಿ ಇದೇ 19ರಿಂದ 30ರವರೆಗೆ ಪ್ರವೇಶ ಪರೀಕ್ಷೆ (ವಿಐಟಿಇಇಇ) ನಡೆಸುತ್ತಿದೆ.

ದೇಶದ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿರುವ ಅಭ್ಯರ್ಥಿಗಳು ಪರೀಕ್ಷೆಗೆ ಅರ್ಜಿ ಸಲ್ಲಿಸಬಹುದು. ಇದು ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ)ಯಾಗಿದೆ. ದೇಶದ 125 ನಗರಗಳ ಜೊತೆಗೆ, ದುಬೈ, ಮಸ್ಕತ್, ಕತಾರ್, ಕುವೈತ್, ಸಿಂಗಪುರ ಮತ್ತು ಮಲೇಷ್ಯಾದ ಕೌಲಾಲಂಪುರದಲ್ಲಿ ಪ್ರವೇಶ ಪರೀಕ್ಷೆ ನಡೆಯಲಿವೆ. ಪರೀಕ್ಷೆಯ ಫಲಿತಾಂಶವು ಮೇ 3ರಂದು www.vit.ac.inನಲ್ಲಿ ಪ್ರಕಟವಾಗಲಿದೆ. ಅದೇ ದಿನ ಆನ್‌ಲೈನ್ ಕೌನ್ಸೆಲಿಂಗ್ ಪ್ರಕ್ರಿಯೆ ಪ್ರಾರಂಭವಾಗಲಿದೆ.

ವಿಐಟಿ ವೆಲ್ಲೂರು, ವಿಐಟಿ ಚೆನ್ನೈ, ವಿಐಟಿ ಆಂಧ್ರಪ್ರದೇಶ (ಅಮರಾವತಿ) ಹಾಗೂ ವಿಐಟಿ ಭೋಪಾಲ್ ಕ್ಯಾಂಪಸ್‌ನಲ್ಲಿ ಬಿ.ಟೆಕ್ ಪ್ರವೇಶಕ್ಕೆ ಕೌನ್ಸೆಲಿಂಗ್ ನಡೆಯಲಿದೆ. ವಿಐಟಿ ಪ್ರವೇಶ ಪರೀಕ್ಷೆಯಲ್ಲಿ 1 ಲಕ್ಷದೊಳಗೆ ರ‍್ಯಾಂಕ್ ಪಡೆದವರು ಈ ಕೌನ್ಸೆಲಿಂಗ್‌ಗೆ ಪಾಲ್ಗೊಳ್ಳಲು ಅರ್ಹರಾಗಿರುತ್ತಾರೆ. 1 ಲಕ್ಷ ಮೇಲ್ಪಟ್ಟು ರ‍್ಯಾಂಕ್ ಪಡೆದವರು ವಿಐಟಿ ಆಂಧ್ರಪ್ರದೇಶ ಮತ್ತು ವಿಐಟಿ ಭೋಪಾಲ್‌ನಲ್ಲಿ ಮಾತ್ರ ಪ್ರವೇಶಕ್ಕೆ ಅರ್ಹರು. ಅವರಿಗೆ ಜೂನ್ 20 ಮತ್ತು 21ರಂದು ಕೌನ್ಸೆಲಿಂಗ್ ಮಾಡಲಾಗುತ್ತದೆ. ತರಗತಿಗಳು ಜುಲೈ 2ನೇ ವಾರದಿಂದ ಪ್ರಾರಂಭವಾಗುವ ಸಾಧ್ಯತೆಯಿದೆ ಎಂದು ಪ್ರಕಟಣೆ ತಿಳಿಸಿದೆ.

ಸಹಪಾಠಿಯಿಂದ ವಿದ್ಯಾರ್ಥಿನಿ ಕೊಲೆ

ಪ್ರಜಾವಾಣಿ ವಾರ್ತೆ



ನೇಹಾ ಹಿರೇಮಠ

ಹುಬ್ಬಳ್ಳಿ: ನಗರದ ಬಿವಿಬಿ ಕಾಲೇಜು ಆವರಣದಲ್ಲಿ ಗುರುವಾರ ಸಂಜೆ ಸಹಪಾಠಿಯೇ, ವಿದ್ಯಾರ್ಥಿನಿಗೆ ಚಾಕುವಿನಿಂದ ಇರಿದು ಕೊಲೆ ಮಾಡಿದ ಘಟನೆ ನಡೆದಿದೆ.

ಬಿವಿಬಿ ಕಾಲೇಜಿನಲ್ಲಿ ಎಂಸಿಎ ವಿಭಾಗದಲ್ಲಿ ಓದುತ್ತಿದ್ದ ನೇಹಾ ಹಿರೇಮಠ (25) ಕೊಲೆಯಾದವರು. ಅದೇ ವಿಭಾಗದ ಸಹಪಾಠಿ ವಿದ್ಯಾರ್ಥಿ ಫಯಾಜ್ (27) ಕೊಲೆ ಮಾಡಿರುವ ಆರೋಪಿ. ಆತನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

‘ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯ ನಿರಂಜನ ಹಿರೇಮಠ ಅವರ ಪುತ್ರಿ ನೇಹಾ. ತನ್ನನ್ನು ಪ್ರೀತಿಸುವಂತೆ ನೇಹಾಗೆ ಫಯಾಜ್ ಹಲವು ದಿನಗಳಿಂದ ಪೀಡಿಸುತ್ತಿದ್ದ. ನಿರಾಕರಿಸಿದ ಕಾರಣ ಕೋಪಗೊಂಡ ಆತ ಗುರುವಾರ ಸಂಜೆ ಕೃತ್ಯವೆಸಗಿದ. ನೇಹಾ ಮೇಲೆ ಏಕಾಏಕಿ ಚಾಕುವಿನಿಂದ ದಾಳಿ ನಡೆಸಿ, ಕುತ್ತಿಗೆಗೆ ಹಲವು ಬಾರಿ ಇರಿದ. ಅವರನ್ನು ತಕ್ಷಣವೇ ವಿದ್ಯಾರ್ಥಿಗಳು ಕಿಮ್ಸ್ ಆಸ್ಪತ್ರೆಗೆ ಕರೆದೊಯ್ದರು. ಆದರೆ, ಮಾರ್ಗ ಮಧ್ಯೆ ಅವರು ಕೊನೆಯುಸಿರೆಳೆದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಖಂಡಿಸಿ ಬಿವಿಬಿ ಆವರಣದಲ್ಲಿ ಎಬಿವಿಪಿ ಸಂಘಟನೆಯ ಕಾರ್ಯಕರ್ತರು ರಾತ್ರಿ ಪ್ರತಿಭಟನೆ ನಡೆಸಿ, ಆರೋಪಿಗೆ ಗಲ್ಲುಶಿಕ್ಷೆ ವಿಧಿಸುವಂತೆ ಆಗ್ರಹಿಸಿದರು.

ಗೂಗಲ್‌ನಲ್ಲಿ ಮತ್ತೆ ಉದ್ಯೋಗ ಕಡಿತ

ಬೆಂಗಳೂರು (ರಾಯಿಟರ್ಸ್): ವೆಚ್ಚ ಕಡಿತದ ಉದ್ದೇಶದಿಂದ ಆಲ್ಫಾಬೆಟ್ ಇಂಕ್ ಒಡೆತನದ ಗೂಗಲ್ ಕಂಪನಿಯು, ಮತ್ತೆ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ.

ಕೃತಕ ಬುದ್ಧಿಮತ್ತೆ ಹಾಗೂ ಸ್ವಯಂಚಾಲಿತ ವ್ಯವಸ್ಥೆಯ ಅಳವಡಿಕೆಗೆ ಕಂಪನಿಯು ಮುಂದಾಗಿದೆ. ಹಾಗಾಗಿ, ಪ್ರಸಕ್ತ ವರ್ಷದ ಜನವರಿಯಲ್ಲಿ ಎಂಜಿನಿಯರಿಂಗ್, ಹಾರ್ಡ್‌ವೇರ್ ಹಾಗೂ ಅಸಿಸ್ಟೆಂಟ್ ಟೀಮ್ ವಿಭಾಗಗಳಲ್ಲಿ ನೂರಾರು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿತ್ತು.

‘ಸದ್ಯ ಕಂಪನಿಯ ಎಲ್ಲ ವಿಭಾಗಗಳಲ್ಲಿ ಉದ್ಯೋಗಿಗಳ ಸಂಖ್ಯೆ ಕಡಿತಗೊಳಿಸುತ್ತಿಲ್ಲ. ಫೈನಾನ್ಸ್, ರಿಯಲ್ ಎಸ್ಟೇಟ್ ವಿಭಾಗದಲ್ಲಿನ ಉದ್ಯೋಗಿಗಳನ್ನು ವಜಾಗೊಳಿಸಲಾಗುತ್ತಿದೆ’ ಎಂದು ಕಂಪನಿಯ ವಕ್ತಾರರು ತಿಳಿಸಿದ್ದಾರೆ. ಆದರೆ, ಎಷ್ಟು ಮಂದಿಯನ್ನು ಕೆಲಸದಿಂದ ತೆಗೆದು ಹಾಕಲಾಗುತ್ತದೆ ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ.

ವ್ಯವಹಾರ ಸೇವೆ ಹಾಗೂ ವರಮಾನ ಮತ್ತು ನಗದು ನಿರ್ವಹಣೆ ವಿಭಾಗಗಳಲ್ಲಿಯೂ ಹೆಚ್ಚು ಮಂದಿ ಉದ್ಯೋಗ ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

‘ಬೆಂಗಳೂರು, ಮೆಕ್ಸಿಕೊ ಮತ್ತು ಡಬ್ಲಿನ್ ನಗರದಲ್ಲಿ ಕಂಪನಿಯ ಕಾರ್ಯಾಚರಣೆ ವಿಸ್ತರಿಸಲು ನಿರ್ಧರಿಸಲಾಗಿದೆ. ಕೆಲಸ ಕಳೆದುಕೊಳ್ಳುವ ಉದ್ಯೋಗಿಗಳಿಗೆ ಈ ನಗರಗಳಲ್ಲಿ ಉದ್ಯೋಗಕ್ಕೆ ಮರು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ’ ಎಂದು ಗೂಗಲ್ ಫೈನಾನ್ಸ್ ವಿಭಾಗದ ಮುಖ್ಯಸ್ಥ ರುತ್ ಪೊರಾಟ್ ಅವರು, ಉದ್ಯೋಗಿಗಳಿಗೆ ಇ–ಮೇಲ್ ಸಂದೇಶ ಕಳುಹಿಸಿದ್ದಾರೆಂದು ಅಮೆರಿಕದ ನ್ಯೂಸ್ ಪೋರ್ಟಲ್ ‘ಬ್ಯುಸಿನೆಸ್ ಇನ್‌ಸೈಡರ್’ ವರದಿ ಮಾಡಿದೆ. ‘ಕಂಪನಿಯ ಈ ನಿರ್ಧಾರವು ಅಲ್ಪ ಪ್ರಮಾಣದ ಸಿಬ್ಬಂದಿಯ ಮೇಲಷ್ಟೇ ಪರಿಣಾಮ ಬೀರಲಿದೆ. ತಂಡಗಳ ಕಾರ್ಯಾಚರಣೆಯನ್ನು ಮತ್ತಷ್ಟು ಬಲಗೊಳಿಸುವುದಕ್ಕಾಗಿ ಈ ನಿರ್ಧಾರ ಅನಿವಾರ್ಯವಾಗಿದೆ’ ಎಂದು ಪೊರಾಟ್ ಹೇಳಿದ್ದಾರೆ.

ನಿಧನ ವಾರ್ತೆ

ಎ. ಮಾರಪ್ಪ



ಬೆಂಗಳೂರು: ಶ್ರೀರಾಮಪುರದ ನಿವಾಸಿ ಹಾಗೂ ಮುನೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರಾಗಿದ್ದ ಎ. ಮಾರಪ್ಪ (97) ಗುರುವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ತೋಟದ ಗುಡ್ಡಹಳ್ಳಿ ಸಮೀಪದ ಕುದುರಗೆರೆ ಗ್ರಾಮದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಅರಮನೆ ಮೈದಾನ: ಪರಿಹಾರಕ್ಕೆ ₹1,400 ಕೋಟಿ ಟಿಡಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅರಮನೆ ಮೈದಾನದ ಎರಡೂ ಕಡೆಗಳಲ್ಲಿರುವ ರಸ್ತೆಗಳ ವಿಸ್ತರಣೆಗಾಗಿ ಮೈದಾನದ ಖಾಲಿ ಭೂಮಿ ವಶಕ್ಕೆ ತೆಗೆದುಕೊಳ್ಳಲು ರಾಜ್ಯ ಸರ್ಕಾರ ತೀರ್ಮಾನಿಸಿದ್ದು, ಇದಕ್ಕೆ ಪ್ರತಿಯಾಗಿ ಮೈಸೂರು ರಾಜ ವಂಶಸ್ಥರಿಗೆ ಸುಮಾರು ₹1,400 ಕೋಟಿ ಮೌಲ್ಯದಷ್ಟು ಟಿಡಿಆರ್ (ಅಭಿವೃದ್ಧಿ ಹಕ್ಕುಗಳ ವರ್ಗಾವಣೆ) ನೀಡಲು ಒಪ್ಪಿಕೊಂಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಸರ್ಕಾರಗಳು ಈ ಹಿಂದಿನ ಆದೇಶಗಳನ್ನು ಮೂರು ಬಾರಿ ಮಾರ್ಪಾಡು ಮಾಡಿವೆ. ವಿವಾದಿತ ಜಾಗವನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಹೆಚ್ಚುವರಿಯಾಗಿ 13.91 ಲಕ್ಷ ಚದರಡಿ ನಿರ್ಮಿಸಿದ ಪ್ರದೇಶ ಹಸ್ತಾಂತರಿಸುವ ಪ್ರಸ್ತಾಪವೂ ಒಳಗೊಂಡಿತ್ತು.

ಟಿಡಿಆರ್‌ನಿಂದಾಗಿ ಅನುಮತಿ ನೀಡಿದ ವ್ಯಾಪ್ತಿಯನ್ನು ಮೀರಿ ನಿರ್ಮಾಣ ಮಾಡುವುದಕ್ಕೆ ಡೆವಲಪರ್‌ಗಳಿಗೆ ಅವಕಾಶವಿರುತ್ತದೆ. ಸರ್ಕಾರ ಪರಿಹಾರವಾಗಿ ಹಣವನ್ನು ನೀಡಲು ಸಾಧ್ಯವಾಗದ ಸಂದರ್ಭಗಳಲ್ಲಿ ಟಿಡಿಆರ್ ಅವಕಾಶವನ್ನು ನೀಡುತ್ತದೆ. ರಸ್ತೆ ವಿಸ್ತರಣೆಗಾಗಿ ಅರಮನೆಗೆ ಸೇರಿದ 15.39 ಎಕರೆ ಭೂಮಿಯನ್ನು ಬಳಕೆ ಮಾಡಿಕೊಳ್ಳಲು ಮತ್ತು ಅದಕ್ಕೆ ಟಿಡಿಆರ್ ನೀಡಲು ಮಾರ್ಚ್‌ನಲ್ಲಿ ನಡೆದ ಸಚಿವ ಸಂಪುಟದಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿತ್ತು.

ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಜಯಮಹಲ್ ಮತ್ತು ಬಳ್ಳಾರಿ ರಸ್ತೆಗಳ ವಿಸ್ತರಣೆಗೆ ಈ ಭೂಮಿ ಬಳಕೆಯಾಗಲಿದೆ. ಇದಕ್ಕೆ ಪೂರಕವಾಗಿ ಮೇಖ್ರಿ ಸರ್ಕಲ್‌ನಿಂದ ಬಿಡಿಎ ಜಂಕ್ಷನ್‌ವರೆಗೆ ಮತ್ತು ಮೇಖ್ರಿ ಸರ್ಕಲ್‌ನಿಂದ ದಂಡು ರೈಲ್ವೆ ನಿಲ್ದಾಣದ ವರೆಗೆ ಅರಮನೆ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳಲಾಗುವುದು.

2019ರಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ರಸ್ತೆ ವಿಸ್ತರಣೆಗಾಗಿ ಅರಮನೆ ಭೂಮಿ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನ ತೆಗೆದುಕೊಂಡು, ಆದೇಶ ಹೊರಡಿಸಿತ್ತು. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ 2022ರ ಸೆಪ್ಟೆಂಬರ್‌ನಲ್ಲಿ ಆದೇಶವೊಂದನ್ನು ಹೊರಡಿಸಿ, ಎರಡೂ ಕಡೆಯ ರಸ್ತೆ ವಿಸ್ತರಣೆ ಯೋಜನೆಯನ್ನು ಕೈಬಿಟ್ಟಿತ್ತು. ವಶಪಡಿಸಿಕೊಳ್ಳುವ ಭೂಮಿಗೆ ಪರಿಹಾರಾರ್ಥವಾಗಿ ದೊಡ್ಡ ಮೊತ್ತದ ಟಿಡಿಆರ್ ನೀಡಬೇಕಾಗುತ್ತದೆ ಎಂಬ ಕಾರಣವನ್ನು ನೀಡಿತ್ತು.

ಆದರೆ, ಅಂದಿನ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರು ಆದೇಶವನ್ನು ಜಾರಿ ಮಾಡದೆ, ಆದೇಶದ ಬಗ್ಗೆ ಮರುಚಿಂತನೆ ನಡೆಸುವುದು ಸೂಕ್ತ ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಅರಮನೆ ಮೈದಾನ ಪ್ರದೇಶ ಇನ್ನೂ ಕೃಷಿ ಭೂಮಿಯ ಸ್ಥಿತಿಯಲ್ಲೇ ಇದೆ. ಭೂಪರಿವರ್ತನೆಯೂ ಆಗಿಲ್ಲ. ಖಾತಾ ಕೂಡ ಆಗಿಲ್ಲ. ಭೂಮಿಯ ಮಾರ್ಗಸೂಚಿ ಮೌಲ್ಯದ ನಾಲ್ಕು ಪಟ್ಟನ್ನು ಮೌಲ್ಯವಾಗಿ ಪರಿಗಣಿಸಬೇಕಾಗುತ್ತದೆ. ಅಂದರೆ 13,91,742 ಚದರಡಿ ಅಥವಾ ₹1,396 ಕೋಟಿ ಮೌಲ್ಯದ್ದಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದರು.

472 ಎಕರೆ ವಿಸ್ತೀರ್ಣದ ಅರಮನೆ ಮೈದಾನವನ್ನೇ ವಶಕ್ಕೆ ತೆಗೆದುಕೊಳ್ಳುವುದು ಸೂಕ್ತ. ಇದಕ್ಕಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮಂಜುನಾಥ್ ಪ್ರಸಾದ್ ಸಲಹೆ ನೀಡಿದ್ದರು.

ರಾಜ್ಯ ಸರ್ಕಾರ ಮೇ 17ರೊಳಗೆ ಟಿಡಿಆರ್ ನೀಡಲು ತೀರ್ಮಾನಿಸಿದೆ. ಇನ್ನು ತಡ ಮಾಡಿದರೆ, ನ್ಯಾಯಾಂಗ ನಿಂದನೆ ಎದುರಿಸಬೇಕಾಗುತ್ತದೆ. ಸರ್ಕಾರ ಅರಮನೆ ಮೈದಾನಕ್ಕೆ ಕೌಂಪೌಂಡ್ ಹಾಕಿದ್ದು, ಇನ್ನೂ ಪರಿಹಾರವನ್ನು ನೀಡಲಿಲ್ಲ ಎಂಬ ಅಂಶವೂ ಸುಪ್ರೀಂ ಕೋರ್ಟ್‌ನ ಗಮನದಲ್ಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದ್ದಾರೆ.

ಗೂಡು ಕಟ್ಟುವ ತಾಣ ತ್ಯಜಿಸುತ್ತಿರುವ ಹಾರ್ನ್‌ಬಿಲ್

• ಪವನ ಕುಮಾರ್ ಎಚ್.



ಗಂಡು ಹಾರ್ನ್‌ಬಿಲ್ ಗೂಡು ಪರಿಶೀಲನೆ ನಡೆಸಿತು ಚಿತ್ರ: ವಿಕಾಸ ಪಾಟೀಲ

ಹುಬ್ಬಳ್ಳಿ: ಪಶ್ಚಿಮಘಟ್ಟಗಳ ಐದು ರಾಜ್ಯಗಳಲ್ಲಿ ಈ ವರ್ಷ ಹೆಣ್ಣು ಹಾರ್ನ್‌ಬಿಲ್‌ಗಳು ವಿಶೇಷವಾಗಿ ‘ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್’ ಗೂಡುಕಟ್ಟುವ ತಾಣಗಳನ್ನು ತ್ಯಜಿಸುತ್ತಿರುವ ವಿಚಿತ್ರ ವಿದ್ಯಮಾನವು ಸಂಶೋಧಕರು ಮತ್ತು ಪಕ್ಷಿತಜ್ಞರಿಗೆ ಕುತೂಹಲ ಮೂಡಿಸಿದೆ.

ವಿಜ್ಞಾನಿಗಳ ಪ್ರಕಾರ, ಅವುಗಳ ಸಂತಾನೋತ್ಪತ್ತಿ ಚಕ್ರದಲ್ಲಿ ಆಗುವ ಯಾವುದೇ ಪರಿಣಾಮ ದೀರ್ಘಾವಧಿಯಲ್ಲಿ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಹಾರ್ನ್‌ಬಿಲ್‌ಗಳು ಒಂದರ್ಥದಲ್ಲಿ ‘ಕಾಡಿನ ರೈತರೂ’ ಹೌದು. ಏಕೆಂದರೆ ಅವು ದಿನಕ್ಕೆ 2 ಸಾವಿರದಿಂದ 3 ಸಾವಿರ ಬೀಜಗಳನ್ನು ಮೂಲ ಮರದಿಂದ 250 ಮೀಟರ್‌ಗಳಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಹರಡುತ್ತವೆ. ಬೀಜ ಪ್ರಸರಣ ಮತ್ತು ಸಸ್ಯ ಪುನರುತ್ಪಾದನೆಯಲ್ಲಿ ಅವು ಪ್ರಮುಖ ಪಾತ್ರ ವಹಿಸುತ್ತವೆ.

ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್‌ನ 4 ತಿಂಗಳ ಗೂಡುಕಟ್ಟುವ ಅವಧಿ ಡಿಸೆಂಬರ್‌ನಲ್ಲಿ ಪ್ರಾರಂಭ ಆಗುತ್ತದೆ. ಒಂಬತ್ತು ವಿಧದ ಹಾರ್ನ್‌ಬಿಲ್‌ಗಳು ದೇಶದಲ್ಲಿವೆ. ಪಶ್ಚಿಮ ಘಟ್ಟಗಳಲ್ಲಿ ಮಲಬಾರ್ ಪೈಡ್ ಹಾರ್ನ್‌ಬಿಲ್, ಮಲಬಾರ್ ಗ್ರೇ ಹಾರ್ನ್‌ಬಿಲ್, ಗ್ರೇಟ್ ಹಾರ್ನ್‌ಬಿಲ್ ಮತ್ತು ಇಂಡಿಯನ್ ಗ್ರೇ ಹಾರ್ನ್‌ಬಿಲ್ ಎಂಬ ನಾಲ್ಕು ಪ್ರಭೇದಗಳಾಗಿವೆ.

‘ಹಾರ್ನ್‌ಬಿಲ್ ಜೀವನ ಚಕ್ರಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕ ದತ್ತಾಂಶದ ಕೊರತೆ ಇದೆ. ನಿಖರ ಮಾಹಿತಿ ಇಲ್ಲ. ಆದರೆ, ಹಣ್ಣಿನ ಲಭ್ಯತೆ ಕೊರತೆ, ಹೆಚ್ಚಿನ ತಾಪಮಾನ ಮತ್ತು ಸೂಕ್ಷ್ಮ ಮಟ್ಟದಲ್ಲಿ ಹವಾಮಾನದ ಏರಿಳಿತವು ಪಕ್ಷಿಗಳು ಸಂತಾನೋತ್ಪತ್ತಿ ಪ್ರಕ್ರಿಯೆ ತ್ಯಜಿಸಲು ಕಾರಣವಾಗಿರಬಹುದು’ ಎಂಬುದು ಸಂಶೋಧಕರ ಊಹೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಪಕ್ಷಿತಜ್ಞ ಗೋಪಾಲಕೃಷ್ಣ ಹೆಗಡೆ ಅವರು ಒಂಬತ್ತು ವರ್ಷಗಳಿಂದ ಹಾರ್ನ್‌ಬಿಲ್ ಗೂಡೊಂದರ ಮೇಲೆ ನಿಗಾ ವಹಿಸಿದ್ದಾರೆ. ‘ಹೆಣ್ಣು ಹಾರ್ನ್‌ಬಿಲ್ ಈ ಋತುವಿನಲ್ಲಿ ತಡವಾಗಿ ಗೂಡುಕಟ್ಟುವ ಸ್ಥಳಗಳಿಗೆ ಹೋಗಿ, ಮರದ ಕುಹರದೊಳಗೆ ಪ್ರವೇಶಿಸಿ ಮೊಟ್ಟೆ ಇಡದೆ ವಾಪಸ್ ಹೋಗಿವೆ’ ಎಂದು ಅವರು ಹೇಳುತ್ತಾರೆ.

ಕಾಳಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ 13 ಸ್ಥಳಗಳ ಮೇಲೆ ನಿಗಾ ಇರಿಸಿದ್ದ ಅಧಿಕಾರಿಗಳು ಸಹ, ಹಾರ್ನ್‌ಬಿಲ್‌ಗಳು ತಮ್ಮ ಗೂಡುಕಟ್ಟುವ ಮರಗಳನ್ನು ತೊರೆಯುತ್ತಿರುವುದನ್ನು ಗಮನಿಸಿದ್ದಾರೆ.

ಮೈಸೂರಿನ ‘ನೇಚರ್ ಕನ್ಸರ್ವೇಶನ್ ಫೌಂಡೇಶನ್’ನ (ಎನ್‌ಸಿಎಫ್) ಸಂಶೋಧಕಿ ಪೂಜಾ ಪವಾರ್, ಹಿಂದಿನ ವರ್ಷಗಳಿಗಿಂತ ಭಿನ್ನವಾಗಿ ಹೆಣ್ಣು ಹಾರ್ನ್‌ಬಿಲ್‌ಗಳು ಈ ಋತುವಿನಲ್ಲಿ ತಡವಾಗಿ ಗೂಡುಕಟ್ಟುವ ಸ್ಥಳಕ್ಕೆ ಬಂದು ಹಾಗೆಯೇ ಹಿಂದಿರುಗುತ್ತಿವೆ ಎಂದು ತಿಳಿಸಿದ್ದಾರೆ.

‘ಹಾರ್ನ್‌ಬಿಲ್‌ಗಳ ಈ ನಡವಳಿಕೆಗೆ ನಿಖರ ಕಾರಣ ನಮಗೆ ತಿಳಿದಿಲ್ಲ. ಆದರೆ ಮೊಟ್ಟಮೊದಲ ಬಾರಿಗೆ, ಇಷ್ಟು ದೊಡ್ಡ ಸಂಖ್ಯೆಯಲ್ಲಿ ಗೂಡುಗಳನ್ನು ಬಳಸದಿರುವುದನ್ನು ನೋಡುತ್ತಿದ್ದೇವೆ. ಈ ವಿದ್ಯಮಾನವು ಕೇರಳ, ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮತ್ತು ಗೋವಾದಲ್ಲಿ ನಡೆದಿವೆ’ ಎಂದು ಪೂಜಾ ಪವಾರ್ ಹೇಳಿದರು.

> **ಕಾರಣಗಳನ್ನು ಪತ್ತೆ ಮಾಡಲು ಪಶ್ಚಿಮ ಘಟ್ಟಗಳ ಉದ್ದಕ್ಕೂ ಹಾರ್ನ್‌ಬಿಲ್ ಗೂಡುಕಟ್ಟುವ ಮತ್ತು ಹವಾಮಾನದ ದೀರ್ಘಾವಧಿಯ ಪರಿಣಾಮ ಮೇಲೆ ನಿಗಾ ವಹಿಸಬೇಕು**
> **ರೋಹಿತ್ ನಾನಿವಾಡೇಕರ್**
> ಎನ್‌ಸಿಎಫ್ ವಿಜ್ಞಾನಿ

ಶಿರಸಿಯ ಅರಣ್ಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಶ್ರೀಧರ್ ಡಿ. ಭಟ್ ಪ್ರಕಾರ, ‘ಪರಿಸರದ ಪರಿಸ್ಥಿತಿಗಳು ಅನುಕೂಲಕರ ಆಗಿಲ್ಲದಿದ್ದರೆ, ಈ ಸೂಕ್ಷ್ಮ ಪಕ್ಷಿಗಳು ಸಂತಾನೋತ್ಪತ್ತಿ ಪ್ರಕ್ರಿಯೆ ಮುಂದೂಡುತ್ತವೆ. ಈ ಋತುವಿನಲ್ಲಿ ಹಕ್ಕಿಗಳು ಗೂಡು ಕಟ್ಟದಿರಲು ನಿಖರ ಕಾರಣ ಹೇಳಲು ಇದು ಸಕಾಲವಲ್ಲ. ಆದರೆ, ಬರಗಾಲ ಮತ್ತು ಕೆಲ ಬಗೆಯ ಹಣ್ಣುಗಳ ಕೊರತೆ ಇದೆ. ಹೀಗಾಗಿ ಗೂಡಿನಲ್ಲಿರುವ ಹೆಣ್ಣು ಹಾರ್ನ್‌ಬಿಲ್‌ಗೆ ಅಗತ್ಯ ಪ್ರಮಾಣದ ಹಣ್ಣುಗಳನ್ನು ಪೂರೈಸಲು ಗಂಡಿಗೆ ಕಷ್ಟವಾಗಿರಬಹುದು’ ಎಂದರು.

ನಗರದಲ್ಲಿ ಇಂದು

‘ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮ ಹಾಗೂ ಪತ್ರಕರ್ತರು’ ವಿಶೇಷ ಉಪನ್ಯಾಸ: ಸುಧೀಂದ್ರ ಕುಲಕರ್ಣಿ, ಉದ್ಘಾಟನೆ: ಲಿಂಗರಾಜ ಗಾಂಧಿ, ಅಧ್ಯಕ್ಷತೆ: ಶಿವಾನಂದ ತಗಡೂರು, ಆಶಯ ನುಡಿ: ಅನಂತ ಚಿನಿವಾರ, ಎನ್. ನರಸಿಂಹಮೂರ್ತಿ, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

‘ವಾಯ್ಸ್ ಆಫ್ ದಿ ನೇಷನ್’, 2024ರ ಲೋಕಸಭಾ ಚುನಾವಣೆ–‘ಪ್ರಚಲಿತ ರಾಷ್ಟ್ರೀಯ ವಿದ್ಯಮಾನಗಳ’ ಕುರಿತು ಉಪನ್ಯಾಸ, ‘ಕರ್ನಾಟಕದ 28 ಸಂಸದರ ರಿಪೋರ್ಟ್ ಕಾರ್ಡ್’ ಬಿಡುಗಡೆ: ಭಾಷಣಕಾರರು: ಪರಕಾಲ ಪ್ರಭಾಕರ, ಸಲೀಲ್ ಶೆಟ್ಟಿ, ಆಕಾರ್ ಪಟೇಲ್, ಮಲ್ಲಿಕಾ ಘಂಟಿ, ಮಾವಳ್ಳಿ ಶಂಕರ್, ನಿರಂಜನ ಆರಾಧ್ಯ, ಇಂದೂಧರ ಹೊನ್ನಾಪುರ, ಎ.ಆರ್. ವಾಸವಿ, ಆಯೋಜನೆ: ಸಂವಿಧಾನದ ಹಾದಿಯಲ್ಲಿ, ಸ್ಥಳ: ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ಬೆಳಿಗ್ಗೆ 11

ಸಂಗೀತ ಕಛೇರಿ: ಬೆಳಿಗ್ಗೆ 10.30: ಭಕ್ತಿ ಗೀತೆಗಳು: ಸಂಗಾತಿ ಸಮಾಜದ ಸದಸ್ಯರಿಂದ, ದೇವರನಾಮ, ಹಿಂದೂಸ್ತಾನಿ ಸಂಗೀತ ಕಛೇರಿ: ಗಾಯನ: ಪಿ. ಚೈತ್ರ ಗೋಪಿನಾಥ್, ಹಾರ್ಮೋನಿಯಂ: ಉಮಾಕಾಂತ್ ಪುರಾಣಿಕ್, ತಬಲಾ: ಗೋಪಿನಾಥ್ ಎಚ್.ಎಸ್., ಆಯೋಜನೆ ಮತ್ತು ಸ್ಥಳ: ಸಮಾಜ ಸೇವಾ ಸಂಘ, ಜಯನಗರ, ಸಂಜೆ 6.30

‘ಇದಿತ್ರಿ’ ಕಾರ್ಯಕ್ರಮದ ಉದ್ಘಾಟನೆ: ಚಂದ್ರಶೇಖರ್ ಕಂಬಾರ, ಅತಿಥಿಗಳು: ನಾಗೇಶ್ ವಿ. ಬೆಟ್ಟಕೋಟೆ, ಗೋನಾಳ ಭೀಮಪ್ಪ, ಅಧ್ಯಕ್ಷತೆ: ಸೋಮಶೇಖರ್ ಎ.ಆರ್., ಆಯೋಜನೆ: ದಿವ್ಯಜ್ಯೋತಿ ವಿದ್ಯಾ ಕೇಂದ್ರ, ಯಲಹಂಕ ನ್ಯೂಟೌನ್, ಬೆಳಿಗ್ಗೆ 11.30

ಬೆಂಗಳೂರು ಕರಗೋತ್ಸವ: ದೇವರ ನಾಮ–ಭಜನೆ: ಕನಕಶ್ರೀ ಮಹಿಳಾ ಸಂಘ, ಸಾಂಸ್ಕೃತಿಕ ಕಾರ್ಯಕ್ರಮಗಳು: ರೇಖಾ ಜಗದೀಶ್ ತಂಡ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ತಿಗಳರಪೇಟೆ, ಸಂಜೆ 5ರಿಂದ

ನೃತ್ಯೋತ್ಸವ–2024: ಯಕ್ಷಗಾನ ಪ್ರದರ್ಶನ, ಕುಚಿಪುಡಿ ನೃತ್ಯ ಪ್ರದರ್ಶನ: ಅವಿಜಿತ್ ದಾಸ್, ಕಥಕ್ ನೃತ್ಯ ಪ್ರದರ್ಶನ: ಪಿಯೂಷ್ ಚೌವ್ಹಾಣ್, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜು ಸಭಾಂಗಣ, ಮಲ್ಲೇಶ್ವರ, ಸಂಜೆ 5ರಿಂದ

ಅಕ್ಕಮಹಾದೇವಿ ಜಯಂತಿ: ಅಧ್ಯಕ್ಷತೆ: ಗೀತಾ ಜಯಂತ್, ‘ಅಕ್ಕಮಹಾದೇವಿ ವಚನಗಳಲ್ಲಿ ಆತ್ಮಸಾಕ್ಷಿ ಪ್ರಜ್ಞೆ’ ಕುರಿತು ಉಪನ್ಯಾಸ: ಅಂಬಿಕಾ ಚಂದ್ರಶೇಖರ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ದಿಬ್ಬೂರು ಎಸ್. ಗಿರೀಶ್, ಪ್ರಮೀಳಾ ಗರಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 5.30

70ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಭರತನಾಟ್ಯ ಪ್ರದರ್ಶನ: ಪ್ರಿಯಾಂಕ ರಾಧಾಕೃಷ್ಣ ಮತ್ತು ತಂಡ, ಐಶ್ವರ್ಯ ನಿತ್ಯಾನಂದ, ‘ಗೀತ ಗೋವಿಂದ’ ನೃತ್ಯ ರೂಪಕ: ನಿರ್ದೇಶನ: ರಾಧಶ್ರೀಧರ್, ಆಯೋಜನೆ ಹಾಗೂ ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.30

ರಾಮನವಮಿ ಆಚರಣೆ ಪ್ರಯುಕ್ತ ಸಂಗೀತ ಕಛೇರಿ: ಗಾಯನ: ಆರ್. ಪವನ್ ರಂಗಾಚಾರ್, ಪಿಟೀಲು: ಎಂ.ಎಸ್. ಗೋವಿಂದ್ ಸ್ವಾಮಿ, ಮೃದಂಗ: ಬಿ.ಆರ್. ಶ್ರೀನಿವಾಸ್, ಆಯೋಜನೆ: ಭಾರತೀಯ ಶಿಕ್ಷಣ ಸಮಿತಿ, ಸ್ಥಳ: ಪ್ರೊ.ಎಂ.ಪಿ.ಎಲ್. ಶಾಸ್ತ್ರಿ ಆಡಿಟೋರಿಯಂ, ಗಾಂಧಿನಗರ ಪಿ.ಯು. ಕಾಲೇಜು ಆವರಣ, ಸಂಜೆ 6

‘ಎಟರ್ನಲ್ ಎಕೋಸ್’ ಎಂ.ಎಸ್. ಚಂದ್ರಶೇಖರ್ ಅವರ ಜನ್ಮಶತಮಾನೋತ್ಸವ ಕಲಾತ್ಮಕ ಪಯಣ: ಉದ್ಘಾಟನೆ: ಎಚ್.ಎನ್. ಸುರೇಶ್, ಅತಿಥಿಗಳು: ಚೂಡಾಮಣಿ ನಂದಗೋಪಾಲ್, ಎಂ.ಜೆ. ಕಮಲಾಕ್ಷಿ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಉಪಸ್ಥಿತಿ: ಬಾಲಮುರಳಿ ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ರಾಮನವಮಿ ಸಂಗೀತೋತ್ಸವ–2024: ಸಂಜೆ 5ರಿಂದ 6 ಗಂಟೆ: ಸುರಭಿ ಎಸ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ವಿಶೇಷ ಹಿಂದೂಸ್ತಾನಿ ಸಂಗೀತ ಕಛೇರಿ: ವೆಂಕಟೇಶ್ ಕುಮಾರ್, ಕೇಶವ ಜೋಷಿ, ಸತೀಶ್ ಕೊಳ್ಳಿ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6.30

ಶ್ರೀರಾಮೋತ್ಸವ: ಸುಗಮ ಸಂಗೀತ: ಸುಚೇತನ್ ರಂಗಸ್ವಾಮಿ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯ ರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

‘ಹರಿನಾಮ ಸಂಕೀರ್ತನೆ’: ಗಾಯನ: ಭಾವನಾ ಉಮೇಶ್, ಪಿಟೀಲು: ಎಂ.ಎನ್. ಸತ್ಯನಾರಾಯಣ, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಅಭಯ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

‘ಹರಿದಾಸ ವೈಭವ’: ಗಾಯನ: ಅನನ್ಯ ಬೆಳವಾಡಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ಪ್ರಶಾಂತ ಗಣಪತಿ ದೇವಸ್ಥಾನ, ಪ್ರಶಾಂತನಗರ, ಸಂಜೆ 6.30

‘ಮಹಾಭಾರತ’ ಪ್ರವಚನ: ಜಗನ್ನಾಥಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

‘ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್’ ನಾಟಕ ಪ್ರದರ್ಶನ: ರಚನೆ: ಭೀಷ್ಮ ರಾಮಯ್ಯ, ನಿರ್ದೇಶನ: ಬಾಷ್ ರಾಘವೇಂದ್ರ, ಆಯೋಜನೆ: ಅಂತರಂಗ ಬಹಿರಂಗ ತಂಡ, ಸ್ಥಳ: ಯುವಪಥ, ಜಯನಗರ 4ನೇ ಬ್ಲಾಕ್, ಸಂಜೆ 7.30



ಮೋಕ್ಷಾ ಕುಶಾಲ್

ರಾಮನ ಅವತಾರವೆತ್ತಿದ ರಿಷಿ!

'ಆಪರೇಷನ್ ಅಲಮೇಲಮ್ಮ', 'ಕವಲುದಾರಿ' ಸಿನಿಮಾಗಳ ಮೂಲಕ ಮೋಡಿ ಮಾಡಿದ್ದ ರಿಷಿ, ಇದೀಗ ಟಾಲಿವುಡ್‌ನಲ್ಲೂ ಮಿಂಚುತ್ತಿದ್ದಾರೆ. ಕನ್ನಡದಲ್ಲಿ 'ರಾಮನ ಅವತಾರ'ವೆತ್ತಲು ಸಜ್ಜಾಗಿರುವ ರಿಷಿ, ತೆಲುಗಿನ ಖ್ಯಾತ ನಟ ನಂದಮೂರಿ ಬಾಲಕೃಷ್ಣ(ಬಾಲಯ್ಯ) ಜೊತೆಗೂ ತೆರೆ ಹಂಚಿಕೊಳ್ಳಲಿದ್ದಾರೆ.



ರಿಷಿ

ಅಭಿಲಾಷ್ ಪಿ.ಎಸ್.

• ಹಲವು ವರ್ಷಗಳ ಬಳಿಕ ನಿಮ್ಮ ಸಿನಿಮಾವೊಂದು ಬಿಡುಗಡೆಯಾಗುತ್ತಿದೆ. ವಿಳಂಬಕ್ಕೆ ಕಾರಣ?

ಕೆಲವೊಂದಿಷ್ಟು ವಿಚಾರಗಳು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಮೊದಲ ಸಿನಿಮಾ ಮಾಡಿದಾಗ 'ನನ್ನನ್ನು ಜನ ಗುರುತಿಸಬೇಕು' ಎಂದು ನಟನೆಯ ಬಗ್ಗೆಯಷ್ಟೇ ಯೋಚನೆ ಮಾಡುತ್ತಿದ್ದೆ. ಇದೀಗ ಜನರಿಗೆ ಒಂದೊಳ್ಳೆಯ ಸಿನಿಮಾ ನೀಡಬೇಕು ಎನ್ನುವ ಉದ್ದೇಶ ಹೊತ್ತು ಹೆಜ್ಜೆ ಹಾಕುತ್ತಿದ್ದೇನೆ. ಕುಟುಂಬವೊಂದು ಒಟ್ಟಾಗಿ ಕುಳಿತು ವೀಕ್ಷಿಸಲು ಮಾಡಿರುವ ಸಿನಿಮಾ 'ರಾಮನ ಅವತಾರ'. ಈ ಉದ್ದೇಶವಿಟ್ಟುಕೊಂಡೇ ಸಿನಿಮಾ ಆರಂಭಿಸಿದ್ದೆವು. ಇದನ್ನು ಸಾಧಿಸಿದ್ದೇವೆ ಎನ್ನುವ ಭರವಸೆ ಇದೆ. ಕಳೆದ ಫೆಬ್ರುವರಿಯಲ್ಲೇ ಸಿನಿಮಾ ಬಿಡುಗಡೆಯಾಗಬೇಕಿತ್ತು. ಆದರೆ ಆ ಸಂದರ್ಭದಲ್ಲಿ ಸಾಲು ಸಾಲು ಸಿನಿಮಾಗಳು ಬಿಡುಗಡೆಯಾಗುತ್ತಿದ್ದ ಕಾರಣ, ನಮ್ಮ ಸಿನಿಮಾವನ್ನು ಮುಂದೂಡಿದೆವು.

'ಕವಲುದಾರಿ' ಆದ ಬಳಿಕ ಒಪ್ಪಿಕೊಂಡಿದ್ದ ಸಿನಿಮಾ ಇದು. ಕೋವಿಡ್ ಲಾಕ್‌ಡೌನ್ ಬಳಿಕ 'ರಾಮನ ಅವತಾರ' ಸಿನಿಮಾದ ತಂಡವೇ ಬದಲಾಯಿತು. ಪೋಸ್ಟ್ ಪ್ರೊಡಕ್ಷನ್ ಸಂದರ್ಭದಲ್ಲೂ ಕೊಂಚ ವಿಳಂಬವಾಯಿತು. ಈ ಇಡೀ ಸಿನಿಮಾದ ಪಯಣದಲ್ಲಿ ಮೂರು ವರ್ಷ ಕಳೆದೆ. ಪಾತ್ರದ ಆಯ್ಕೆ ವಿಚಾರದಲ್ಲಿ ಕಠಿಣ ನಿಯಮಗಳನ್ನು ನಾನು ಹಾಕಿಕೊಂಡಿಲ್ಲ. ಪಾತ್ರಕ್ಕೆ ಇರುವ ಉದ್ದೇಶವನ್ನಷ್ಟೇ ನೋಡುತ್ತೇನೆ. ಒಬ್ಬ ನಟ, ಸ್ಕ್ರಿಪ್ಟ್ ಮತ್ತು ಪಾತ್ರದ ರಚನೆ ಮೇಲೆ ಅವಲಂಬಿತವಾಗಿರುತ್ತಾನೆ. ಇದು ಸರಿಯಾಗಿದ್ದಲ್ಲಿ ಸಿನಿಮಾ ಒಪ್ಪಿಕೊಳ್ಳುತ್ತೇನೆ. ಕಥೆಯ ಉದ್ದೇಶ ಮತ್ತು ಪಾತ್ರದ ಉದ್ದೇಶ ಹೊಂದಾಣಿಕೆಯಾದಲ್ಲಿ ನಾನು ಎಲ್ಲ ಜಾನರ್‌ನ ಪಾತ್ರಗಳನ್ನು ಮಾಡಲು ತೆರೆದುಕೊಂಡಿದ್ದೇನೆ. ನನಗೆ ಹೆಚ್ಚು ಹೆಚ್ಚು ಸಿನಿಮಾ ಮಾಡಬೇಕು ಎಂದಿದೆ. ಆದರೆ ಹಲವು ಬಾರಿ ನಮಗೆ ಬೇಕಾದ ಪಾತ್ರಗಳು ಸಿಗುವುದಿಲ್ಲ. ಮಾಡಿರುವ ಸಿನಿಮಾ ವಿಳಂಬವಾದರೂ ತೊಂದರೆ ಇಲ್ಲ. ನನ್ನ ನಟನೆಯ ಮೇಲೆ ನಿರೀಕ್ಷೆ ಇಟ್ಟುಕೊಂಡು ಬರುವ ಪ್ರೇಕ್ಷಕರ ನಂಬಿಕೆ ಉಳಿಸಿಕೊಳ್ಳಬೇಕು ಎನ್ನುವುದಷ್ಟೇ ನನ್ನ ಗುರಿ.

• 'ರಾಮನ ಅವತಾರ'ವೆತ್ತಲು ಕಾರಣ?

ಈ ಸಿನಿಮಾ ಒಪ್ಪಿಕೊಳ್ಳಲು ಮುಖ್ಯ ಕಾರಣ ನಿರ್ದೇಶಕ ವಿಕಾಸ್ ಪಂಪಾಪತಿ. ಅವರ ನಾಟಿ ಫ್ಯಾಕ್ಟರಿ ಯೂಟ್ಯೂಬ್ ಚಾನೆಲ್ ಗಮನಿಸಿರಬಹುದು. ಅವರ ಬರವಣಿಗೆ ನನಗೆ ಇಷ್ಟವಾಯಿತು. ಅದರಲ್ಲಿ ಯಾವುದೇ ಕೀಳು ಅಭಿರುಚಿ ಇಲ್ಲ. ಹಾಸ್ಯವು ಯಾರನ್ನೂ ನಿಂದಿಸಬಾರದು. ಇಡೀ ಕುಟುಂಬವನ್ನು ನಗಿಸುವ ಅಂಶ ಆ ಬರವಣಿಗೆಯಲ್ಲಿ ಇರಬೇಕು. ವಿಕಾಸ್ ಅವರ ಕಥೆಯಲ್ಲಿ ಇಂತಹ ಅಂಶಗಳಿದ್ದವು. ರಾಮಾಯಣದಲ್ಲಿ ಇರುವ ಕೆಲ ವಿಷಯಗಳನ್ನು ಪ್ರಸ್ತುತ ಸಮಯದಲ್ಲಿ ಹೇಳುವ ಕಥೆ ಇದಾಗಿದೆ. ಸಿನಿಮಾದ ಉದ್ದೇಶ ನನಗೆ ಹಿಡಿಸಿತು. ಸ್ಕ್ರೀನ್‌ಪ್ಲೇ ಆಕರ್ಷಿಸಿತು. ಹಾಸ್ಯ ಪ್ರಧಾನ ಸಿನಿಮಾ ಮಾಡಬೇಕು ಎಂದು ಈ ಸಿನಿಮಾವನ್ನು ಆರಂಭಿಸಿರಲಿಲ್ಲ. ಹಾಸ್ಯ ಎನ್ನುವುದು ನಮ್ಮಿಬ್ಬರ ಶಕ್ತಿಯೂ ಆದ ಕಾರಣ, ಸಿನಿಮಾದಲ್ಲಿ ಹಾಸ್ಯ ಮುನ್ನೆಲೆಗೆ ಬಂದಿದೆ.

'ರಾಮಕೃಷ್ಣ' ಎನ್ನುವುದು ನನ್ನ ಪಾತ್ರದ ಹೆಸರು. ಊರಿಗೆ ಒಬ್ಬ ನಾಯಕನಾಗಬೇಕು, ಆ ಊರಿಗೆ ಸಹಾಯ ಮಾಡಬೇಕು ಎನ್ನುವುದು ಆತನ ಗುರಿ. ಊರಿನ ಯುವಜನರು ಊರು ಬಿಟ್ಟು ಹೋಗಬಾರದು, ಇದ್ದಲ್ಲೇ ಅವರಿಗೆ ಕೆಲಸದ ಅವಕಾಶ ಕಲ್ಪಿಸಬೇಕು ಎನ್ನುವ ನಿಟ್ಟಿನಲ್ಲಿ ಆತನ ಪಯಣ ಆರಂಭವಾಗುತ್ತದೆ. ಆತನಿಗೆ ಎದುರಾಗುವ ಅಡೆತಡೆಗಳು, ಅದನ್ನು ಆತ ಹೇಗೆ ಎದುರಿಸುತ್ತಾನೆ ಎನ್ನುವುದೇ ಕಥೆ.

• ರಿಷಿಗೆ ಯಾವ ಜಾನರ್ ಇಷ್ಟ?

'ರಾಮನ ಅವತಾರ'ದಂತಹ ಸಿನಿಮಾ ಮಾಡಿದಾಗ ನಟನಾಗಿ ಬಹಳ ಉತ್ಸಾಹದಿಂದ ತೊಡಗಿಸಿಕೊಳ್ಳುತ್ತೇನೆ. ಪ್ರತಿ ದೃಶ್ಯದಲ್ಲೂ ಖುಷಿ ಇರುತ್ತದೆ. ಈ ಮಾದರಿ ಸಿನಿಮಾಗಳಲ್ಲಿ ನಾನು ಜೀವಿಸುತ್ತೇನೆ. 'ಶೈತಾನ್'ನಂತಹ ಕಥಾಹಂದರದ ಪಾತ್ರಗಳಲ್ಲಿ ಬಹಳ ಕಾಲ ಉಳಿಯುವುದು ಕಷ್ಟ. ಅದು ಸವಾಲು ಕೂಡಾ ಹೌದು. ನಟನಾಗಿ ಎಲ್ಲ ಜಾನರ್‌ಗಳನ್ನು ಇಷ್ಟಪಡುತ್ತೇನೆ. ಹಾಸ್ಯ ಪ್ರಧಾನ ಚಿತ್ರಗಳನ್ನೇ ಮಾಡುತ್ತಿರುವುದೂ ಕಷ್ಟ.

• ನಿಮ್ಮ ಜೊತೆಗೆ ಶರಣ್ ಅವರಿಗೆ ತೆರೆ ಹಂಚಿಕೊಳ್ಳಬೇಕಂತೆ...

ಶರಣ್ ಅವರು ನನ್ನ ನೆಚ್ಚಿನ ನಟರಲ್ಲಿ ಒಬ್ಬರು. ಇಡೀ ಚಿತ್ರರಂಗದಲ್ಲಿ ಒಬ್ಬ ಅದ್ಭುತ ಕಲಾವಿದ ಅವರು. ಈ ರೀತಿ ಮನರಂಜನೆ ನೀಡುವ ಕಲಾವಿದರನ್ನು ನಾವು ಹೆಚ್ಚು ಪ್ರಶಂಸೆ ಮಾಡುವುದಿಲ್ಲ. ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡ ಸಿನಿಮಾಗಳಲ್ಲಿ ಒಬ್ಬ ನಟನಿಗೆ ಸಿಗುವ ಪ್ರಶಂಸೆ, ಒಬ್ಬ ಹಾಸ್ಯನಟನಿಗೆ ಸಿಗುವುದಿಲ್ಲ. ಒಬ್ಬರನ್ನು ನಗಿಸುವುದು ಸುಲಭವಲ್ಲ. ಅದೊಂದು ಗಂಭೀರವಾದ ಕಲೆ. ಶರಣ್ ಅವರು ಅದನ್ನು ಸುಲಭವಾಗಿ ಕಾಣುವಂತೆ ಮಾಡುತ್ತಾರೆ. ಅವರಿಗಿರುವ ಕಲೆಯನ್ನು ನಾವು ಗೌರವಿಸಬೇಕು. ವೇದಿಕೆಯೊಂದರಲ್ಲಿ ಅವರು ನನ್ನ ಜೊತೆ ನಟಿಸಬೇಕು ಎಂದಿದ್ದರು. ಮುಗ್ಧ ಮನಸ್ಸಿನಿಂದ ಅವರು ಹಾಗೆ ಹೇಳಿರುವುದು ಅವರ ದೊಡ್ಡ ಗುಣ ತೋರಿಸುತ್ತದೆ. ಅವಕಾಶ ಬಂದರೆ ಖಂಡಿತವಾಗಿಯೂ ಅವರೊಂದಿಗೆ ನಟಿಸುತ್ತೇನೆ.

• ಕನ್ನಡದಲ್ಲಿ ಹೊಸ ಪ್ರಾಜೆಕ್ಟ್‌ಗಳು...

'ರಾಮನ ಅವತಾರ' ಸಿನಿಮಾ ಮೇ 10ಕ್ಕೆ ತೆರೆಕಾಣುತ್ತಿದೆ. ಕೆ.ಎಸ್. ನಂದೀಶ್ ಆ್ಯಕ್ಷನ್ ಕಟ್ ಹೇಳಿರುವ 'ರುದ್ರ ಗರುಡ ಪುರಾಣ' ಚಿತ್ರದ ಶೂಟಿಂಗ್ ಪೂರ್ಣಗೊಂಡಿದೆ. ಇದು ಡಬ್ಬಿಂಗ್ ಹಂತದಲ್ಲಿದೆ. ಪ್ರಶಾಂತ್ ರಾಜಪ್ಪ ನಿರ್ದೇಶನದ ಹೊಸ ಪ್ರಾಜೆಕ್ಟ್ ಒಪ್ಪಿಕೊಂಡಿದ್ದೇನೆ. ಇದರಲ್ಲಿ ನಾನು ಹಾಗೂ ಪ್ರಕಾಶ್ ಬೆಳವಾಡಿ ಅವರು ಮುಖ್ಯಭೂಮಿಕೆಯಲ್ಲಿ ಇದ್ದೇವೆ. ಇದರ ಶೂಟಿಂಗ್ ಶೇಕಡ 90ರಷ್ಟು ಪೂರ್ಣಗೊಂಡಿದೆ. ಈ ಸಿನಿಮಾಗಳೂ ಇದೇ ವರ್ಷ ಬಿಡುಗಡೆಯಾಗುವ ಸಾಧ್ಯತೆ ಇದೆ. ❖

• 'ಶೈತಾನ್' ಬಳಿಕ ಟಾಲಿವುಡ್ ಪಯಣ ಹೇಗಿದೆ?

ಸದ್ಯ ಎರಡು ತೆಲುಗು ಸಿನಿಮಾಗಳನ್ನು ಮಾಡುತ್ತಿದ್ದೇನೆ. ಒಂದು ರವಿ ಪಸನ ಫಿಲ್ಮ್ ಕಾರ್ಪೋರೇಷನ್‌ನಡಿ ನಿರ್ಮಾಣವಾಗುತ್ತಿರುವ, ಗೋಪಿ ವಿಹಾನಿ ಆ್ಯಕ್ಷನ್ ಕಟ್ ಹೇಳುತ್ತಿರುವ ಸಿನಿಮಾ. ಇದರ ಶೂಟಿಂಗ್ ಶೇಕಡ 50ರಷ್ಟು ಮುಗಿದಿದೆ. ಮತ್ತೊಂದು ನಂದಮೂರಿ ಬಾಲಕೃಷ್ಣ(ಬಾಲಯ್ಯ) ಅವರ ಸಿನಿಮಾದಲ್ಲಿ ನೆಗೆಟಿವ್ ಲೀಡ್‌ನಲ್ಲಿ ಕಾಣಿಸಿಕೊಳ್ಳಲಿದ್ದೇನೆ. ಇದರ ಶೂಟಿಂಗ್ ಕೂಡಾ ನಡೆಯುತ್ತಿದೆ. ಇವೆರಡರ ಶೀರ್ಷಿಕೆಗಳು ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಈ ಎರಡೂ ಪ್ರಾಜೆಕ್ಟ್ ಸಿಗಲು 'ಶೈತಾನ್' ವೆಬ್ ಸರಣಿಯ ಪಾತ್ರವೇ ಕಾರಣ.

ಜೂನ್ 14ಕ್ಕೆ ಕೋಟಿ

ನಟ ಧನಂಜಯ ನಾಯಕನಾಗಿ ನಟಿಸಿದ್ದ 'ಗುರುದೇವ ಹೊಯ್ಸಳ' ಸಿನಿಮಾ ಬಿಡುಗಡೆಯಾಗಿ ವರ್ಷ ಉರುಳಿದೆ. ಧನಂಜಯ ಹೊಸ ಸಿನಿಮಾ ಯಾವಾಗ ರಿಲೀಸ್ ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕಿದೆ. 'ಕೋಟಿ' ಸಿನಿಮಾ ಜೂನ್ 14ರಂದು ಬಿಡುಗಡೆಯಾಗಲಿದೆ.

ಪರಮೇಶ್ವರ್ ಗುಂಡ್ಕಲ್(ಪರಮ್) ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, 'ಕೋಟಿ' ಕನಸು ಹೊತ್ತು ತೆರೆ ಮೇಲೆ ಬರಲಿದ್ದಾರೆ ಧನಂಜಯ. ಸಿನಿಮಾ ಕುರಿತು ಮಾತನಾಡಿದ ಅವರು, 'ಈ ಸಿನಿಮಾದ ಕಥೆ ಕೇಳಿ ಪ್ರತಿಯೊಬ್ಬರಲ್ಲೂ 'ಕೋಟಿ' ಕಾಣಿಸತೊಡಗಿದ. ಇದೊಂದು ಹೊಸ ಕಥೆ. ಈ ಸಿನಿಮಾಗೆ ಯಾವ ಉಲ್ಲೇಖಗಳೂ ಸಿಗುವುದಿಲ್ಲ. ಒಂದೇ ಒಂದು ಕೋಟಿ ಸಿಕ್ಕಿಬಿಟ್ಟರೆ ಅಥವಾ ದುಡಿಯೋದಕ್ಕಾದರೆ ಜೀವನದಲ್ಲಿ ಸೆಟ್ಲ್ ಆಗಿಬಿಡಬಹುದು ಎಂದು ಎಲ್ಲರೂ ಅಂದುಕೊಳ್ಳುತ್ತಾರೆ. ನಮ್ಮ 'ಕೋಟಿ'ಯೂ ಅಷ್ಟೇ. ಎಲ್ಲಾ ಮನೆಗಳಲ್ಲೂ ಈ 'ಕೋಟಿ'ಯಂಥ ಅಣ್ಣ, ತಮ್ಮ, ಮಗ ನಿಮಗೆ ಸಿಗುತ್ತಾನೆ. ನಿಮ್ಮೊಳಗಿನ 'ಕೋಟಿ'ಯನ್ನು ಪತ್ತೆ ಮಾಡಲು ಸಿನಿಮಾ ನೋಡಬೇಕು' ಎಂದರು.



ಧನಂಜಯ

''ಬಡವ ರಾಸ್ಕಲ್'' ಸಿನಿಮಾದ ಯಶಸ್ಸಿನಲ್ಲಿ ಪರಮ್ ಪಾಲಿದೆ. ನನಗೆ ಮೊದಲ ಕೋಟಿ ಕೊಟ್ಟಿದ್ದು ಕನ್ನಡದ ಜನರೇ. ಅದು 'ಬಡವ ರಾಸ್ಕಲ್' ಗೆಲ್ಲಿಸಿದಾಗ' ಎನ್ನುತ್ತಾರೆ ಧನಂಜಯ.

'ಕೋಟಿ'ಯಲ್ಲಿ ಧನಂಜಯಗೆ ಜೋಡಿಯಾಗಿ ಮೋಕ್ಷಾ ಕುಶಾಲ್ ನಟಿಸುತ್ತಿದ್ದಾರೆ. ಕೊಡಗಿನ ಮೋಕ್ಷಾ ಈ ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ. 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದಲ್ಲಿ ಮಿಂಚಿದ್ದ ರಮೇಶ್ ಇಂದಿರಾ ಈ ಸಿನಿಮಾದಲ್ಲಿ ಖಳನಟನಾಗಿ ಕಾಣಿಸಿಕೊಂಡಿದ್ದಾರೆ. 'ಕೋಟಿ' ಸಿನಿಮಾ ಡ್ರಾಮಾ ಥ್ರಿಲ್ಲರ್ ಎಳೆಯನ್ನು ಹೊಂದಿದೆ. ಹಾಡುಗಳಿಗೆ ವಾಸುಕಿ ವೈಭವ್ ಸ್ವರ ಸಂಯೋಜನೆ ಮಾಡಿದ್ದಾರೆ. ಮೂರು ಹಾಡುಗಳಿಗೆ ಯೋಗರಾಜ್ ಭಟ್ ಸಾಹಿತ್ಯವಿದ್ದು, ಒಂದು ಹಾಡನ್ನು ವಾಸುಕಿ ಬರೆದಿದ್ದಾರೆ. ನೊಬಿನ್ ಪೌಲ್ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ರಂಗಾಯಣ ರಘು, ತಾರಾ, ಪೃಥ್ವಿ ಶಾಮನೂರು, ಸರದಾರ ಸತ್ಯಾ ಮತ್ತು ತನುಜಾ ವೆಂಕಟೇಶ್ ತಾರಾಬಳಗದಲ್ಲಿದ್ದಾರೆ. ❖

'ರಿಪ್ಪನ್ ಸ್ವಾಮಿ'ಯಾದ ವಿಜಯ ರಾಘವೇಂದ್ರ

'ಮಾಲ್ಗುಡಿ ಡೇಸ್', 'ರಾಘು', 'ಕೇಸ್ ಆಫ್ ಕೊಂಡಾಣ' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ಭಿನ್ನವಾದ ಪಾತ್ರಗಳನ್ನು ನಿಭಾಯಿಸಿರುವ ನಟ ವಿಜಯ ರಾಘವೇಂದ್ರ ಇದೀಗ 'ರಿಪ್ಪನ್ ಸ್ವಾಮಿ'ಯಾಗಿ ತೆರೆಗೆ ಬರಲು ಸಜ್ಜಾಗಿದ್ದಾರೆ.

ಪಂಚಾನನ ಫಿಲಂಸ್ ನಿರ್ಮಾಣದ ಈ ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಈ ಹಿಂದೆ ವಿಜಯ ರಾಘವೇಂದ್ರ ನಟಿಸಿದ್ದ 'ಮಾಲ್ಗುಡಿ ಡೇಸ್' ಸಿನಿಮಾ ಮಾಡಿದ್ದ ಕಿಶೋರ್ ಮೂಡುಬಿದ್ರೆ ಅವರೇ 'ರಿಪ್ಪನ್ ಸ್ವಾಮಿ'ಗೂ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ತಾರಾಗಣದಲ್ಲಿ ಅಶ್ವಿನಿ ಚಂದ್ರಶೇಖರ್, ಪ್ರಕಾಶ್ ತುಮ್ಮಿನಾಡು, ವಜ್ರದೀರ್ ಜೈನ್, ಯಮುನಾ ಶ್ರೀನಿಧಿ, ಮೋಹನ್ ಶೇಣಿ, ಕೃಷ್ಣಮೂರ್ತಿ ಕವತ್ತಾರ್ ಮುಂತಾದವರು ಇದ್ದಾರೆ. ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಕೊಪ್ಪ, ಕಳಸ, ಬಾಳೆಹೊನ್ನೂರು ಸುತ್ತಮುತ್ತ ಶೂಟಿಂಗ್ ನಡೆಸಲಾಗಿದೆ.

'ಚಿತ್ರದ ಶೀರ್ಷಿಕೆ ಒಂದು ಪಾತ್ರದ ಹೆಸರು. ಸಣ್ಣಕೊಪ್ಪ ಎಂಬ ಕಾಲ್ಪನಿಕ ಊರಿನಲ್ಲಿ ನಡೆಯುವ ಕಥೆ ಇದಾಗಿದೆ. ಮಲೆನಾಡು ಭಾಗದಲ್ಲಿರುವ ಈ ಊರಿನಲ್ಲಿ ಇರುವ ಎಸ್ಟೇಟ್‌ನಲ್ಲಿ ಕಥೆ ನಡೆಯುತ್ತದೆ. ಆ ಊರಿನಲ್ಲಿ ನಡೆಯುವ ನಿಗೂಢ ಘಟನೆಗಳ ಸುತ್ತ ಚಿತ್ರಕಥೆ ಇದೆ. ಇದೊಂದು ಥ್ರಿಲ್ಲರ್ ಮಿಸ್ಟರಿ ಸಿನಿಮಾ. ಹಾಸ್ಯದ ಲೇಪನವೂ ಇದೆ. ಇದು ವಿಜಯ ರಾಘವೇಂದ್ರ ಅವರಿಗಾಗಿಯೇ ನಾನು ಬರೆದ ಕತೆ. ಅವರನ್ನು ಬೇರೆ ಶೇಡ್‌ನಲ್ಲಿ ತೋರಿಸುವ ಕೆಲಸ ಇದರಲ್ಲಾಗಿದೆ. ಇಲ್ಲಿಯವರೆಗೂ ಈ ಶೇಡ್‌ನಲ್ಲಿ ಅವರನ್ನು ಪ್ರೇಕ್ಷಕರು ನೋಡಿಲ್ಲ. ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿದೆ. ಜೂನ್ ಅಥವಾ ಜುಲೈನಲ್ಲಿ ಸಿನಿಮಾ ತೆರೆಕಾಣಲಿದೆ' ಎನ್ನುತ್ತಾರೆ ಕಿಶೋರ್. ❖



ವಿಜಯ ರಾಘವೇಂದ್ರ


ತೆರೆಯಲ್ಲಿ ಹೊಸಬರ ಆಟ

ಬೇಸಿಗೆ ರಜೆ, ಐಪಿಎಲ್, ಚುನಾವಣೆ ಹಿನ್ನೆಲೆಯಲ್ಲಿ ಚಂದನವನದ ತೆರೆಗಳಲ್ಲಿ ಸ್ಟಾರ್ ನಟರ ಸಿನಿಮಾಗಳ ಸಂಖ್ಯೆ ಇಳಿಕೆಯಾಗಿದೆ. ಈ ಅವಕಾಶ ಬಳಸಿಕೊಂಡಿರುವ ಹೊಸಬರು ತಮ್ಮ ಸಿನಿಮಾಗಳನ್ನು ತೆರೆಗೆ ತರುತ್ತಿದ್ದಾರೆ. ಇಂದು(ಏ.19) ಬಹುತೇಕ ಹೊಸಬರ ಸಿನಿಮಾಗಳೇ ತೆರೆಕಾಣುತ್ತಿದೆ.

ಚಿರತೆ ಬಂತು ಚಿರತೆ: ಜೆ.ಆರ್.ಕೆ. ವಿಷನ್ಸ್ ಸಂಸ್ಥೆಯ ಜಗದೀಶ್ ಮಲ್ನಾಡ್ ನಿರ್ಮಾಣದ ಮತ್ತು ಸಿ.ಆರ್.ಕೃಷ್ಣಮೂರ್ತಿ (ಬೆನಕ ಕಿಟ್ಟಿ) ನಿರ್ದೇಶನದ ಚಿತ್ರವಿದು. ಈಗಾಗಲೇ ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಸಿನಿಮಾ ಪ್ರದರ್ಶನ ಕಂಡು ಪ್ರಶಸ್ತಿ ಪಡೆದಿದೆ. ಮಾನವ ಪ್ರಾಣಿ ಸಂಘರ್ಷ, ಸಹಬಾಳ್ವೆ, ವನ್ಯಜೀವಿ ಸಂರಕ್ಷಣೆ, ಪರಸ್ಪರಾವಲಂಬನೆ ಮುಂತಾದ ವಿಷಯಗಳು ಸಿನಿಮಾದಲ್ಲಿದೆ.

ಸಾಮ್ರಾಟ್ ಮಾಂಧಾತ: ಹೇಮಂತ್ ಪ್ರೊಡಕ್ಷನ್ಸ್ ಮೂಲಕ ಹೇಮಂತ್ ಕುಮಾರ್ ನಿರ್ಮಾಣ ಹಾಗೂ ನಿರ್ದೇಶನ ಮಾಡಿರುವ ಸಿನಿಮಾ ಇದು. ಯುವನಾಶ್ವ ಮಹಾರಾಜನ ಮಗನಾದ ಮಾಂಧಾತನ ಕಥೆಯನ್ನು ಚಿತ್ರದ ಮೂಲಕ ಹೇಮಂತ್ ಹೇಳಿದ್ದಾರೆ. ಈ ಚಿತ್ರದಲ್ಲಿ ಅಭಿನಯಿಸಿರುವ ಎಲ್ಲರೂ ರಂಗಭೂಮಿ ಕಲಾವಿದರಾಗಿದ್ದು, 'ಮಾಂಧಾತ'ನಾಗಿ ಬಸವರಾಜು ನಟಿಸಿದ್ದಾರೆ. ಸುಂದರಬಾಬು, ಭಾರತಿ, ನಂಜುಂಡಪ್ಪ, ನರಸಿಂಹಮೂರ್ತಿ, ಮಂಜುನಾಥ ಚಿತ್ರದ ತಾರಾಬಳಗದಲ್ಲಿದ್ದಾರೆ.

ಪುಕ್ಸಟ್ಟೆ ಪೈಸ: 'ಇಂಚರ ಪಿಕ್ಚರ್ಸ್' ಬ್ಯಾನರಿನಲ್ಲಿ ಮಧುಸೂಧನ ಎ. ಎಸ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಚಿತ್ರಕ್ಕೆ ಅವರೇ ಆ್ಯಕ್ಷನ್ ಕಟ್ ಹೇಳಿದ್ದು, ಭರತ್ ಶೆಟ್ಟಿ, ಅಕ್ಷತಾ ಕುಕಿ ತಾರಾಬಳಗದಲ್ಲಿದ್ದಾರೆ. ಇದೊಂದು ಕಾಮಿಡಿ, ಥ್ರಿಲ್ಲರ್ ಶೈಲಿಯ ಸಿನಿಮಾವಾಗಿದ್ದು, ಪುಕ್ಸಟ್ಟೆ ಹಣದ ಮೇಲಿನ ಆಸೆಯಿಂದ ಅದರ ಹಿಂದೆ ಬಿದ್ದವರ ಒದ್ದಾಟ, ಪರದಾಟ ಚಿತ್ರದ ಕಥಾಹಂದರ ಎಂದಿದೆ ಚಿತ್ರತಂಡ.



ರಚನಾ, ಗೌತಮ್

ನಾಲ್ಕನೇ ಆಯಾಮ: 'ಪ್ರೇಮಗೀಮ ಜಾನೆದೋ' ಚಿತ್ರದ ಮೂಲಕ ನಟನಾಗಿ ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಗೌತಮ್ ನಿರ್ದೇಶನದ ಸಿನಿಮಾ ಇದಾಗಿದೆ. ಅವರೇ ನಾಯಕನಾಗಿ ನಟಿಸಿದ್ದಾರೆ. 'ಲವ್ 360' ಖ್ಯಾತಿಯ ರಚನಾ ಇಂದರ್ ಚಿತ್ರದ ನಾಯಕಿ. ನಟ ಮಾಸ್ಟರ್ ಆನಂದ್ ಮಗಳು ಅಂಜನಿ ವಂಶಿಕಾ ಕಶ್ಯಪ್, ಅಮಿತ್ ಗೌಡ, ಯಶಸ್ವಿನಿ ಎಂ., ವಿನ್ಸೆಂಟ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಹಾರರ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾಗೆ ಅರ್ಜುನ್ ಜನ್ಯ ಸಂಗೀತವಿದೆ. ಅರುಣ್ ಛಾಯಾಚಿತ್ರಗ್ರಹಣ, ಉಗ್ರಂ ಶ್ರೀಕಾಂತ್ ಸಂಕಲನ ಚಿತ್ರಕ್ಕಿದೆ.




ಆಶಿಕಾ ರಂಗನಾಥ್

ಇಂದು ತೆರೆಗೆ

ಪುನೀತ್ ರಾಜ್‌ಕುಮಾರ್ ಕೇಳಿದ್ದ ಕೊನೆಯ ಕಥೆ '02'

ಪಿಆರ್‌ಕೆ ಪ್ರೊಡಕ್ಷನ್ಸ್ ನಿರ್ಮಾಣದ, ಆಶಿಕಾ ರಂಗನಾಥ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಸಿನಿಮಾ ಇದಾಗಿದೆ. ರಾಘವ್ ನಾಯಕ್ ಹಾಗೂ ಪ್ರಶಾಂತ್ ರಾಜ್ ರಚಿಸಿ, ನಿರ್ದೇಶಿಸಿರುವ ಈ ಸಿನಿಮಾ ಮೆಡಿಕಲ್ ಥ್ರಿಲ್ಲರ್ ಜಾನರ್‌ನಲ್ಲಿದೆ. ಪಿಆರ್‌ಕೆ ಬ್ಯಾನರ್‌ನಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ನಿರ್ಮಾಣದ ಹತ್ತನೇ ಚಿತ್ರ ಇದಾಗಿದೆ. ಪುನೀತ್ ರಾಜ್‌ಕುಮಾರ್ ಅವರು ಕೇಳಿದ್ದ ಕೊನೆಯ ಸಿನಿಮಾ ಕಥೆ ಇದಾಗಿತ್ತು. 'ಹೃದಯ ಸ್ತಂಭನವಾಗಿ ಸಾವಿನಂಚಿಗೆ ತಲುಪಿದ ವ್ಯಕ್ತಿಯನ್ನು ಬದುಕಿಸಲು '02' ಎಂಬ ಡ್ರಗ್ ಒಂದನ್ನು ಚಿತ್ರದ ನಾಯಕಿ ಶ್ರದ್ಧಾ(ಆಶಿಕಾ ರಂಗನಾಥ್) ಮಾಡುತ್ತಾಳೆ. ಆ ಔಷಧದ ಸಂಶೋಧನೆ ನಡೆಸುವಾಗ ಆಕೆ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಾಳೆ. ಇದು ಕೇವಲ ಥ್ರಿಲ್ಲರ್ ಕಥೆಯಲ್ಲ, ಪ್ರೀತಿಯ ಎಳೆಯೂ ಸಿನಿಮಾದಲ್ಲಿದೆ' ಎಂದಿದೆ ಚಿತ್ರತಂಡ.

'ಉಸಿರೇ ಉಸಿರೇ..' ಎಂದ ರಾಜೀವ್



ರಾಜೀವ್ ಶ್ರೀಜಿತ ಘೋಷ್

ಬಿಗ್‌ಬಾಸ್ ಖ್ಯಾತಿಯ ರಾಜೀವ್ ಹನು ನಾಯಕರಾಗಿ ನಟಿಸಿರುವ, ಕಿಚ್ಚ ಸುದೀಪ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ಉಸಿರೇ ಉಸಿರೇ' ಚಿತ್ರ ಮೇ 3ರಂದು ಬಿಡುಗಡೆಯಾಗಲಿದೆ.

ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಈಗಾಗಲೇ ಬಿಡುಗಡೆಯಾಗಿದ್ದು, ಸಿನಿಮಾದಲ್ಲಿ ರಾಜೀವ್‌ಗೆ ಶ್ರೀಜಿತ ಘೋಶ್ ಜೋಡಿಯಾಗಿದ್ದಾರೆ. ಎನ್ ಗೊಂಬೆ ಲಾಂಛನದಲ್ಲಿ ಪ್ರದೀಪ್ ಯಾದವ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದು, ಸಿ.ಎಂ.ವಿಜಯ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಡೈನಾಮಿಕ್ ಸ್ಟಾರ್ ದೇವರಾಜ್, ತಾರಾ, ಸುಚೇಂದ್ರ ಪ್ರಸಾದ್, ಬ್ರಹ್ಮಾನಂದಂ, ಅಲಿ, ಸಾಧುಕೋಕಿಲ, ಮಂಜು ಪಾವಗಡ ಚಿತ್ರದ ತಾರಾಬಳಗದಲ್ಲಿದ್ದಾರೆ.

ಇತ್ತೀಚೆಗೆ ಸಿನಿಮಾ ಬಿಡುಗಡೆ ಕುರಿತು ಚಿತ್ರತಂಡ ಸುದ್ದಿಗೋಷ್ಠಿ ನಡೆಸಿತು. 'ಈ ಚಿತ್ರಕ್ಕಾಗಿ ಐದು ವರ್ಷ ಶ್ರಮಪಟ್ಟಿದ್ದೇನೆ. ಈ ಅವಧಿಯಲ್ಲಿ ಬೇರೆ ಚಿತ್ರಗಳನ್ನು ಒಪ್ಪಿಕೊಂಡಿಲ್ಲ. ಕಿಚ್ಚ ಸುದೀಪ್ ಈ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳುವುದರ ಮೂಲಕ ನಮಗೆ ಪ್ರೋತ್ಸಾಹ ನೀಡಿದ್ದಾರೆ. ಇದೊಂದು ನೈಜ ಘಟನೆ ಆಧಾರಿತ ಚಿತ್ರವಾಗಿದೆ' ಎನ್ನುತ್ತಾರೆ ರಾಜೀವ್.

'₹2 ಕೋಟಿಯಲ್ಲಿ ಸಿನಿಮಾ ಮಾಡುತ್ತೇನೆ ಎಂದು ನಿರ್ದೇಶಕ ವಿಜಯ್ ಹೇಳಿದರು. ಸಿನಿಮಾಗೆ ₹6 ಕೋಟಿ ಸುರಿದಿದ್ದೇನೆ. ನಿರ್ದೇಶಕರಿಂದ ಸಾಲಗಾರನಾದೆ. ನಿರ್ದೇಶಕನಾದವನು ಸಿನಿಮಾ ಸಂಪೂರ್ಣಗೊಳಿಸಬೇಕು. ಆದರೆ ನಾನು ಹಾಗೂ ರಾಜೀವ್ ಸಿನಿಮಾ ಪೂರ್ಣಗೊಳಿಸಿದೆವು. ಸಿ.ಎಂ.ವಿಜಯ್ ಕೆಲವು ತಿಂಗಳುಗಳಿಂದ ನಮ್ಮ ಸಂಪರ್ಕದಲ್ಲಿಲ್ಲ. ಫೋನ್ ಕರೆ ಸ್ವೀಕರಿಸುತ್ತಿಲ್ಲ' ಎಂದು ನಿರ್ಮಾಪಕ ಪ್ರದೀಪ್ ಯಾದವ್ ಆರೋಪಿಸಿದರು. ❖

'ಉತ್ತರಕಾಂಡ'ದ ಲಚ್ಚಿ–ಮಲ್ಲಿಗೆ



'ಲಚ್ಚಿ'ಯಾಗಿ ಚೈತ್ರಾ ಜೆ.ಆಚಾರ್



ದಿಗಂತ್

ನಟ 'ಡಾಲಿ' ಧನಂಜಯ ನಟನೆಯ, ರೋಹಿತ್ ಪದಕಿ ಆ್ಯಕ್ಷನ್ ಕಟ್ ಹೇಳುತ್ತಿರುವ 'ಉತ್ತರಕಾಂಡ' ಸಿನಿಮಾದ ಮೊದಲ ಭಾಗದ ಚಿತ್ರೀಕರಣ ವಿಜಯಪುರದಲ್ಲಿ ಆರಂಭವಾಗಿದೆ. ಇದೇ ವೇಳೆ ಚಿತ್ರತಂಡ ತನ್ನ ತಾರಾಬಳಗವನ್ನು ಪರಿಚಯಿಸಲಾರಂಭಿಸಿದೆ.

'ಟೋಬಿ', 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಖ್ಯಾತಿಯ ನಟಿ ಚೈತ್ರಾ ಜೆ.ಆಚಾರ್ 'ಲಚ್ಚಿ'ಯಾಗಿ ಈ ಸಿನಿಮಾದಲ್ಲಿ ನಟಿಸಲಿದ್ದು, ಭಿನ್ನವಾದ ಪಾತ್ರದಲ್ಲಿ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. 'ತಲೆದಂಡ' ಸಿನಿಮಾ ಬಳಿಕ ಚೈತ್ರಾ ಸಿನಿಗ್ರಾಫ್ ಏರುಗತಿಯಲ್ಲಿದ್ದು, ಇತ್ತೀಚೆಗಷ್ಟೇ ಬಿಡುಗಡೆಗೊಂಡಿದ್ದ 'ಬ್ಲಿಂಕ್'ನಲ್ಲಿ 'ದೇವಕಿ ಅರಸ್' ಎಂಬ ಪಾತ್ರದಲ್ಲಿ ಮಿಂಚಿದ್ದರು. ಚೈತ್ರಾ ನಟನೆಯ 'ಹ್ಯಾಪಿ ಬರ್ತ್‌ಡೇ ಟು ಮಿ', ಪರಂವಃ ನಿರ್ಮಾಣದ 'ಸ್ಟ್ರಾಬೆರಿ' ರಿಲೀಸ್‌ಗೆ ಸಜ್ಜಾಗುತ್ತಿವೆ. ಇದೇ ಹೊಸ್ತಿಲಲ್ಲಿ ಅವರು 'ಉತ್ತರಕಾಂಡ' ಸೆಟ್‌ಗೂ ಹೆಜ್ಜೆ ಇಟ್ಟಿದ್ದಾರೆ.

ಯಾರು ಮಿರ್ಚಿ ಮಲ್ಲಿಗೆ?: 'ಉತ್ತರಕಾಂಡ' ಸಿನಿಮಾ ಘೋಷಣೆಯಾದ ಸಂದರ್ಭದಲ್ಲೇ ಚಂದನವನದ 'ದೂದ್‌ಪೇಡಾ' ದಿಗಂತ್ ಈ ಸಿನಿಮಾದಲ್ಲಿ ನಟಿಸಲಿದ್ದಾರೆ ಎನ್ನುವ ಸೂಚನೆ ಸಿಕ್ಕಿತ್ತು. ಇದೀಗ ಅವರ ಪಾತ್ರವನ್ನು ಚಿತ್ರತಂಡ ಪರಿಚಯಿಸಿದೆ. 'ಮಿರ್ಚಿ ಮಲ್ಲಿಗೆ' ಎಂಬ ಪಾತ್ರದಲ್ಲಿ ದಿಗಂತ್ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಅವರ ಫಸ್ಟ್‌ಲುಕ್ ಪೋಸ್ಟರ್ ರಿಲೀಸ್ ಆಗಿದ್ದು, ಅದಕ್ಕೆ 'ಲವ್ ಮತ್ತ್ ಗುಟ್ಕಾ ಜೀವಕ್ಕ್ ಅನಾಹುತ ಹೆಂಗ ಹಂಗಾ ದೂದ್ ಪೇಡಾ ದಿಗಂತ್ ಇಗ್ ಮಿರ್ಚಿ ಮಲ್ಲಿಗಿ ಉತ್ತರಕಾಂಡ ಪಿಚ್ಚರದಾಗ' ಎಂಬ ಟ್ಯಾಗ್‌ಲೈನ್ ನೀಡಲಾಗಿದೆ.

'ಉತ್ತರಕಾಂಡ' ಒಂದು ಆ್ಯಕ್ಷನ್ ಡ್ರಾಮಾ ಚಿತ್ರವಾಗಿದ್ದು, ಚಿತ್ರದಲ್ಲಿ ಶಿವರಾಜ್‌ಕುಮಾರ್ ಮತ್ತು ಧನಂಜಯ ಮುಖ್ಯ ಭೂಮಿಕೆಯಲ್ಲಿದ್ದಾರೆ. ಚಿತ್ರವನ್ನು ಕಾರ್ತಿಕ್ ಗೌಡ ಮತ್ತು ಯೋಗಿ ಜಿ ರಾಜ್ ಕೆ.ಆರ್.ಜಿ. ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸುತ್ತಿದ್ದಾರೆ. ❖

ಕೆಲವೆಡೆ ಆಲಿಕಲ್ಲು ಸಹಿತ ತಂಪೆರೆದ ಮಳೆ ● ರೈತರ ಮೊಗದಲ್ಲಿ ಮಂದಹಾಸ

ಹರ್ಷ ಮೂಡಿಸಿದ ವರ್ಷಧಾರೆ

ಪ್ರಜಾವಾಣಿ ವಾರ್ತೆ



ಧಾರವಾಡದ ಟೋಲ್‌ನಾಕಾ ಪ್ರದೇಶದಲ್ಲಿ ಗುರುವಾರ ಮಧ್ಯಾಹ್ನ ಮಳೆ ಬಿರುಸಾಗಿ ಸುರಿಯಿತು –ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ/ದಾವಣಗೆರೆ: ಧಾರವಾಡ, ಬೆಳಗಾವಿ, ಹಾವೇರಿ, ಗದಗ, ವಿಜಯನಗರ, ಬಳ್ಳಾರಿ ಜಿಲ್ಲೆ ಸೇರಿ ಹಲವೆಡೆ ಗುರುವಾರ ಉತ್ತಮ ಮಳೆಯಾಯಿತು. ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಯಿತು. ನಿರಂತರವಾಗಿ ಬಿರು ಬಿಸಿಲಿನಿಂದ ತತ್ತರಿಸಿದ್ದ ಜನರಿಗೆ ಮಳೆ ಹರ್ಷ ತಂದಿತು.

ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ ಕೆಲವೆಡೆಯಲ್ಲೂ ಗುರುವಾರ ಸಂಜೆ ಭಾರಿ ಬಿರುಗಾಳಿ ಸಮೇತ ಉತ್ತಮ ಮಳೆ ಸುರಿಯಿತು. ಭೀಕರ ಬರಗಾಲ ಮತ್ತು ಬಿಸಿಲ ಬೇಗೆಯಿಂದ ಬೇಸತ್ತಿದ್ದ ಜನರಿಗೆ ಇದರಿಂದ ಸಂತಸ ಉಂಟಾಗಿದೆ.

ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಭಾರಿ ಗಾಳಿ, ಗುಡುಗು ಸಹಿತ ಮಳೆಯಾಗಿದೆ. ಸಾಗರ ತಾಲ್ಲೂಕಿನ ಆನಂದಪುರ ಹಾಗೂ ಸುತ್ತಮುತ್ತ ಗ್ರಾಮಗಳಲ್ಲಿ 2 ಗಂಟೆಗೂ ಹೆಚ್ಚು ಕಾಲ ಮಳೆಯಾಯಿತು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಲ್ಲಲ್ಲಿ ಧಾರಾಕಾರ ಮಳೆಯಾಗಿದ್ದು, ಬಿಸಿಲಿನಿಂದ ಕಂಗೆಟ್ಟಿದ್ದ ಕಾಫಿನಾಡಿಗೆ ತಂಪೆರೆದಿದೆ. ಕೊಪ್ಪ, ನರಸಿಂಹರಾಜ ಪುರ, ಮೂಡಿಗೆರೆ ಸುತ್ತಮುತ್ತಲ ಗುಡುಗು-ಸಿಡಿಲು ಸಹಿತ ಮಳೆಯಾಗಿದ್ದರೆ, ಚಿಕ್ಕಮಗಳೂರಿನಲ್ಲಿ ಮಳೆಯ ಸಿಂಚನವಾಗಿದೆ.

ಹುಬ್ಬಳ್ಳಿಯಲ್ಲಿ ಧಾರಾಕಾರ ಮಳೆ ಯಾದರೆ, ಧಾರವಾಡದಲ್ಲಿ ಬಿರುಸಿನ ಮಳೆ ಜೊತೆ ಆಲಿಕಲ್ಲು ಮಳೆಯಾಯಿತು. ನವಲಗುಂದ ತಾಲ್ಲೂಕಿನ ವಿವಿಧೆಡೆ ಬಿರುಸಿನ ಮಳೆಯಾಗಿದ್ದು ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಪಟ್ಟಣದಲ್ಲಿ ಮಳೆ ಸುರಿಯುವಾಗ ಜನರು ಮೊಬೈಲ್‌ನಲ್ಲಿ ಚಿತ್ರ ಕ್ಲಿಕ್ಕಿಸಿ, ವಿಡಿಯೊ ಮಾಡಿ ಸಂಭ್ರಮಿಸಿದರು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ರಾಮದುರ್ಗ, ವಿಜಯಪುರ ನಗರ, ತಿಕೋಟಾ, ಉತ್ತರ ಕನ್ನಡದ ಮುಂಡಗೋಡ, ಹಳಿಯಾಳ, ಹೊನ್ನಾವರ, ಸಿದ್ದಾಪುರದಲ್ಲೂ ಮಳೆಯಾಯಿತು. ಹಾವೇರಿ ನಗರ ಸೇರಿ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ಹಾನಗಲ್ ಪಟ್ಟಣದಲ್ಲಿ ಬಿರುಗಾಳಿ ಸಹಿತ ಆಲಿಕಲ್ಲು ಸಹಿತ ಮಳೆಯಾಗಿದೆ.

ಸಾಗರ-ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಮೇಲೆ ಭಾರಿ ಮರವೊಂದು ಬಿರುಗಾಳಿಗೆ ಉರುಳಿಬಿದ್ದ ಪರಿಣಾಮ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಕಾರ್ಗಲ್, ಶಿಕಾರಿಪುರದಲ್ಲಿ ಗುಡುಗು ಸಹಿತ ಮಳೆಯಾಗಿದೆ. ಸಾಗರ, ತುಮರಿ, ಕುಂಸಿ, ಹೊಸನಗರ ಸೇರಿ ವಿವಿಧೆಡೆ ಮಳೆ ಸುರಿದಿದೆ. ಕೋಣಂದೂರು ಸಮೀಪ ದೇಮ್ಲಾಪುರದಲ್ಲಿ ಅಕೇಶಿಯಾ ಮರ ಬಿದ್ದು, ಸ್ಕೂಟಿಯಲ್ಲಿ ತೆರಳುತ್ತಿದ್ದ ಸಂಪಗಾರಿನ ನಿವಾಸಿ ಜಯಂತ್ ಭಟ್ (64) ಮೃತಪಟ್ಟಿದ್ದಾರೆ.

ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುಡುಗು, ಬಿರುಗಾಳಿ ಸಹಿತ ಸಾಧಾರಣ ಮಳೆ ಸುರಿದಿದ್ದರಿಂದ ರೈತರ ಮೊಗದಲ್ಲಿ ಹರ್ಷ ಮೂಡಿದೆ. ನ್ಯಾಮತಿ, ಮಾಯಕೊಂಡ, ಮಲೇಬೆನ್ನೂರು, ಜಗಳೂರಿನಲ್ಲಿ ಗುಡುಗು ಸಹಿತ ಸಾಧಾರಣ ಮಳೆ ಸುರಿಯಿತು. ಚಿತ್ರದುರ್ಗ ಜಿಲ್ಲೆಯ ಚಿಕ್ಕ-ಜಾಜೂರಿನಲ್ಲಿ ಬಿರುಸಿನ ಮಳೆಯಾಗಿದ್ದು, ರೈತರು ಖುಷಿಯಾಗಿದ್ದಾರೆ.

ಕೊಪ್ಪಳ ವರದಿ: ಬಿರುಬಿಸಿಲಿಗೆ ತತ್ತರಿಸಿ ಹೋಗಿದ್ದ ಇಲ್ಲಿನ ಜನರಿಗೆ ಗುರುವಾರ ಸುರಿದ ಮಳೆ ತಂಪೆರೆಯಿತು. ಕುಷ್ಟಗಿ ತಾಲ್ಲೂಕಿನ ಜೂಲಕಟ್ಟಿ ಗ್ರಾಮದ ಬಳಿ ಸಿಡಿಲು ಬಡಿದು ಕೊರಡಕೇರಾ ಗ್ರಾಮದ ಅಮೋಘಸಿದ್ದಯ್ಯ ಗುರುವಿನ (32) ಮೃತಪಟ್ಟಿದ್ದಾರೆ.

ಮುಖ್ಯಾಂಶಗಳು

- ಮೊಬೈಲ್‌ನಲ್ಲಿ ಮಳೆಯ ಚಿತ್ರ ಕ್ಲಿಕ್ಕಿಸಿ, ವಿಡಿಯೊ ಮಾಡಿ ಸಂಭ್ರಮಿಸಿದ ಜನರು
- ಕೋಣಂದೂರು ಸಮೀಪ ಮರ ಬಿದ್ದು ಬೈಕ್ ಸವಾರ ಸಾವು
- ಕುಷ್ಟಗಿ ತಾಲ್ಲೂಕಿನಲ್ಲಿ ಸಿಡಿಲು ಬಡಿದು 32 ವರ್ಷದ ವ್ಯಕ್ತಿ ಸಾವು

ಮೈಸೂರು: ಮೊದಲ ಮಳೆಯ ಸಂಭ್ರಮ

ಮೈಸೂರು: ಮೈಸೂರು ಭಾಗದ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗಿನಲ್ಲಿ ಗುರುವಾರ ವರ್ಷದ ಮೊದಲ ಮಳೆ ಸುರಿದು ಎಲ್ಲೆಡೆ ಹರ್ಷ ಮೂಡಿಸಿತು. ಮಂಡ್ಯದ ಹಲವೆಡೆ, ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಗುಡುಗು, ಬಿರುಗಾಳಿ ಸಹಿತ ಮಳೆಯಾಗಿದೆ.

ಮಂಡ್ಯ ಜಿಲ್ಲೆಯ ರೈತರಿಗೆ ಗುರುವಾರ ಸಂಜೆ ಅರ್ಧ ಗಂಟೆ ಸುರಿದ ಮಳೆ ಸಮಾಧಾನ ತಂದಿತು. ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಅರ್ಧಗಂಟೆ ಸುರಿದ ಮಳೆಯಿಂದ ಸಾರ್ವಜನಿಕರಲ್ಲಿ ಸಂಭ್ರಮ ಸೃಷ್ಟಿಸಿತು. ಮೊದಲ ಮಳೆಯಿಂದಾಗಿ ಕಾದ ನೆಲದ ಮಣ್ಣಿನಿಂದ ಬರುತ್ತಿದ್ದ ಘಮಲು ಹರ್ಷದ ಹೊನಲು ತಂದಿತು.

ನಗರ ಸೇರಿದಂತೆ ಶ್ರೀರಂಗಪಟ್ಟಣದಲ್ಲಿ ಧಾರಾಕಾರ ಮಳೆ ಸುರಿಯಿತು. ಮದ್ದೂರು, ನಾಗಮಂಗಲ, ಕೆ.ಆರ್.ಪೇಟೆಯಲ್ಲಿ ಸಾಧಾರಣ ಮಳೆಯಾಗಿದೆ. ಮಳೆಯ ನಡುವೆಯೇ ಕೆಲವೆಡೆ ಪ್ರಚಾರವೂ ನಡೆಯಿತು.

ಮೈಸೂರು ಹೊರವಲಯ, ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಬನ್ನೂರಿನಲ್ಲಿ, ಕೊಡಗು ಜಿಲ್ಲೆಯ ಕುಶಾಲನಗರ, ಮುಳ್ಳುಸೋಗೆ, ಕೂಡಿಗೆ, ಹೆಬ್ಬಾಲೆ, ಅಳುವಾರ ,ಸಿದ್ಧಲಿಂಗಪುರ, ಬಾಣವಾರ, ಅಲೂರು, ಸೋಮವಾರಪೇಟೆ ತಾಲ್ಲೂಕಿನ ಶನಿವಾರಸಂತೆ, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕೊಣನೂರು, ಚಾಮರಾಜನಗರ, ಗುಂಡ್ಲುಪೇಟೆಯಲ್ಲಿ ತುಂತುರು ಮಳೆಯಾಯಿತು.

ಮಳೆಯ ಜತೆಗೆ ಗಾಳಿ ವೇಗವಾಗಿ ಬೀಸಿದ್ದರಿಂದ ಚಾಮರಾಜನಗರ ಕೆಲವೆಡೆ ಬಾಳೆ, ಟೊಮೆಟೊ ಸೇರಿದಂತೆ ವಿವಿಧ ಬೆಳೆಗಳು ಹಾನಿಗೀಡಾಗಿವೆ. ಮಂಡ್ಯ ಜಿಲ್ಲೆಯ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ, ಸರ್ವೀಸ್ ರಸ್ತೆಯಲ್ಲಿ 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ನೆಲಕ್ಕುರುಳಿದವು.

3 ದಿನ ಎಲ್ಲ ಜಿಲ್ಲೆಗಳಲ್ಲೂ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಮೂರು ದಿನಗಳಲ್ಲಿ ರಾಜ್ಯದ ಎಲ್ಲ 31 ಜಿಲ್ಲೆಗಳಲ್ಲೂ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಮಾನ ಇಲಾಖೆ ತಿಳಿಸಿದೆ.

ಗುರುವಾರ ಕರಾವಳಿಯಲ್ಲಿ ಒಣಹವೆ ಮುಂದುವರಿದಿದ್ದರೆ, ಬೆಂಗಳೂರು ಗ್ರಾಮಾಂತರ, ಬೀದರ್ ಜಿಲ್ಲೆ ಸೇರಿ ಕೆಲವೆಡೆ ಅಲ್ಲಲ್ಲಿ ಮಳೆಯಾಗಿದೆ.

ಶುಕ್ರವಾರ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾ-ಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ವಿಜಯನಗರ, ತುಮಕೂರು ಜಿಲ್ಲೆಗಳ ಕೆಲವು ಭಾಗ ಗಳಲ್ಲಿ ಮಳೆ ಬೀಳುವ ಸಂಭವವಿದೆ. ಉಳಿದ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯಲಿದೆ.


ಶನಿವಾರದಂದು ಬೀದರ್, ಕಲಬುರಗಿ, ರಾಯಚೂರು, ವಿಜಯ ಪುರ, ಯಾದಗಿರಿ, ಬಳ್ಳಾರಿ ಜಿಲ್ಲೆಗಳಲ್ಲಿ, ಭಾನುವಾರ ಬಾಗಲಕೋಟೆ, ಕೊಪ್ಪಳ ಜಿಲ್ಲೆಗಳಲ್ಲಿ ಮಳೆ ಬೀಳುವ ಸಾಧ್ಯತೆ ಇದೆ ಎಂದು ಹವಮಾನ ಇಲಾಖೆ ತಿಳಿಸಿದೆ.

ಏ.22 ಮತ್ತು 23ರಂದು ರಾಜ್ಯದಾದ್ಯಂತ ಅಲ್ಲಲ್ಲಿ ಹಗುರ ಮಳೆ ಮುಂದುವರಿಯಲಿದೆ. 24ರಂದು ಒಣಹವೆ ಇರುವ ಸಾಧ್ಯತೆ ಇದೆ.

ತಾಪಮಾನ: ಏ.19ರವರೆಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಸಿ ಮತ್ತು ಆರ್ದ್ರತೆಯ ವಾತಾವರಣವಿರಲಿದೆ. ಮುಂದಿನ ಎರಡು ದಿನಗಳಲ್ಲಿ ಗರಿಷ್ಠ ಉಷ್ಣಾಂಶದಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ. ನಂತರದ ಮೂರು ದಿನಗಳವರೆಗೆ ಕ್ರಮೇಣ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಲಿದೆ. 'ಏ.19ರಂದು ಕರಾವಳಿ ಭಾಗದ ಒಂದೆರಡು ಪ್ರದೇಶ-ಗಳಲ್ಲಿ, 19ರಿಂದ 21ರ ವರೆಗೆ ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ರಭಸವಾಗಿ ಗಾಳಿ ಬೀಸಲಿದೆ' ಎಂದು ಮುನ್ಸೂಚನೆ ನೀಡಿದೆ.

ಆಳ್ವಾಸ್: ನಾಗರಿಕ ಸೇವಾ ಪರೀಕ್ಷೆ ತರಬೇತಿ ಆರಂಭ

ಪ್ರಜಾವಾಣಿ ವಾರ್ತೆ



ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ.ಮೋಹನ ಆಳ್ವ ಮಾತನಾಡಿದರು

ಮೂಡುಬಿದಿರೆ (ದಕ್ಷಿಣ ಕನ್ನಡ): ನಾಗರಿಕ ಸೇವೆಗಳ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಬಯಸುವವರಿ-ಗಾಗಿ ಬೆಂಗಳೂರಿನ ಸಾಧನಾ ತರಬೇತಿ ಕೇಂದ್ರದ ಸಹಯೋಗದಲ್ಲಿ ಇಲ್ಲಿನ ಆಳ್ವಾಸ್ ಕಾಲೇಜು ತರಬೇತಿ ಯೋಜನೆ ಆರಂಭಿಸಿದ್ದು, ಗುರುವಾರ ಅದಕ್ಕೆ ಚಾಲನೆ ನೀಡಲಾಯಿತು.

ವಿವಿಧ ಹಂತದಲ್ಲಿ ಅನುಭವಿಗಳು ತರಬೇತಿ ನೀಡಲಿದ್ದಾರೆ. ಪರೀಕ್ಷಾರ್ಥಿಗಳ ಅಧ್ಯಯನಕ್ಕಾಗಿ ಸಂಸ್ಥೆಯಲ್ಲಿ ಗ್ರಂಥಾಲಯ ಅಭಿವೃದ್ಧಿಪಡಿಸಲಾಗಿದೆ.

'ಗ್ರಾಮೀಣ ಭಾಗದ, ಆರ್ಥಿಕವಾಗಿ ಹಿಂದುಳಿದ, ಕೆಳಸ್ತರದ ವಿದ್ಯಾರ್ಥಿಗಳು ಉನ್ನತ ಆಡಳಿತಾತ್ಮಕ ಹುದ್ದೆಗಳಿಗೆ ತೆರಳಲು ಅನುಕೂಲ ಆಗುವ ಆಶಯದೊಂದಿಗೆ ಕಡಿಮೆ ಶುಲ್ಕದಲ್ಲಿ ತರಬೇತಿ ನೀಡಲಾಗುವುದು' ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

'ಪದವಿಪೂರ್ವ ವಿದ್ಯಾರ್ಥಿಗಳಿಗೆ 6 ತಿಂಗಳ ಫೌಂಡೇಷನ್ ಕೋರ್ಸ್, ಪದವಿ ವಿದ್ಯಾರ್ಥಿಗಳಿಗೆ 3 ವರ್ಷದ ಸಮಗ್ರ ಕೋಚಿಂಗ್ ಮತ್ತು ಪದವಿ ನಂತರದ ವಿದ್ಯಾರ್ಥಿಗಳಿಗೆ 9 ತಿಂಗಳ ದೀರ್ಘಕಾಲೀನ ಕೋಚಿಂಗ್ ವ್ಯವಸ್ಥೆ ಮಾಡಲಾಗಿದ್ದು, ಆಳ್ವಾಸ್ ಮಾತ್ರವಲ್ಲದೆ ಇತರ ಕಾಲೇಜುಗಳ ವಿದ್ಯಾರ್ಥಿಗಳು ಕೂಡ ತರಬೇತಿ ಪಡೆದುಕೊಳ್ಳಬಹುದಾಗಿದೆ. 150 ವಿದ್ಯಾರ್ಥಿಗಳು ಈಗಾಗಲೇ ಹೆಸರು ನೋಂದಾಯಿಸಿಕೊಂಡಿದ್ದಾರೆ' ಎಂದು ಅವರು ವಿವರಿಸಿದರು.

'ಸಾಧನಾ ತರಬೇತಿ ಸಂಸ್ಥೆ 2011ರಲ್ಲಿ ಆರಂಭಗೊಂಡಿದ್ದು ರಾಜ್ಯದ ವಿವಿಧ ಕಡೆಗಳಲ್ಲಿ ತರಬೇತಿ ನೀಡುತ್ತಿದೆ. ಕೇಂದ್ರದ ನೀತಿ ಆಯೋಗದ ಸಹಕಾರದಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಯಾದಗಿರಿಯಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿದೆ. ರಾಜ್ಯದ ಅನೇಕ ಕಡೆಗಳ ಕೊಳೆಗೇರಿ ಪ್ರದೇಶಗಳಲ್ಲಿ ಮತ್ತು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರಿಗಾಗಿ ತರಬೇತಿ ನೀಡಲಾಗಿದೆ' ಎಂದು ಸಂಸ್ಥೆಯ ಸ್ಥಾಪಕಿ ಜ್ಯೋತಿ ತಿಳಿಸಿದರು.

ಆಳ್ವಾಸ್ ಕಾಲೇಜಿನ ಪ್ರಾಂಶುಪಾಲ ಕುರಿಯನ್, ಸಾಧನಾ ಸೆಂಟರ್‌ನ ತರಬೇತುದಾರ ನಂಜುಂಡ ಗೌಡ, ಹರಿಪ್ರಸಾದ್, ಆಡಳಿತಾಧಿಕಾರಿ ಮಹಾದೇವರಾಜು ಎಲ್., ಆಳ್ವಾಸ್ ಕಾಲೇಜಿನ ಆಡಳಿತಧಿಕಾರಿ ಬಾಲಕೃಷ್ಣ ಶೆಟ್ಟಿ ಭಾಗವಹಿಸಿದ್ದರು. ಕನ್ನಡ ವಿಭಾಗದ ಪ್ರಾಧ್ಯಾಪಕ ಯೋಗೀಶ್ ಕೈರೋಡಿ ನಿರೂಪಿಸಿದರು.

ಕೆ.ನಲ್ಲತಂಬಿ ಅನುವಾದಿತ ಕೃತಿ ಬಿಡುಗಡೆ ಮಾಡಿದ ಲೇಖಕ ಎಸ್.ಎಲ್. ಭೈರಪ್ಪ

'ವಂಶವೃಕ್ಷ' ಕಾದಂಬರಿ ತಮಿಳಲ್ಲೂ ಲಭ್ಯ

ಪ್ರಜಾವಾಣಿ ವಾರ್ತೆ



'ವಂಶವೃಕ್ಷ' ಕಾದಂಬರಿಯ ತಮಿಳು ಅವತರಣಿಕೆ 'ವಂಶವೃಕ್ಷಂ' ಅನ್ನು ಮೂಲ ಲೇಖಕ ಎಸ್‌ಎಲ್‌ಭೈರಪ್ಪ ಗುರುವಾರ ಬಿಡುಗಡೆ ಮೈಸೂರಿನಲ್ಲಿ ಮಾಡಿದರು. ಪ್ರಕಾಶಕ ರಾಮ್‌ಜಿ ನರಸಿಂಹನ್, ಅನುವಾದಕ ಕೆ.ನಲ್ಲತಂಬಿ, ತಮಿಳು ಲೇಖಕ ಪಾವಣ್ಣನ್, ಪ್ರಕಾಶಕಿ ಆರ್‌ಗಾಯತ್ರಿ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಮೈಸೂರು: ನಗರದ ಹೋಟೆಲ್‌ನಲ್ಲಿ ತಮ್ಮ 'ವಂಶವೃಕ್ಷ' ಕಾದಂಬರಿಯ ತಮಿಳು ಅವತರಣಿಕೆ 'ವಂಶವೃಕ್ಷಂ' ಅನ್ನು ಲೇಖಕ ಎಸ್.ಎಲ್.ಭೈರಪ್ಪ ಗುರುವಾರ ಬಿಡುಗಡೆ ಮಾಡಿ, ಅನುವಾದಕ ಕೆ.ನಲ್ಲತಂಬಿ ಅವರನ್ನು ಅಭಿನಂದಿಸಿದರು.

ನಂತರ ಮಾತನಾಡಿ, 'ದೇಶದ ಎಲ್ಲ ಭಾಷೆಗಳಿಗೂ ಬಹುತೇಕ ಕಾದಂಬರಿಗಳು ಅನುವಾದಗೊಂಡಿ-ದ್ದರೂ, ಯಾಕೋ ತಮಿಳಿಗೆ ಹೆಚ್ಚಾಗಿ ಅನುವಾದ ಆಗಿರಲಿಲ್ಲ. ಈಗ ಅಲ್ಲಿಯೂ ಪುಸ್ತಕ ಬಂದಿರುವುದು ಸಂತಸ ತಂದಿದೆ' ಎಂದರು.

'ಯಾವುದೇ ಭಾಷೆಗೂ ನನ್ನ ಕೃತಿಯನ್ನು ಅನುವಾದಿಸಲು ಸುಮ್ಮನೆ ತಕ್ಷಣಕ್ಕೆ ಅನುಮತಿ ಕೊಡುವುದಿಲ್ಲ. ಆಲೋಚನೆ ಮಾಡುತ್ತೇನೆ. ಸ್ನೇಹಿತ ಡಾ.ಚಂದ್ರಶೇಖರ್ 'ವಂಶವೃಕ್ಷ' ಕಾದಂಬರಿಯನ್ನು ತಮಿಳಿಗೆ ಅನುವಾದ ಮಾಡಲು ನಲ್ಲತಂಬಿ ಬಂದಿದ್ದಾರೆ. ಬಹಳ ಚೆನ್ನಾಗಿ ಮಾಡುತ್ತಾರೆ. ಒಪ್ಪಿಗೆ ಕೊಡಿಯೆಂದು ಕೇಳಿದ್ದರು. ಒಪ್ಪಿದೆ' ಎಂದು ಹೇಳಿದರು.

'ಹಿಂದೂ ಕಾನೂನುಗಳನ್ನು ಅರ್ಥ ಮಾಡಿಕೊಳ್ಳಲು, ವಾದ ಹಾಗೂ ತೀರ್ಪು ನೀಡಲು ಮುಲ್ಲಾ ಆ್ಯಂಡ್ ಮುಲ್ಲಾ ಅವರ ಕೃತಿಯನ್ನೇ ಆಗೆಲ್ಲ ವಕೀಲರು ಹಾಗೂ ನ್ಯಾಯಾಧೀಶರು ಅಧ್ಯಯನ ನಡೆಸಬೇಕಿತ್ತು. ಆ ಕೃತಿಯ ಅಧ್ಯಯನ ಸಾಕಾಗುತ್ತಿರಲಿಲ್ಲ. ವಂಶವೃಕ್ಷ ಕಾದಂಬರಿ ಓದಿದರೆ ಹಿಂದೂ ಕಾನೂನುಗಳು ಸರಿಯಾಗಿ ಅರ್ಥವಾ-ಗುತ್ತವೆಂದು ಮುಖ್ಯ ನ್ಯಾಯಮೂರ್ತಿ ಗೋವಿಂದ ಭಟ್ ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು' ಎಂದು ಸ್ಮರಿಸಿದರು.


'ಹಿಂದೂ ಕಾನೂನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಪಿ.ವಿ.ಕಾಣೆ ಅವರ 'ಹಿಸ್ಟರಿ ಆಫ್ ಧರ್ಮಶಾಸ್ತ್ರ' ಓದಬೇಕು. 10 ಸಂಪುಟಗಳನ್ನು ಬರೆಯಲು ಜೀವನದ 40 ವರ್ಷ ಮೀಸಲಿಟ್ಟಿದ್ದರು' ಎಂದು ಹೇಳಿದರು.

'ಭಾರತೀಯ ತತ್ವಶಾಸ್ತ್ರವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಬರೆದವರು ಜರ್ಮನ್ನರು. ಸಾಮ್ರಾಜ್ಯ ರಕ್ಷಣೆಗಾಗಿ ಬ್ರಿಟಿಷರು ಭಾರತೀಯ ಇತಿಹಾಸ, ತತ್ವಶಾಸ್ತ್ರ ಎಲ್ಲವನ್ನು ತಮಗೆ ಬೇಕಾದಂತೆ ಬರೆದು ಕೊಂಡಿದ್ದಾರೆ. ಆರ್ಯರು ಹೊರಗಿನವರು ಎಂಬ ವಾದವನ್ನೇ ಮುಂದಿಡುತ್ತಾರೆ. ಬ್ರಿಟಿಷರು ಬರೆದ ಇತಿಹಾಸವನ್ನೇ ನಾವು ಓದುವಂತಾಗಿದೆ. ಅದು ಬದಲಾಗಬೇಕು' ಎಂದರು.

ಅನುವಾದಕ ಕೆ.ನಲ್ಲತಂಬಿ, 'ಕೃತಿ ಬಿಡುಗಡೆಯಾದ 64 ವರ್ಷದ ನಂತರ 'ವಂಶವೃಕ್ಷ' ತಮಿಳಿನಲ್ಲಿ ಅನುವಾದ ವಾಗಿದೆ. ನನ್ನ 51ನೇ ಅನುವಾದಿತ ಕೃತಿ ಬಿಡುಗಡೆಯು ನಾನು ಓದಿದ ಮೈಸೂರಿನಲ್ಲಿಯೇ ನಡೆದಿರುವುದು ಸಂತಸ ತಂದಿದೆ' ಎಂದರು.

ಪುಸ್ತಕ ವಿವರ

ಕೃತಿ: ವಂಶವೃಕ್ಷಂ (ಕಾದಂಬರಿ)
ಮೂಲ: ಎಸ್.ಎಲ್.ಭೈರಪ್ಪ
ತಮಿಳಿಗೆ: ಕೆ.ನಲ್ಲತಂಬಿ
ಪ್ರ: ಝೀರೊ ಡಿಗ್ರಿ ಪಬ್ಲಿಷಿಂಗ್
ಪುಟ: 492,
ಬೆಲೆ: ₹ 600 (ಪೇಪರ್ ಬ್ಯಾಕ್)
₹ 700 (ಹಾರ್ಡ್‌ಬೌಂಡ್)



ಸುಭಾಷಿತ

ಜೀವನ ಎಂಬುದು ಸೈಕಲ್ ಸವಾರಿ ಇದ್ದಂತೆ. ಹದ ತಪ್ಪಬಾರದೆಂದರೆ, ನೀವು ಚಲನಶೀಲರಾಗಿಯೇ ಇರಬೇಕಾಗುತ್ತದೆ.

–ಆಲ್ಬರ್ಟ್ ಐನ್‌ಸ್ಟೀನ್

ಮಣಿಪುರದಲ್ಲಿ ಸೂಕ್ಷ್ಮ ಪರಿಸ್ಥಿತಿ ಟೊಳ್ಳಾಗಿ ಕಾಣುತ್ತಿರುವ ಪ್ರಧಾನಿ ಮಾತು

ಮಣಿಪುರದ ಪರಿಸ್ಥಿತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ, ಅಲ್ಲಿನ ಪರಿಸ್ಥಿತಿಯ ವಿಚಾರವಾಗಿ ತಮ್ಮ ಮಾತು ಅಥವಾ ಮೌನದ ಮೂಲಕ ಸರಿಯಾಗಿ ಸ್ಪಂದಿಸಿಯೂ ಇಲ್ಲ. ಕಳೆದ ಒಂದು ವರ್ಷದ ಅವಧಿಯಲ್ಲಿ, ರಾಜ್ಯದಲ್ಲಿ ದಳ್ಳುರಿ ತೀವ್ರವಾಗಿದ್ದಾಗ, ಮೋದಿ ಅವರು ಅದರ ವಿಚಾರದಲ್ಲಿ ಮೌನವಾಗಿ ಇದ್ದರು. ಎರಡು ಸಂದರ್ಭಗಳಲ್ಲಿ ಅದರ ಬಗ್ಗೆ ಮಾತನಾಡಿದರು, ಆ ಮಾತುಗಳು ಸರಿಯಾದ ಬಗೆಯಲ್ಲಿ ಇರಲಿಲ್ಲ. ಮಣಿಪುರದಲ್ಲಿ ಹಿಂಸಾಚಾರ ಶುರುವಾದ ತಿಂಗಳುಗಳ ನಂತರ, ಮೋದಿ ಅವರು ಸಂಸತ್ತಿನಲ್ಲಿ ಆ ಬಗ್ಗೆ ಮಾತನಾಡಬೇಕಾಯಿತು. ಅಂದರೆ, ವಿರೋಧ ಪಕ್ಷಗಳು ಮಂಡಿಸಿದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಉತ್ತರವಾಗಿ ಅವರು ಮಾತನಾಡಬೇಕಾಯಿತು. ಆಗ ಅವರು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರವು ಶಾಂತಿಯ ಮರುಸ್ಥಾಪನೆಗೆ ಕೆಲಸ ಮಾಡುತ್ತಿವೆ ಎಂದು ಹೇಳಿದ್ದರು. ಮಣಿಪುರದಲ್ಲಿ ಶಾಂತಿ ಮರುಸ್ಥಾಪನೆಯ ಕೆಲಸವು ಬಹುಬೇಗ ಆಗುತ್ತದೆ ಎಂದು ಅವರು ಭರವಸೆ ನೀಡಿದ್ದರು. ಆದರೆ ಅದು ಇನ್ನೂ ಆಗಿಲ್ಲ. ಹೀಗಿದ್ದರೂ, ಕೇಂದ್ರ ಸರ್ಕಾರವು ಸಕಾಲದಲ್ಲಿ ಮಧ್ಯಪ್ರವೇಶಿಸಿದ್ದರಿಂದಾಗಿ ಹಾಗೂ ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳ ಕಾರಣದಿಂದಾಗಿ ರಾಜ್ಯದ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆ ಆಗಿದೆ ಎಂದು ಮೋದಿ ಅವರು ಈಚೆಗೆ ಹೇಳಿದ್ದಾರೆ. ಈ ಎರಡೂ ಸಂದರ್ಭಗಳಲ್ಲಿ ಮೋದಿ ಅವರು ಆಡಿದ ಮಾತುಗಳು ಟೊಳ್ಳಾಗಿದ್ದಂತೆ ಕಾಣುತ್ತವೆ.



ಬಿರೇನ್ ಸಿಂಗ್ ನೇತೃತ್ವದ ರಾಜ್ಯ ಸರ್ಕಾರವೇ ಅಲ್ಲಿನ ಸಮಸ್ಯೆಯ ಒಂದು ಭಾಗವಾಗಿರುವಂತಿದೆ. ಆ ಸರ್ಕಾರವು ಮೈತೇಯಿ ಸಮುದಾಯದ ಪಕ್ಷಪಾತಿಯಾಗಿ ನಡೆದುಕೊಳ್ಳುತ್ತಿರುವಂತಿದೆ. ಸರ್ಕಾರದ ನಿರ್ಧಾರಗಳು ಹಾಗೂ ಕೈಗೊಂಡ ಕ್ರಮಗಳು ಪರಿಸ್ಥಿತಿಯು ಹದಗೆಡುವಂತೆ ಮಾಡುತ್ತಿವೆ. ರಾಜ್ಯವು ಈಗ ಮೈತೇಯಿ ಹಾಗೂ ಕುಕಿ ಸಮುದಾಯಗಳ ನಡುವೆ ವಿಭಜನೆಗೊಂಡಿದೆ. ಕುಕಿ ಸಮುದಾಯವು ಸರ್ಕಾರದ ಮೇಲಿನ ನಂಬಿಕೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ. ಬಿರೇನ್ ಸಿಂಗ್ ಹೇಳಿಕೆಗಳು ಹಲವು ಸಂದರ್ಭಗಳಲ್ಲಿ ರಾಜ್ಯದ ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸಿವೆ. ಹೀಗಾಗಿ, ರಾಜ್ಯ ಸರ್ಕಾರದ ಯತ್ನಗಳು ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ನೆರವಾಗಿವೆ ಎಂದು ಹೇಳುವುದಕ್ಕೆ ಕಾರಣಗಳೇ ಇಲ್ಲ. ಕೇಂದ್ರ ಸರ್ಕಾರವು ಸಕಾಲದಲ್ಲಿ ಮಧ್ಯಪ್ರವೇಶ ಮಾಡಿತು, ಅದರಿಂದಾಗಿ ಪ್ರಯೋಜನ ಆಯಿತು ಎಂದು ಹೇಳುವುದಕ್ಕೂ ಆಧಾರಗಳು ಇಲ್ಲ. ಪರಿಸ್ಥಿತಿ ನಿಭಾಯಿಸಲು ಕೇಂದ್ರ ಸರ್ಕಾರವು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂಬುದೇ ಕೇಂದ್ರದ ವಿರುದ್ಧ ಇರುವ ಪ್ರಮುಖ ಆರೋಪ. ರಾಜ್ಯದಲ್ಲಿ ಧ್ರುವೀಕರಣವು ಹೆಚ್ಚಾಗಬೇಕು ಎಂದು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಬಯಸಿದ್ದವು ಎಂಬ ಆರೋಪವಿದೆ. ಮಣಿಪುರವು ಈಗ ಇಂತಹ ಧ್ರುವೀಕರಣದ ಪ್ರಯೋಗಶಾಲೆಯಂತೆ ಆಗಿರುವುದು ನಿಜವೂ ಹೌದು. ಉದ್ದೇಶಪೂರ್ವಕವೋ ಅಥವಾ ಅಲ್ಲವೋ, ನಿಷ್ಕ್ರಿಯತೆ ಅಥವಾ ತಪ್ಪು ಹೆಜ್ಜೆಗಳು ಈ ರೀತಿಯ ಪರಿಣಾಮವನ್ನು ಉಂಟುಮಾಡಿವೆ, ಅಲ್ಲೀಗ ಧ್ರುವೀಕರಣವೇ ಜಾಸ್ತಿಯಾಗಿದೆ.

ಸರ್ಕಾರವು ಮಾತುಕತೆ ಹಾಗೂ ಸಂವಾದಗಳ ಮೂಲಕ ಮಣಿಪುರದಲ್ಲಿ ಶಾಂತಿ ಮರುಸ್ಥಾಪಿಸುವುದನ್ನು ಆದ್ಯತೆಯ ಕೆಲಸವನ್ನಾಗಿ ಇಷ್ಟು ದಿನ ಏಕೆ ಪರಿಗಣಿಸಿರಲಿಲ್ಲ?

ಪ್ರಧಾನಿಯವರು ಈ ರೀತಿಯಾಗಿ ಹೇಳಿದ ಸಂದರ್ಭದಲ್ಲಿಯೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಿನ್ನವಾದ ಮಾತುಗಳನ್ನು ಆಡಿದ್ದಾರೆ. ಕೇಂದ್ರದಲ್ಲಿ ಮುಂದೆ ರಚನೆ ಆಗುವ ಸರ್ಕಾರದ 'ಆದ್ಯತೆಯ ಕೆಲಸ' ಮಣಿಪುರದಲ್ಲಿ ಮಾತುಕತೆ ಮೂಲಕ ಶಾಂತಿಯನ್ನು ಸ್ಥಾಪಿಸುವುದು ಎಂದು ಶಾ ಅವರು ಹೇಳಿದ್ದಾರೆ. ಕೇಂದ್ರದಲ್ಲಿ ಮುಂದೆ ರಚನೆ ಆಗುವುದು ಮೋದಿ ನೇತೃತ್ವದ ಸರ್ಕಾರವೇ ಎಂಬುದು ಶಾ ಅವರ ನಂಬಿಕೆ. ಅಂದರೆ, ರಾಜ್ಯದಲ್ಲಿ ಪರಿಸ್ಥಿತಿ ಸಹಜವಾಗಿ ಇಲ್ಲ, ಅಲ್ಲಿ ಶಾಂತಿಯನ್ನು ಮರುಸ್ಥಾಪಿಸುವ ಅಗತ್ಯ ಇದೆ ಎಂಬುದು ಶಾ ಅವರ ಮಾತಿನಲ್ಲೇ ಗೊತ್ತಾಗುತ್ತಿದೆ. ಇಲ್ಲಿ ಮೂಡುವ ಪ್ರಶ್ನೆಯೊಂದಿದೆ: ಸರ್ಕಾರವು ಮಾತುಕತೆ ಹಾಗೂ ಸಂವಾದಗಳ ಮೂಲಕ ಅಲ್ಲಿ ಶಾಂತಿ ಮರುಸ್ಥಾಪಿಸುವುದನ್ನು ಆದ್ಯತೆಯ ಕೆಲಸವನ್ನಾಗಿ ಇಷ್ಟು ದಿನ ಏಕೆ ಪರಿಗಣಿಸಿರಲಿಲ್ಲ? ರಾಜ್ಯವು ಮೈತೇಯಿ ಸಮುದಾಯದ ಪ್ರಾಬಲ್ಯವಿರುವ ಬಯಲು ಪ್ರದೇಶಗಳು ಹಾಗೂ ಕುಕಿ ಸಮುದಾಯದ ಪ್ರಾಬಲ್ಯವಿರುವ ಗುಡ್ಡಗಾಡು ಪ್ರದೇಶಗಳ ನಡುವೆ ವಿಭಜನೆ ಆಗಿಬಿಟ್ಟಿದೆ. ಸರ್ಕಾರವು ಮೈಮರೆವಿನ ಕಾರಣದಿಂದ ಹಾಗೂ ಕೆಲವು ನಡೆಗಳ ಕಾರಣದಿಂದ ಈ ಪರಿಸ್ಥಿತಿಯನ್ನು ತಂದಿರಿಸಿದೆ. ಅಲ್ಲಿ ಹಿಂಸಾಚಾರ ಮುಂದುವರಿದಿದೆ.

ದಿನದ ಟ್ವೀಟ್

ಆರೋಗ್ಯ ವ್ಯವಸ್ಥೆ ಸುಧಾರಿಸಲಿ



ಆತನ ಸ್ಥಿತಿ ಕಂಡು ಅತೀವ ವ್ಯಥೆಯಾಗುತ್ತಿದೆ. ತನ್ನ ಮಗುವಿಗೆ ವೈದ್ಯಕೀಯ ನೆರವು ಮತ್ತು ಆಂಬುಲೆನ್ಸ್ ಸೌಲಭ್ಯ ದೊರೆಯದೆ ತಂದೆಯೊಬ್ಬ ವ್ಯವಸ್ಥೆಯ ಬಗ್ಗೆ ನಂಬಿಕೆ ಕಳೆದುಕೊಂಡಿದ್ದಾನೆ. ಆತ ಬಿಹಾರದ ಸೀತಾಮಡಿ ಜಿಲ್ಲೆಯವನು. ಈ ಬಗೆಯ ಸ್ಥಿತಿಗಾಗಿ ನಾನು ತೆರಿಗೆ ಪಾವತಿಸುತ್ತಿಲ್ಲ; ಇಂತಹ ಜನರು ನಮ್ಮ ದೇಶದ ಅಭಿವೃದ್ಧಿಯ ಬೇರುಗಳಾಗಿರುತ್ತಾರೆ. ಅವರಿಲ್ಲದೆ ನಮ್ಮ ದೇಶ ಎಂದಿಗೂ ಬೆಳೆಯುವುದಿಲ್ಲ. ಅಧಿಕಾರಿಗಳು ಈ ವಿಷಯದ ಬಗ್ಗೆ ಗಮನಹರಿಸಬೇಕೆಂದು ಆಗ್ರಹಿಸುತ್ತೇನೆ.

ದಿವ್ಯಾ ಗಂಡೋತ್ರ ಟಂಡನ್, ಉದ್ಯಮಿ

ಕಿಡಿನುಡಿ



ಭಾರತದ ಸರ್ಕಾರಿ ಸ್ವಾಮ್ಯದ ಪ್ರಸಾರ ಸಂಸ್ಥೆಯಾದ ಪ್ರಸಾರ ಭಾರತಿಯು ದೂರದರ್ಶನದ ಹಿಂದಿ ಮತ್ತು ಇಂಗ್ಲಿಷ್ ಚಾನೆಲ್‌ಗಳೆರಡರಲ್ಲೂ ತನ್ನ ಲೋಗೊ ಮತ್ತು ಅಕ್ಷರಗಳನ್ನು ಕೇಸರಿ ಬಣ್ಣಕ್ಕೆ ಬದಲಿಸಿದೆ. ಈ ದೇಶ ಮತ್ತು ಅದರ ರಾಜಕೀಯವು ನನ್ನನ್ನು ಮೂಕಳನ್ನಾಗಿಸುವುದರಲ್ಲಿ ಎಂದಿಗೂ ಸೋಲುವುದಿಲ್ಲ.

ನಾರಾಯಣಿ ಬಸು, ಲೇಖಕಿ

25 ವರ್ಷಗಳ ಹಿಂದೆ

ಸೋಮವಾರ, 19-4-1999

● ಹೊಸ ಸರ್ಕಾರ ರಚನೆ: ರಾಷ್ಟ್ರಪತಿ ಆಹ್ವಾನದ ನಿರೀಕ್ಷೆಯಲ್ಲಿ ಕಾಂಗ್ರೆಸ್

ನವದೆಹಲಿ, ಏ. 18– ಪರ್ಯಾಯ ಸರ್ಕಾರ ರಚನೆಯ ಬಗೆಗೆ ಪ್ರತಿಪಕ್ಷಗಳು ಪ್ರತ್ಯೇಕವಾಗಿ ತಮ್ಮ ಪಕ್ಷಗಳ ಉನ್ನತ ಮಟ್ಟದ ಸಮಿತಿಗಳ ಸಭೆ ಕರೆದು ಚರ್ಚೆ ಆರಂಭಿಸಿವೆಯಾದರೂ ಎಲ್ಲ ಪಕ್ಷಗಳು ಒಟ್ಟಿಗೆ ಸೇರಿ ಒಮ್ಮತಕ್ಕೆ ಬರುವ ಯಾವುದೇ ಮಾತುಕತೆಯ ಪ್ರಾರಂಭಿಕ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲವಾದ್ದರಿಂದ, ನೂತನ ಸರ್ಕಾರದ ಅಸ್ತಿತ್ವ ಇನ್ನೂ ಒಂದೆರಡು ದಿನ ವಿಳಂಬವಾಗುವ ಸಾಧ್ಯತೆಯಿದೆ.

ಈ ಮಧ್ಯೆ, 139 ಸಂಖ್ಯಾಬಲ ಹೊಂದಿರುವ ಪ್ರಮುಖ ಪಕ್ಷವಾದ ಕಾಂಗ್ರೆಸ್, ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರಿಂದ ಆಮಂತ್ರಣ ನಿರೀಕ್ಷಿಸಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪಕ್ಷದ ಪ್ರಮುಖ ನಾಯಕರ ಜತೆ ಇಂದು ಪರ್ಯಾಯ ಸರ್ಕಾರ ರಚನೆ ಕುರಿತು ಚರ್ಚಿಸಿದರು.

● ಕೆಇಬಿ ಉನ್ನತ ಅಧಿಕಾರಿ ಬಳಿ 90 ಲಕ್ಷ ಅಕ್ರಮ ಗಳಿಕೆ ಪತ್ತೆ

ಬೆಂಗಳೂರು, ಏ. 18– ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ (ಕೆಇಬಿ) ಉನ್ನತ ಅಧಿಕಾರಿಯೊಬ್ಬರ ಮನೆ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಅಪಾರ ಪ್ರಮಾಣದಲ್ಲಿ ಅವರು ಆಸ್ತಿ ಮಾಡಿರುವುದನ್ನು ಪತ್ತೆ ಹಚ್ಚಿದ್ದಾರೆ.

ನಗರದ ವಿಶೇಷ ನ್ಯಾಯಾಲಯದಿಂದ ವಾರಂಟ್ ಪಡೆದು ಏ. 16ರಿಂದ ಸತತವಾಗಿ ಈ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಅಧಿಕಾರಿಗೆ ಸೇರಿದ ಆಸ್ತಿಪಾಸ್ತಿ ಮತ್ತು ದಾಖಲೆಗಳ ಶೋಧನೆ ನಡೆಸಿದ್ದು, ದಾಳಿಯನ್ನು ಮುಂದುವರಿಸಿದ್ದಾರೆ.

ದಾಳಿ ಸಂದರ್ಭದಲ್ಲಿ ನಗದು, ಒಡವೆ ಸೇರಿದಂತೆ ಸುಮಾರು 90 ಲಕ್ಷ ರೂಪಾಯಿ ಬೆಲೆಯ ಆಸ್ತಿಯನ್ನು ಪತ್ತೆ ಮಾಡಲಾಗಿದೆ ಎಂಬುದು ಮೂಲಗಳಿಂದ ಗೊತ್ತಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 19-4-1974

● ಗಡಿ ಭದ್ರತಾ ಪಡೆಯವರಿಂದ ನಾಗಾ, ಮಣಿಪುರಿ ಮಹಿಳೆಯರ ಶೀಲಭಂಗ ಆರೋಪ: ತನಿಖೆಯ ಭರವಸೆ

ನವದೆಹಲಿ, ಏ. 18– ಗಡಿ ಭದ್ರತಾ ಪಡೆಯ ಅಧಿಕಾರಿಗಳು ಮತ್ತು ಸಿಪಾಯಿಗಳು ಕಳೆದ ತಿಂಗಳು ಮತ್ತು ಈ ತಿಂಗಳ ಆದಿಯಲ್ಲಿ ನಾಗಾ ಹಾಗೂ ಮಣಿಪುರಿ ಮಹಿಳೆಯರ ಶೀಲಭಂಗ ಮಾಡಿದರೆಂಬ ಆಪಾದನೆಗಳ ಬಗ್ಗೆ ಕೂಲಂಕಷ ತನಿಖೆ ನಡೆಸುವುದಾಗಿ ಕೇಂದ್ರ ಗೃಹ ಸಚಿವ ಉಮಾಶಂಕರ ದೀಕ್ಷಿತ್ ಅವರು ಇಂದು ಲೋಕಸಭೆಯಲ್ಲಿ ಭರವಸೆ ನೀಡಿದರು.

ಇಂಥ ಅಕೃತ್ಯವನ್ನೆಸಗಿದವರ ವಿರುದ್ಧ ಆಪಾದನೆಗಳು ರುಜುವಾತಾದಲ್ಲಿ ಉಗ್ರ ಕ್ರಮ ಕೈಗೊಳ್ಳುವುದಾಗಿಯೂ ಸಚಿವರು ಈ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಸದಸ್ಯರಿಗೆ ಆಶ್ವಾಸನೆ ನೀಡಿದರು.

● ಔಷಧಗಳಲ್ಲಿ ಕಲಬೆರಕೆ: ಉಗ್ರ ಕ್ರಮಕ್ಕೆ ರಾಜ್ಯಗಳಿಗೆ ಆದೇಶ

ನವದೆಹಲಿ, ಏ. 18– ಔಷಧ ಕಲಬೆರಕೆ ಅಪರಾಧ ಎಸಗುವವರಿಗೆ ಸಾಧ್ಯವಾದಷ್ಟೂ ಉಗ್ರವಾದ ಶಿಕ್ಷೆ ವಿಧಿಸಬೇಕೆಂದು ಕೇಂದ್ರ ಆರೋಗ್ಯ ಸಚಿವ ಕರಣ್ ಸಿಂಗ್ ಅವರು ರಾಜ್ಯಗಳ ಆರೋಗ್ಯ ಸಚಿವರಿಗೆ ಬರೆದಿರುವ ಒಂದು ಪತ್ರದಲ್ಲಿ ಕರೆ ಕೊಟ್ಟಿದ್ದಾರೆ.

ಔಷಧಿ ಮತ್ತು ಶೃಂಗಾರ ವಸ್ತುಗಳಿಗೆ ಸಂಬಂಧಿಸಿದ ಕಾನೂನನ್ನು ಸೂಕ್ತವಾಗಿ ತಿದ್ದುಪಡಿ ಮಾಡಲೂ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಇಂದು ಇಲ್ಲಿ ಪ್ರಕಟಿಸಿದ ಕರಣ್ ಸಿಂಗ್‌ರ ಪತ್ರದಲ್ಲಿ ತಿಳಿಸಲಾಗಿದೆ.

ರಾಮನ ಚುಂಬಿಸಿದ ಸೂರ್ಯರಶ್ಮಿಯಡಿಯಲ್ಲಿ ದೇಶದ ವಿಳಾಸ ಬದಲಿಸುವ ಪ್ರಯತ್ನ

ಬುದ್ಧ– ಬಾಪು: ಇಂತಿ ನಮಸ್ಕಾರಗಳು...



ಪಡಸಾಲೆ

ರಘುನಾಥ ಚ.ಹ.

ಗಿರೀಶ ಕಾಸರವಳ್ಳಿ ನಿರ್ದೇಶನದ 'ಕೂರ್ಮಾವತಾರ' ಚಲನಚಿತ್ರದಲ್ಲಿ ಗಾಂಧಿ ಜೀವನಕಥೆಯನ್ನು ಆಧರಿಸಿ ಟೆಲಿ ಸೀರಿಯಲ್ ರೂಪಿಸುವ ಪ್ರಸಂಗವಿದೆ. ಗಾಂಧಿಯನ್ನು ಕೊಲ್ಲುವ ಸನ್ನಿವೇಶದ ಚಿತ್ರೀಕರಣ ಧಾರಾವಾಹಿ ನಿರ್ದೇಶಕನ ಕಲ್ಪನೆಗೆ ತಕ್ಕಂತೆ ಬಾರದೆ, ಆ ದೃಶ್ಯವನ್ನು ಮತ್ತೆ ಮತ್ತೆ ಚಿತ್ರೀಕರಿಸಲಾಗುತ್ತದೆ.

ಗಾಂಧಿಕಥನಕ್ಕೆ ಒಳ್ಳೆಯ ಟಿಆರ್‌ಪಿ ಬಾರದ ತಲೆನೋವಿನಲ್ಲಿರುವ ನಿರ್ದೇಶಕನಿಗೆ, ಮಹಾತ್ಮ ಕೊಲೆಗೀಡಾಗುವ ದೃಶ್ಯದ ಮೂಲಕ ಧಾರಾವಾಹಿಯ ರೇಟಿಂಗ್ ಮೇಲೆತ್ತುವ ಉಮೇದು. ಆ ಪ್ರಯತ್ನದಲ್ಲಿ, ಗಾಂಧೀಜಿ ಮತ್ತೆ ಮತ್ತೆ ಗುಂಡೇಟಿಗೆ ಈಡಾಗಬೇಕಾಗುತ್ತದೆ. ಗುಂಡೇಟಿನಿಂದ ಗಾಂಧೀಜಿ ಕುಸಿದುಬೀಳುವುದು, ಮತ್ತೆ ಮೇಲೇಳುವುದು, ಮತ್ತೆ ಗುಂಡೇಟು, ಮತ್ತೆ ಬೀಳುವ ಏಳುವ ಆಟ. ಗಾಂಧಿ ಹತ್ಯೆಯ ಆಟ ಮೇಲ್ನೋಟಕ್ಕೆ ಪ್ರಹಸನದಂತೆ ಕಾಣಿಸಿದರೂ, ಮಹಾತ್ಮ ಹಾಗೂ ಆತನ ತತ್ವಗಳಿಗೆ 'ವರ್ತಮಾನ ಭಾರತ'ದಲ್ಲಿ ಮತ್ತೆ ಮತ್ತೆ ಪೆಟ್ಟುಬೀಳುತ್ತಿರುವ ವಿಪರ್ಯಾಸವನ್ನು ಆ ದೃಶ್ಯ ಮಾರ್ಮಿಕವಾಗಿ ಕಟ್ಟಿಕೊಡುತ್ತದೆ. 'ಹಿಂದೂ ಮಹಾಸಭಾ'ಕ್ಕೆ ಸೇರಿದ ಉತ್ತರ ಪ್ರದೇಶದ ಓರ್ವ ಕಾರ್ಯಕರ್ತೆ, ಗಾಂಧಿಯ ಫೋಟೊಕ್ಕೆ ಆಟಿಕೆ ಪಿಸ್ತೂಲ್‌ನಿಂದ ಶೂಟ್ ಮಾಡುವ ವಿಡಿಯೊ ಐದು ವರ್ಷಗಳ ಹಿಂದೆ ಸುದ್ದಿಯಾಗಿತ್ತು. ಅಹಿಂಸಾಮೂರ್ತಿಯನ್ನು ಮತ್ತೆ ಮತ್ತೆ ಕೊಲ್ಲುವ ಇಂಥ ಪ್ರಹಸನಗಳು ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಲೇ ಇವೆ. ಮಹಾತ್ಮನಿಗೆ ಪೆಟ್ಟುಕೊಡುವ ಈ ಆಟ ಲೋಕಸಭಾ ಚುನಾವಣೆ ಸಂದರ್ಭದಲ್ಲೂ ಜಾರಿಯಲ್ಲಿದೆ. ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಮಾಂಸಾಹಾರಿಗಳನ್ನು ಕುರಿತು ಪ್ರಧಾನಿ ಆಡಿರುವ ಮಾತು ಹಾಗೂ ಭಾರತದ ರಾಜತಾಂತ್ರಿಕತೆಯಲ್ಲಿ ಹಿಂದುತ್ವದ ತಾತ್ವಿಕತೆಯ ತಿರುಳನ್ನು ಸೇರಿಸುವ ಬಿಜೆಪಿ ಪ್ರಣಾಳಿಕೆಯಲ್ಲಿನ ಆಶಯವನ್ನು ಗಮನಿಸಿದರೆ ಕೊಲ್ಲುವ ಪ್ರಹಸನದ ಸುಳಿವು ಸಿಗುತ್ತದೆ.


'ಶ್ರಾವಣ ಮಾಸದಲ್ಲಿ ಮಾಂಸ ತಿಂದು ಅದರ ವಿಡಿಯೊ ಹರಿಯಬಿಡುವವರದ್ದು ಮೊಘಲರ ಮನಃಸ್ಥಿತಿ' ಎಂದು ಪ್ರತಿಪಕ್ಷಗಳ ನಾಯಕರನ್ನುದ್ದೇಶಿಸಿ ಚುನಾವಣಾ ರ್‍ಯಾಲಿಯೊಂದರಲ್ಲಿ ಪ್ರಧಾನಿ ಹೇಳಿದ್ದಾರೆ. 'ಸಸ್ಯಾಹಾರ ಅಥವಾ ಮಾಂಸಾಹಾರ ಸೇವಿಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಅವರು ಬಹುಸಂಖ್ಯಾತರ ಭಾವನೆಗಳಿಗೆ ನೋವುಂಟುಮಾಡುವ ಉದ್ದೇಶ ಹೊಂದಿದ್ದರು. ಮೊಘಲರಿಗೆ ಭಾರತದ ರಾಜರನ್ನು ಸೋಲಿಸಿದಾಗ ತೃಪ್ತಿ ಸಿಗಲಿಲ್ಲ. ಇಲ್ಲಿನ ದೇವಾಲಯಗಳನ್ನು ನಾಶ ಮಾಡಿದಾಗ ಮಾತ್ರ ತೃಪ್ತಿ ಸಿಗುತ್ತಿತ್ತು' ಎಂದೂ ಪ್ರಧಾನಿ ಹೇಳಿದ್ದಾರೆ. ಅವರ ಮಾತಿನಲ್ಲಿ ಮಾಂಸಾಹಾರಿಗಳ ಬಗೆಗಿನ ಅಸಹನೆ ಸ್ಪಷ್ಟವಾಗಿದೆ. ಶ್ರಾವಣದಲ್ಲಿ ಮಾಂಸ ತಿನ್ನುವುದು ಅಪರಾಧ ಎನ್ನುವ ಅರ್ಥದ ಮಾತಂತೂ ದೇಶದ ಪ್ರಧಾನಿ ಬಾಯಿತಪ್ಪಿಯೂ ಆಡುವಂತಹದ್ದಲ್ಲ. ಸರ್ಕಾರದ ಸಾಧನೆಗಳನ್ನು ಮುಂದಿಟ್ಟು ಮತ ಕೇಳಬೇಕಾದ ನಾಯಕ, ಆಹಾರ ರಾಜಕಾರಣದ ಮೂಲಕ ಸಮಾಜದಲ್ಲಿ ಒಡಕುಂಟು ಮಾಡುವ ಪ್ರಯತ್ನ ನಡೆಸುವುದು, ಭಾರತೀಯ ರಾಜಕಾರಣ ತಲುಪಿರುವ ದುರವಸ್ಥೆಯನ್ನು ಸೂಚಿಸುವಂತಿದೆ.

ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಸಂವಿಧಾನವೇ ಸರ್ವಸ್ವವಾಗಿದ್ದು, ಸ್ವತಃ ಅಂಬೇಡ್ಕರ್ ಬಂದರೂ ಸಂವಿಧಾನವನ್ನು ರದ್ದುಗೊಳಿಸಲು ಈಗ ಸಾಧ್ಯವಿಲ್ಲ ಎಂದು ಮತ್ತೊಂದು ರ್‍ಯಾಲಿಯಲ್ಲಿ ಪ್ರಧಾನಿ ಹೇಳಿದ್ದಾರೆ. ಸಂವಿಧಾನಕ್ಕೆ ಬದ್ಧ ಎಂದು ಹೇಳುವ ವ್ಯಕ್ತಿಯೇ, ಆಹಾರದ ಹಕ್ಕನ್ನು ಗೇಲಿ ಮಾಡುವುದನ್ನು ನೋಡಿದರೆ ಅವರ ಸಂವಿಧಾನ ಬೇರೆಯದೇ ಇರಬಹುದೆಂದು ಭಾವಿಸಬೇಕಾಗುತ್ತದೆ.

ಭಾರತದ ರಾಜತಾಂತ್ರಿಕ ನೀತಿಯ ಕೇಂದ್ರದಿಂದ ಬುದ್ಧ ಹಾಗೂ ಗಾಂಧಿ ಮಾದರಿಗಳನ್ನು ಸ್ಥಾನಪಲ್ಲಟಗೊಳಿಸಿ, ಆ ಜಾಗದಲ್ಲಿ ರಾಮ ಮತ್ತು ರಾಮಾಯಣವನ್ನು ತರುವುದಾಗಿ ಬಿಜೆಪಿ ಪ್ರಣಾಳಿಕೆ ಹೇಳುತ್ತಿರುವುದೂ, ಪಕ್ಷದ ಶ್ರದ್ಧೆ ಯಾವುದಕ್ಕೆನ್ನುವುದನ್ನು ಸೂಚಿಸುವಂತಿದೆ. ಬುದ್ಧ ಹಾಗೂ ಗಾಂಧಿ ಈ ದೇಶದ ಅಸ್ಮಿತೆಯಷ್ಟೇ ಅಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಗುರುತಿಸುವ ಚಹರೆಗಳೂ ಹೌದು. 'ಬುದ್ಧನ ನಾಡು', 'ಗಾಂಧಿಯ ನಾಡು' ಎನ್ನುವುದು ಭಾರತದ ಜಾಗತಿಕ ವಿಳಾಸಗಳಾಗಿವೆ. ಈಗ ಆ ವಿಳಾಸವನ್ನು ರಾಮನ ಹೆಸರಿಗೆ ಬದಲಿಸುವ ಚಿಂತನೆ ನಡೆದಿದೆ.

ದೇಶದ ಸಂವಿಧಾನ ಕಟ್ಟಿಕೊಡುವ 'ಬಹುತ್ವ ಭಾರತ'ದ ಆಶಯಕ್ಕೂ ವಿಶ್ವವೇದಿಕೆಗಳಲ್ಲಿ ಭಾರತದ ಅಸ್ಮಿತೆಯ ಕುರುಹುಗಳಾಗಿ ಗಾಂಧಿ–ಬುದ್ಧನನ್ನು ಬಿಂಬಿಸುವುದಕ್ಕೂ ಸಂಬಂಧವಿದೆ. ಈ ಬಿಂಬಗಳನ್ನು ಪಲ್ಲಟಗೊಳಿಸುವ ಮೂಲಕ, ಭಾರತವನ್ನು 'ಹಿಂದೂ ದೇಶ'ದ ಸ್ವರೂಪದಲ್ಲಿ ಬಿಂಬಿಸುವ ರಾಜಕಾರಣದ ದಾಳವಾಗಿ ರಾಮ ಬಳಕೆ ಆಗುತ್ತಿದ್ದಾನೆ. ಬದಲಾವಣೆಯ ಪಥದಲ್ಲಿ, ಗಾಂಧಿ ಮತ್ತು ಬುದ್ಧನ ದೇಶ ಹಿಂದೂಸ್ತಾನವಾಗಿ ಬದಲಾಗಿದೆ ಎಂದು ವಿಶ್ವಕ್ಕೆ ಸಂದೇಶ ಕೊಡುವ ಉದ್ದೇಶವೂ ಈ ಪಲ್ಲಟದಲ್ಲಿದೆ.

ಬುದ್ಧ, ಗಾಂಧಿ ಮತ್ತು ಅಂಬೇಡ್ಕರ್ ಅವರ ಭಾರತ ಎಂದು ಹೇಳಿಕೊಳ್ಳಲಿಕ್ಕೆ ಅಪಾರವಾದ ನೈತಿಕಶಕ್ತಿ ಬೇಕು. ಸಂವಿಧಾನದ ಬಗ್ಗೆ ನಂಬಿಕೆ ಹಾಗೂ ಗೌರವ ಬೇಕು. ಸಂವಿಧಾನವನ್ನು ಗೌರವಿಸುವ ಯಾರೊಬ್ಬರಿಗೂ ಈ ದೇಶವನ್ನು ರಾಮನ ಹೆಸರಿನಲ್ಲಿ ಬಿಂಬಿಸುವ ಯೋಚನೆ ಬರುವುದು ಸಾಧ್ಯವಿಲ್ಲ. ರಾಜಕಾರಣ ಮತ್ತು ಭಕ್ತಿಯ ನಡುವಣ ಗೆರೆ ಅಳಿಸಿಹೋದಾಗ ಇಲ್ಲವೇ ಎಲ್ಲ ನಾಗರಿಕರನ್ನು ಸಮಾನರನ್ನಾಗಿ ನೋಡುವುದು ಸಾಧ್ಯವಾಗದೆ ಹೋದಾಗಲಷ್ಟೇ ಇಂಥ ಯೋಚನೆಗಳು ಬರುವುದು ಸಾಧ್ಯ.



ವಿಶ್ವ ವೇದಿಕೆಗಳಲ್ಲಿ ಭಾರತದ ಅಸ್ಮಿತೆಯಾಗಿ ರಾಮ ಮತ್ತು ರಾಮಾಯಣವನ್ನು ಪ್ರಚುರಪಡಿಸುವ ಪ್ರಯತ್ನದ ಹಿನ್ನೆಲೆಯಲ್ಲಿ ರಾಮನ ಕುರಿತ ಪ್ರೀತಿ ಅಥವಾ ಭಕ್ತಿಯಿದೆ ಎಂದು ಯಾರೂ ಭಾವಿಸಬೇಕಾಗಿಲ್ಲ. ರಾಮಭಕ್ತರ ವೇಷದಲ್ಲಿರುವ ರಾಜಕಾರಣಿಗಳು, ಮೂಲ ರಾಮನನ್ನು ಹತ್ತಿಕ್ಕಿ ತಮ್ಮದೇ ಆದ ರಾಮನನ್ನು ರೂಪಿಸಿಕೊಂಡಿದ್ದಾರೆ. ಇಂದಿನ ರಾಮ ಸನ್ನಿವೇಶದ ಶಿಶು.

ಭಾರತೀಯ ಮೌಲ್ಯವ್ಯವಸ್ಥೆಯಲ್ಲಿ ಹಾಗೂ ಭಾರತೀಯರ ಭಾವಕೋಶದಲ್ಲಿ ರಾಮ ಹಾಗೂ ಕೃಷ್ಣನಿಗೆ ಬಹುದೊಡ್ಡ ಸ್ಥಾನವಿದೆ. ಆದರೆ, ಧಾರ್ಮಿಕ ಸಂಕೇತಗಳನ್ನು ದೇಶದ ಅಸ್ಮಿತೆಯ ರೂಪದಲ್ಲಿ ಬಿಂಬಿಸುವ ಪ್ರಯತ್ನ ಈ ಮಣ್ಣಿನ ಜಾತ್ಯತೀತ ಸ್ವರೂಪವನ್ನು ಗಾಸಿಗೊಳಿಸುವ ದುಸ್ಸಾಹಸ. ಬುದ್ಧ, ಗಾಂಧಿ, ಅಂಬೇಡ್ಕರರನ್ನು ಪಕ್ಕಕ್ಕೆ ಸರಿಸಿ ದೇಶದ ಅಸ್ಮಿತೆಯನ್ನು ಜಾಗತಿಕ ನೆಲೆಯಲ್ಲಿ ಬಿಂಬಿಸಲು ಹೊರಡುವುದು, ದೇಶದ ವರ್ಚಸ್ಸನ್ನು ಕುಗ್ಗಿಸುವ ಪ್ರಯತ್ನವೇ ಆಗಿದೆ.

ಗಾಂಧೀಜಿ ಮತ್ತು ರಾಮನ ನಡುವಣ ಆಯ್ಕೆ, ಜನಪರ ಮತ್ತು ಜನಪ್ರಿಯತೆಗಳಲ್ಲಿ ನಮ್ಮ ಆದ್ಯತೆ ಯಾವುದಕ್ಕೆ ಎನ್ನುವುದನ್ನು ಸೂಚಿಸುವಂತಿದೆ. ಗಾಂಧೀಜಿಯ ಅನುಸರಣೆ ಜನಪರ ನಡವಳಿಕೆಯಾದರೆ, ರಾಮನನ್ನು ಮುಂದಿಟ್ಟುಕೊಳ್ಳುವುದು ವರ್ತಮಾನದಲ್ಲಿ ಜನಪ್ರಿಯವಾದ ತೀರ್ಮಾನ. ಸದ್ಯದ ಸರ್ಕಾರದ ಆದ್ಯತೆಗಳು ಸ್ಪಷ್ಟವಾಗಿವೆ. ಅಧಿಕಾರ ನಡೆಸುವವರಿಗೆ ಭಕ್ತಿಮಾರ್ಗದಲ್ಲಿ ಅನುಕೂಲ ಹೆಚ್ಚು. ಮಹಾತ್ಮನ ನೈತಿಕಶಕ್ತಿ ಅಡಿಗಡಿಗೆ ತೊಡಕು ಉಂಟುಮಾಡುವಂತಹದ್ದು. ಜನಸಾಮಾನ್ಯರ ಸಂಕಷ್ಟಗಳ ಬಗ್ಗೆ ಗಮನಸೆಳೆಯುವ ತೊಡಕಿನ ಗಾಂಧಿ ಮಾದರಿ ಈಗ ಅಪಥ್ಯ. ಅನುದಿನದ ತೊಡಕುಗಳ ಬಗ್ಗೆ ಮರೆವೆ ಉಂಟುಮಾಡುವ ಭಕ್ತಿಮಾರ್ಗವೇ ಅಧಿಕಾರ ಗಳಿಸುವ ಮತ್ತು ಉಳಿಸುವ ಶಕ್ತಿಮಾರ್ಗವಾಗಿ ಈಗ ಚಾಲ್ತಿಯಲ್ಲಿರುವಂತಿದೆ.

ಈಗಿನ ಪ್ರಧಾನಿ ಅಧಿಕಾರಕ್ಕೆ ಬಂದ ಹೊಸದರಲ್ಲಿ 'ಸ್ವಚ್ಛ ಭಾರತ' ಅಭಿಯಾನ ಆರಂಭಿಸುವ ಮೂಲಕ ಮಹಾತ್ಮನನ್ನು ನೆನಪಿಸಿದ್ದರು. ನಂತರದ ಹತ್ತು ವರ್ಷಗಳಲ್ಲವರು ಗಾಂಧಿಯ ಜೀವನದ ಭಾಗವೇ ಆಗಿದ್ದ ಪರಧರ್ಮ ಮತ್ತು ಪರ ವಿಚಾರಗಳ ಸೈರಣೆಯನ್ನು ಮಾತು–ಕೃತಿಯಲ್ಲಿ ಅನುಸರಿಸಿದ್ದಕ್ಕೆ ನಿದರ್ಶನಗಳಿಲ್ಲ. ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ದೊರೆತರೆ ಸಂವಿಧಾನ ಬದಲಾವಣೆ ಮಾಡುತ್ತೇವೆಂದು ಹೇಳಿದ ಬಿಜೆಪಿ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳುವುದಿರಲಿ, ಆ ಮಾತುಗಳಿಗೆ ಪ್ರತಿಕ್ರಿಯಿಸುವ ಗೋಜಿಗೂ ಪ್ರಧಾನಿ ಹೋಗಿಲ್ಲ. ಮಾಂಸಾಹಾರಿಗಳ ಬಗೆಗಿನ ಅವರ ಕಟಕಿಯು ಗಾಂಧಿ ಹಾಗೂ ಅಂಬೇಡ್ಕರ್ ಆಶಯಗಳಿಗೆ ವಿರುದ್ಧವಷ್ಟೇ ಅಲ್ಲ, ಈ ದೇಶದ ಬಹುಸಂಖ್ಯಾತರ ಆಹಾರ ಪದ್ಧತಿಯ ಅಣಕವೂ ಹೌದು. ಆದರೆ, ಪ್ರಧಾನಿಯ ಮಾತಿನಿಂದ ಯಾವ ದೇಶವಾಸಿಗಳು ಗಾಸಿಗೊಳ್ಳಬೇಕಾಗಿತ್ತೋ ಅವರು ಮೌನವಾಗಿರುವುದನ್ನು ನೋಡಿದರೆ, ಭಕ್ತಿಮಾರ್ಗದ ಮರೆವಿನ ಶಕ್ತಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವಂತಿದೆ. ಆ ಮರೆವೆಯನ್ನೇ ದೇಶದ ಅಸ್ಮಿತೆಯೆಂದು ವಿಶ್ವಮಟ್ಟದಲ್ಲೂ ಬಿಂಬಿಸುವ ಪ್ರಯತ್ನ, ಬಾಲರಾಮನನ್ನು ಚುಂಬಿಸಿದ ಸೂರ್ಯರಶ್ಮಿಯ ಅಡಿಯಲ್ಲೇ ನಡೆಯುತ್ತಿದೆ.

ಚುರುಮುರಿ



ಜಗವೇ ನಾಟಕರಂಗ!

● ಬಿ.ಎನ್.ಮಲ್ಲೇಶ್

'ಪಮ್ಮು... ಬಾ ಇಲ್ಲಿ, ನೋಡು ನಮ್ಮ ಅಂದಕಾಲತ್ತಿಲ್ ಕನಸಿನ ಕನ್ಯೆ ಹೇಮಾಮಾಲಿನಿ ಕುಡುಗೋಲು ಹಿಡ್ಕಂಡು ಹುಲ್ಲು ಕೊಯ್ತಾ ಇದಾರೆ...' ಮಡದಿಗೆ ಮೊಬೈಲ್‌ನಲ್ಲಿ ಬಂದಿದ್ದ ಫೋಟೊ ತೋರಿಸಿದೆ.

'ಅರೆ ಹೌದಲ್ರಿ! ಅಲ್ಲ, ತೆನೆ ಕೊಯ್ಯೋದು ಬಿಟ್ಟು ಹುಲ್ಯಾಕೆ ಕೊಯ್ತಿದಾರೆ?'

'ತೆನೆ ಇರೋದು ಕರ್ನಾಟಕದಲ್ಲಿ. ಅಲ್ಲೆಲ್ಲ ಹುಲ್ಲೇ ಕೊಯ್ಯೋದಂತೆ'.

'ಅವರ ಸೀರೆ ನೋಡ್ರೀ ಎಷ್ಟ್ ಚೆನ್ನಾಗಿದೆ, ಕೂಲಿಂಗ್ ಗ್ಲಾಸ್ ಬೇರೆ ಹಾಕಿದಾರೆ?'

'ಅವರೀಗ ರೈತ ಮಹಿಳೆ ಕಣೆ. ರೈತರ ಆದಾಯ ದುಪ್ಪಟ್ಟಾಗಿರಬೇಕು, ಅದ್ಕೇ ಭರ್ಜರಿಯಾಗಿ ಹೊಲಕ್ಕಿಳಿದಿದಾರೆ'.

'ನಂಗೇನೋ ಇದು ಡೂಪ್ಲಿಕೇಟ್ ಫೋಟೊ ಅನ್ಸುತ್ತಪ್ಪ, ಅದೇನೋ ಡೀಪು ಫೇಕು ಅಂತೀರಲ್ಲ, ಆ ತರ. ಆದ್ರೂ ಆ ಸೀರೆ ಮಾತ್ರ ಚೆನ್ನಾಗಿದೆ'.

'ಮಾರಿ ಕಣ್ಣು ಹೋರಿ ಮ್ಯಾಗೆ ಅನ್ನಂಗೆ ನಿಮ್ ಕಣ್ಣು ಯಾವಾಗ್ಲೂ ಸೀರೇ ಮ್ಯಾಗೇ ಬಿಡು. ನಾನಿಲ್ಲಿ ಹುಲ್ಲು ತಿಂತಾ ಇದೀನಿ, ನೀನು ಹೂವು ಕೇಳಿದಂಗಾತು'.

'ಕರ್ನಾಟಕದಲ್ಲಿ ಹುಲ್ಲು, ಹೂವು, ತೆನೆ ಎಲ್ಲ ಒಂದೇ ಈಗ. ಅದಿರ್‍ಲಿ ಈ ಸುದ್ದಿ ನೋಡಿದ್ರಾ? ಎಲೆಕ್ಷನ್‌ಗೆ ನಿಂತ ಅಭ್ಯರ್ಥಿಗಳಿಗಿಂತ ಅವರ ಹೆಂಡ್ತಿದೀರೇ ಶ್ರೀಮಂತರಂತೆ'.

'ನೀನೂ ನಂಗಿಂತ ಶ್ರೀಮಂತೇನೇ... ನನ್ ಜೇಬು ಖಾಲಿಯಾದಾಗೆಲ್ಲ ನೀನೇ ತಾನೆ ದುಡ್ಡು ಕೊಡೋದು?'

'ಈ ಬಣ್ಣದ ಮಾತೆಲ್ಲ ಬೇಡ, ಅದು ನಾನು ಉಳಿಸಿ ಇಟ್ಟದ್ದು'.

'ಈ ಜಗತ್ತಲ್ಲಿ ಬಣ್ಣದ ಮಾತೇ ನಡೆಯೋದು ಕಣೆ. ಕೆಲವರು ಬಣ್ಣ ಹಚ್ಕೊಂಡು ನಾಟಕ ಮಾಡ್ತಾರೆ, ರಾಜಕಾರಣಿಗಳು ಬಣ್ಣ ಹಚ್ಕಳ್ದೇ ನಾಟಕ ಮಾಡ್ತಾರೆ. ಜಗವೇ ನಾಟಕರಂಗ!'

'ಮಾತು ಮರೆಸ್ಬೇಡಿ. ಆ ಸೀರೆಯಂಥದ್ದು ನಂಗೂ ಬೇಕು, ಕೊಡ್ಸಿ'.

'ಅದು ಡೂಪ್ಲಿಕೇಟ್ ಫೋಟೊ ಅಂದೆಯಲ್ಲ, ಆ ಸೀರೆನೂ ಡೂಪ್ಲಿಕೇಟೇ ಇರ್ಬೇಕು...'

ಮಡದಿ ಸಿಟ್ಟಾಗಿ ಬಿಲ್ಲಿನಿಂದ ಬಿಟ್ಟ ಬಾಣದಂತೆ ಅಡುಗೆ ಮನೆ ಸೇರಿದರೆ, ನಾನು ಮೆಲ್ಲಗೆ ಜಾಗ ಖಾಲಿ ಮಾಡಿದೆ.

ಸಂಗತ

'ಕರೆವ' ಕರೆ ಕೇಳುತ್ತಿಲ್ಲವೇ?

ಕಾಶ್ಮೀರದ ಕಣಿವೆಗಳ ಫಲವತ್ತಾದ 'ಕರೆವ' ಪ್ರಸ್ಥಭೂಮಿಯ ಮಣ್ಣು ಮಾನವಾಭಿವೃದ್ಧಿಯ ಒತ್ತಡಕ್ಕೆ ಸಿಲುಕಿ ಧೂಳೀಪಟವಾಗುತ್ತಿದೆ

● ಶ್ರೀಗುರು

ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಅವರ ಇತ್ತೀಚಿನ ಕಾಶ್ಮೀರದ ಭೇಟಿ ಬಹಳ ಸದ್ದು ಮಾಡಿತು. ಹಿಮದ ಹಾಸಿನ ಕೊರತೆಯಿಂದ ಕಾಶ್ಮೀರದ ಪ್ರವಾಸೋದ್ಯಮ ಸೊರಗಿದೆ ಎಂಬ ಸುದ್ದಿಯೂ ಇತ್ತು. ಈಗ ತಡವಾಗಿಯಾದರೂ ಹಿಮಪಾತ ಶುರುವಾಗಿದೆ. ಕಾಶ್ಮೀರ ಎಂದಾಕ್ಷಣ ಅಲ್ಲಿನ ಹಿಮಾಚ್ಛಾದಿತ ಕಣಿವೆಗಳು, ಸುಂದರ ಸರೋವರಗಳು, ಪ್ರವಾಸಿ ತಾಣಗಳಲ್ಲಿ ಸಂತೋಷದಿಂದ ವಿಹರಿಸುವ ಪ್ರವಾಸಿಗರು, ಕರಕುಶಲ ಕಲೆಗಳನ್ನು ಪ್ರದರ್ಶಿಸುವ ಸ್ಥಳೀಯರು, ರಸ್ತೆಬದಿಯಲ್ಲಿ ಮಾರಾಟಕ್ಕೆ ದೊರಕುವ ಕೇಸರಿ, ರಕ್ತವರ್ಣದ ಸೇಬುಹಣ್ಣುಗಳು... ಹೀಗೆ ರಮ್ಯ ಚಿತ್ರವೊಂದು ಕಣ್ಣ ಮುಂದೆ ಸುಳಿಯುತ್ತದೆ. ಇವೆಲ್ಲದರ ನಡುವೆ ಕಾಶ್ಮೀರದ ಪರಿಸರಕ್ಕೆ ಶಾಶ್ವತ ಹಾನಿ ಉಂಟುಮಾಡಿ ರೈತರನ್ನು ಕಷ್ಟಕ್ಕೆ ನೂಕುವ 'ಕರೆವ' ಗಣಿಗಾರಿಕೆಯ ಕುರಿತು ಯಾವ ಸುದ್ದಿಯೂ ಇಲ್ಲ.

ಕಾಶ್ಮೀರದ ಕಣಿವೆಗಳ ಫಲವತ್ತಾದ 'ಕರೆವ' ಪ್ರಸ್ಥಭೂಮಿಯ ಮಣ್ಣು ಮಾನವಾಭಿವೃದ್ಧಿಯ ಒತ್ತಡಕ್ಕೆ ಸಿಲುಕಿ ಧೂಳೀಪಟವಾಗುತ್ತಿದೆ. ಕಾಶ್ಮೀರದ ಭೌಗೋಳಿಕ ಹಿರಿಮೆಗೆ ಕಾರಣವಾದ ಮತ್ತು ಹಿಮಾಲಯದೊಂದಿಗೆ ಗಡಿ ಹಂಚಿಕೊಂಡಿರುವ 'ಪಿರ್ ಪಂಜಲ್' ಪರ್ವತ ಪ್ರದೇಶವೀಗ ಅಭಿವೃದ್ಧಿಯ ಹೊಡೆತಕ್ಕೆ ಸಿಲುಕಿ ನಲುಗುತ್ತಿದೆ. ಕರೆವ ಪ್ರಸ್ಥಭೂಮಿಯು (ಎತ್ತರದ ಮೇಜಿನಾಕಾರದ ಮೈದಾನ ಪ್ರದೇಶ) ಮರಳುಶಿಲೆ ಮತ್ತು ಮೆಕ್ಕಲು ಮಣ್ಣಿನ ನಿಕ್ಷೇಪಗಳಿಂದ ಕೂಡಿದೆ. ಮಳೆಗಾಲದಲ್ಲಿ ಕಣಿವೆ ಪ್ರದೇಶಗಳಿಂದ ಹರಿದುಬರುವ ಮೆಕ್ಕಲು ಮಣ್ಣು ರೈತರ ಪಾಲಿನ ಜೀವನಿಧಿ ಎನಿಸಿದೆ. ಕಾಶ್ಮೀರದ ಕೇಸರಿ, ಸೇಬು ಮತ್ತು ಬಾದಾಮಿ ಬೆಳೆಗೆ ಅತ್ಯಗತ್ಯ ಪೋಷಕಾಂಶ ನೀಡುವ ಫಲವತ್ತಾದ ಈ ಮಣ್ಣು ಈಗ ರೈಲು ಮಾರ್ಗ, ರಸ್ತೆ ನಿರ್ಮಾಣ ಮತ್ತು ಹೆದ್ದಾರಿ ನಿರ್ಮಾಣಕ್ಕೆ ಬಳಕೆಯಾಗುತ್ತಿದೆ.

ಸುಮಾರು 26 ಲಕ್ಷ ವರ್ಷಗಳ ಹಿಂದೆ ರೂಪುಗೊಂಡ ಈ 'ಕರೆವ' ಪ್ರಸ್ಥಭೂಮಿಯು ಪಿರ್ ಪಂಜಲ್ ಪರ್ವತ ಶ್ರೇಣಿಯಿಂದ ಹರಿದುಬರುವ ಮಳೆನೀರನ್ನು ತಡೆಹಿಡಿದು ಐದು ಸಾವಿರ ಚದರ ಕಿ.ಮೀ. ವಿಸ್ತಾರದ ದೊಡ್ಡ ಸರೋವರವನ್ನೇ ನಿರ್ಮಿಸಿತ್ತು. ಶತಮಾನಗಳು ಕಳೆದಂತೆ ನೀರಿನ ಪ್ರಮಾಣ ಕಡಿಮೆಯಾಗುತ್ತಾ ಬಂತು. ನೀರಿನ ಹರಿವಿನ ಮಾರ್ಗ ಮತ್ತು ಪರ್ವತಶ್ರೇಣಿಯ ನಡುವೆ ರೂಪುಗೊಂಡ ಕರೆವ ಪ್ರಸ್ಥಭೂಮಿಯಲ್ಲಿ ಫಲವತ್ತಾದ ಮಣ್ಣಿನ ಜೊತೆಗೆ ಹಲವು ನಾಗರಿಕತೆಗಳ ಪಳೆಯುಳಿಕೆಗಳೂ ಇವೆ. ವ್ಯಾವಸಾಯಿಕ ಮತ್ತು ಭೂಐತಿಹಾಸಿಕ ಪ್ರಾಮುಖ್ಯ ಪಡೆದಿದ್ದರೂ ಕರೆವಗಳ ಉತ್ಖನನ ನಿರಂತರವಾಗಿ ನಡೆಯುತ್ತಿದೆ. ಹಿಂದಿನ 20 ವರ್ಷಗಳಲ್ಲಿ ಪುಲ್ವಾಮ, ಬುಡ್‌ಗಮ್, ಬಾರಾಮುಲ್ಲ ಜಿಲ್ಲೆಗಳ ಕರೆವಗಳನ್ನು ನೆಲಸಮ ಮಾಡಿ 125 ಕಿ.ಮೀ. ಉದ್ದದ ಖಾಜಿಗಂಡ್- ಬಾರಾಮುಲ್ಲ ರೈಲು ಮಾರ್ಗಕ್ಕೆ ಮಣ್ಣು ಒದಗಿಸಲಾಗಿದೆ. ಶ್ರೀನಗರದ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಬುಡ್‌ಗಮ್‌ನ ದಾಮೋದರ್ ಕರೆವ ಪ್ರದೇಶ ಬಲಿಯಾಗಿದೆ. ಈಗ ಪುಲ್ವಾಮ ಮತ್ತು ಗಂದೇರ್‌ಬಲ್ ಜಿಲ್ಲೆಗಳ ನಡುವಿನ 58 ಕಿ.ಮೀ. ಉದ್ದದ ರಸ್ತೆಗಾಗಿ ಕರೆವಗಳನ್ನು ಅಗೆಯಲಾಗುತ್ತಿದೆ.

ಪರ್ವತ ಪ್ರದೇಶದಲ್ಲಿ ಬೃಹತ್ ರಸ್ತೆ, ಸೇತುವೆ ಹಾಗೂ ರೈಲು ಮಾರ್ಗದ ನಿರ್ಮಾಣಕ್ಕೆ ಮಣ್ಣು ಹೊಂದಿಸುವುದು ತುಸು ತ್ರಾಸದಾಯಕ ಕೆಲಸವೆ. ಎತ್ತರದ ಪ್ರದೇಶಗಳೆಲ್ಲಾ ಗಟ್ಟಿಶಿಲೆಗಳಿಂದ ಆವೃತವಾಗಿವೆ ಮತ್ತು ಕಣಿವೆಗಳಲ್ಲಿ ಮಾತ್ರ ಮಣ್ಣು ಸಿಗುತ್ತದೆ. ಕಣಿವೆಯ ಭಾಗಗಳಲ್ಲಿ ಅಂತರ್ಜಲ ಬರೀ ಐದು ಮೀಟರ್ ಆಳದಲ್ಲಿದೆ. ದುರದೃಷ್ಟವಶಾತ್ ಕಣಿವೆ ಪ್ರದೇಶಕ್ಕೆ ಹೊಂದಿಕೊಂಡ ಕರೆವಗಳನ್ನು ಸುಲಭವಾಗಿ ಅಗೆಯಬಹುದಾಗಿವೆ.



ಪಟ್ಟನ್ ಹಳ್ಳಿಯ ಸಾಮಾಜಿಕ ಕಾರ್ಯಕರ್ತ ರಾಥೆರ್ 'ರಸ್ತೆ ನಿರ್ಮಿಸಲು ಫಲವತ್ತಾದ ಮಣ್ಣೇ ಏಕೆ ಬೇಕು? ಬಹುಪಾಲು ರೈತರು ಈ ಫಲವತ್ತಾದ ಮಣ್ಣಿನಿಂದ ಬದುಕು ಕಟ್ಟಿಕೊಂಡಿದ್ದಾರೆ. ಒಮ್ಮೆ ನಾಶವಾದ ಕರೆವಗಳು ಮತ್ತೆ ಸೃಷ್ಟಿಯಾಗುವುದಿಲ್ಲ ಎಂಬುದು ಇವರಿಗೆ ತಿಳಿದಿಲ್ಲವೇ?' ಎಂದು ಪ್ರಶ್ನಿಸುತ್ತಾರೆ. ಅಗೆದ ಮಣ್ಣನ್ನು ಸಾಗಿಸಲು ದಿನವಿಡೀ ಸಂಚರಿಸುವ ಡೀಸೆಲ್ ಲಾರಿಗಳಿಂದ ಏಳುವ ಹೊಗೆ ಮತ್ತು ದೂಳಿನಿಂದ ಮನೆಮನೆಯಲ್ಲೂ ಉಸಿರಾಟದ ಸಮಸ್ಯೆಯಿಂದ ಬಳಲುವವರಿದ್ದಾರೆ. ಕಾಶ್ಮೀರ ಕಂದಾಯ ಕಾಯ್ದೆ-1996ರ ಪ್ರಕಾರ, ಕರೆವಗಳ ಸ್ವರೂಪವನ್ನು ಯಾವ ಕಾರಣಕ್ಕೂ ಬದಲಾಯಿಸುವಂತಿಲ್ಲ. ಜಮ್ಮು ಕಾಶ್ಮೀರ ಮೈನರ್ ಮಿನರಲ್ ಕಾಯ್ದೆ- 2016ರಂತೆ, ಮಣ್ಣಿನ ಗಣಿಗಾರಿಕೆಗೆ ನಿಷೇಧವಿದೆ. ಮಾಡಲೇಬೇಕೆಂದಿದ್ದರೆ ಸ್ಥಳೀಯ ಪಂಚಾಯಿತಿಯ ಒಪ್ಪಿಗೆ ಬೇಕು. ಆದರೂ ಖಾಸಗಿ ಒಡೆತನದಲ್ಲಿರುವ ಜಾಗಗಳಿಂದ ಮಣ್ಣಿನ ಗಣಿಗಾರಿಕೆ ತಡೆಯಿಲ್ಲದೆ ನಡೆಯುತ್ತಿದೆ.

ಕರೆವಗಳ ನಾಶದಿಂದ ಅಗಾಧ ಪ್ರಮಾಣದ ಹೂಳು ಝೀಲಂ ನದಿಯನ್ನು ಸೇರುತ್ತಿದೆ. ನದಿಗೆ ಸಮಾನಾಂತರವಾಗಿ ನಿರ್ಮಿಸಲಾಗಿರುವ 42 ಕಿ.ಮೀ ಉದ್ದದ ಕಾಲುವೆಯೊಂದು ಪ್ರವಾಹದ ನೀರು, ರಾಡಿಯನ್ನು ಶ್ರೀನಗರದ ಹೊರ ಭಾಗದಿಂದ ಉತ್ತರ ಕಾಶ್ಮೀರದ ವುಲಾರ್ ಸರೋವರಕ್ಕೆ ಸಾಗಿಸುತ್ತಿತ್ತು. ಪ್ರವಾಹವುಂಟಾದಾಗ ಶ್ರೀನಗರವನ್ನು ಕಾಪಾಡಲು ಈ ಕಾಲುವೆಯನ್ನು 1920ರಲ್ಲಿಯೇ ನಿರ್ಮಿಸಲಾಗಿತ್ತು. ಜಲಾನಯನ ಪ್ರದೇಶಗಳ ನಾಶದಿಂದಾಗಿ ಹೆಚ್ಚಿನ ಹೂಳು ನದಿಯಲ್ಲಿ ಸಂಗ್ರಹಗೊಳ್ಳುತ್ತಿದೆ, ಸರ್ಕಾರ ಈ ಕೂಡಲೇ ವುಲಾರ್ ಸರೋವರದ ಹೂಳು ಎತ್ತಿ ಅದನ್ನೇ ಅಭಿವೃದ್ಧಿ ಕೆಲಸಗಳಿಗೆ ಬಳಸಬೇಕು ಎಂದು ಪರಿಸರವಾದಿ ಅಜಾಜ್ ರಸೂಲ್ ಒತ್ತಾಯಿಸುತ್ತಿದ್ದಾರೆ. ಕರೆವಗಳನ್ನು ಭೂಐತಿಹಾಸಿಕ ತಾಣಗಳೆಂದು ಘೋಷಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸಬೇಕು ಎಂಬುದು ಸುತ್ತಲಿನ ಜನರ ಒತ್ತಾಯವಾಗಿದೆ.

ವಾಚಕರ ವಾಣಿ

ಸೋಲೊಪ್ಪಿತೇ ಆಧುನಿಕ ವಿಜ್ಞಾನ?

ಅಯೋಧ್ಯೆಯಲ್ಲಿ ರಾಮನವಮಿ ದಿನ ಬಾಲರಾಮನ ಹಣೆಗೆ ಸೂರ್ಯ ತಿಲಕವಾಗಿದ್ದು ಸಂತೋಷದ ಸಂಗತಿ. ಗರ್ಭಗುಡಿಯಲ್ಲಿರುವ ಶ್ರೀರಾಮನಿಗೆ ಲೋಕಸಂಚಾರಿ ಸೂರ್ಯನ ದರ್ಶನ ಒಂದು ಅದ್ಭುತ ಅನುಭವವೇ ಸರಿ. ಆದರೆ ಮಸೂರಗಳು ಮತ್ತು ಕನ್ನಡಿಗಳನ್ನು ಬಳಸಿ ಯಾಂತ್ರಿಕ ವ್ಯವಸ್ಥೆಯ ಮೂಲಕ ಶ್ರೀರಾಮನಿಗೆ ಸೂರ್ಯಕಿರಣ ಸ್ಪರ್ಶ ಮಾಡಿಸಿದ್ದನ್ನು ನೋಡಿದರೆ, ಆಧುನಿಕ ಖಗೋಳಶಾಸ್ತ್ರವು ನಮ್ಮ ಪುರಾತನ ಖಗೋಳಶಾಸ್ತ್ರಜ್ಞರ ಮುಂದೆ ತಲೆಬಾಗಿತೇನೋ ಅನಿಸುತ್ತಿದೆ.

ಯಾಕೆಂದರೆ, ಯುಗಾದಿ, ಸಂಕ್ರಾಂತಿಯಂತಹ ವಿಶೇಷ ದಿನಗಳಂದು ನಮ್ಮ ಕೆಲವು ಪುರಾತನ ಮಂದಿರಗಳ ಮೂಲ ವಿಗ್ರಹಗಳ ಮೇಲೆ ನೇರವಾಗಿ ಸೂರ್ಯಕಿರಣ ಸ್ಪರ್ಶವಾಗುವುದನ್ನು ನಾವು ಗಮನಿಸಬಹುದು. ಆದರೆ ಈಗ ನಮ್ಮ ವಿಜ್ಞಾನಿಗಳು ಕೃತಕ ವ್ಯವಸ್ಥೆಯ ಮೂಲಕ ಇದನ್ನು ಸಾಧ್ಯವಾಗಿಸಿದ್ದಾರೆ. ಹಾಗಿದ್ದರೆ ನಮ್ಮ ಪಾರಂಪರಿಕ ಪುರಾತನ ಜ್ಞಾನದ ಮುಂದೆ ಆಧುನಿಕ ವಿಜ್ಞಾನ ಸೋಲೊಪ್ಪಿತೇ? ಸೂರ್ಯನ ಚಲನೆ, ದಿಕ್ಕು, ಸಮಯ ಹಾಗೂ ಸ್ಥಳವನ್ನು ಕರಾರುವಾಕ್ಕಾಗಿ ಅಭ್ಯಸಿಸಿ, ನೇರವಾಗಿ ಸೂರ್ಯಕಿರಣ ಸ್ಪರ್ಶಿಸುವ ರೀತಿಯಲ್ಲಿ ಮಂದಿರವನ್ನು ವಿನ್ಯಾಸ ಮಾಡಬಹುದಿತ್ತೇನೊ?

ವೀರೇಶ ಬಂಗಾರಶೆಟ್ಟರ, ಕುಷ್ಟಗಿ

ಹೆಚ್ಚಬೇಕಿದೆ ಕನ್ನಡಿಗರ ಪ್ರಾತಿನಿಧ್ಯ

ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2023ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ ಕರ್ನಾಟಕದ 25 ಅಭ್ಯರ್ಥಿಗಳು ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಆದರೆ ಉತ್ತರ ಭಾರತದ ರಾಜ್ಯಗಳು, ನೆರೆಯ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಾಗರಿಕ ಸೇವಾ ಪರೀಕ್ಷೆ ಪಾಸು ಮಾಡುವುದರಲ್ಲಿ ಕರ್ನಾಟಕದ ಪ್ರಾತಿನಿಧ್ಯ ಕಡಿಮೆಯೇ ಇದೆ. ಇದಲ್ಲದೆ, ಕೇಂದ್ರ ಸರ್ಕಾರದಲ್ಲಿ ಕರ್ನಾಟಕ ಮೂಲದ ಅಖಿಲ ಭಾರತ ಸೇವೆಯ ಅಧಿಕಾರಿಗಳ ಪ್ರಾತಿನಿಧ್ಯವೂ ಅಷ್ಟಾಗಿ ಇಲ್ಲ. ಕೇಂದ್ರ ಸರ್ಕಾರದ ಇಲಾಖೆಗಳ ವಿವಿಧ ಸ್ತರದ ಹುದ್ದೆಗಳಿಗೆ ಕರ್ನಾಟಕದಿಂದ ನೇಮಕವಾಗುವವರ ಸಂಖ್ಯೆಯೂ ಉತ್ತರ ಭಾರತದ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕಡಿಮೆಯೇ ಇದೆ. ಈ ದಿಸೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲಿಚ್ಛಿಸುವ ಆಕಾಂಕ್ಷಿಗಳಿಗೆ ಪೋಷಕರು ಬಹಳಷ್ಟು ಉತ್ತೇಜನ ನೀಡಬೇಕಾಗಿದೆ.

ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲಾಡಳಿತವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವವರಿಗೆ ಅನುಕೂಲ ಆಗಲೆಂದು ನಗರ ಕೇಂದ್ರ ಗ್ರಂಥಾಲಯವು ಮಧ್ಯರಾತ್ರಿ ಹನ್ನೆರಡರವರೆಗೂ ಕಾರ್ಯನಿರ್ವಹಿಸಲು ಅನುವಾಗಿಸಿದ್ದನ್ನು ಕೇಳಿದ್ದೇವೆ. ರಾಜ್ಯದ ಎಲ್ಲ ಜಿಲ್ಲಾ ಹಾಗೂ ನಗರ ಕೇಂದ್ರ ಗ್ರಂಥಾಲಯಗಳಲ್ಲೂ ಇದೇ ರೀತಿ ಸಮಯವನ್ನು ವಿಸ್ತರಿಸಬೇಕು. ಇಂತಹ ನಡೆಯಿಂದ ಐಎಎಸ್, ಕೆಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವವರಿಗೆ ಹೆಚ್ಚಿನ ಅನುಕೂಲ ಆಗುತ್ತದೆ.

ಪ್ರಸಾದ್ ಜಿ.ಎಂ., ಮೈಸೂರು

ವರುಣನ ಪ್ರವಾಸ!

'ವರುಣ'ನು ಬಹುಶಃ
ದುಬೈ ಪ್ರವಾಸ
ಕೈಗೊಂಡಿರಬೇಕು!
ಅಲ್ಲಿ ಪ್ರವಾಹ ಸೃಷ್ಟಿಸಿದ್ದಾನೆ,
ಅದಕ್ಕೇ ಇಲ್ಲಿ ಮರಳುನಾಡಿನ
ಉಷ್ಣತೆಯ ಅನುಭವ
ನಮಗೆ ಆಗುತ್ತಿರಬಹುದು!

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ನೀರಿನ ದುರ್ಬಳಕೆ: ಹಳ್ಳಿಗಳೂ ಕಡಿಮೆಯಿಲ್ಲ

ರಾಜ್ಯದಾದ್ಯಂತ ಇರುವ ನೀರಿನ ಅಭಾವದ ಪರಿಸ್ಥಿತಿಯನ್ನು ವಿವರಿಸಿರುವ ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಅವರು (ವಾ.ವಾ., ಏ. 18), ಶ್ರೀಮಂತರು ಹಾಗೂ ಅಧಿಕಾರಿಗಳು ತಮ್ಮ ಹಣಬಲ ಹಾಗೂ ಅಧಿಕಾರದ ಬಲದಿಂದ ನೀರನ್ನು ಪೋಲು ಮಾಡುವ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಇದು ನಗರ ಪ್ರದೇಶಗಳಲ್ಲಿ ನಡೆಯುವ ನೀರಿನ ದುರ್ಬಳಕೆಯಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಇರುವ ಅದರ ಇನ್ನೊಂದು ಮುಖವೂ ಅನಾವರಣಗೊಳ್ಳಬೇಕಾಗಿದೆ! ರೈತರು ತಮ್ಮ ಅಡಿಕೆ ತೋಟ ಮತ್ತು ಜಮೀನುಗಳಿಗೆ ಸಮೀಪದ ಹೊಳೆ, ಹಳ್ಳ, ನದಿಯಂತಹ ನೀರಿನ ಮೂಲಗಳಿಗೆ ದೊಡ್ಡ ಪ್ರಮಾಣದಲ್ಲಿ ಮಾರಿಗೆ ಒಂದೊಂದು ನೀರೆತ್ತುವ ಪಂಪ್‌ಸೆಟ್‌ಗಳನ್ನು ಅಳವಡಿಸಿರುತ್ತಾರೆ. ಈ ಮೂಲಕ ಅನವಶ್ಯಕವಾಗಿ ನೀರು ಹಾಯಿಸುವ ಪರಿಪಾಟವನ್ನು ನಾವು ನೋಡುತ್ತಿದ್ದೇವೆ. ಇದರಿಂದ ಸದಾಕಾಲ ನೀರು ಹರಿಯಬೇಕಾಗಿದ್ದ ನದಿಗಳೂ ಇಂದು ಬರಿದಾಗುತ್ತಿವೆ.

ಕುಡಿಯುವ ನೀರಿನ ಸಮಸ್ಯೆಯಿಂದ ಜನ–ಜಾನುವಾರುಗಳು ತತ್ತರಿಸಿ ಹೋಗುತ್ತಿರುವ ಪರಿಸ್ಥಿತಿಯಲ್ಲಿ, ಜಮೀನಿಗೆ ನೀರು ಹಾಯಿಸಲು ಇಟ್ಟಿರುವ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಿ, ಆ ನದಿಯ ನೀರನ್ನು ಟ್ಯಾಂಕರ್ ಮೂಲಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಇರುವ ಕಡೆ ಮನೆ ಮನೆಗೆ ಒದಗಿಸಲು ಮುಂದಾಗಬೇಕು. ಇದಕ್ಕಾಗಿ ಸ್ಥಳೀಯ ಸಂಸ್ಥೆಗಳಿಗೆ ವಿಶೇಷ ಅನುದಾನ ನೀಡುವ ಮೂಲಕ ಸರ್ಕಾರವು ಜನ– ಜಾನುವಾರುಗಳ ಜೀವ ರಕ್ಷಣೆಗೆ ಮುಂದಾಗಬೇಕಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಏಕಪಕ್ಷದ ಸಾರ್ವಭೌಮತ್ವ ಅಪಾಯಕಾರಿ

'ಮೋದಿ ಮತ್ತು ಸ್ವನಾಮಪ್ರೇಮ' ಎಂಬ ಸುಧೀಂದ್ರ ಕುಲಕರ್ಣಿ ಅವರ ಲೇಖನ (ಪ್ರ.ವಾ., ಏ. 16) ಸಮಯೋಚಿತವಾಗಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇರುವ ದೇಶದ ಏಕೈಕ ಪಕ್ಷ ಎಂದು ಬಿಂಬಿಸಿಕೊಳ್ಳುವ ಬಿಜೆಪಿ ತನ್ನ ಚುನಾವಣಾ ಪ್ರಚಾರದಲ್ಲಿ 'ನಿಮ್ಮ ಮತವನ್ನು ನರೇಂದ್ರ ಮೋದಿಯವರ ಹೆಸರಿಗೆ ಚಲಾಯಿಸಿ' ಎಂದು ಕೇಳುತ್ತಿರುವ ಪರಿಯನ್ನು ನೋಡಿದರೆ, ಆ ಪಕ್ಷವು ಏಕಪಾತ್ರಾಭಿನಯ ಮಾಡುವ ತಂಡದಂತೆ ಭಾಸವಾಗುತ್ತದೆ. ಹಾಗಿದ್ದರೆ ಉಳಿದೆಲ್ಲ ಕ್ಷೇತ್ರಗಳಿಗೆ ಆ ಪಕ್ಷದ ಅಭ್ಯರ್ಥಿಗಳು ಯಾಕೆ ಬೇಕು? ಒಬ್ಬ ವ್ಯಕ್ತಿಯೇ ಎಲ್ಲವನ್ನೂ ನಿಭಾಯಿಸಲು ಶಕ್ತನಾಗುವುದಾದರೆ ಇಷ್ಟೆಲ್ಲಾ ಖರ್ಚು ಮಾಡಿ ಚುನಾವಣೆ ನಡೆಸುವ ಜರೂರತ್ತಾದರೂ ಏನು ಎಂಬ ಪ್ರಶ್ನೆಗಳು ಮೂಡದೇ ಇರವು.

ಬಿಜೆಪಿಯ ಪ್ರಣಾಳಿಕೆ ಸಹ ಇದು 'ಮೋದಿಯವರ ಗ್ಯಾರಂಟಿ' ಎಂದು ಹೇಳುವ ಮೂಲಕ, ಸಾಮೂಹಿಕ ನಾಯಕತ್ವದಲ್ಲಿ ನಂಬಿಕೆ ಇಲ್ಲದ ಪಕ್ಷ ಎಂದು ಪರೋಕ್ಷವಾಗಿ ಘೋಷಿಸಿಕೊಳ್ಳುತ್ತಿರುವಂತೆ ಗೋಚರಿಸುತ್ತದೆ. ಸದೃಢ ಆಡಳಿತ ಪಕ್ಷವನ್ನು ಮಾತ್ರವಲ್ಲ ಸದೃಢ ಮತ್ತು ಸಕ್ರಿಯ ವಿರೋಧ ಪಕ್ಷವನ್ನು ಸಹ ಚುನಾಯಿಸಬೇಕು ಎಂಬುದನ್ನು ನಾವು ಮರೆಯಬಾರದು. ಆಗಮಾತ್ರ ಪ್ರಜಾಪ್ರಭುತ್ವ ಉಳಿದೀತು. ಅತಿಯಾದರೆ ಅಮೃತವೂ ವಿಷ ಎಂಬಂತೆ, ಅತ್ಯಧಿಕ ಸ್ಥಾನಗಳನ್ನು ಒಂದೇ ಪಕ್ಷಕ್ಕೆ ನೀಡುವುದು ಅತಂತ್ರ ಲೋಕಸಭೆಗಿಂತಲೂ ಘೋರ ಪರಿಣಾಮವನ್ನು ಉಂಟುಮಾಡಬಹುದು.

ರವಿಚಂದ್ರ ಎಂ., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನೆ

ವಿವಿ-ಪ್ಯಾಟ್: ಪೂರ್ಣ ಎಣಿಕೆ ಸಾಧ್ಯವೇ?

ಇವಿಎಂ ಮತಗಳು ಮತ್ತು ಎಲ್ಲಾ ವಿವಿ–ಪ್ಯಾಟ್‌ಗಳಲ್ಲಿನ ಮತಗಳನ್ನು ಪರಸ್ಪರ ತಾಳೆ ನೋಡಬೇಕು ಎಂದು ಸ್ವಯಂಸೇವಾ ಸಂಸ್ಥೆಗಳು, ಸಾಮಾಜಿಕ ಕಾರ್ಯಕರ್ತರು ಸಲ್ಲಿಸಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಗುರುವಾರ ಪೂರ್ಣಗೊಳಿಸಿದೆ. ಆದರೆ ಇದೇ 16ರಂದು ನಡೆದಿದ್ದ ವಿಚಾರಣೆ ವೇಳೆ ಈ ಬಗ್ಗೆ ವಿವರಣೆ ನೀಡಿ ಎಂದು ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚಿಸಿತ್ತು. ಆಯೋಗವೂ ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ಇವಿಎಂ ಮತ್ತು ವಿವಿ–ಪ್ಯಾಟ್ ವ್ಯವಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ವಿವರ ನೀಡಿತ್ತು. ಆದರೂ, ಗುರುವಾರದ ವಿಚಾರಣೆ ವೇಳೆ ಪೀಠವು ಆಯೋಗದ ಮುಂದೆ ಮತ್ತಷ್ಟು ಪ್ರಶ್ನೆಗಳನ್ನು ಇರಿಸಿತ್ತು

‘ವಿವಿ–ಪ್ಯಾಟ್ ಚೀಟಿ ಎಣಿಕೆ ಕಷ್ಟ’

ಒಂದು ಕ್ಷೇತ್ರದಲ್ಲಿ ಬಳಕೆಯಾಗುವ ಎಲ್ಲಾ ವಿವಿ–ಪ್ಯಾಟ್‌ಗಳಲ್ಲಿನ ಮುದ್ರಿತ ಚೀಟಿಗಳನ್ನು ಎಣಿಕೆ ಮಾಡುವುದು ಕಷ್ಟ. ಜತೆಗೆ ಆಯೋಗದ ಬಳಿ 17 ಲಕ್ಷದಷ್ಟು ವಿವಿ–ಪ್ಯಾಟ್‌ಗಳು ಮಾತ್ರ ಇವೆ ಎಂದು ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ಗೆ ಹೇಳಿದೆ. ಈ ಲೋಕಸಭಾ ಚುನಾವಣೆಯಲ್ಲಿ ಎಷ್ಟು ಇವಿಎಂಗಳು ಮತ್ತು ಎಷ್ಟು ವಿವಿ–ಪ್ಯಾಟ್ ಯಂತ್ರಗಳು ಬಳಕೆಯಾಗುತ್ತವೆ ಎಂಬ ಮಾಹಿತಿ ಲಭ್ಯವಿಲ್ಲ

- **ಸುಪ್ರೀಂ ಕೋರ್ಟ್ ಪೀಠ:** ಎಲ್ಲಾ ವಿವಿ–ಪ್ಯಾಟ್‌ಗಳನ್ನು ಇವಿಎಂಗಳೊಂದಿಗೆ ತಾಳೆ ಮಾಡಿ ನೋಡಲು ಇರುವ ತೊಡಕುಗಳೇನು? ಒಂದು ವಿವಿ–ಪ್ಯಾಟ್‌ನಲ್ಲಿನ ಚೀಟಿಗಳನ್ನು ಎಣಿಕೆ ಮಾಡಲು ಐದು ತಾಸು ಬೇಕು ಎಂದಿದ್ದೀರಿ. 5,000–6,000 ಚೀಟಿಗಳನ್ನು ಎಣಿಕೆ ಮಾಡಲು ಐದು ತಾಸು ಏಕೆ ಬೇಕು?

ಚುನಾವಣಾ ಆಯೋಗ: ವಿವಿ–ಪ್ಯಾಟ್‌ನಲ್ಲಿ ಚೀಟಿ ಮುದ್ರಿಸಲು ಬಳಸುವ ಕಾಗದವು ತೀರಾ ತೆಳುವಾಗಿರುತ್ತದೆ ಮತ್ತು ಕೈಗೆ ಅಂಟಿಕೊಳ್ಳುತ್ತದೆ. ಅವು ಎಣಿಕೆಗೆ ಬಳಸುವಂತಹ ಕಾಗದಗಳಲ್ಲ. ಹೀಗಾಗಿ ಅವನ್ನು ಎಣಿಕೆ ಮಾಡಲು ಹೆಚ್ಚಿನ ಸಮಯ ಬೇಕಾಗುತ್ತದೆ. ಹೀಗಾಗಿ ಎಲ್ಲಾ ವಿವಿ–ಪ್ಯಾಟ್‌ಗಳನ್ನು ಎಣಿಕೆ ಮಾಡುವುದು ಕಷ್ಟ.

- **ಪೀಠ:** ವಿವಿ–ಪ್ಯಾಟ್‌ಗಳು ಮುದ್ರಿಸುವ ಚೀಟಿಗಳಲ್ಲಿ ಒಂದು ಪ್ರತಿಯನ್ನು ಮತದಾರರಿಗೆ ನೀಡಲು ಸಾಧ್ಯವಿದೆಯೇ?

ಆಯೋಗ: ಹಾಗೆ ಮತದಾನದ ಚೀಟಿಗಳನ್ನು ಮತದಾರರಿಗೆ ನೀಡಿದರೆ ಅವರ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ. ಅವು ದುರ್ಬಳಕೆಯಾಗುವ ಅಪಾಯವೂ ಇದೆ.

- **ಪೀಠ:** ಚುನಾವಣಾ ಆಯೋಗದ ಬಳಿ ಎಷ್ಟು ವಿವಿ–ಪ್ಯಾಟ್‌ಗಳಿವೆ?

ಆಯೋಗ: ನಮ್ಮಲ್ಲಿ ಎರಡು ಕೋಟಿ ಇವಿಎಂಗಳು ಮತ್ತು 17 ಲಕ್ಷ ವಿವಿಪ್ಯಾಟ್‌ಗಳಿವೆ.



‘ಎಸ್‌ಎಲ್ ಯುನಿಟ್ ಸೀಲ್ ವ್ಯವಸ್ಥೆ ಇಲ್ಲ’

ಇವಿಎಂ ವ್ಯವಸ್ಥೆಯೊಳಗೆ ಸಿಂಬಲ್ ಲೋಡಿಂಗ್ ಯುನಿಟ್ ಎಂಬ ಇನ್ನೊಂದು ಯಂತ್ರ/ಸಾಧನವನ್ನು ಬಳಸಲಾಗುತ್ತದೆ ಎಂಬುದನ್ನು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಉತ್ತರದಲ್ಲಿ ಬಹಿರಂಗಪಡಿಸಿದೆ. ವಿಚಾರಣೆ ವೇಳೆ ಪೀಠವು ಈ ಬಗ್ಗೆ ಇನ್ನಷ್ಟು ಪ್ರಶ್ನೆಗಳನ್ನು ಕೇಳಿತ್ತು. ಆಗ, ಆ ಯಂತ್ರ/ಸಾಧನಗಳು ಮತ ತಿರುಚಲು ಬಳಕೆಯಾಗುವುದನ್ನು ತಡೆಯುವ ವ್ಯವಸ್ಥೆ ಇಲ್ಲ ಎಂದು ಆಯೋಗ ಹೇಳಿದೆ.

- **ಪೀಠ:** ವಿವಿ–ಪ್ಯಾಟ್‌ನಲ್ಲಿ ಯಾವುದೇ ತಂತ್ರಾಂಶವಿರುವುದಿಲ್ಲವೇ?

ಆಯೋಗ: ಇಲ್ಲ. ಅದು ಒಂದು ಮುದ್ರಣ ಯಂತ್ರ ಮಾತ್ರ. ಅದರಲ್ಲಿ 4 ಎಂಬಿಯಷ್ಟು ಮೆಮೊರಿ ಚಿಪ್ ಇರುತ್ತದೆ. ಅಭ್ಯರ್ಥಿಗಳ ಕ್ರಮಸಂಖ್ಯೆ, ಹೆಸರು, ಪಕ್ಷದ ಚಿಹ್ನೆ ವಿವರಗಳನ್ನು ಒಳಗೊಂಡ ‘ಇಮೇಜ್’ಗಳನ್ನು (ಎಲೆಕ್ಟೋರಲ್ ಬ್ಯಾಲೆಟ್) ಕ್ಷೇತ್ರ ಚುನಾವಣಾ ಅಧಿಕಾರಿ ಸಿದ್ಧಪಡಿಸುತ್ತಾರೆ. ಅವನ್ನು ವಿವಿ–ಪ್ಯಾಟ್ ಯಂತ್ರಗಳಿಗೆ, ‘ಸಿಂಬಲ್ ಅಪ್‌ಲೋಡ್ ಯುನಿಟ್–ಎಸ್‌ಎಲ್‌ಯು’ ಅನ್ನು ಬಳಸಿ ಅಪ್‌ಲೋಡ್ ಮಾಡಲಾಗುತ್ತದೆ.

- **ಪೀಠ:** ಹಾಗಿದ್ದಲ್ಲಿ ಒಂದು ಕ್ಷೇತ್ರದಲ್ಲಿ ಎಷ್ಟು ಎಸ್‌ಎಲ್‌ಯುಗಳನ್ನು ಬಳಸುತ್ತೀರಿ?

ಆಯೋಗ: ಒಂದು ಕ್ಷೇತ್ರಕ್ಕೆ ಒಂದೇ ಎಸ್‌ಎಲ್‌ಯು ಬಳಸುತ್ತೇವೆ. ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೂ ಅವು ಚುನಾವಣಾ ಅಧಿಕಾರಿಯ ಬಳಿ ಇರುತ್ತವೆ.

- **ಪೀಠ:** ‘ಎಲೆಕ್ಟೋರಲ್ ಬ್ಯಾಲೆಟ್’ಗಳನ್ನು ಸಿದ್ಧಪಡಿಸಿದ ನಂತರ ಎಸ್‌ಎಲ್‌ಯು ಅನ್ನು ತಿರುಚುವುದನ್ನು ತಡೆಯಲು ಯಾವುದಾದರೂ ವ್ಯವಸ್ಥೆ ನಿಮ್ಮ ಬಳಿ ಇದೆಯೇ? ಎಸ್‌ಎಲ್‌ಯು ಯಂತ್ರಗಳನ್ನು ಸೀಲ್ ಮಾಡಿ ಇಡುತ್ತೀರಾ?

ಆಯೋಗ: ಎಸ್‌ಎಲ್‌ಯು ಯಂತ್ರಗಳನ್ನು ಸೀಲ್ ಮಾಡಿ ಇಡುವ ವ್ಯವಸ್ಥೆ ಸದ್ಯಕ್ಕೆ ಇಲ್ಲ.

* ಎಸ್‌ಎಲ್‌ಯು ಯಾವ ಸ್ವರೂಪದ ಯಂತ್ರ ಎಂಬುದನ್ನು ಆಯೋಗ ವಿವರಿಸಿಲ್ಲ

ಸಾಲಿಸಿಟರ್ ಜನರಲ್ ಆರೋಪ ನಿರಾಕರಣೆ



ಗುರುವಾರದ ವಿಚಾರಣೆ ಇನ್ನೇನು ಮುಗಿಯುತ್ತದೆ ಎಂಬ ವೇಳೆಗೆ ಚುನಾವಣಾ ಆಯೋಗದ ಪರವಾಗಿ ಪೀಠದ ಮುಂದೆ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಅರ್ಜಿದಾರರ ವಿರುದ್ಧ ಹರಿಹಾಯ್ದರು.

‘ಈ ಮೂಲಕ ಮತದಾರನ ಆಯ್ಕೆಯನ್ನು ಲೇವಡಿ ಮಾಡಲಾಗುತ್ತಿದೆ. ವರ್ಷಗಳಿಂದ ಸುಮ್ಮನಿದ್ದು, ಚುನಾವಣೆ ಒಂದೆರಡು ದಿನ ಇದೆ ಎನ್ನುವಾಗ ಅರ್ಜಿ ಸಲ್ಲಿಸುತ್ತಾರೆ’ ಎಂದು ತುಷಾರ್ ಮೆಹ್ತಾ ಪೀಠದ ಎದುರು ಆರೋಪಿಸಿದರು.

ಅದಕ್ಕೆ ಪ್ರತಿಕ್ರಿಯೆ ನೀಡಿದ ಪೀಠವು, ‘ಈ ಅರ್ಜಿಗಳು ಒಂದು ವರ್ಷದ ಹಿಂದೆಯೇ ಸಲ್ಲಿಕೆಯಾಗಿವೆ. ಕಾರ್ಯದೊತ್ತಡದ ಕಾರಣ ನಾವೇ ಅವುಗಳನ್ನು ವಿಚಾರಣೆಗೆ ಎತ್ತಿಕೊಳ್ಳಲು ಸಾಧ್ಯವಾಗಿರಲಿಲ್ಲ. ಅವುಗಳನ್ನು ಚುನಾವಣೆಯ ಹೊಸ್ತಿಲಲ್ಲಿ ಸಲ್ಲಿಸಿಲ್ಲ’ ಎಂದು ವಿವರಿಸಿತು ಮತ್ತು ತುಷಾರ್ ಮೆಹ್ತಾ ಅವರ ಆರೋಪವನ್ನು ನಿರಾಕರಿಸಿತು.

‘ಎಲ್ಲವನ್ನೂ ಅನುಮಾನಿಸಬಾರದು’: ವಿವಿ–ಪ್ಯಾಟ್ ಯಂತ್ರದಲ್ಲಿ ಚೀಟಿ ಗೋಚರವಾಗುವ ಕಿಂಡಿಯಲ್ಲಿ ‘ಟಿಂಟ್’ ಹಾಕಿರುವ ಗಾಜನ್ನು ಬಳಸಲಾಗಿದೆ. ಏಳು ಸೆಕೆಂಡ್ ಬಲ್ಬ್ ಉರಿಯುವಾಗ ಮಾತ್ರ ಅದು ಕಾಣುತ್ತದೆ. ಆಮೇಲೆ ಅದು ಏನಾಯಿತು ಎಂಬುದು ಕಾಣುವುದಿಲ್ಲ. ಹೀಗಾಗಿ ಸಂಪೂರ್ಣ ಪಾರದರ್ಶಕವಾದ ಗಾಜನ್ನು ಅಳವಡಿಸಬೇಕು. ಮತ್ತು ಬಲ್ಬ್ ಸದಾ ಉರಿಯುತ್ತಿರುವಂತೆ ಯಂತ್ರವನ್ನು ಮಾರ್ಪಡಿಸಬೇಕು ಎಂದು ಎಡಿಆರ್ ಪರ ವಕೀಲ ಪ್ರಶಾಂತ್ ಭೂಷಣ್ ಪೀಠಕ್ಕೆ ಮನವಿ ಮಾಡಿದರು.

ಆದರೆ ಈ ಬಗ್ಗೆ ಪೀಠವು ಯಾವುದೇ ಚರ್ಚೆ ನಡೆಸಲಿಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಪ್ರಶಾಂತ್ ಭೂಷಣ್ ಅವರು ಈ ವಿಚಾರವನ್ನು ಹಲವು ಬಾರಿ ಪ್ರಸ್ತಾಪಿಸಿದ್ದರು. ಇದಕ್ಕೆ ಪೀಠವು, ‘ಎಲ್ಲವನ್ನೂ ಅನುಮಾನಿಸುತ್ತಾ ಇರಬಾರದು. ಯಾವುದೂ ಸರಿ ಇಲ್ಲ ಎಂದು ಅಂದುಕೊಳ್ಳುವುದರಲ್ಲಿ ಅರ್ಥವಿಲ್ಲ. ಕೆಲವದರ ಮೇಲಾದರೂ ನಂಬಿಕೆ ಇರಿಸಿಕೊಳ್ಳಬೇಕು’ ಎಂದು ಹೇಳಿತು.

‘17ಎ ಅರ್ಜಿ ಮತ್ತು ಇವಿಎಂ ಮತಗಳ ತಾಳೆ ಇಲ್ಲ’

ಮತಗಟ್ಟೆಯೊಳಗೆ ಮತದಾನದ ಅಧಿಕಾರಿಯ ಬಳಿ ಅರ್ಜಿ ನಮೂನೆ 17ಎ ಇರುತ್ತದೆ. ಇದರಲ್ಲಿ ಪ್ರತಿ ಮತದಾರನ ವಿವರ, ಆತ ತೋರಿಸಿದ ಗುರುತಿನ ಚೀಟಿಯ ಸ್ವರೂಪ ಮತ್ತು ಸಂಖ್ಯೆ ಹಾಗೂ ಸಹಿ ಇರುತ್ತದೆ. 17ಎ ಅರ್ಜಿ ನಮೂನೆಯ ಆಧಾರದ ಮೇಲೆಯೇ ಇಂತಿಷ್ಟು ಸಮಯದಲ್ಲಿ ಇಷ್ಟು ಪ್ರಮಾಣದ ಮತದಾನ ನಡೆದಿದೆ ಎಂದು ಘೋಷಿಸಲಾಗುತ್ತದೆ.

17ಎ ಅರ್ಜಿಗಳಲ್ಲಿ ನಮೂದಾದ ಅಷ್ಟೂ ಮತದಾರರ ಸಂಖ್ಯೆಯು ಇವಿಎಂನ ‘ಕಂಟ್ರೋಲ್ ಯುನಿಟ್’ನಲ್ಲೂ ದಾಖಲಾಗುತ್ತದೆ. ಅಣಕು ಮತಗಳು ಮತ್ತು ವಿವಿಧ ಕಾರಣಗಳಿಗೆ ತಿರಸ್ಕೃತವಾದ ಮತಗಳನ್ನು ಹೊರತುಪಡಿಸಿ ಉಳಿದ ಮತಗಳ ವಿವರವನ್ನು ಅರ್ಜಿ ನಮೂನೆ 17ಸಿಯಲ್ಲಿ ನಮೂದಿಸಲಾಗುತ್ತದೆ. 17ಎ ಮತ್ತು 17ಸಿ ಅರ್ಜಿ ನಮೂನೆಗಳನ್ನು ಪರಸ್ಪರ ಹೋಲಿಸಿ ನೋಡಲಾಗುತ್ತದೆ. 17ಸಿ ಮತ್ತು ಇವಿಎಂಗಳಲ್ಲಿನ ಮತಗಳನ್ನೂ ಹೋಲಿಸಿ ನೋಡಲಾಗುತ್ತದೆ. ಆದರೆ ಎಷ್ಟು ಮತದಾರರು ಮತದಾನ ಮಾಡಿದರು ಎಂಬ ವಿವರ ಇರುವ 17ಎ ಮತ್ತು ಇವಿಎಂನಲ್ಲಿನ ಮತಗಳನ್ನು ತಾಳೆ ನೋಡುವುದಿಲ್ಲ ಎಂದು ಆಯೋಗವು ವಿವರಿಸಿದೆ.

> ಇವಿಎಂಗಳಲ್ಲಿ ಯಾವುದೋ ಪಕ್ಷಕ್ಕೆ ಹೆಚ್ಚಿನ ಮತಗಳು ಬೀಳುವುದಿಲ್ಲ. ಅಂತಹ ಹಲವು ದೂರುಗಳು ಬಂದಿದ್ದವು. ಅವುಗಳಲ್ಲಿ ಒಂದರಲ್ಲಿ ಮಾತ್ರ ಹೆಚ್ಚುವರಿ ಮತ ಬಿದ್ದಿರುವುದು ಪತ್ತೆಯಾಯಿತು. ಅಣಕು ಮತದಾನದ ಮತಗಳನ್ನು ಅಳಿಸದೇ ಇದ್ದಾಗ ಹೀಗೆ ಆಗುತ್ತದೆ
>
> **ಚುನಾವಣಾ ಆಯೋಗದ ವಿವರಣೆ**

‘ಬಟನ್ ಒತ್ತದಿದ್ದರೂ ಬಿಜೆಪಿಗೆ ಮತ’

‘ಕಾಸರಗೋಡು ಲೋಕಸಭಾ ಕ್ಷೇತ್ರದಲ್ಲಿ ಏ.17ಕ್ಕೆ ಅಣಕು ಮತದಾನ ನಡೆದಿತ್ತು. ಈ ಪ್ರಕ್ರಿಯೆ ವೇಳೆ ಬಿಜೆಪಿಯ ಬಟನ್ ಒತ್ತದಿದ್ದರೂ ವಿವಿಪ್ಯಾಟ್‌ನಲ್ಲಿ ಬಿಜೆಪಿಗೆ ಮತ ಹೋಗಿದೆ. ನಾಲ್ಕು ಇವಿಎಂಗಳಲ್ಲಿ ಇಂಥ ದೋಷ ಕಂಡುಬಂದಿದೆ’ ಎಂದು ಕೇರಳದ ‘ಮಲೆಯಾಳ ಮನೋರಮಾ’ ಪತ್ರಿಕೆ ವರದಿ ಮಾಡಿದೆ. ಎಲ್‌ಡಿಎಫ್ ಈ ಕುರಿತು ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಈ ನಾಲ್ಕು ಇವಿಎಂಗಳನ್ನು ಬದಲಾಯಿಸುವಂತೆಯೂ ಕೋರಿದೆ. ಸಂಬಂಧಿತ ಚುನಾವಣಾ ಅಧಿಕಾರಿಯೂ ಇದನ್ನು ದೃಢಪಡಿಸಿದ್ದಾರೆ.

ಕ್ಷೇತ್ರ ಚುನಾವಣಾ ಅಧಿಕಾರಿಯು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ‘ಇವಿಎಂಗಳನ್ನು ಆನ್ ಮಾಡುತ್ತಿದ್ದಂತೆಯೇ ನಾಲ್ಕು ಇವಿಎಂಗಳಲ್ಲಿ ದೋಷ ಕಾಣಿಸಿಕೊಂಡಿದೆ. ಎಲ್ಲ ವಿವಿಪ್ಯಾಟ್‌ಗಳಲ್ಲಿಯೂ ಮೊದಲ ಮತಪತ್ರದಲ್ಲಿ ‘ಇದನ್ನು ಎಣಿಸಬಾರದು’ ಎಂಬ ವಾಕ್ಯ ಮಾತ್ರ ಇರಬೇಕು. ಆದರೆ, ದೋಷ ಇರುವ ಈ ನಾಲ್ಕು ಇವಿಎಂಗಳಲ್ಲಿ ‘ಇದನ್ನು ಎಣಿಸಬಾರದು’ ಎಂಬ ವಾಕ್ಯದೊಂದಿಗೆ ಕ್ರಮಸಂಖ್ಯೆಯಲ್ಲಿ ಮೊದಲಿದ್ದ ಪಕ್ಷದ ಚಿಹ್ನೆಯೂ ಮುದ್ರಣವಾಗಿದೆ. ನಾನು ಈ ಬಗ್ಗೆ ಜಿಲ್ಲಾಧಿಕಾರಿಗೆ ವರದಿ ನೀಡಿದ್ದೇನೆ’ ಎಂದು ಅಧಿಕಾರಿ ಹೇಳಿರುವುದಾಗಿ ಪತ್ರಿಕೆ ವರದಿ ಮಾಡಿದೆ.

ಕಾಸರಗೋಡು ಲೋಕಸಭಾ ಕ್ಷೇತ್ರದಲ್ಲಿ ಒಟ್ಟು 190 ಬೂತ್‌ಗಳಿವೆ ಹಾಗೂ 228 ಇವಿಎಂಗಳಿಗೆ. ಇವುಗಳಿಗೆ ಬುಧವಾರ ಅಣಕು ಮತದಾನ ನಡೆದಿದೆ. ಇವುಗಳಲ್ಲಿ 20 ಇವಿಎಂಗಳ ಅಣಕು ಮತದಾನವನ್ನು ಏಕಕಾಲದಕ್ಕೆ ನಡೆಸಲಾಗಿತ್ತು. ಈ ಇವಿಎಂಗಳಲ್ಲಿ 10 ಬಟನ್‌ಗಳು ಇದ್ದವು. ‘ಇವುಗಳಲ್ಲಿ ಮೊದಲ ಕ್ರಮಸಂಖ್ಯೆಯಲ್ಲಿ ಬಿಜೆಪಿ ಇತ್ತು. ಏಕ ಕಾಲದಲ್ಲಿ ಈ 20 ಇವಿಎಂಗಳ ಒಂದೊಂದೇ ಬಟನ್‌ಗಳನ್ನು ಒತ್ತಲಾಯಿತು. ಈ ವೇಳೆ ನಾಲ್ಕು ಇವಿಎಂಗಳಲ್ಲಿ ಎರಡು ಮತಗಳು ಬಿಜೆಪಿಗೆ ಹೋಗಿವೆ. ಬಿಜೆಪಿಯ ಬಟನ್ ಅನ್ನು ಒತ್ತದೇ ಇದ್ದಾಗಲೂ ಇದೇ ನಾಲ್ಕು ಇವಿಎಂಗಳಲ್ಲಿ ಒಂದು ಮತವು ಬಿಜೆಪಿಗೆ ಬಿದ್ದಿದೆ’ ಎಂದು ಯುಡಿಎಫ್ ಅಭ್ಯರ್ಥಿಯ ಏಜೆಂಟ್ ಆರೋಪಿಸಿದ್ದಾರೆ.

ಈ ಎಲ್ಲಾ ವಿಚಾರವನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಪರ ವಕೀಲ ಪ್ರಶಾಂತ್ ಭೂಷಣ್ ಅವರು ಗುರುವಾರದ ವಿಚಾರಣೆ ಸಂದರ್ಭದಲ್ಲಿ ಪ್ರಸ್ತಾಪಿಸಿದರು. ಈ ವಿಷಯ ಪ್ರಸ್ತಾಪವಾಗುತ್ತಿದ್ದಂತೆಯೇ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತಾ ಅವರು ಚುನಾವಣಾ ಆಯೋಗಕ್ಕೆ ಈ ಬಗ್ಗೆ ಪರಿಶೀಲನೆ ನಡೆಸುವಂತೆ ಮೌಖಿಕ ಆದೇಶ ನೀಡಿದರು. ಮಧ್ಯಾಹ್ನದ ಊಟದ ವಿರಾಮದ ಬಳಿಕ, ಚುನಾವಣಾ ಆಯೋಗದ ಪರ ವಕೀಲ ಮನಿಂದರ್ ಸಿಂಗ್ ಅವರು, ಅಣಕು ಮತದಾನದಲ್ಲಿ ಬಿಜೆಪಿಯ ಬಟನ್ ಒತ್ತದಿದ್ದರೂ, ಬಿಜೆಪಿ ಮತ ಹೋಗಿದೆ ಎನ್ನುವುದು ಸುಳ್ಳು ಸುದ್ದಿ ಎಂದು ಪೀಠಕ್ಕೆ ತಿಳಿಸಿದರು.

‘ಪತ್ರಿಕೆಯು ತಪ್ಪು ವರದಿ ಪ್ರಕಟಿಸಿದೆ. ಜಿಲ್ಲಾಧಿಕಾರಿಯಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಇಂಥದ್ದು ನಡೆದಿಲ್ಲ ಎಂದು ಅವರು ತಿಳಿಸಿದ್ದಾರೆ. ಈ ಬಗ್ಗೆ ನಾವು ವಿಸ್ತೃತ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ’ ಎಂದು ಹೇಳಿದರು. ‘ತನ್ನ ಅಧಿಕಾರಿ ನೀಡಿದ ಹೇಳಿಕೆಯನ್ನೇ ಚುನಾವಣಾ ಆಯೋಗ ತಪ್ಪು ಎಂದು ನ್ಯಾಯಾಲಯಕ್ಕೆ ತಿಳಿಸಿದೆ’ ಎಂದು ‘ಮಲೆಯಾಳ ಮನೋರಮಾ’ ಪತ್ರಿಕೆಯು ವರದಿಯಲ್ಲಿ ಹೇಳಿಕೊಂಡಿದೆ.

ಇವಿಎಂಗಳಲ್ಲಿ ದೋಷ: ಆಯೋಗ ಸ್ಪಷ್ಟನೆ

ಕಾಸರಗೋಡಿನಲ್ಲಿ ಬಿಜೆಪಿಗೆ ಮತ ಬಿದ್ದ ಪ್ರಕರಣ ಸಂಬಂಧ ಗುರುವಾರ ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ. ‘ನಾಲ್ಕು ಇವಿಎಂಗಳಲ್ಲಿ ಇದ್ದ ದೋಷಗಳನ್ನು ಸರಿಪಡಿಸಲಾಗಿದೆ. ತಾಂತ್ರಿಕ ಸಮಸ್ಯೆಯ ಕಾರಣದಿಂದಾಗಿ ನಾಲ್ಕರಲ್ಲಿ ಎರಡು ಇವಿಎಂಗಳನ್ನು ಬದಲಾಯಿಸಲಾಗಿದೆ. ಅಣಕು ಮತದಾನ ಪ್ರಕ್ರಿಯೆ ನಡೆಸಿ, ಒಂದು ಇವಿಎಂ ಅನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ’ ಎಂದು ಆಯೋಗ ಹೇಳಿದೆ.

ಚುನಾವಣಾ ಅಧಿಕಾರಿಯು ಈ ಪ್ರಕರಣದ ಕುರಿತು ಕೇರಳದ ಮುಖ್ಯ ಚುನಾವಣಾ ಅಧಿಕಾರಿಗೆ ಪತ್ರ ಬರೆದಿದ್ದಾರೆ. ನಮ್ಮ ನಡುವೆಯೇ ನಡೆದ ತಪಾಸಣೆ ವೇಳೆಯಲ್ಲಿ ನಾಲ್ಕು ಇವಿಎಂಗಳಲ್ಲಿ ಹೆಚ್ಚುವರಿ ಮತಪತ್ರಗಳು ಮುದ್ರಣವಾಗಿವೆ. ಆಗ ಎಂಜಿನಿಯರ್‌ಗಳನ್ನು ಸಂಪರ್ಕಿಸಲಾಯಿತು. ‘ಅಣಕು ಮತದಾನಕ್ಕೂ ಮೊದಲು, ವಿವಿಪ್ಯಾಟ್‌ನಿಂದ ಕೆಲವು ಮತಪತ್ರಗಳನ್ನು ಮುದ್ರಿಸಬೇಕಾಗುತ್ತದೆ. ಹೀಗೆ ಕೆಲವು ಮತಪತ್ರಗಳ ಮುದ್ರಣ ಪೂರ್ಣಗೊಳ್ಳುವ ಮೊದಲೇ ಇವಿಎಂಗಳನ್ನು ಅಣಕು ಮತದಾನಕ್ಕೆ ತೆಗೆದುಕೊಂಡು ಹೋಗಲಾಗಿತ್ತು. ಹೀಗಾಗಿ ಅಂತಹ ದೋಷ ಸಂಭವಿಸಿದೆ’ ಎಂದು ಎಂಜಿನಿಯರ್‌ಗಳು ತಿಳಸಿದ್ದಾರೆ ಎಂದು ರಿಟರ್ನಿಂಗ್ ಅಧಿಕಾರಿಯು ತಮ್ಮ ಪತ್ರದಲ್ಲಿ ಹೇಳಿದ್ದಾರೆ.


ಅಣಕು ಮತದಾನ ನಡೆಯುತ್ತಿದ್ದಂತೆಯೇ, ಅಪೂರ್ಣಗೊಂಡಿದ್ದ ಮುದ್ರಣವು ಪೂರ್ಣಗೊಂಡಿದೆ. ಹೀಗಾಗಿಯೇ ಬಿಜೆಪಿಗೆ ಮತ ಬಿದ್ದಿದೆ. ಹಲವು ಸುತ್ತುಗಳ ಅಣಕು ಮತದಾನ ಮೂಲಕ ಕೆಲವು ಇವಿಎಂಗಳ ದೋಷಗಳನ್ನು ಸರಿಪಡಿಸಲಾಗಿದೆ. ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಏಜೆಂಟರಿಗೆ ಈ ಬಗ್ಗೆ ಮಾಹಿತಿ ನೀಡಿ ಅವರಿಗೆ ಮನವರಿಕೆ ಮಾಡಲಾಗಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಚರ್ಚೆಯಾಗುತ್ತಿದ್ದು, ‘ಇಂತಹ ದೋಷ ಸಂಭವಿಸಿದಾಗಲೆಲ್ಲಾ ಹೆಚ್ಚುವರಿ ಮತಗಳು ಬಿಜೆಪಿಗೇ ಏಕೆ ಹೋಗುತ್ತವೆ’ ಎಂದು ಹಲವರು ಪ್ರಶ್ನಿಸುತ್ತಿದ್ದಾರೆ.

ಆಧಾರ: ಪಿಟಿಐ, ಲೈವ್‌ಲಾ ಮತ್ತು ಬಾರ್ ಅಂಡ್ ಬೆಂಚ್ ವರದಿಗಳು

ಸಿನಿ ಬಿಟ್ಸ್

ಮಾತಿನ ಮನೆಯಲ್ಲಿ ‘ಸಂಜು ವೆಡ್ಸ್...’



ಶ್ರೀನಗರ ಕಿಟ್ಟಿ, ರಚಿತಾ ರಾಮ್

ನಿರ್ದೇಶಕ ನಾಗಶೇಖರ್ ಕೆಲ ದಿನಗಳ ಹಿಂದೆ ‘ಸಂಜು ವೆಡ್ಸ್ ಗೀತಾ–2’ ಚಿತ್ರಕ್ಕೆ ಚಾಲನೆ ನೀಡಿದ್ದರು. ಇದೀಗ ಚಿತ್ರದ ಡಬ್ಬಿಂಗ್ ಪ್ರಾರಂಭಿಸಿದ್ದಾರೆ.

‘ಮೂರು ಹಂತಗಳ ಚಿತ್ರೀಕರಣ ಹಾಗೂ ಎಡಿಟಿಂಗ್ ಮುಗಿದಿದೆ. ಬೆಂಗಳೂರಿನಲ್ಲಿ ಮೊದಲ ಹಂತದ ಶೂಟಿಂಗ್ ಮುಗಿಸಿ, ನಂತರ ಸ್ವಿಟ್ಜರ್ಲೆಂಡ್‌ನಲ್ಲಿ 15 ದಿನ ಹನ್ನೊಂದು ಜಾಗಗಳಲ್ಲಿ ಚಿತ್ರೀಕರಣ ಮಾಡಿದೆವು. ಶಿಡ್ಲಘಟ್ಟದ ರೇಷ್ಮೆಗೆ ದೊಡ್ಡ ಮಾರುಕಟ್ಟೆ ಇದೆ. ನಮ್ಮ ರೇಷ್ಮೆ ನೂಲಿಗೆ ಒಳ್ಳೆ ಬೆಲೆ ಬೇಕು ಅಂತ ಹೋರಾಡುವ ಇಬ್ಬರು ಪ್ರೇಮಿಗಳ ಕಥೆ ಈ ಚಿತ್ರದಲ್ಲಿದೆ. ನಮ್ಮ ಮಣ್ಣಿನ ಹೋರಾಟದ ಕಥೆ ಹೇಳಬೇಕೆಂದು ಈ ಸಿನಿಮಾ ಮಾಡಿದ್ದೇನೆ. ನಮ್ಮ ಚಿತ್ರದಲ್ಲಿ ಹಾಡುಗಳೇ ಹೈಲೈಟ್. ಹಾಡು ಕೇಳಿದವರೆಲ್ಲ ಮೆಚ್ಚಿಕೊಂಡಿದ್ದಾರೆ’ ಎಂದರು ನಿರ್ದೇಶಕ ನಾಗಶೇಖರ್.

ಶ್ರೀನಗರ ಕಿಟ್ಟಿಗೆ ರಚಿತಾ ರಾಮ್ ಜೋಡಿಯಾಗಿದ್ದಾರೆ. ‘ಚಿತ್ರದಲ್ಲಿ ಮಾತುಗಳಿಗೆ ತುಂಬಾ ಪ್ರಾಮುಖ್ಯ ಇರುವುದರಿಂದ ಸ್ವಲ್ಪ ಮುಂಚೆಯೇ ಡಬ್ಬಿಂಗ್ ಶುರು ಮಾಡುತ್ತಿದ್ದೇವೆ’ ಎಂದು ಶ್ರೀನಗರ ಕಿಟ್ಟಿ ಹೇಳಿದರು.

ಮಹಾನಂದಿ ಕ್ರಿಯೇಶನ್ಸ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಾಗಶೇಖರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸಂಗೀತ ನಿರ್ದೇಶಕ ಶ್ರೀಧರ ವಿ. ಸಂಭ್ರಮ ಐದು ಹಾಡುಗಳಿಗೆ ಸಂಗೀತ ನೀಡಿದ್ದು, ಸೋನು ನಿಗಂ, ಶ್ರೇಯಾ ಘೋಷಾಲ್, ಮಂಗ್ಲಿ ಹಾಡಿದ್ದಾರೆ. ರಾಗಿಣಿ, ಚೇತನ್ ಚಂದ್ರ, ರಂಗಾಯಣ ರಘು, ಸಾಧು ಕೋಕಿಲ ವಿಶೇಷ ಪಾತ್ರಗಳಲ್ಲಿದ್ದಾರೆ.

ಮತ್ತೆ ಬರುತ್ತಿದ್ದಾನೆ ‘ಅಪ್ಪಾಜಿ’



ಶ್ರೀವೆಂಕಿ, ಪೂಜಾರಾಮ್

ಮೂರು ದಶಕಗಳ ಹಿಂದೆ ವಿಷ್ಣುವರ್ಧನ್ ಅಭಿನಯದ ‘ಅಪ್ಪಾಜಿ’ ಸಿನಿಮಾ ತೆರೆಕಂಡು ಯಶಸ್ವಿಯಾಗಿತ್ತು. ಇದೀಗ ಅದೇ ಶೀರ್ಷಿಕೆಯ ಚಿತ್ರವೊಂದು ಸೆಟ್ಟೇರಿದೆ. ‘ಪ್ರೀತಿಗೆ ಕಡಲು ಕೋಪಕ್ಕೆ ಸಿಡಿಲು’ ಎಂಬ ಅಡಿಬರಹವಿದೆ.

ಚಿತ್ರರಂಗದ ಹಲವು ವಿಭಾಗಗಳಲ್ಲಿ ಕೆಲಸ ಮಾಡಿರುವ ಓಂಪ್ರತಾಪ್.ಹೆಚ್ ಈ ಸಿನಿಮಾಕ್ಕೆ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಬಿ.ಚಂದಿರಧರ ಪಿನ್ನೇನಹಳ್ಳಿ ತಂದೆಯ ಪಾತ್ರಕ್ಕೆ ಬಣ್ಣ ಹಚ್ಚುವ ಜೊತೆಗೆ ಬಂಡವಾಳ ಹೂಡುತ್ತಿದ್ದಾರೆ.

‘ಮೊದಲು ‘ಜನಕ’ ಎಂಬ ಹೆಸರನ್ನು ಇಡಲಾಗಿತ್ತು. ಆದರೆ ಆ ಟೈಟಲ್ ಸಿಗಲಿಲ್ಲ. ಹೀಗಾಗಿ ‘ಅಪ್ಪಾಜಿ’ ಶೀರ್ಷಿಕೆಯಾಯ್ತು. ಅಪ್ಪನಾದವನು ಮಕ್ಕಳ ಮೇಲೆ ತೋರಿಸುವ ಪ್ರೀತಿ, ಆತನ ಜವಾಬ್ದಾರಿ ಮುಂತಾದ ಅಂಶಗಳು ಚಿತ್ರದಲ್ಲಿರಲಿದೆ. ಒಂದು ಹಂತದಲ್ಲಿ ತನಗಾದ ನೋವು, ಅನ್ಯಾಯಗಳನ್ನು ಹೇಗೆ ತೀರಿಸಿಕೊಳ್ಳುತ್ತಾನೆ ಎಂಬುದನ್ನು ಭಾವನಾತ್ಮಕವಾಗಿ ತೋರಿಸಲಾಗುತ್ತಿದೆ. ತುಮಕೂರು, ದಾಬಸ್‌ಪೇಟೆ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸುವ ಆಲೋಚನೆಯಿದೆ’ ಎಂದರು ನಿರ್ದೇಶಕರು.

ಶ್ರೀವೆಂಕಿ ಚಿತ್ರದ ನಾಯಕ. ಪೂಜಾರಾಮ್ ನಾಯಕಿ. ತಾಯಿಯಾಗಿ ಭವ್ಯ ಕಾಣಿಸಿಕೊಳ್ಳಲಿದ್ದಾರೆ. ಇವರೊಂದಿಗೆ ನಾಗೇಂದ್ರ ಅರಸ್, ಮಹೇಶ್ ಸಿದ್ದು ಮುಂತಾದವರು ನಟಿಸುತ್ತಿದ್ದಾರೆ. ಆರು ಹಾಡುಗಳಿಗೆ ಕುಶಾಲ್‌ರಾಜ್ ಸಂಗೀತವಿದೆ. ಜಿ.ವಿ.ರಮೇಶ್-ಕೇಶವ್ ಛಾಯಾಚಿತ್ರಗ್ರಹಣ, ಮಹೇಶ್ ಸಂಕಲನ ಚಿತ್ರಕ್ಕಿದೆ.


ಗುಂಡಣ್ಣ



ನುಡಿ ಬೆಳಗು

ಭಾಷಾ ಗೌರವ ಅಂತ ಒಂದಿದೆ ಅಲ್ವಾ?





ಪ್ರೊ.ಎಂ.ಕೃಷ್ಣೇಗೌಡ

ಕೆಲವು ವರ್ಷಗಳ ಹಿಂದೆ ಒಂದು ಕನ್ನಡ ಸಿನಿಮಾ ಬಂದಿತ್ತು. ಅದು ಯಶಸ್ವಿಯೂ ಆಯಿತು. ಯಶಸ್ಸಿಗೆ ಮುಖ್ಯ ಕಾರಣ ಅದರ ಹೀರೋ ಹೀರೋಯಿನ್ನು ವಿಲನ್ನುಗಳ ಫಿಲ್ಟರ್ ಇಲ್ಲದ ಸಂಭಾಷಣೆ. ‘ಇಂಥ ಸಬ್ಜೆಕ್ಟಿಗೆ ಯಾವ ಭಾಷೆ ಬೇಕೋ ಅದನ್ನೇ ಬಳಸಿದ್ದೇನೆ. ನಾನು ತಪ್ಪು ಮಾಡಿದ್ದೇನೆ ಅಂತ ನನಗನಿಸುತ್ತಿಲ್ಲ’ ಅಂದ ಅದರ ನಿರ್ದೇಶಕ.

ಈ ಸಿನಿಮಾದಲ್ಲಿ ಇಂಥ ಭಾಷಾ ವಿಕಾರ ಇದೆಯೆಂಬುದನ್ನು ತಿಳಿದೇ ಒಬ್ಬ ಮನಶ್ಶಾಸ್ತ್ರಜ್ಞರು ಆ ಸಿನಿಮಾ ನೋಡಲು ಹೋದರು. ಸಿನಿಮಾದ ಪ್ರೇಕ್ಷಕರು ಯಾವ ಯಾವ ಮಾತುಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಮನಶ್ಶಾಸ್ತ್ರೀಯ ದೃಷ್ಟಿಯಿಂದ ಗ್ರಹಿಸುವ, ವಿಶ್ಲೇಷಿಸುವ ಉದ್ದೇಶದಿಂದ ಅವರು ಸಿನಿಮಾಕ್ಕೆ ಹೋಗಿದ್ದರು.

ಸಿನಿಮಾ ನೋಡಿ ಬಂದ ಮೇಲೆ ಅವರು ಸ್ನೇಹಿತರ ಒಂದು ಸಣ್ಣ ಕೂಟದಲ್ಲಿ ಆ ಕುರಿತು ಮಾತಾಡಿದರು. ಆಗ ಅವರು ಹೇಳಿದ್ದೇನೆಂದರೆ, ‘ಪ್ರೇಕ್ಷಕರು ಬೆಚ್ಚುವಂಥ, ಕೆರಳುವಂಥ, ಸಭ್ಯರು ಸಾರ್ವಜನಿಕವಾಗಿ ಮಾತಾಡಲು ಇಷ್ಟಪಡದಂಥ ಮಾತುಗಳನ್ನು ಆಡಿಸಿ ಈ ನಿರ್ದೇಶಕ ಸಿನಿಮಾವನ್ನು ಯಶಸ್ಸಿಗೆ ತೆಗೆದುಕೊಂಡು ಹೋಗಿದ್ದಾನೆ. ಇಂಥ ಸಿನಿಮಾಗಳ ಪ್ರೇಕ್ಷಕರು ಅಸೂಕ್ಷ್ಮವಾಗಿರುವ ಕಾರಣದಿಂದಲೂ ಸಿನಿಮಾ ಗೆದ್ದಿದೆ. ಆದರೆ ಇಲ್ಲಿ ಒಂದು ಅಪಾಯವಿದೆ. ಅದೇನೆಂದರೆ ಈ ಸಿನಿಮಾದಲ್ಲಿ ಆಡಿಸಿರುವ ಅಸಹ್ಯ ಸಂಭಾಷಣೆಗಳೇ, ಬೇರೆಯ ನಿರ್ಮಾಪಕ, ನಿರ್ದೇಶಕರಿಗೆ ಯಶಸ್ಸಿನ ಸೂತ್ರಗಳು ಅಂತಾಗಿಬಿಡುತ್ತವೆ. ಅಷ್ಟೇ ಆದರೆ ಪರವಾಗಿಲ್ಲ; ಈ ಚಿತ್ರದ ನಿರ್ದೇಶಕ ಇಂಥ ಸಂಭಾಷಣೆಗಳಿಂದ ತನ್ನ ಪ್ರೇಕ್ಷಕರನ್ನು ಕೆರಳಿಸಿ ಕೈಬಿಟ್ಟಿರುವುದರಿಂದ ಆ ಪ್ರೇಕ್ಷಕರು ಮುಂದಿನ ಸಿನಿಮಾಗಳಲ್ಲಿ ಇನ್ನಷ್ಟು ಮತ್ತಷ್ಟು ಹಸಿ ಸಂಭಾಷಣೆಗಳನ್ನು ಅಪೇಕ್ಷಿಸುತ್ತಾರೆ. ಮುಂದಿನ ಸಿನಿಮಾಗಳ ನಿರ್ದೇಶಕರು ತಮ್ಮ ಪ್ರೇಕ್ಷಕರ ಅಪೇಕ್ಷೆಗಳನ್ನು ತಣಿಸುವುದಕ್ಕಾಗಿಯೇ ಇನ್ನಷ್ಟು, ಮತ್ತಷ್ಟು ಅಸಹ್ಯ ಸಂಭಾಷಣೆಗಳನ್ನು ಉಣಬಡಿಸುತ್ತಾ ಹೋಗುತ್ತಾರೆ. ಈಗ ಆತಂಕದ ಪ್ರಶ್ನೆಯೆಂದರೆ ಇದು ಎಲ್ಲಿ ಹೋಗಿ ನಿಲ್ಲುತ್ತದೆ? ಸಭ್ಯರಿಗೆ ಸಿನಿಮಾಗಳ ಬಗ್ಗೆಯೇ ಜುಗುಪ್ಸೆ, ತಿರಸ್ಕಾರ ಬಂದುಬಿಡುತ್ತದೆ. ಆದರೆ ಸಿನಿಮಾದ ಯಶಸ್ಸಷ್ಟೇ ಮುಖ್ಯವಾದ ನಿರ್ದೇಶಕ, ನಿರ್ಮಾಪಕರು, ಸಭ್ಯರು ನಮ್ಮ ಸಿನಿಮಾಕ್ಕೆ ಬರದಿದ್ದರೆ ಕತ್ತೆ ಬಾಲ ಎಂಬ ಧೋರಣೆಗೆ ಬಂದುಬಿಡುತ್ತಾರೆ’.

ಇದು ಯಾಕೆ ನೆನಪಾಯಿತೆಂದರೆ ಚುನಾವಣೆಯ ಕಾಲದಲ್ಲಿ ನಮ್ಮ ಬಹಳಷ್ಟು ರಾಜಕಾರಣಿಗಳ ನಾಲಿಗೆಯ ಫಿಲ್ಟರ್ ಕಿತ್ತುಹೋಗಿದೆ. ಅಂಥ ಮಾತುಗಳಲ್ಲೇ ಅವರು ಚುನಾವಣೆ ಗೆದ್ದರೆ ಅದೇ ಯಶಸ್ಸಿನ ಸೂತ್ರವಾಗಿಬಿಡುತ್ತದೆ. ಸಹಜವಾಗಿಯೇ ಮುಂದು ಮುಂದಿನ ರಾಜಕಾರಣಿಗಳು ತಮ್ಮ ನಾಲಿಗೆಯನ್ನು ಇನ್ನಷ್ಟು ಅಸಹ್ಯ ಮಾಡಿಕೊಳ್ಳುತ್ತಾರೆ. ಅಸೂಕ್ಷ್ಮ ಮತದಾರರು ಮಜಾ ತೆಗೆದುಕೊಳ್ಳುತ್ತಾರೆ. ಸಭ್ಯ ಮತದಾರರು ಇಡೀ ಚುನಾವಣೆ ವ್ಯವಸ್ಥೆಯ ಬಗೆಗೇ ಜುಗುಪ್ಸೆಗೊಳ್ಳುತ್ತಾರೆ. ಅಸಹ್ಯ ಪಡುತ್ತಾರೆ.

ಭಾಷಾ ಗೌರವ ಅಂತ ಒಂದಿದೆ ಅಲ್ವಾ?

❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಏಪ್ರಿಲ್ 19, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಏಕಾದಶಿ ಗಂ. 20-05 ನಕ್ಷತ್ರ: ಮಘ ಗಂ. 10-57 ಯೋಗ: ವೃದ್ಧಿ ಗಂ. 25-45 ಕರಣ: ವಣಿಜ ಗಂ. 06-48, ಮೇಷ ಮಾಸದ 07 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2.
ರಾಹುಕಾಲ: ಬೆಳಿಗ್ಗೆ 10-30 - 12-00,
ಸೂರ್ಯೋದಯ: 06-19 **ಸೂರ್ಯಾಸ್ತ:** 06-40
ಮುಸ್ಲಿಂ ದಿನಾಂಕ: 09 ಶವ್ವಾಲ್ ದಿನ ವಿಶೇಷ : ತ್ರಿಶೂರ್ ಪೂರಮ್ (ಕೇರಳ), ಕಾಮದ ಏಕಾದಶಿ. ಅದೃಷ್ಟ ಸಂಖ್ಯೆ : 8, 12

ಮೇಷ: ಬ್ಯಾಂಕ್ ಉದ್ಯೋಗಿಗಳಿಗೆ ಮೇಲಧಿಕಾರಿಗಳೊಂದಿಗೆ ಹೊಸ ಯೋಜನೆ ಕುರಿತು ಗಹನ ಚರ್ಚೆ ನಡೆಯುವ ಸಾಧ್ಯತೆಗಳಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಿನ ಪರಿಶ್ರಮದಿಂದ ಉತ್ತಮ ಫಲವನ್ನು ಕಾಣುವಿರಿ.

ವೃಷಭ: ಉಂಟಾದ ಹತಾಶೆಯಿಂದಾಗಿ ಮನಸ್ಸು ಅಧ್ಯಾತ್ಮದ ಕಡೆಗೆ ಎಳೆಯುತ್ತದೆ. ಇಂದಿನ ಖರ್ಚು ವೆಚ್ಚಗಳು ಹೆಚ್ಚಿರುವುದರಿಂದ ಪೂರ್ವ ತಯಾರಿ ಮಾಡಿಕೊಳ್ಳುವುದು ಉತ್ತಮ. ಕೃಷಿಗಾಗಿ ಪರಿಶ್ರಮ ವಹಿಸುವಿರಿ.

ಮಿಥುನ: ತಂದೆ ತಾಯಿಯ ಜತೆ ಆಸ್ತಿ ಪಾಲುದಾರಿಕೆಯ ವಿಷಯವಾಗಿ ಮಾತನಾಡುವುದಿದ್ದಲ್ಲಿ ಮಾತಿನ ಮೇಲೆ ಹಿಡಿತವಿರಲಿ. ಬರಲು ಬಾಕಿ ಇದ್ದಂಥ ಹಳೇ ಸಾಲಗಳು ತೀರಿಸುವ ಬಗ್ಗೆ ಮಾತು ಕೇಳುವಿರಿ.

ಕರ್ಕಾಟಕ: ಉತ್ತಮ ಪ್ರಯತ್ನದಿಂದಾಗಿ ನೀವು ಬಯಸಿದ ಕಡೆ ಕೆಲಸ ಸಿಗುವ ಸಾಧ್ಯತೆ ಇದೆ. ಹೊಸ ವೃತ್ತಿ ಪರಿಸರಕ್ಕೆ ಹೊಂದಿಕೊಳ್ಳಲು ಕಷ್ಟಪಡುತ್ತಿರುವವರಿಗೆ ಹೊಸ ಜೊತೆಗಾರರೊಬ್ಬರು ಸಿಕ್ಕು ಸಮಾಧಾನವಾಗುತ್ತದೆ.

ಸಿಂಹ: ಸರಕು ಸಾಗಾಣೆದಾರರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬಂದರೂ ಕಾರ್ಯದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಬೃಹತ್ ಮಟ್ಟದ ವಾಹನವನ್ನು ಖರೀದಿಸುವವರಿಗೆ ಇದು ಸೂಕ್ತ ಸಮಯವಲ್ಲ.

ಕನ್ಯಾ: ಕುಟುಂಬದವರಿಗೆ ಹೆಚ್ಚಿನ ಸಮಯವನ್ನು ನೀಡುವ ಬಗ್ಗೆ ಯೋಚನೆ ನಡೆಸಿ, ಸಮಯ ಎಂದಾಗ ಅವರ ಸಹಾಯವೇ ಮುಖ್ಯ. ಮಂದಗತಿಯಲ್ಲಿ ಕೆಲಸ ಕಾರ್ಯಗಳು ನಡೆದು ಸಮಯದ ಕೊರತೆ ಎದುರಾಗಲಿದೆ.

ತುಲಾ: ಹಲವು ವಿಚಾರಗಳು ಒಂದೇ ಬಾರಿಗೆ ತಲುಪುವುದರಿಂದ ಒಮ್ಮೆ ತಳಮಳವಾಗಬಹುದು. ನಿಮ್ಮ ಹೂಡಿಕೆಯ ಬಗ್ಗೆ ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ. ಬೂದು ಬಣ್ಣ ಶುಭಪ್ರದ.

ವೃಶ್ಚಿಕ: ಮಕ್ಕಳಲ್ಲಿ ವಿದ್ಯೆಯ ಹೊರತಾಗಿ ಅವರಲ್ಲಿರುವ ಇತರ ಆಸಕ್ತಿಕರ ಕ್ಷೇತ್ರಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿ. ಆರೋಗ್ಯದ ಬಗೆಗಿನ ಕಾಳಜಿಯು ಅನಾರೋಗ್ಯದಿಂದ ದೂರವಿರಿಸುತ್ತದೆ. ಪಾರ್ವತಿಯನ್ನು ಭಜಿಸಿ.

ಧನು: ವ್ಯವಹಾರದಲ್ಲಿ ಇಂದು ಎಲ್ಲವೂ ಸಕಾರಾತ್ಮಕವಾಗಿ ಇರುವುದರಿಂದ ನೆಮ್ಮದಿಯ ದಿನವಾಗಿರುತ್ತದೆ. ಸಾಗರ ಸಮೀಪದ ಪ್ರವಾಸಗಳನ್ನು ನಿಶ್ಚಯಿಸಿದ್ದರೆ ತಾತ್ಕಾಲಿಕವಾಗಿ ಅದನ್ನು ಮುಂದೂಡಿ.

ಮಕರ: ನ್ಯಾಯಾಲಯಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಉತ್ತಮ ವ್ಯಕ್ತಿಯ ಬಗ್ಗೆ ಸ್ನೇಹಿತರಿಂದ ತಿಳಿಯಬಹುದು. ಹೆಚ್ಚಿನ ಕಾರ್ಯಗಳಲ್ಲಿ ಅನುಕೂಲ ಇರುವುದು. ಜ್ಞಾನವನ್ನು ಸಂಪಾದಿಸಿ.

ಕುಂಭ: ಸಹೋದ್ಯೋಗಿಯೊಬ್ಬರು ವೃತ್ತಿಗೆ ಅನುಕೂಲವಾಗುವಂತಹ ಉತ್ತಮ ಉಪಾಯಗಳನ್ನು ನೀಡಲಿದ್ದು, ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದಾರೆ. ಪರಿಣಿತರಿಗೆ ಶಿಕ್ಷಣ ವೃತ್ತಿ ದೊರೆಯುವ ಸಂಭವವಿದೆ.

ಮೀನ: ಮನೆಗೆ ಬರುವ ಹೊಸ ವ್ಯಕ್ತಿಯೊಂದಿಗೆ ಉತ್ತಮ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುವಿರಿ. ಪ್ರಶ್ನಿಸಿಕೊಳ್ಳುವ ಸಮಯ ಎದುರಾಗುವುದು. ಮಾಡಿದ ಪಾಪದ ಫಲ ಅನುಭವಕ್ಕೆ ಬರಲಿದೆ.

ಪದಬಂಧ 5655


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಜವಾಗಿ ಕಾಣುತ್ತಿರುವ ಕೊಬ್ಬಿದ ಆನೆ (4)
3.ಈತ ಏಕಾಂಗಿ! (4)
5.ಒಲುಮೆ ತೋರಿ ಮಾಡಿದ ಒತ್ತಾಯ (3)
6.ಕುದುರೆಯನ್ನೇರುವ ಬಳೆ (3)
8.ಓದು ಬರಹ ಬಲ್ಲವನು (3)
9.ಉತ್ತರದವರ ಮಂಚ (3)
10.ಕೈಯಲ್ಲಿರುವ ಹಣ (3)
12.ಬಿಡುವು ಈ ರೀತಿ ಬಂದಿದೆ (3)
14.ರತ್ನಗಳಿಗೆ ಆಶ್ರಯಸ್ಥಾನವಾದ ಸಮುದ್ರ (4)
15.ಇದು ರಾಜಗೃಹ (4)

ಮೇಲಿಂದ ಕೆಳಕ್ಕೆ

1.ನಾರಿಗೊಲಿದಿರುವ ಶಿವ (4)
2. ಹಡಗು ಇಲ್ಲಿದೆ (3)
3.ಮೆಲುವಾಗಿ ಆವರಿಸಿದ ಪ್ರೀತಿ! (3)
4.ಬೇರೆಯ ಉಪಾಯ (4)
7.ವ್ಯಾಕರಣದಲ್ಲಿ ಗಂಡುವ್ಯಕ್ತಿಯನ್ನು ಸೂಚಿಸುವ ಶಬ್ದ (3)
8.ಧನವಿದ್ದಾಗ ಖರೀದಿಸಿರುವ ಉಪಕರಣ ಸಾಮಗ್ರಿ (3)
9.ಪರವಾಗಿ ಕರದಲ್ಲಿ ಹಿಡಿದಿರುವ ಸಾಮಾನು (4)
11.ಕೆಟ್ಟ ನಡುವಳಿಕೆಯಿದು (4)
12.ಈತ ಹೆಂಡತಿಯನ್ನು ಕಳೆದುಕೊಂಡವನು (3)
13.ಸಮವಲ್ಲದುದು ಉಲ್ಟಾ ಆಗಿದೆ (3)



5654ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಸ್ತೂರಿಮೃಗ
4.ಪರಶು 5.ಹರಿತ
8.ದನ 9.ವೀಣೆ
10.ಸಂತಸ 11.ಕಂಬ
12.ನಗ 13.ನದಸ
14.ವಿವಾಹ 15.ವನಪಾಲಕ

ಮೇಲಿಂದ ಕೆಳಕ್ಕೆ:
1.ಕುರಿ 2.ಕಶು
3.ಗಹನ 4.ಪದವೀದಾನ
6.ತಲೆಬರಹ 7.ಪ್ರಸಂಗ
8.ದಸರ 12.ನಸವ
14.ವಿಕ 16.ಪಾಪೆ

ಸುಡೊಕು 6040

	6			9				8
1			8			5		
		2		6			9	7
		7			9	6		
4	2			3			5	9
6			7		8			
2		5	4		7	9		6
	4						7	
9		6	3		5		4	1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6039 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9





ಮೊದಲ ಮತದ ಸಂಭ್ರಮ



ಸಂಜುಕುಮಾರ ಸಿದ್ದಣ್ಣ, ಸುಲೇಪೇಟ, ಕಲಬುರಗಿ ಜಿಲ್ಲೆ

ಮತದಾನ ಕೇವಲ ಸಂವಿಧಾನಾತ್ಮಕ ಹಕ್ಕಲ್ಲ. ಬದಲಾಗಿ ನನ್ನ ಕರ್ತವ್ಯವೂ ಹೌದು. ಜನ ಕಲ್ಯಾಣಕ್ಕಾಗಿ ಕಾನೂನು ರೂಪಿಸುವ ಸರ್ಕಾರವನ್ನು ಆರಿಸುವುದು ಮತದಾರರ ಜವಾಬ್ದಾರಿ. ಮೂರು ತಿಂಗಳ ಹಿಂದೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮತ ಚಲಾಯಿಸಿದ್ದೆ. ಸಂವಿಧಾನದತ್ತವಾದ ನನ್ನ ಮತದ ಹಕ್ಕು ಯಾವಾಗಲೂ ದೇಶದ ಹಿತ ಬಯಸುವರಿಗೆ ಮೀಸಲು.



ಅಮೃತವರ್ಷಿಣಿ, ಜಯನಗರ ಬೆಂಗಳೂರು

ಲೋಕಸಭಾ ಚುನಾವಣೆ ಮೂಲಕ ಮೊದಲ ಬಾರಿಗೆ ಮತದಾನ ಮಾಡುವ ಅವಕಾಶ ನನಗೆ ಸಿಕ್ಕಿದೆ. ಮತದಾನ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬ ಕುತೂಹಲವಿದೆ. ಹಾಗೆಯೇ ನಮ್ಮ ಕ್ಷೇತ್ರದಿಂದ ಆಯ್ಕೆಯಾಗುವ ಅಭ್ಯರ್ಥಿ, ಸ್ಥಳೀಯ ಜನರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕು. ಪ್ರತಿಯೊಬ್ಬರಿಗೂ ಸರ್ಕಾರದ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸಬೇಕು. ಅಂಥ ವ್ಯಕ್ತಿಗೆ ಮತ ನೀಡುವ ಮೂಲಕ ನಾನು ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳುತ್ತೇನೆ.

ಮತ ಆಮಿಷ: ಆಯೋಗದ ವಶ

₹74.64 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹ 80.34 ಕೋಟಿ
ಮದ್ಯ	₹ 175.88 ಕೋಟಿ (1.46 ಕೋಟಿ ಲೀ)
ಮಾದಕವಸ್ತು	₹ 10.63 ಕೋಟಿ (495.39 ಕೆ.ಜಿ.)
ಚಿನ್ನ	₹ 57.56 ಕೋಟಿ (108.29 ಕೆ.ಜಿ.)
ಬೆಳ್ಳಿ	₹ 1.17 ಕೋಟಿ (301.54 ಕೆ.ಜಿ.)

ಎಂಥಾ ಮಾತು!



'ಕಾಂಗ್ರೆಸ್ ಅಭ್ಯರ್ಥಿ ಕಡೆಯವರು ರೊಕ್ಕ ಬಹಳ ಕೊಡತಾರ. ಶಿಸ್ತಾಗಿ ತಗೊರಿ. ನೋಟು ಕಾಂಗ್ರೆಸ್‌ನದ್ದು, ವೋಟು ಬಿಜೆಪಿಗೆ ನೀಡಿರಿ. ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ, ರೋಜಾ ಮಾಡಬೇಕಾಗುತ್ತದೆ. ತಯಾರಿದ್ದೀರಾ? ಹರಿಹರದಿಂದ ಒಬ್ಬ ಸ್ವಾಮಿ ಬಂದಾನವ್ವ, ಬೊಮ್ಮಾಯಿ ಹೆಲಿಕಾಪ್ಟರ್‌ನ್ಯಾಗ ಅಡ್ಡಾಡತಾನವ್ವ, ಯಡಿಯೂರಪ್ಪನ ಮನ್ಯಾಗ ಟಿಫಿನ್ ಮಾಡತಾನವ್ವ, ಬುಕ್ಕಿಂಗ್ ಸ್ವಾಮಿ ಬಂದಾನವ್ವ, ₹15 ಕೋಟಿಯಿಂದ ₹20 ಕೋಟಿ ಹೊಡಕೊಂಡ ಹೊಕ್ಕಾನವ್ವ.

ಬಸನಗೌಡ ಪಾಟೀಲ ಯತ್ನಾಳ, ಶಾಸಕ, ವಿಜಯಪುರ
(ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ನಾಮಪತ್ರ ಸಲ್ಲಿಕೆ ಬಳಿಕ ನಡೆದ ರ‍್ಯಾಲಿಯಲ್ಲಿ ಮಾಡಿದ ಭಾಷಣ)



ಕಾಂಗ್ರೆಸ್‌ನವರು ಗ್ಯಾರಂಟಿ ಹೆಸರಿನಲ್ಲಿ ಅತ್ತೆಗೆ ಕೊಟ್ಟು ಸೊಸೆಗೆ ಕೊಡದೇ ಮೋಸ ಮಾಡಿದ್ದಾರೆ. ಬಸ್‌ಗಳಲ್ಲಿ ಮಹಿಳೆಯರಿಗೆ ಮಾತ್ರ ಫ್ರೀ ಅಂತ ಹೇಳಿ ಗಂಡಸರಿಗೆ ಡಬಲ್ ರೇಟ್ ಹಾಕಿದ್ದಾರೆ. ಸಂಸಾರ ಅಂದಮೇಲೆ ಗಂಡ ಹೆಂಡತಿ ಮಕ್ಕಳು ಎಲ್ಲರೂ ಇರುತ್ತೇವೆ. ಮಹಿಳೆಯರಿಗೆ ಫ್ರೀ ಅಂತ ಹೇಳಿ ಗಂಡಮಕ್ಕಳಿಗೆ ಎರಡು ಪಟ್ಟು ವಸೂಲಿ ಮಾಡುತ್ತಿದ್ದಾರೆ. ಕರೆಂಟ್ ಫ್ರೀ ಅಂತ ಹೇಳಿ ಎರಡು ಪಟ್ಟು ಬಿಲ್ ಹೆಚ್ಚಳ ಮಾಡಿದ್ದಾರೆ. ಗ್ಯಾರಂಟಿ ಹೆಸರಿನಲ್ಲಿ ಕಾಂಗ್ರೆಸ್ ಮೋಸ ಮಾಡುತ್ತಿದೆ

ತಾರಾ ಅನೂರಾಧ, ಬಿಜೆಪಿ ನಾಯಕಿ

'ಭ್ರಮಾಧೀನ ಪ್ರಧಾನಿ: ದೇಶದ ದುರಂತ'

ಪ್ರಜಾವಾಣಿ ವಾರ್ತೆ

ಮೈಸೂರು: 'ದೇಶದ ಚುಕ್ಕಾಣಿ ಹಿಡಿದವರು ವಾಸ್ತವದ ಅರಿವಿಲ್ಲದ ಭ್ರಮಾಧೀನರಾಗ ಬಾರದು. ಪ್ರಧಾನಿಯೇ ಭ್ರಮಾಧೀನರಾದರೆ, ಅದು ಒಬ್ಬ ವ್ಯಕ್ತಿಯ ದುರಂತವಲ್ಲ, ಈ ಭಾರತದ ಘೋರ ದುರಂತ' ಎಂದು ಚಿಂತಕ ದೇವನೂರ ಮಹಾದೇವ ಟೀಕಿಸಿದರು.

'ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಮೈತ್ರಿಕೂಟವನ್ನು ಸೋಲಿಸಬೇಕು' ಎಂದು ಆಗ್ರಹಿಸಿ ರಾಜ್ಯ ರೈತ ಸಂಘವು ಹಮ್ಮಿಕೊಂಡಿರುವ ಅಭಿಯಾನದ ಕರಪತ್ರಗಳನ್ನು ಗುರುವಾರ ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ದೇಶದಲ್ಲಿ ಎಂಎಸ್‌ಪಿ ಹಿಂದೆಯೂ ಇತ್ತು, ಈಗಲೂ ಇದೆ. ಮುಂದೆಯೂ ಇರುತ್ತದೆ ಎನ್ನುತ್ತಾರೆ ಪ್ರಧಾನಿ. ಸ್ವಾಮಿನಾಥನ್ ಆಯೋಗದ ಪ್ರಕಾರ ಬೆಂಬಲ ಬೆಲೆ ಯೋಜನೆ ದೇಶದಲ್ಲಿಲ್ಲ ಎಂದು ರೈತರು ಹೇಳುತ್ತಾರೆ. ಎಂಎಸ್‌ಪಿ ಇಲ್ಲದಿದ್ದರೂ ಇದೆ ಎಂದು ನಮ್ಮ ಪ್ರಧಾನಿ ಹೇಳುತ್ತಿದ್ದರೆ ಅವರು ವಾಸ್ತವದಲ್ಲಿ ಜೀವಿಸದೆ ಭ್ರಮಾಧೀನರಾಗಿ ಬಿಡುತ್ತಾರೆ' ಎಂದರು.

'ಎಂಎಸ್‌ಪಿ ಇದ್ದಿದ್ದರೆ ದೇಶದ ರಾಜಧಾನಿಯಲ್ಲಿ ರೈತರು ವರ್ಷಗಟ್ಟಲೆ ಹೋರಾಡ ಬೇಕಾಗುತ್ತಿರಲಿಲ್ಲ. ಬಂಡವಾಳಿಗರಿಗೆ ಜಮೀನು ಮಾರಿಕೊಂಡು ನಗರಗಳಿಗೆ ಗುಳೆ ಹೋಗಿ ಕೂಲಿಯಾಳುಗಳಾಗುತ್ತಿರಲಿಲ್ಲ. ಬಡವರಿಗೆ ವಚನ ಭ್ರಷ್ಟ, ಬಂಡವಾಳಿಗರಿಗೆ ನಿಷ್ಠರಾದವರು ಮತ್ತೆ ಈ ದೇಶದ ಚುಕ್ಕಾಣಿ ಹಿಡಿಯಬಾರದು' ಎಂದರು.

'ಎಂಎಸ್‌ಪಿ ಹೆಚ್ಚಳ ಮಾಡುವುದಾಗಿ ಬಿಜೆಪಿ ಹೇಳಿದೆ. ಕಾಂಗ್ರೆಸ್ ಕೂಡ ಕಾನೂನಾತ್ಮಕವಾಗಿ ಜಾರಿಗೊಳಿಸುವುದಾಗಿ ಹೇಳಿದೆ. ಹೇಳಿದ್ದನ್ನು ಮಾಡದಿದ್ದರೆ ಕಾಂಗ್ರೆಸ್ ಕತ್ತಿನ ಪಟ್ಟಿ ಹಿಡಿದು ಕೇಳಬಹುದು. ಆದರೆ ಬಿಜೆಪಿ ಮೈಗೆಲ್ಲ ಹರಳೆಣ್ಣೆ ಹಚ್ಚಿಕೊಂಡ ಪೈಲ್ವಾನನಂತೆ ಅಖಾಡಕ್ಕೆ ಇಳಿದಿರುವುದರಿಂದ, ಅದರೊಂದಿಗೆ ಕುಸ್ತಿ ಕಷ್ಟ' ಎಂದರು.

'ವಿಕಸಿತ ಭಾರತದ ಹಗಲುಗನಸು ಕಾಣುತ್ತಿರುವ ಪ್ರಧಾನಿಗೆ ಈ ನೆಲದ ಬರ, ನೀರಿಗಾಗಿ ಹಾಹಾಕಾರ, ಬೆಲೆ ಏರಿಕೆಯಿಂದ ಹೈರಾಣಾಗಿರುವ ಜನಜೀವನ ಕಾಣುತ್ತಿಲ್ಲ. ಇಂಥವರಿಗೆ ತನ್ನ ರಥಚಕ್ರಕ್ಕೆ ಸಿಲುಕಿ ಸಾಯುವ ತನ್ನ ಪ್ರಜೆಗಳ ಆಕ್ರಂದನವೂ ದೇಶಸೇವೆಯಲ್ಲಿ ಯಜ್ಞ ಎಂಬಂತೆ ಕಾಣುತ್ತದೆ. ತಾನು ಮಾಡುವ ಚುನಾವಣಾ ಬಾಂಡ್‌ನಂತಹ ಭ್ರಷ್ಟತೆಯೂ ದೇಶಸೇವೆಯಾಗಿ ಕಾಣಿಸುತ್ತದೆ' ಎಂದು ಟೀಕಿಸಿದರು.

'ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಈಡೇರಿಸುವುದೇ ಬಿಜೆಪಿಯ ಕೆಲಸವೆಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ತನ್ನ ಕಾರ್ಯಸೂಚಿಯನ್ನು ತಾನೇ ರೂಪಿಸದ ಬಿಜೆಪಿ ಹೇಗೆ ರಾಜಕೀಯ ಪಕ್ಷವಾಗುತ್ತದೆ? ಬಿಜೆಪಿ ರಾಜಕಾರಣವೆಂದರೆ ಆರ್‌ಎಸ್‌ಎಸ್ ಕೈಚಳಕದ ತೊಗಲುಗೊಂಬೆಯಾಟ. ತಳ ಸಮುದಾಯದ ಜನರನ್ನು ಸೇವಕರನ್ನಾಗಿಸಿಕೊಳ್ಳುವ ಅಜೆಂಡಾ ವಿರುದ್ಧ ಜನ ಮತ ಚಲಾಯಿಸಬೇಕು' ಎಂದು ಕೋರಿದರು.

ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಗೌರವ ಅಧ್ಯಕ್ಷ ಚಾಮರಸ ಮಾಲೀಪಾಟೀಲ, ಮುಖಂಡರಾದ ರವಿಕಿರಣ್, ಹೊಸೂರು ಕುಮಾರ್, ವಿಜೇಂದ್ರ ಜೊತೆಗಿದ್ದರು.

'ಸಜ್ಜನ ಅಭ್ಯರ್ಥಿಗಳಿಗೆ ಹಿಂದುತ್ವದ ಲೇಪನ'

'ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಹಾಗೂ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಮಂಜುನಾಥ್ ಇಬ್ಬರೂ ಸಜ್ಜನರು. ಇಬ್ಬರಿಗೂ ಹಿಂದುತ್ವದ ಚಾತುರ್ವರ್ಣವನ್ನು ಲೇಪಿಸಲಾಗಿದೆ. ಪಕ್ಷೇತರರಾಗಿ ಸ್ಪರ್ಧಿಸಿದ್ದರೆ ಇಬ್ಬರನ್ನೂ ಬೆಂಬಲಿಸುತ್ತಿದ್ದೆವು' ಎಂದು ಮಹಾದೇವ ಹೇಳಿದರು.

'ಜನರಿಗೆ ಪರ್ಯಾಯ ಆಯ್ಕೆಗಳಿಲ್ಲ. ಅನಿವಾರ್ಯವಾಗಿ ಕಾಂಗ್ರೆಸ್ ಬೆಂಬಲಿಸಿ ಎನ್ನುತ್ತಿದ್ದೇವೆ' ಎಂದು ಸಮರ್ಥಿಸಿಕೊಂಡರು.



ಮೋದಿ 2047ರ ವಿಕಸಿತ ಭಾರತದ ಭವಿಷ್ಯದ ಬಗ್ಗೆ ಮಾತನಾಡುತ್ತಿದ್ದಾರೆ. ಅಲ್ಲಿಯವರೆಗೆ ನಾನಂತೂ ಬದುಕಿರುವುದಿಲ್ಲ. ಇನ್ನೇನು 75 ವರ್ಷ ತಲುಪುವ ಮೋದಿಯವರು ಅಲ್ಲಿಯವರೆಗೆ 24x7 ದೇಶಸೇವೆ ಮಾಡುತ್ತೇನೆನ್ನುತ್ತಾರೆ. ಈ ದೇಹಕ್ಕೆ ಆ ಶಕ್ತಿ ಇದೆಯೇ?'

ದೇವನೂರ ಮಹಾದೇವ, ಚಿಂತಕ

ನಾನು ಪಕ್ಷದ ಪರವಲ್ಲ: ದರ್ಶನ್

ಪ್ರಜಾವಾಣಿ ವಾರ್ತೆ

ಮಂಡ್ಯ: 'ಸುಮಲತಾ ಅಮ್ಮ ಸ್ಪರ್ಧಿಸದಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡರ (ಸ್ಟಾರ್ ಚಂದ್ರು) ಪರ ಪ್ರಚಾರಕ್ಕೆ ಬರುವಂತೆ ಕಾಂಗ್ರೆಸ್ ಮುಖಂಡರು ಕೋರಿದ್ದರು. ಅವರಿಗೆ ಕೊಟ್ಟ ಮಾತಿನಂತೆ ಪ್ರಚಾರಕ್ಕೆ ಬಂದಿದ್ದೇನೆ. ನಾನು ವ್ಯಕ್ತಿಯ ಪರವೇ ಹೊರತು, ಯಾವುದೇ ಪಕ್ಷದ ಪರವಲ್ಲ, ಹೀಗಾಗಿ ಯಾವ ಪಕ್ಷದ ಶಾಲನ್ನೂ ಧರಿಸಿಲ್ಲ' ಎಂದು ನಟ ದರ್ಶನ್ ಗುರುವಾರ ಹೇಳಿದರು.

ಮಳವಳ್ಳಿ ತಾಲ್ಲೂಕು ಹಲಗೂರು ಬಳಿ ಚಂದ್ರು ಪರ ಪ್ರಚಾರ ನಡೆಸಿದ ಅವರು, 'ಮದ್ದೂರು ಶಾಸಕ ಕದಲೂರು ಉದಯ್ ಅವರು ಮೊದಲೇ ನನ್ನ ದಿನಾಂಕ ಪಡೆದಿದ್ದರು. ಸುಮಾ ಅಮ್ಮನಿಗೆ ಟಿಕೆಟ್ ಸಿಗದಿದ್ದರೆ ಮಾತ್ರ ಚಂದ್ರು ಪರ ಬರುವುದಾಗಿ ತಿಳಿಸಿದ್ದೆ, ಇದರಲ್ಲಿ ಯಾವುದೇ ಗೊಂದಲವಿಲ್ಲ' ಎಂದು ಹೇಳಿದರು.

'ಒಂದು ಪಕ್ಷದ ಪರ ಮತದಾನ ಮಾಡುವಂತೆ ನನ್ನ ಅಭಿಮಾನಿಗಳಿಗೆ ಒತ್ತಾಯಿಸುವುದಿಲ್ಲ. ಸಿನಿಮಾ ಬೇರೆ, ರಾಜಕಾರಣ ಬೇರೆ. ಇಂಥವರ ವಿರುದ್ಧ ಪ್ರಚಾರ ಮಾಡುವಂತೆ ಸುಮಲತಾ ಸೇರಿದಂತೆ ನನಗೆ ಯಾರೂ ತಿಳಿಸಿಲ್ಲ. ಇದು ನನ್ನ ವೈಯಕ್ತಿಕ ನಿರ್ಧಾರ' ಎಂದರು.

'ಕಳೆದ ಚುನಾವಣೆಯಲ್ಲಿ ಸ್ವಾಭಿಮಾನ ಬೆಂಬಲಿಸುವಂತೆ ಮನವಿ ಮಾಡಿದ್ದೆ. ಪಿ.ಎಂ. ನರೇಂದ್ರಸ್ವಾಮಿ ಸೇರಿದಂತೆ ಜಿಲ್ಲೆಯ ಹಲವು ಮುಖಂಡರು ಮಾಡಿದ ಸಹಾಯವನ್ನು ಎಂದೂ ಮರೆಯುವುದಿಲ್ಲ. ಆ ಋಣ ತೀರಿಸುವ ಕೆಲಸ ಮಾಡುತ್ತಿದ್ದೇನೆ' ಎಂದು ತಿಳಿಸಿದರು.

ಮುಗಿಬಿದ್ದ ಜನ: ತಮ್ಮ ಕೈನೋವಾಗಿರುವುದನ್ನೂ ಲೆಕ್ಕಿಸದೇ ದರ್ಶನ್ ಅವರು, ಟಿ.ಕೆ.ಹಳ್ಳಿ, ಅಂತರವಳ್ಳಿ, ಹುಸ್ಕೂರು, ಬೆಳಕವಾಡಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಬಿರು ಬಿಸಿಲಿನ ನಡುವೆಯೂ ರೋಡ್ ಶೋ ನಡೆಸಿದರು. ಸಂಜೆ ಮಿಕ್ಕೆರೆ ಗ್ರಾಮದಲ್ಲಿ ಮಳೆಯಲ್ಲೂ ಪ್ರಚಾರ ಮುಂದುವರಿಸಿದರು. ನೆಚ್ಚಿನ ನಟನನ್ನು ಕಣ್ತುಂಬಿಕೊಳ್ಳಲು ಅಪಾರ ಜನ ಸೇರಿದ್ದರು.



ಮಳವಳ್ಳಿ ತಾಲ್ಲೂಕು ಕಿರುಗಾವಲು ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ನಟ ದರ್ಶನ್ ಪ್ರಚಾರ ನಡೆಸಿದರು. ಶಾಸಕ ಪಿ.ಎಂ.ನರೇಂದ್ರಸ್ವಾಮಿ ಇದ್ದಾರೆ

ದರ್ಶನ್ ಪ್ರಚಾರ ತಪ್ಪೇನಿಲ್ಲ: ಎಚ್‌ಡಿಕೆ

ಮಂಡ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ನಟ ದರ್ಶನ್ ಪ್ರಚಾರ ಮಾಡಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿದ ಕುಮಾರಸ್ವಾಮಿ, ಪ್ರಜಾಪ್ರಭುತ್ವದಲ್ಲಿ ಯಾರ ಪರ ಯಾರು ಬೇಕಾದರೂ ಪ್ರಚಾರ ಮಾಡಬಹುದು. ಅವರ ಕರ್ತವ್ಯ ಅವರು ಮಾಡುತ್ತಿದ್ದಾರೆ. ಅದಕ್ಕೆ ಪ್ರತಿಕ್ರಿಯೆ ನೀಡುವಂಥದ್ದೇನೂ ಇಲ್ಲ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಡಿ.ಕೆ. ಶಿವಕುಮಾರ್ ವಿರುದ್ಧ ದೇವೇಗೌಡರು ಮಾಡಿರುವ ಆರೋಪ 30-35 ವರ್ಷಗಳ ಹಿಂದಿನ ಕಥೆ. ಅದಕ್ಕೆ ದಾಖಲೆ ಇದೆ ಎಂದು ಅವರೇ ಹೇಳಿದ್ದಾರೆ ಎಂದು ಪ್ರತಿಕ್ರಿಯಿಸಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಬರ'

ಶಿವಮೊಗ್ಗ: 'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲ ಬರ ಪರಿಸ್ಥಿತಿ ತಲೆದೋರಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಲೇವಡಿ ಮಾಡಿದರು.

ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಅವರ ನಾಮಪತ್ರ ಸಲ್ಲಿಕೆ ಅಂಗವಾಗಿ ಇಲ್ಲಿ ಗುರುವಾರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ನಾನೂ ಆಡಳಿತ ನಡೆಸಿದ್ದೇನೆ. ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದರು. ಆಗೆಲ್ಲಾ ರಾಜ್ಯದಲ್ಲಿ ಸಮೃದ್ಧಿ ಇತ್ತು. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಬರಗಾಲ ಆವರಿಸುತ್ತದೆ' ಎಂದು ಕುಟುಕಿದರು.

ಕಾಂಗ್ರೆಸ್ ಫೇಲ್ ಆಗುವ ಪಕ್ಷ: ಬೊಮ್ಮಾಯಿ

ಶಿವಮೊಗ್ಗ: 543 ಸ್ಥಾನ ಹೊಂದಿರುವ ಸಂಸತ್‌ನಲ್ಲಿ ಸ್ಪಷ್ಟ ಬಹುಮತ ದೊರೆಯಲು 272 ಸ್ಥಾನಗಳು ಬೇಕು. ಆದರೆ, ಕಾಂಗ್ರೆಸ್ ಲೋಕಸಭಾ ಚುನಾವಣೆಯಲ್ಲಿ ಬರೀ 230 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಆ ಪಕ್ಷ ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.

'ಪರೀಕ್ಷೆಯಲ್ಲಿ ಪಾಸ್ ಆಗಲು ಕನಿಷ್ಠ 35 ಅಂಕಗಳು ಬೇಕು. ಆದರೆ, ಕಾಂಗ್ರೆಸ್‌ನವರು ಉತ್ತರ ಬರೆದಿರುವುದೇ 20 ಅಂಕಗಳಿಗೆ. ಅವರು ಪಾಸ್ ಆಗಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದ ಬೊಮ್ಮಾಯಿ, ಕಾಂಗ್ರೆಸ್ ಪಕ್ಷ ಫೇಲ್ ಆಗುವ ಪಕ್ಷ ಎಂದರು.

ಕೋವಿಡ್ ಭ್ರಷ್ಟಾಚಾರದಲ್ಲಿ ಸುಧಾಕರ್ ಜೈಲಿಗೆ: ಸಿ.ಎಂ

ಪ್ರಜಾವಾಣಿ ವಾರ್ತೆ



ಚಿಕ್ಕಬಳ್ಳಾಪುರ/ಬಾಗೇಪಲ್ಲಿ: 'ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಆರೋಗ್ಯ ಸಚಿವರಾಗಿದ್ದಾಗ ಬಹಳಷ್ಟು ಭ್ರಷ್ಟಾಚಾರ ಮಾಡಿದ್ದಾರೆ. ಈ ಬಗ್ಗೆ ತನಿಖೆಗೆ ಆಯೋಗ ರಚಿಸಿದ್ದೇನೆ. ನನಗೆ ಇರುವ ಮಾಹಿತಿ ಪ್ರಕಾರ ಭ್ರಷ್ಟಾಚಾರ ನಡೆಸಿರುವುದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಚಿಕ್ಕಬಳ್ಳಾಪುರ ಮತ್ತು ಬಾಗೇಪಲ್ಲಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಪರ ಗುರುವಾರ ಪ್ರಚಾರ ನಡೆಸಿದ ಅವರು, ತನಿಖೆ ಪೂರ್ಣವಾದ ಮೇಲೆ ತಪ್ಪಿತಸ್ಥ ಎಂದು ಸಾಬೀತಾಗುತ್ತದೆ. ಭ್ರಷ್ಟಾಚಾರ ನಡೆದಿದೆ ಎನ್ನುವುದು ನೂರಕ್ಕೆ ನೂರರಷ್ಟು ತೀರ್ಮಾನವಾಗುತ್ತದೆ. ಆಗ ಅವರು ಜೈಲಿಗೆ ಹೋಗಬೇಕಾಗುತ್ತದೆ ಎಂದರು.

ಕೋವಿಡ್‌ನಲ್ಲಿ ಭ್ರಷ್ಟಾಚಾರ ನಡೆಸಿದ ಸುಧಾಕರ್ ಪರವಾಗಿ ಮತ ಕೇಳಲು ಪ್ರಧಾನಿ ನರೇಂದ್ರ ಮೋದಿ ಚಿಕ್ಕಬಳ್ಳಾಪುರಕ್ಕೆ ಬರುತ್ತಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಮೋದಿ ಪ್ರಚಾರ ನಡೆಸಿದ್ದ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಸೋತಿದೆ. ಈ ಚುನಾವಣೆಯಲ್ಲೂ ಅದೇ ಗತಿ ಆಗುತ್ತದೆ ಎಂದರು.

ಸಿದ್ದರಾಮಯ್ಯ ಒಕ್ಕಲಿಗ ನಾಯಕರ ಬೆಳವಣಿಗೆ ಸಹಿಸಲ್ಲ: ಸುಧಾಕರ್


ದೇವನಹಳ್ಳಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಒಕ್ಕಲಿಗ ನಾಯಕರ ಬೆಳವಣಿಗೆ ಸಹಿಸುವುದಿಲ್ಲ. ಈ ವಿಷಯ ಗೌಪ್ಯವಾಗಿ ಏನೂ ಉಳಿದಿಲ್ಲ' ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಜೆಡಿಎಸ್ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಆರೋಪ ಮಾಡಿದ್ದಾರೆ.

'ವಿಧಾನಸಭಾ ಚುನಾವಣೆಯಲ್ಲಿ ಸೋತವರೆಲ್ಲ ಭ್ರಷ್ಟಾಚಾರ ಮಾಡಿದ್ದಾರೆ ಎಂದಾದರೇ ಚಾಮುಂಡೇಶ್ವರ ಕ್ಷೇತ್ರದಲ್ಲಿ 2018ರಲ್ಲಿ 35 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಸಿದ್ದರಾಮಯ್ಯ ಹೀನಾಯವಾಗಿ ಸೋತಿದ್ದರು. 2019ರಲ್ಲಿ ಅಮೇಠಿಯಲ್ಲಿ ರಾಹುಲ್ ಗಾಂಧಿ 55 ಸಾವಿರಕ್ಕೂ ಹೆಚ್ಚು ಮತಗಳಿಂದ ಸೋತಿದ್ದಾರೆ. ಹಾಗಾದರೆ ಇವರಿಬ್ಬರೂ ಎಷ್ಟು ಭ್ರಷ್ಟಚಾರ ಮಾಡಿದ್ದಾರೆ' ಎಂದು ಪ್ರಶ್ನಿಸಿದರು. 'ಕೋವಿಡ್ ಭ್ರಷ್ಟಾಚಾರ ಕುರಿತು ತನಿಖೆ ನಡೆಯುತ್ತಿರುವ ಮುನ್ನವೇ ನಾನು ತಪ್ಪಿತಸ್ಥ ಎಂದು ಹೇಳಿದ್ದೀರಲ್ಲ. ಅದರಲ್ಲೇ ತಿಳಿಯುತ್ತಿದೆ ನಿಮ್ಮ ತನಿಖೆ ಎಷ್ಟು ಪೂರ್ವಗ್ರಹ ಪೀಡಿತವಾದದ್ದು ಎಂದು. ನಿಮ್ಮ ತನಿಖೆ ಎಷ್ಟು ನಿಷ್ಪಕ್ಷಪಾತವಾಗಿರುತ್ತದೆ ಎಂಬುದು ಈಗಲೇ ಬಹಿರಂಗವಾಗಿದೆ. ನಾನು ಎಂದೂ ಜಾತಿ ರಾಜಕಾರಣ ಮಾಡಿದವನಲ್ಲ. ಅದರಲ್ಲಿ ನನಗೆ ನಂಬಿಕೆಯೂ ಇಲ್ಲ' ಎಂದು ಸಿದ್ದರಾಮಯ್ಯ ಆರೋಪಗಳಿಗೆ ತಿರುಗೇಟು ನೀಡಿದರು.


ಕ್ಷೇತ್ರ ಸಮೀಕ್ಷೆ

'ಅರಸು ಕುಡಿ'ಯೋ, 'ಸಾಮಾನ್ಯ'ನೋ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 70%



ಕ್ಷೇತ್ರವನ್ನು ಕಾಡುವ ವಿಷಯಗಳು
- ಸುಸ್ಥಿರ ಪ್ರವಾಸೋದ್ಯಮದ ಅಭಿವೃದ್ಧಿಯೇ ಇಲ್ಲ
- ಹೆಚ್ಚುತ್ತಲೇ ಇರುವ ಮಾನವ– ಪ್ರಾಣಿ ಸಂಘರ್ಷ
- ಕಾಫಿ ಬೆಳೆಗಾರರ ಬೇಡಿಕೆಗೆ ದಶಕದಿಂದ ಸಿಗದ ಸ್ಪಂದನ
- ಪ್ರಕೃತಿ ವಿಕೋಪ ನಿರ್ವಹಣೆಯ ಮುಂದಾಲೋಚನೆಯೇ ಇಲ್ಲ
- ಯೋಜನಾ ಬದ್ಧವಾದ ಬಡಾವಣೆಗಳ ನಿರ್ಮಾಣಕ್ಕೆ ಆದ್ಯತೆ ಸಿಕ್ಕಿಲ್ಲ
- ಪರಂಪರೆಯ ರಕ್ಷಣೆ ಕುರಿತ ವೈಜ್ಞಾನಿಕ ನೋಟ–ನಿಲುವುಗಳಿಲ್ಲ



→ಕುಸಿದ ಲ್ಯಾನ್ಸ್‌ಡೌನ್ ಕಟ್ಟಡದ ನೋಟ

ಶಾಸಕರ ಬಲಾಬಲ
- ಕಾಂಗ್ರೆಸ್ 5
- ಬಿಜೆಪಿ 1
- ಜೆಡಿಎಸ್ 2


1. ಮಡಿಕೇರಿ
2. ಪಿರಿಯಾಪಟ್ಟಣ
3. ಹುಣಸೂರು
4. ಚಾಮರಾಜ
5. ಕೃಷ್ಣರಾಜ
6. ನರಸಿಂಹರಾಜ
7. ಚಾಮುಂಡೇಶ್ವರಿ
8. ವಿರಾಜಪೇಟೆ



ಯದುವೀರ್ (ಬಿಜೆಪಿ)

ಎದುರಾಳಿಗಳು ನನ್ನ ವಿರುದ್ಧ ನಡೆಸುತ್ತಿರುವ ಅಪಪ್ರಚಾರಕ್ಕೆ ಕಿವಿಗೊಡದೇ ಕೆಲಸದ ಮೂಲಕವೇ ಉತ್ತರಿಸುವೆ. ಅದಕ್ಕಾಗಿಯೇ ರಾಜಕಾರಣಕ್ಕೆ ಬಂದಿರುವೆ

- 👍 ಮೈಸೂರು ಒಡೆಯರ ಕುರಿತು ಜನರಿಗಿರುವ ಗೌರವ
- 👍 ಸಜ್ಜನಿಕೆ, ಕಳಂಕರಹಿತ ವ್ಯಕ್ತಿತ್ವ, ಜನಪ್ರಿಯತೆ
- 👎 ಜನರ ಸಂಪರ್ಕಕ್ಕೆ ಸುಲಭವಾಗಿ ಸಿಗುವುದಿಲ್ಲ ಎಂಬ ಆರೋಪ
- 👎 ಮೋದಿ ಅಲೆಯನ್ನಷ್ಟೆ ನೆಚ್ಚಿಕೊಂಡು ಕಣಕ್ಕಿಳಿದವರು



ಎಂ.ಲಕ್ಷ್ಮಣ (ಕಾಂಗ್ರೆಸ್)

ಕೇಂದ್ರ ಸರ್ಕಾರದ ವಿರುದ್ಧ ಜನರಲ್ಲಿರುವ ಆಕ್ರೋಶ ಹಾಗೂ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ನನ್ನ ಕೈಹಿಡಿಯುತ್ತವೆ

- 👍 ಜನರ ನಡುವಿನ ಅಭ್ಯರ್ಥಿಯಾಗಿರುವುದು
- 👍 ಗ್ಯಾರಂಟಿ ಯೋಜನೆಗಳ ಕುರಿತು ಜನರಲ್ಲಿರುವ ಮೆಚ್ಚುಗೆ
- 👎 ಕ್ಷೇತ್ರ ವ್ಯಾಪ್ತಿಯಲ್ಲಿ ಜನರಿಗೆ ಅಷ್ಟೇನೂ ಪರಿಚಿತರಲ್ಲ
- 👎 ಪ್ರಚಾರದಲ್ಲಿ ಪಕ್ಷದ ದೆಹಲಿ ಮಟ್ಟದ ನಾಯಕರ ಗೈರು

• ಕೆ.ನರಸಿಂಹಮೂರ್ತಿ

ಮೈಸೂರು: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿಯ 'ಅರಸು ಕುಡಿ'ಯೋ ಅಥವಾ ಕಾಂಗ್ರೆಸ್‌ನ 'ಸಾಮಾನ್ಯ ಕಾರ್ಯಕರ್ತ'ನೋ ಎಂಬ ಚರ್ಚೆ ಬಿಸಿಲ ತಾಪವನ್ನೂ ಮೀರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಆಗಿರುವುದರಿಂದ, ಅವರಿಗೂ ತಮ್ಮ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸಿಕೊಳ್ಳುವ ಅನಿವಾರ್ಯ ಇದೆ. 'ಗೆಲ್ಲಿಸಿಕೊಳ್ಳದಿದ್ದರೆ ಅಧಿಕಾರ ತ್ಯಜಿಸಬೇಕಾಗುವುದೇ' ಎಂಬ ಚರ್ಚೆ ರಾಜ್ಯದಾದ್ಯಂತ ನಡೆದಿದೆ. ಹೀಗಾಗಿಯೇ ಅವರು, 'ಲಕ್ಷ್ಮಣ ಗೆದ್ದರೆ ನಾನೇ ಗೆದ್ದಂತೆ' ಎಂದು ಪ್ರಚಾರ ಮಾಡುತ್ತಿದ್ದಾರೆ.

ಕಾಂಗ್ರೆಸ್ ಭದ್ರಕೋಟೆ ಎನ್ನಿಸಿದ್ದರೂ, ಕಳೆದ ಎರಡು ಅವಧಿಯಲ್ಲಿ ಕ್ಷೇತ್ರ ಕೈತಪ್ಪಿದೆ. ಇದುವರೆಗೆ ಸ್ಪರ್ಧಿಸಿದ ಇತರ ಎಲ್ಲ ಚುನಾವಣೆಗಳಲ್ಲೂ ಸೋತಿರುವ ಲಕ್ಷ್ಮಣ ಅವರನ್ನು ಗುರಿ ತಲುಪಿಸುವ ಸವಾಲು ಮುಂದಿದ್ದರೂ, ಇದುವರೆಗೆ ಎಐಸಿಸಿ ಮಟ್ಟದ ಯಾವ ನಾಯಕರೂ ಪ್ರಚಾರಕ್ಕೆ ಬಂದಿಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿ ಬಂದು, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮತ್ತು ಹಳೆ ಮೈಸೂರು ಭಾಗದ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳನ್ನು ಪಕ್ಕದಲ್ಲೇ ಕೂರಿಸಿಕೊಂಡು ಅಲೆ ಎಬ್ಬಿಸಿ ಹೋಗಿದ್ದಾರೆ.

ಇದೇ ಕ್ಷೇತ್ರದಲ್ಲಿ ನಾಲ್ಕು ಬಾರಿ ಕಾಂಗ್ರೆಸ್‌ನಿಂದ ಸಂಸದರಾಗಿದ್ದ ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್–ಪ್ರಮೋದಾದೇವಿಯವರ ದತ್ತು ಪುತ್ರ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಜೆಪಿ ಅಭ್ಯರ್ಥಿ. ಪಕ್ಷಕ್ಕೆ ಹ್ಯಾಟ್ರಿಕ್ ಗೆಲುವು ತಂದುಕೊಟ್ಟು ದಾಖಲೆ ನಿರ್ಮಿಸುವರೇ ಅಥವಾ ಶ್ರೀಕಂಠದತ್ತರು ಒಮ್ಮೆ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದ ಫಲಿತಾಂಶವೇ ಮರುಕಳಿಸುವುದೇ ಎಂಬ ಕುತೂಹಲವೂ ಇದೆ.

47 ವರ್ಷಗಳ ಬಳಿಕ ಒಕ್ಕಲಿಗರೊಬ್ಬರಿಗೆ ಅವಕಾಶ ನೀಡಿರುವ ಕಾಂಗ್ರೆಸ್, ಅದೇ ಹೆಚ್ಚುಗಾರಿಕೆ ಎಂದು ಎದೆಯುಬ್ಬಿಸಿದೆ. ಕ್ಷೇತ್ರದಲ್ಲಿ ಹೆಚ್ಚಿರುವ ಸಮುದಾಯದ ಮತಗಳು ಗೆಲ್ಲಿಸಬಹುದೆಂಬುದು ಲೆಕ್ಕಾಚಾರ. 'ಸಂಸದ ಪ್ರತಾಪ ಸಿಂಹ ಗೆಲ್ಲುವ ಅವಕಾಶಗಳಿದ್ದರೂ, ಟಿಕೆಟ್ ನಿರಾಕರಿಸಿ, ಬಿಜೆಪಿಯು ಒಕ್ಕಲಿಗ ಸಮುದಾಯಕ್ಕೆ ಅವಮಾನ ಮಾಡಿದೆ' ಎನ್ನುತ್ತಲೇ ಕಾಂಗ್ರೆಸ್ ಸಮುದಾಯದ ಸಭೆಗಳನ್ನು ಏರ್ಪಡಿಸುತ್ತಿದೆ. ಕೊಡಗಿನಲ್ಲೂ ಇಂಥದ್ದೇ ಅಸಮಾಧಾನವಿದೆ.

'ರಾಜವಂಶಸ್ಥ ಕೈಗೆ ಸಿಗುತ್ತಾರೆಯೇ ಎಂಬ ಅನುಮಾನವೇ ಬೇಡ. ಅರಮನೆ, ಎ.ಸಿ ಕೊಠಡಿ ಬಿಟ್ಟು ಎಲ್ಲಿಗಾದರೂ ಬರಬಲ್ಲೆ. ನೀವೂ ಅರಮನೆಗೆ ಬರಬಹುದು. ಜನರ ಕಷ್ಟ ಆಲಿಸಬಲ್ಲೆ. ನಾಲ್ವಡಿ ರಾಜಪ್ರಭುತ್ವದ ತೇರೆಳೆದರು. ನಾನು ಭಕ್ತರೊಂದಿಗೆ ಚಾಮುಂಡಿ ತೇರು ಎಳೆಯುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ಭಾರತಾಂಬೆಯ ತೇರು ಎಳೆಯಲು ಅವಕಾಶ ಕೊಡಿ' ಎಂದು ಯದುವೀರ್ ಕೋರಿಕೆ ಮಂಡಿಸುತ್ತಿದ್ದಾರೆ. ಬಿಸಿಲ ಕಾವಿಗೆ ಅವರ ಮುಖದ ಹೊಳಪು ಕಡಿಮೆಯಾಗಿದೆ.

ಈ ನಡುವೆ, 'ಬಿಜೆಪಿಯ ಕೆಲವು ವಿಐಪಿ ಮುಖಂಡರಿಗೆ ಬಿಟ್ಟರೆ ಅವರು ನೇರವಾಗಿ ಯಾರ ಸಂಪರ್ಕಕ್ಕೂ ಸಿಗುತ್ತಿಲ್ಲ. ಇನ್ನು ಜನಸಾಮಾನ್ಯರಿಗೆ ಹೇಗೆ ಸಿಗುತ್ತಾರೆ' ಎಂಬ ಸಂಕಟ, ಪ್ರಶ್ನೆಯೂ ಕಾರ್ಯಕರ್ತರಲ್ಲಿ ಹಾಗೂ ಕೊಡಗಿನ ಸ್ಥಳೀಯ ಮುಖಂಡರಲ್ಲಿದೆ.

'ಮೋದಿ ಅಲೆ', ಜೆಡಿಎಸ್ ಜೊತೆಗಿನ ಮೈತ್ರಿ ಬಲ, ರಾಜವಂಶಸ್ಥರ ಕುರಿತ ಜನರ ಗೌರವವನ್ನು ನೆಚ್ಚಿಕೊಂಡ ಬಿಜೆಪಿ, ಗ್ಯಾರಂಟಿ ಯೋಜನೆಗಳನ್ನು ನೆಚ್ಚಿಕೊಂಡ ಕಾಂಗ್ರೆಸ್, ಕ್ಷೇತ್ರದ ಸಮಸ್ಯೆಗಳ ನಿವಾರಣೆಗೆ ಮತ್ತು ಅಭಿವೃದ್ಧಿಗೆ ತಮ್ಮ ನೀಲನಕ್ಷೆ ಏನು ಎಂಬುದನ್ನು ಸರಿಯಾಗಿ ಬಿಡಿಸಿ ಹೇಳುತ್ತಿಲ್ಲ. 'ನಿಮ್ಮಿಂದ ಕ್ಷೇತ್ರಕ್ಕೆ ಆಗುವ ಪ್ರಯೋಜನಗಳೇನು' ಎಂದು ನಿಲ್ಲಿಸಿ ಗಟ್ಟಿಯಾಗಿ ಕೇಳುವ ಮತದಾರರೂ ಕಾಣಿಸಿಲ್ಲ. ❖

ಮೈಸೂರು–ಕೊಡಗು

ಹಳಬರು– ಹೊಸಬರ ಕದನದ 'ಕೇಂದ್ರ'

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಶಕ್ತಿ ಕೇಂದ್ರ ವಿಧಾನಸೌಧದ ಸುತ್ತ ವ್ಯಾಪಿಸಿಕೊಂಡಿರುವ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಸತತ ನಾಲ್ಕನೇ ಅವಧಿಗೆ ವಿಜಯಪತಾಕೆ ಹಾರಿಸುವ ತವಕದಲ್ಲಿ ಬಿಜೆಪಿ ಇದ್ದರೆ, ಗೆಲುವನ್ನು ಕಸಿದುಕೊಂಡು ಕ್ಷೇತ್ರವನ್ನು ಕೈವಶ ಮಾಡಿಕೊಳ್ಳಲು ಕಾಂಗ್ರೆಸ್ ಸೆಣಸುತ್ತಿದೆ.

'ಹ್ಯಾಟ್ರಿಕ್' ಅವಧಿಯ ಸಂಸದ ಬಿಜೆಪಿಯ ಪಿ.ಸಿ. ಮೋಹನ್ ಗೆಲುವಿನ ಓಟ ಮುಂದುವರಿಸುವ ಹುಮ್ಮಸ್ಸಿನಲ್ಲಿದ್ದರೆ, ಕಾಂಗ್ರೆಸ್‌ನಿಂದ ಕಣಕ್ಕಿಳಿದಿರುವ ಹೊಸಮುಖ ಮನ್ಸೂರ್ ಅಲಿ ಖಾನ್ ಮೊದಲ ಪ್ರಯತ್ನದಲ್ಲೇ ವಿಜಯಮಾಲೆಯನ್ನು ಕಿತ್ತುಕೊಳ್ಳಲು ಕಸರತ್ತು ನಡೆಸುತ್ತಿದ್ದಾರೆ. ಹಳಬರು ಮತ್ತು ಹೊಸಬರ ನೇರ ಹಣಾಹಣಿಯಿಂದಾಗಿ ಬೆಂಗಳೂರು ಕೇಂದ್ರ ತುರುಸಿನ ಸ್ಪರ್ಧೆಯ ಕಣವಾಗಿದೆ.

2008ರಲ್ಲಿ ಕ್ಷೇತ್ರ ಪುನರ್ವಿಂಗಡಣೆಯಾದ ಬಳಿಕ ನಡೆದಿರುವ ಮೂರು ಲೋಕಸಭಾ ಚುನಾವಣೆಗಳಲ್ಲೂ ಬಿಜೆಪಿ ಇಲ್ಲಿ ಗೆಲುವು ಸಾಧಿಸಿದೆ. 2009ರಲ್ಲಿ ಎಚ್.ಟಿ. ಸಾಂಗ್ಲಿಯಾನ ಕಾಂಗ್ರೆಸ್‌ನಿಂದ ಇಲ್ಲಿ ಕಣಕ್ಕಿಳಿದು ಸೋತಿದ್ದರು. ನಂತರದ ಎರಡೂ ಚುನಾವಣೆಗಳಲ್ಲಿ ರಿಜ್ವಾನ್ ಅರ್ಷದ್ ಸ್ಪರ್ಧಿಸಿ, ಪರಾಭವಗೊಂಡಿದ್ದರು. ಅಲ್ಪಸಂಖ್ಯಾತರು ದೊಡ್ಡ ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ 'ಗ್ಯಾರಂಟಿ'ಗಳ ಪ್ರಭಾವ ಈ ಬಾರಿ ಕೈ ಹಿಡಿಯಬಹುದು ಎಂಬ ನಿರೀಕ್ಷೆಯಲ್ಲಿ ಮನ್ಸೂರ್ ಅಲಿ ಖಾನ್ ಇದ್ದಾರೆ.

ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಐದರಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಅವರಲ್ಲಿ ಕೆ.ಜೆ. ಜಾರ್ಜ್, ಜಮೀರ್ ಅಹಮದ್ ಖಾನ್ ಮತ್ತು ದಿನೇಶ್ ಗುಂಡೂರಾವ್ ಸಚಿವರಾಗಿದ್ದಾರೆ. ಎನ್.ಎ. ಹ್ಯಾರಿಸ್ ಬಿಡಿಎ ಅಧ್ಯಕ್ಷರಾಗಿದ್ದಾರೆ. ಹಿಂದೆ ನಡೆದ ಲೋಕಸಭೆ ಚುನಾವಣೆಗಳಲ್ಲಿ ಇವರೆಲ್ಲರೂ ಶಾಸಕರೇ ಆಗಿದ್ದರು. ಜಮೀರ್ ಅವರನ್ನು ಬಿಟ್ಟು, 2014, 2019ರ ಅವಧಿಯಲ್ಲಿ ಕೆಲವರು ಸಚಿವರೂ ಆಗಿದ್ದರು. ಕ್ಷೇತ್ರದಲ್ಲಿ ತಮ್ಮದೇ ಪ್ರಭಾವ ಹೊಂದಿದ್ದು, ನಿರಂತರ ಗೆಲ್ಲುತ್ತಿದ್ದರೂ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಆಗಿರಲಿಲ್ಲ. ಸಚಿವಗಿರಿ ಉಳಿಯಬೇಕಾದರೆ ಅಭ್ಯರ್ಥಿ ಗೆಲ್ಲಿಸಿಕೊಳ್ಳಬೇಕೆಂಬ ಷರತ್ತನ್ನು ಪಕ್ಷದ ಹೈಕಮಾಂಡ್ ಒಡ್ಡಿದೆ. ಈ ಲೆಕ್ಕಾಚಾರಗಳು ಮನ್ಸೂರ್ ಅವರನ್ನು ಗೆಲುವಿನ ದಡ ಮುಟ್ಟಿಸಬಹುದು ಎಂಬುದು ನಾಯಕರ ನಿರೀಕ್ಷೆ. ರಾಜ್ಯದಲ್ಲಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿರುವ ಮುಸ್ಲಿಂ ಸಮುದಾಯದ ಏಕೈಕ ಅಭ್ಯರ್ಥಿಯಾಗಿರುವ ಮನ್ಸೂರ್ ಅವರನ್ನು ಗೆಲ್ಲಿಸಿಕೊಳ್ಳಬೇಕಾದ ಸವಾಲು ಕೂಡ ಸಚಿವರ ಹೆಗಲೇರಿದೆ.


ಹಿಂದಿನ ಎಲ್ಲ ಚುನಾವಣೆಗಳಲ್ಲೂ ಪ್ರಾಬಲ್ಯ ಮೆರೆದಿರುವ ಬಿಜೆಪಿ, ಈ ಬಾರಿಯೂ ಗೆಲುವು ದಕ್ಕಿಸಿಕೊಳ್ಳಲು ಕಸರತ್ತು ನಡೆಸಿದೆ. ಮೂರು ಕ್ಷೇತ್ರಗಳಲ್ಲಿ ಮಾತ್ರ ಬಿಜೆಪಿ ಶಾಸಕರಿದ್ದರೂ, ಹಿಂದಿನ ಚುನಾವಣೆಗಳಂತೆ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಮತದಾರರು 'ಕಮಲ'ಕ್ಕೆ ಮುನ್ನಡೆ ನೀಡಬಹುದು ಎಂಬ ಆಶಾವಾದ ಬಿಜೆಪಿಯಲ್ಲಿದೆ.

ಬಹು ಧರ್ಮೀಯರು ಮತ್ತು ಬಹು ಭಾಷಿಕರು ನೆಲೆಸಿರುವ, ವ್ಯಾಪಾರ ವಹಿವಾಟು ದೊಡ್ಡ ಪ್ರಮಾಣದಲ್ಲಿ ನಡೆಯುವ ಈ ಕ್ಷೇತ್ರವನ್ನು ತನ್ನ ತೆಕ್ಕೆಯಲ್ಲೇ ಉಳಿಸಿಕೊಳ್ಳಲೇಬೇಕು ಎಂದು ಬಿಜೆಪಿ ಶತಾಯಗತಾಯ ಪ್ರಯತ್ನ ಹಾಕುತ್ತಿದೆ. 15 ವರ್ಷಗಳ ಅವಧಿಯಲ್ಲಿ ಎಲ್ಲ ಪಕ್ಷಗಳ ನಾಯಕರು, ಕಾರ್ಯಕರ್ತರ ಜತೆಗೂ ಉತ್ತಮ ಒಡನಾಟ ಇರಿಸಿಕೊಂಡಿದ್ದು ಈ ಚುನಾವಣೆಯಲ್ಲೂ ನೆರವಿಗೆ ಬರಬಹುದು ಎಂಬುದು ಮೋಹನ್ ಅವರ ನಿರೀಕ್ಷೆ.


ಬೆಂಗಳೂರು ಕೇಂದ್ರದಲ್ಲಿ ದಾಖಲೆಯ ನಾಲ್ಕನೇ ಅವಧಿಗೆ ಬಿಜೆಪಿಯ ನಾಗಾಲೋಟ ಮುಂದುವರಿಯುವುದೊ? 'ಗ್ಯಾರಂಟಿ'ಗಳ ಬಲದಲ್ಲಿ ಕಾಂಗ್ರೆಸ್ ಚೊಚ್ಚಲ ಜಯಭೇರಿ ಬಾರಿಸುವುದೊ? ಎಂಬ ಕುತೂಹಲ ಗರಿಗೆದರಿದೆ. ❖

ಬೆಂಗಳೂರು ಕೇಂದ್ರ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 54.32%




ಕ್ಷೇತ್ರವನ್ನು ಕಾಡುವ ವಿಷಯಗಳು
- ಹಳೆಯ ಬೆಂಗಳೂರು ಮತ್ತು ಅಭಿವೃದ್ಧಿ ಹೊಂದಿದ ಪ್ರದೇಶಗಳನ್ನೇ ಹೊಂದಿರುವ ಈ ಕ್ಷೇತ್ರದಲ್ಲಿ ದೊಡ್ಡ ಸಮಸ್ಯೆಗಳ ಸಂಖ್ಯೆ ಕಡಿಮೆ. ಆದರೆ, ಕಿರಿದಾದ ರಸ್ತೆಗಳು, ಅಲ್ಲಲ್ಲಿ ಕುಡಿಯುವ ನೀರಿನ ಕೊರತೆ ಇದೆ



ಶಾಸಕರ ಬಲಾಬಲ
- ಕಾಂಗ್ರೆಸ್ 5
- ಬಿಜೆಪಿ 3

1. ಸರ್ವಜ್ಞನಗರ
2. ಸಿ.ವಿ.ರಾಮನ್‌ನಗರ
3. ಮಹಾದೇವಪುರ
4. ಶಾಂತಿನಗರ
5. ಶಿವಾಜಿನಗರ
6. ಗಾಂಧಿನಗರ
7. ಚಾಮರಾಜಪೇಟೆ
8. ರಾಜಾಜಿನಗರ



ಪಿ.ಸಿ. ಮೋಹನ್ (ಬಿಜೆಪಿ)

- 👍 ಸತತ ಮೂರು ಬಾರಿ ಕ್ಷೇತ್ರದ ಸಂಸದರಾಗಿ ಕಾರ್ಯನಿರ್ವಹಿಸಿರುವುದರಿಂದ ಕ್ಷೇತ್ರದ ಆಳ, ಅಗಲ, ಸಮಸ್ಯೆ–ಸವಾಲುಗಳ ಅರಿವು ಇದೆ
- 👍 ಜನರಿಗೆ ಸುಲಭವಾಗಿ ಸಂಪರ್ಕಕ್ಕೆ ಲಭ್ಯವಾಗುತ್ತಾರೆ. ಸಾಮಾನ್ಯ ಜನರ ಅಹವಾಲುಗಳಿಗೆ ಸ್ಪಂದಿಸುತ್ತಾರೆ
- 👎 ಮೂರು ಬಾರಿ ಸಂಸದರಾದರೂ ಸಂಚಾರ ದಟ್ಟಣೆ ನಿವಾರಣೆ ಸೇರಿದಂತೆ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ನಿರಾಸಕ್ತಿ ವಹಿಸಿದ್ದಾರೆ ಎಂಬ ದೂರು
- 👎 ಸತತ ನಾಲ್ಕನೇ ಅವಧಿಗೆ ಸ್ಪರ್ಧಿಸುತ್ತಿರುವುದರಿಂದ ಆಡಳಿತ ವಿರೋಧಿ ಅಲೆ ಎದುರಾಗಬಹುದಾದ ಆತಂಕ



ಮನ್ಸೂರ್ ಅಲಿ ಖಾನ್ (ಕಾಂಗ್ರೆಸ್)

- 👍 ಕ್ಷೇತ್ರದಲ್ಲಿರುವ ಕಾಂಗ್ರೆಸ್ ಶಾಸಕರ ಪೈಕಿ ಇಬ್ಬರು ಸಚಿವರ ಬೆಂಬಲ ಮತ್ತು ಅಲ್ಪಸಂಖ್ಯಾತ ಸಮುದಾಯದವರ ಮತಗಳು ಹೆಚ್ಚಿನ ಸಂಖ್ಯೆಯಲ್ಲಿರುವುದು
- 👍 ದೀರ್ಘ ಕಾಲ ದೆಹಲಿ ರಾಜಕಾರಣದಲ್ಲಿದ್ದ ತಂದೆ ಕೆ. ರೆಹಮಾನ್ ಖಾನ್ ಅವರ ಪ್ರಭಾವಳಿ ಮತ್ತು ಕಾಂಗ್ರೆಸ್ ಸರ್ಕಾರದ 'ಗ್ಯಾರಂಟಿ'ಗಳ ಬೆಂಬಲ
- 👎 ಹೊಸಬರಾಗಿರುವುದರಿಂದ ಮತದಾರರನ್ನು ತಲುಪಲು ಕಷ್ಟವಾಗುತ್ತಿರುವುದು
- 👎 ನೇರ ಚುನಾವಣೆಯ ರಾಜಕಾರಣದ ಅನುಭವದ ಕೊರತೆ

ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಜನ ಬೆಂಬಲ: ಮಲ್ಲಿಕಾರ್ಜುನ ಖರ್ಗೆ

‘ಮೋದಿ ಸೋಲಿಸುವಷ್ಟು ಸಂಖ್ಯೆ ‘ಇಂಡಿಯಾ’ಕ್ಕೆ ಸಿಗಲಿದೆ’

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ಸಂದರ್ಶನ

ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷ



‘ದೇಶದ ಜನರು ಮೋದಿ ಸರ್ಕಾರದ ವಿರುದ್ಧ ಇದ್ದಾರೆ. ಮೋದಿಯವರನ್ನು ಅಧಿಕಾರದಿಂದ ದೂರವಿಡಲು ಮತ್ತು ಅವರ ಸರ್ಕಾರವನ್ನು ಸೋಲಿಸಲು ಎಷ್ಟು ಬೇಕೊ, ಅಷ್ಟು ಸಂಖ್ಯೆಯ ಸ್ಥಾನಗಳನ್ನು ‘ಇಂಡಿಯಾ’ ಮೈತ್ರಿಕೂಟ ಗೆಲ್ಲಲಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿಶ್ವಾಸ ವ್ಯಕ್ತಪಡಿಸಿದರು.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ‘ಪ್ರಜಾವಾಣಿ’ಗೆ ಗುರುವಾರ ನೀಡಿದ ವಿಶೇಷ ಸಂದರ್ಶನದಲ್ಲಿ ರಾಷ್ಟ್ರ–ರಾಜ್ಯ ರಾಜಕೀಯ, ಮೋದಿ ವರ್ಚಸ್ಸು, ‘ಗ್ಯಾರಂಟಿ’ ಘೋಷಣೆಗಳ ಅಬ್ಬರದ ಕುರಿತು ಮಾತನಾಡಿದ ಅವರು, ‘ಈ ಬಾರಿ ಕರ್ನಾಟಕದಲ್ಲಿ ಪಕ್ಷವು ಗಣನೀಯ ಸಾಧನೆ ಮಾಡಲಿದೆ. ಬಿಜೆಪಿಯವರು ಎಲ್ಲ 28 ಕ್ಷೇತ್ರಗಳನ್ನೂ ಗೆಲ್ಲುತ್ತೇವೆ ಎನ್ನುವುದು ಬೋಗಸ್. ನಾವು 15 ರಿಂದ 20 ಸೀಟುಗಳನ್ನು ಗೆಲ್ಲುತ್ತೇವೆ’ ಎಂದರು.

ಖರ್ಗೆಯವರ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

• **ಈ ಚುನಾವಣೆಯಲ್ಲಿ ‘ಪ್ರಜಾಪ್ರಭುತ್ವ ರಕ್ಷಿಸಿ, ಸಂವಿಧಾನ ಉಳಿಸಿ’ ಎನ್ನುವುದರ ಜೊತೆಗೆ, ಕಾಂಗ್ರೆಸ್ ಪಕ್ಷವನ್ನು ಉಳಿಸಿಕೊಳ್ಳುವ ಸವಾಲೂ ಇದೆಯೇ?**

ಕಾಂಗ್ರೆಸ್ ಅನ್ನು ಉಳಿಸಿ ಎಂದು ನಾವು ಎಲ್ಲಿ ಹೇಳಿದ್ದೇವೆ ? ಕಳೆದ 139 ವರ್ಷಗಳಿಂದಲೂ ಪಕ್ಷವಿದೆ. ಪಕ್ಷ ಸಂಘಟನೆ ಮತ್ತು ಚುನಾವಣೆ ಎರಡೂ ಬೇರೆ. ಚುನಾವಣೆ ಸಂದರ್ಭದಲ್ಲಿ ಎಲ್ಲ ಸಾಂವಿಧಾನಿಕ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳ ಮೇಲಿನ ಜನರ ವಿಶ್ವಾಸ ಕುಸಿದಿದೆ. ಈ ಸಂಸ್ಥೆಗಳಿಗೆ ಮುಖ್ಯಸ್ಥರ ನೇಮಕ, ಆಯ್ಕೆ ಸಮಿತಿ ಮೂಲಕ ನಡೆಯುತ್ತಿತ್ತು. ಸಮರ್ಥರ ಆಯ್ಕೆ ವಿಷಯದಲ್ಲಿ ವಿರೋಧ ಪಕ್ಷದ ನಾಯಕರ ಅಭಿಪ್ರಾಯಕ್ಕೂ ಬೆಲೆ ಇತ್ತು. ಈಗ ಅದ್ಯಾವುದೂ ಇಲ್ಲ. ಕೇಂದ್ರ ಚುನಾವಣಾ ಆಯುಕ್ತ, ಮಾಹಿತಿ ಆಯುಕ್ತ, ಸಿಬಿಐ ನಿರ್ದೇಶಕ, ಜಾಗೃತ ದಳ ನಿರ್ದೇಶಕ ಎಲ್ಲ ಹುದ್ದೆಗಳೂ ತಮ್ಮ ಕೈ ಕೆಳಗೆ ಇರುವಂತೆ ಪ್ರಧಾನಿ ಮಾಡಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಪು ಬಂದ ಬಳಿಕ ಜನ ಅರ್ಥ ಮಾಡಿಕೊಳ್ಳುತ್ತಿದ್ದಾರೆ.

• **ಅಂದರೆ, ಸ್ವಾಯತ್ತ ಸಂಸ್ಥೆಗಳ ಮುಖ್ಯಸ್ಥರು ಮೋದಿ ಕೈಗೊಂಬೆಗಳೆಂದೇ?**

ಶೇ 100ರಷ್ಟು; ಅವರೇ ನೇಮಿಸುತ್ತಾರಲ್ಲವೇ. ಯಾರಾದರೂ ವಿರೋಧಿಸಿದರೆ ಅಂಥವರಿಂದ ರಾಜೀನಾಮೆ ಕೊಡಿಸುತ್ತಾರೆ ಅಥವಾ ತೆಗೆದುಹಾಕುತ್ತಾರೆ. ಬಡ್ತಿ ತಡೆ-ಹಿಡಿಯುತ್ತಾರೆ. ಚುನಾವಣಾ ಆಯುಕ್ತ, ಆರ್‌ಬಿಐ ಗವರ್ನರ್ ಹುದ್ದೆ ತ್ಯಜಿಸಿದರಲ್ಲ, ಅವರ್‍ಯಾರೂ ಸಾಮಾನ್ಯರಲ್ಲ. ಇ.ಡಿ, ಸಿಬಿಐ ಕೇಸ್ ಹಾಕುವುದಾಗಿ ಬೆದರಿಸಿ, ಕಿರುಕುಳ ನೀಡಿ ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳ 444 ಶಾಸಕರನ್ನು ಅವರು ತಮ್ಮ ಕಡೆ ಮಾಡಿಕೊಂಡಿದ್ದಾರೆ. ಲೋಕಸಭೆ ಸದಸ್ಯರು, ರಾಜ್ಯಸಭೆ ಸದಸ್ಯರನ್ನೂ ಬಲ ಪ್ರಯೋಗಿಸಿ ಸೆಳೆದುಕೊಂಡಿದ್ದಾರೆ. ಜನರಿಂದ ಚುನಾಯಿತ-ವಾಗಿದ್ದ ರಾಜಸ್ಥಾನ, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರಾಖಂಡ, ಗೋವಾ ಸರ್ಕಾರಗಳನ್ನು ಕೆಡಹುವಲ್ಲಿ ಯಶಸ್ವಿ ಯಾಗಿದ್ದಾರೆ. ಪ್ರಜಾಪ್ರಭುತ್ವ ಅವರಿಗೆ ಬೇಕಿಲ್ಲ. ಈ ಸರ್ವಾಧಿಕಾರಿ ನಡೆ ಇವತ್ತಲ್ಲ, ನಾಳೆ ಅಪಾಯಕಾರಿ.

• **2019ರ ಚುನಾವಣೆಗೂ ಈ ಬಾರಿಯ ಚುನಾವಣೆಗೂ ವ್ಯತ್ಯಾಸ ಏನು?**

ಅನೇಕ ಸುಳ್ಳುಗಳನ್ನು ಹೇಳಿ 2014 ಮತ್ತು 2019ರ ಚುನಾವಣೆಗಳಲ್ಲಿ ಅವರು ಅಧಿಕಾರಕ್ಕೆ ಬಂದರು. 2 ಕೋಟಿ ಉದ್ಯೋಗ, ಖಾತೆಗೆ ₹15 ಲಕ್ಷ ಎಲ್ಲಿದೆ? ರೈತರ ಆದಾಯ ಇಮ್ಮಡಿ ಆಗಿದೆಯೇ? ಇದೆಲ್ಲ ಮೋದಿ ಗ್ಯಾರಂಟಿ ಗಳಲ್ಲವೇ? ಯುಪಿಎ ಸರ್ಕಾರ ಏನೂ ಹೇಳದೆಯೇ ನರೇಗಾ, ಆಹಾರ ಭದ್ರತೆ, ಗ್ರಾಮೀಣ ಆರೋಗ್ಯ ಅಭಿಯಾನ, ಕಡ್ಡಾಯ ಶಿಕ್ಷಣ ಕಾಯ್ದೆಯಂಥ ಹಕ್ಕುಗಳನ್ನು ಕೊಟ್ಟಿದೆ. ಎಲ್ಲದಕ್ಕೂ ಜಿಎಸ್‌ಟಿ ಮೋದಿ ಸರ್ಕಾರದ ಸಾಧನೆ. ಮತ್ತೊಂದು ಕಡೆ ಭಾರಿ ಪ್ರಮಾಣದಲ್ಲಿ ಸೆಸ್ ಸಂಗ್ರಹಿಸುತ್ತಾರೆ. ಆದರೆ, ಅದರಲ್ಲಿ ರಾಜ್ಯಗಳಿಗೆ ಪಾಲು ಇಲ್ಲ. ಮತ್ತೆ, ಒಕ್ಕೂಟ ಸರ್ಕಾರ ಎಂದು ನೀವೇ ಹೇಳುತ್ತೀರಿ. ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ಇದೇ ಮೋದಿ ‘ಹಮಾರಾ ಟ್ಯಾಕ್ಸ್ ಹಮಾರೆ ಸಾಥ್’ ಎಂದಿದ್ದರು. ಅದೇ ಸ್ಲೋಗನ್ ವಿರೋಧ ಪಕ್ಷದವರು ಹೇಳಿದಾಗ ನಿಮಗೆ ಯಾಕೆ ನೋವು?

• **ನಿಮ್ಮ ಪಕ್ಷ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ‘ಗ್ಯಾರಂಟಿ’ ಯೋಜನೆಗಳ ಬಗ್ಗೆ ಏನು ಹೇಳುತ್ತೀರಿ?**

ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ. ಕರ್ನಾಟಕ, ತೆಲಂಗಾಣ, ಹಿಮಾಚಲ ಪ್ರದೇಶದಲ್ಲಿ ‘ಗ್ಯಾರಂಟಿ’ಗಳನ್ನು ಅನುಷ್ಠಾನ-ಗೊಳಿಸಿದ್ದೇವೆ. ಇವೆಲ್ಲ ಬಿಟ್ಟಿ ಭಾಗ್ಯಗಳು ಎಂದು ಟೀಕಿಸಿದವರೇ ಈಗ ‘ಮೋದಿ ಕೀ ಗ್ಯಾರಂಟಿ’ ಆರಂಭಿಸಿದ್ದಾರೆ. ಮೋದಿ ಎಲ್ಲೂ ಪಕ್ಷದ ಹೆಸರು ಹೇಳುವುದಿಲ್ಲ. ಬಿಜೆಪಿ ಕಾರ್ಯಕ್ರಮ, ಬಿಜೆಪಿ ಸರ್ಕಾರ ಎಂದೂ ಹೇಳುವುದಿಲ್ಲ. ಎಲ್ಲದಕ್ಕೂ ಮೋದಿ ಹೆಸರು. ಮೋದಿ ಆರಂಭಿಸಿರುವುದು, ಮೋದಿ ಮಾಡಿರುವುದು ಎಂದೇ ಗುಣಗಾನ.

• **ಮೋದಿಯ ಜನಪ್ರಿಯತೆ ಇಲ್ಲವೆಂದೇ?**

ಮೋದಿ ತನ್ನನ್ನು ಬಿಂಬಿಸಿಕೊಳ್ಳುತ್ತಾನೆ. ಪ್ರತಿಯೊಂದನ್ನೂ ತನ್ನ ಹೆಸರಿನಲ್ಲಿ ಹೇಳುತ್ತಾನೆ. ಹೀಗಾಗಿ, ಮೋದಿ, ಮೋದಿ ಎಂದಾಗಿದೆ. ಆದರೆ, ಜನರಿಗೆ ಸತ್ಯ ಗೊತ್ತಾಗುತ್ತಿದೆ. ಮೋದಿ ಏನು ಮಾಡಿದ್ದಾನೆ? ಜನರ ಹೊಟ್ಟೆ ತುಂಬಿಸಲು ಏನಾದರೂ ಯೋಜನೆ ಕೊಟ್ಟಿದ್ದಾನಾ? ಜನ ಇನ್ನಾದರೂ ಅರ್ಥ ಮಾಡಿಕೊಳ್ಳದಿದ್ದರೆ ಅವರ ಭವಿಷ್ಯಕ್ಕೆ ಅವರೇ ಕಾರಣರಾಗುತ್ತಾರೆ.

• **‘ಇಂಡಿಯಾ’ ಮೈತ್ರಿಕೂಟ ಪ್ರಧಾನಿ ಅಭ್ಯರ್ಥಿಯನ್ನು ಘೋಷಿಸದಿರುವುದು ಅನನುಕೂಲ ಆಗಬಹುದೇ?**

ನಿಮಗೇ ಗೊತ್ತಿದೆ, ನಾವು ಮೈತ್ರಿ ಮಾಡಿಕೊಂಡಿದ್ದೇವೆ. ಮೊದಲು ಚುನಾವಣೆ ಗೆಲ್ಲಬೇಕು. ಬಳಿಕ ನಾವು ಆಯ್ಕೆ ಮಾಡುತ್ತೇವೆ. ಇದು ಪ್ರಜಾಪ್ರಭುತ್ವ. ಹಲವು ದೇಶಗಳಲ್ಲಿ ಚುನಾವಣೆ ಬಳಿಕ ಮೈತ್ರಿಕೂಟದ ಪ್ರಧಾನಿಯನ್ನು ಆಯ್ಕೆ ಮಾಡಲಾಗುತ್ತದೆ. ಜನ ಮೋದಿ ಸರ್ಕಾರದ ವಿರುದ್ಧ ಇದ್ದಾರೆ. ಮೋದಿ ಮತ್ತು ಅವರ ಸರ್ಕಾರವನ್ನು ಸೋಲಿಸಲು ಎಷ್ಟು ಸಂಖ್ಯೆ ಬೇಕೊ, ಅಷ್ಟು ಸಂಖ್ಯೆಯ ಸ್ಥಾನಗಳನ್ನು ನಾವು ಗೆಲ್ಲುತ್ತೇವೆ.

• **ಮೈತ್ರಿ ಪಕ್ಷಗಳ ಮತ ಧ್ರುವೀಕರಣದ ವಿಶ್ವಾಸ ಇದೆಯೇ?**

ಖಂಡಿತ. ಒಂದೆರಡು ಕಡೆ ಸಣ್ಣಪುಟ್ಟ ಸಮಸ್ಯೆ ಇದೆ. ಪಶ್ಚಿಮ ಬಂಗಾಳದಲ್ಲಿ ಅಪಸ್ವರ ಇತ್ತು. ಅದು ಎಲ್ಲರಿಗೂ ಗೊತ್ತು. ಆದರೆ, ಮಮತಾ ಮೈತ್ರಿಕೂಟದಡಿ ಬರುತ್ತಾರೆ. ಅರವಿಂದ ಕೇಜ್ರಿವಾಲ್ ಕೂಡಾ ದೂರವಾಗಿದ್ದರು. ಈಗ ಅವರೂ ನಮ್ಮ ಜೊತೆಗಿದ್ದಾರೆ. ಹೀಗಾಗಿ, ಮೈತ್ರಿ ಗಟ್ಟಿಯಾಗಿದೆ. ಪರಸ್ಪರ ವಿಶ್ವಾಸ, ಸಂಬಂಧದಿಂದ ಎಲ್ಲರೂ ಜೊತೆಯಾಗಿ ಹೋಗುತ್ತೇವೆ.

• **ಕರ್ನಾಟಕದಲ್ಲಿ ನಿಮ್ಮ ಪಕ್ಷದ ನಿರೀಕ್ಷೆ ಏನು?**

ಈ ಬಾರಿ ನಾವು ಉತ್ತಮ ಸಾಧನೆ ತೋರಿಸುತ್ತೇವೆ. ಗಣನೀಯವಾಗಿ ಸೀಟುಗಳ ಸಂಖ್ಯೆ ಹೆಚ್ಚಲಿದೆ. ಪಕ್ಷದ ರಾಜ್ಯ ನಾಯಕರು ಎಷ್ಟೇ ಗುರಿ ಇಟ್ಟಿದ್ದರೂ, ನನ್ನ ಪ್ರಕಾರ ಬಿಜೆಪಿ 28ಕ್ಕೆ 28ನ್ನೂ ಗೆಲ್ಲುತ್ತೇವೆ ಎನ್ನುವುದು ಬೋಗಸ್. ನಾವು 15 ರಿಂದ 20 ಸ್ಥಾನ ಗೆಲ್ಲುತ್ತೇವೆ.

• **ಬಿಜೆಪಿಯ ಸೋಲು ಖಚಿತ ಎಂದು ಯಾವ ಆಧಾರದಲ್ಲಿ ಹೇಳುತ್ತೀರಿ?**

ನಾವು, ಎಲ್ಲ ರಾಜಕೀಯ ಪಕ್ಷಗಳು ಸೇರಿ ಕೆಲಸ ಮಾಡುತ್ತಿದ್ದೇವೆ. ಮೋದಿ ಅಲೆ ಇಲ್ಲ ಎನ್ನುವುದು ಎಲ್ಲರಿಗೂ ಗೊತ್ತು. ಮೋದಿ ಹಿಂದೆ ಎಲ್ಲೋ ಭಾಷಣ ಮಾಡಿ ಹೋಗುತ್ತಿದ್ದರು. ಆದರೆ, ಈಗ ಓಣಿ, ಓಣಿಗಳಲ್ಲಿ ರ್‍ಯಾಲಿ ಮಾಡುತ್ತಿದ್ದಾರೆ. ಅಷ್ಟರಮಟ್ಟಿಗೆ ಅವರ ಜನಪ್ರಿಯತೆ ಇಲ್ಲ.

• **ಚುನಾವಣೆಯ ಬಳಿಕ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರಲ್ಲ?**

ಸಾಧ್ಯವೇ ಇಲ್ಲ. ಇದು ಸ್ಥಿರ ಸರ್ಕಾರ. ಯಾರೇ ಬಂದರೂ ಸರ್ಕಾರ ಮುಂದುವರಿಯಲಿದೆ. ಈ ಸರ್ಕಾರ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಅದನ್ನು ಮುಂದುವರಿಸಲಿದೆ. ಕೆಲವರು ಮತ್ಸರದಿಂದ ಹೀಗೆ ಹೇಳುತ್ತಿದ್ದಾರೆ. ❖

‘ನಾನು 53 ವರ್ಷಗಳಿಂದ ಒಂದೇ ಪಕ್ಷದಲ್ಲಿದ್ದೀನಲ್ಲಾ’

• **ಅನೇಕ ಕಾಂಗ್ರೆಸ್ ನಾಯಕರು ಬಿಜೆಪಿ ಸೇರಿ ವಿವಿಧ ಪಕ್ಷಗಳಿಗೆ ವಲಸೆ ಹೋಗಿದ್ದಾರೆ. ನಾಯಕರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಯಾಕೆ?**

ಏನು ಉಳಿಸಿಕೊಳ್ಳಬೇಕು? ಈಗ ನೋಡಿ... ನಾನು 53 ವರ್ಷಗಳಿಂದ ಒಂದೇ ಪಕ್ಷದಲ್ಲಿ ದ್ದೇನೆ. ನನಗೆ ಏನೇನು ಅನ್ಯಾಯ ಆಗಿದೆಯೆಂದು ನಿಮಗೆಲ್ಲ ಗೊತ್ತು. ಆದರೂ ಪಕ್ಷದಲ್ಲೇ ಇದ್ದೇನೆ. ನಿಷ್ಠೆ, ಸೈದ್ಧಾಂತಿಕ ಬದ್ಧತೆ ಇದ್ದರೆ ಯಾರೂ ಪಕ್ಷ ಬಿಟ್ಟು ಹೋಗುವುದಿಲ್ಲ. ಆದರೆ, ಈಗ ‘ಆಯಾ ರಾಮ್, ಗಯಾ ರಾಮ್’. ಅಂಥವರಿಗೆ ತತ್ವ, ನೀತಿ ಇಲ್ಲ.

• **‘ಭ್ರಷ್ಟರೆಲ್ಲ ಬಿಜೆಪಿ ಸೇರುತ್ತಿದ್ದಾರೆ’ ಎನ್ನುವ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು?**

25 ಜನ ದೊಡ್ಡ ದೊಡ್ಡ ಗುತ್ತಿಗೆದಾರರು, ಕಾರ್ಪೊರೇಟ್ ವಲಯದ ಸಿಇಒಗಳು ಇ.ಡಿ ಕೇಸ್ ಎದುರಿಸುತ್ತಿದ್ದಾರೆ. ಹೀಗೆ ಇ.ಡಿ ಎದುರಿಸುತ್ತಿರುವವರಿಗೆ ಚುನಾವಣಾ ಬಾಂಡ್ ಅಥವಾ ಬಿಜೆಪಿಯಲ್ಲಿ ಹುದ್ದೆ ಕೊಟ್ಟಿದ್ದಾರೆ. ‘ಭ್ರಷ್ಟರನ್ನು ಬಿಡುವುದಿಲ್ಲ, ಜೈಲಿಗೆ ಹಾಕುತ್ತೇವೆ’ ಎಂದು ಭಾಷಣ ಮಾಡಿ, ಮಡಿಲಲ್ಲಿ ಕುಳ್ಳಿರಿಸಿಕೊಂಡಿದ್ದಾರೆ. ಭ್ರಷ್ಟರನ್ನು ಒಳ್ಳೆಯವರಾಗಿ ಮಾಡಲು ಅಮಿತ್ ಶಾ ದೊಡ್ಡ ವಾಷಿಂಗ್ ಮಷಿನ್ ಇಟ್ಟುಕೊಂಡಿದ್ದಾರೆ. ಮೋದಿ ಹೇಳುವುದೊಂದು, ನಡೆಯುವುದು ಬೇರೆ ರೀತಿ.



ಮತಗಟ್ಟೆಯತ್ತ...

ಅಸ್ಸಾಂನ ಗೋಲಘಾಟ್ ಜಿಲ್ಲೆಯ ಮತಗಟ್ಟೆಯೊಂದಕ್ಕೆ ಅಧಿಕಾರಿಗಳು ಗುರುವಾರ ಚುನಾವಣಾ ಸಾಮಗ್ರಿಗಳೊಂದಿಗೆ ದೋಣಿಯಲ್ಲಿ ಸಾಗಿದರು –ಎಎಫ್‌ಪಿ ಚಿತ್ರ

ಕಣ್ಣೂರಿನಲ್ಲಿ ಪ್ರಚಾರ ಸಭೆ; ರಾಹುಲ್ ಗಾಂಧಿ ಟೀಕೆ

ಸಾಮರಸ್ಯ ಕದಡುತ್ತಿರುವ ಬಿಜೆಪಿ



ಕಣ್ಣೂರು (ಕೇರಳ) (ಪಿಟಿಐ): ಬಿಜೆಪಿಯು ದೇಶದಲ್ಲಿ ಅಶಾಂತಿ ಸೃಷ್ಟಿಸುವ ಕೆಲಸದಲ್ಲಿ ನಿರತವಾಗಿದ್ದು, ಕೋಟ್ಯಂತರ ಜನರ ನೆಮ್ಮದಿ ಹಾಳುಮಾಡುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಟೀಕಿಸಿದರು.

ಕಣ್ಣೂರಿನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, ‘ಬಿಜೆಪಿಯು ವೈವಿಧ್ಯವನ್ನು ನಾಶ ಮಾಡಲು ಹೊರಟಿದೆ. ಆದರೆ ಕಾಂಗ್ರೆಸ್ ಪಕ್ಷವು ಭಿನ್ನ ಸಂಸ್ಕೃತಿ, ಇತಿಹಾಸ, ಭಾಷೆ ಮತ್ತು ಸಂಪ್ರದಾಯಗಳನ್ನು ಒಪ್ಪಿಕೊಂಡಿದೆ’ ಎಂದರು.

‘ಇ.ಡಿ, ಸಿಬಿಐನಂತಹ ಸಂಸ್ಥೆಗಳನ್ನು ತನ್ನ ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಂಡಿರುವ ಬಿಜೆಪಿಯು ಪ್ರಜಾಪ್ರಭುತ್ವದ ಮೂಲ ಆಶಯವನ್ನು ಬದಲಿಸಲು ಪ್ರಯತ್ನಿಸುತ್ತಿದೆ. ಒಂದು ರಾಷ್ಟ್ರ, ಒಂದು ಇತಿಹಾಸ ಮತ್ತು ಒಂದು ಭಾಷೆಯನ್ನು ಜನರ ಮೇಲೆ ಹೇರಲು ಮುಂದಾಗಿದೆ’ ಎಂದು ವಾಗ್ದಾಳಿ ನಡೆಸಿದರು.

‘ನಾನು ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಪ್ರತಿದಿನವೂ ಹೋರಾಡುತ್ತೇನೆ. ಅವರೊಂದಿಗೆ ನನಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯವಿದೆ. ಬಿಜೆಪಿಯನ್ನು ಟೀಕಿಸಿದ್ದಕ್ಕೆ ಅವರ ನಿಯಂತ್ರಣದಲ್ಲಿರುವ ಕೆಲವು ಮಾಧ್ಯಮಗಳು ದಿನದ 24 ಗಂಟೆಯೂ ನನ್ನ ತೇಜೋವಧೆ ಮಾಡುತ್ತಿವೆ’ ಎಂದು ದೂರಿದರು.

‘ಬಿಜೆಪಿಯವರು ಹೋದಲ್ಲೆಲ್ಲಾ ಜನರ ನಡುವೆ ಒಡಕು ಮೂಡಿಸಿ ಪರಸ್ಪರ ಕಚ್ಚಾಡುವಂತೆ ಮಾಡುವವರಲ್ಲದೆ, ಸಮಸ್ಯೆ ಸೃಷ್ಟಿಸುತ್ತಿದ್ದಾರೆ’ ಎಂದು ಆರೋಪಿಸಿದರು.

ಅಮೇಠಿಯಲ್ಲಿ ಸ್ಪರ್ಧಿಸುವ ಧೈರ್ಯ ಇಲ್ಲ: ರಾಜನಾಥ್

ಪತ್ತನಂತಿಟ್ಟ, ಕೇರಳ (ಪಿಟಿಐ): ರಾಹುಲ್ ಗಾಂಧಿ ಅವರಿಗೆ ಅಮೇಠಿ ಕ್ಷೇತ್ರದಲ್ಲಿ ಸ್ಪರ್ಧಿಸುವ ಧೈರ್ಯ ಇಲ್ಲ ಎಂದು ಬಿಜೆಪಿ ನಾಯಕ ರಾಜನಾಥ್ ಸಿಂಗ್ ಹೇಳಿದರು. ಪತ್ತನಂತಿಟ್ಟದಲ್ಲಿ ಗುರುವಾರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಅಮೇಠಿಯಲ್ಲಿ ಕಣಕ್ಕಿಳಿಯುವ ಧೈರ್ಯ ಇಲ್ಲದ ಕಾರಣ ಉತ್ತರ ಪ್ರದೇಶದಿಂದ ಕೇರಳಕ್ಕೆ ವಲಸೆ ಬಂದಿದ್ದಾರೆ. ಆದರೆ ಈ ಬಾರಿ ಅವರನ್ನು ಸಂಸದರಾಗಿ ಆಯ್ಕೆ ಮಾಡಬಾರದು ಎಂದು ವಯನಾಡಿನ ಮತದಾರರು ತೀರ್ಮಾನಿಸಿದ್ದಾರೆ ಎಂಬುದನ್ನು ಕೇಳಿದ್ದೇನೆ’ ಎಂದರು.

ರತ್ನಗಿರಿಯಿಂದ ನಾರಾಯಣ ರಾಣೆ ಕಣಕ್ಕೆ



ಮುಂಬೈ (ಪಿಟಿಐ): ಬಿಜೆಪಿಯು ಕೇಂದ್ರ ಸಚಿವ ನಾರಾಯಣ ರಾಣೆ ಅವರನ್ನು ಮಹಾರಾಷ್ಟ್ರದ ರತ್ನಗಿರಿ– ಸಿಂಧುದುರ್ಗ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಿದೆ. ರಾಣೆ ಅವರು ಹಾಲಿ ಸಂಸದ ಶಿವಸೇನಾದ (ಯುಬಿಟಿ) ವಿನಾಯಕ್ ರಾವುತ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ.

ಮಹಾರಾಷ್ಟ್ರದ ಸಚಿವ ಮತ್ತು ಶಿವಸೇನಾ ಮುಖಂಡ ಉದಯ್ ಸಾಮಂತ್ ಅವರ ಸಹೋದರ ಕಿರಣ್ ಸಾಮಂತ್ ಅವರು ಟಿಕೆಟ್ ಮೇಲೆ ಕಣ್ಣಿಟ್ಟಿದ್ದರು. ಅದರೆ ಇಲ್ಲಿಂದ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಬಿಜೆಪಿ ಯಶಸ್ವಿಯಾಗಿದೆ. ಬಿಜೆಪಿಯು ಲೋಕಸಭಾ ಚುನಾವಣೆಗೆ ಈ ಕ್ಷೇತ್ರದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು ಇದೇ ಮೊದಲು.

ಮಹಾರಾಷ್ಟ್ರದ ಎರಡು ಕರಾವಳಿ ಜಿಲ್ಲೆಗಳನ್ನು ಒಳಗೊಂಡಿರುವ ರತ್ನಗಿರಿ– ಸಿಂಧುದುರ್ಗ ಕ್ಷೇತ್ರವು ಅವಿಭಜಿತ ಶಿವಸೇನಾದ ಭದ್ರಕೋಟೆಯಾಗಿದೆ.

ಚುನಾವಣಾ ಕಣದಲ್ಲಿ...

ಮಸೀದಿಯತ್ತ ಬಾಣದ ಸನ್ನೆ ವಿವಾದದಲ್ಲಿ ಬಿಜೆಪಿ ಅಭ್ಯರ್ಥಿ

ಹೈದರಾಬಾದ್ (ಪಿಟಿಐ): ಹೈದರಾಬಾದ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಾಧವಿ ಲತಾ ಅವರು ಮಸೀದಿಯತ್ತ ಬಾಣ ಬಿಡುತ್ತಿರುವಂತೆ ಸನ್ನೆ ಮಾಡಿದ ವಿಡಿಯೊ ಬಹಿರಂಗವಾಗಿದ್ದು, ವಿವಾದಕ್ಕೆ ಕಾರಣವಾಗಿದೆ.

ಬುಧವಾರ ನಡೆದ ರಾಮನವಮಿ ಮೆರವಣಿಗೆ ಸಂದರ್ಭದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಈ ಬಗ್ಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಮಾಧವಿ, ‘ಅದು ಅಪೂರ್ಣ ವಿಡಿಯೊ ಎಂದು ನಾನು ಸ್ಪಷ್ಟ-ಪಡಿಸಲು ಬಯಸುತ್ತೇನೆ. ಆ ವಿಡಿಯೊ ಕಾರಣದಿಂದ ಯಾರ ಭಾವನೆಗಾದರೂ ನೋವು ಉಂಟಾಗಿದ್ದರೆ ಕ್ಷಮೆಯಾಚಿ-ಸುತ್ತೇನೆ. ಎಲ್ಲರ ಭಾವನೆಗಳನ್ನು ಗೌರವಿಸುವವಳು ನಾನು’ ಎಂದು ಹೇಳಿದ್ದಾರೆ.

‘ನಕ್ಸಲರ ಪರ ಕಾಂಗ್ರೆಸ್ ವಾದ’

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಸೋಲನ್ನು ಗ್ರಹಿಸಿರುವ ಕಾಂಗ್ರೆಸ್ ಪಕ್ಷವು ನಕ್ಸಲರ ಪರವಾಗಿ ವಾದಿಸುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಅವರು ಗುರುವಾರ ಆರೋಪಿಸಿದರು.‘ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನೇತ್ ಅವರು, ನಕ್ಸಲರ ವಿರುದ್ಧ ನಡೆದ ಕಾರ್ಯಾಚರಣೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ ಮತ್ತು ಅವರನ್ನು ಹುತಾತ್ಮರೆಂದು ಕರೆದಿದ್ದಾರೆ’ ಎಂದು ಹೇಳಿದರು.

4ನೇ ಹಂತ: ನಾಮಪತ್ರ ಸಲ್ಲಿಕೆ

ನವದೆಹಲಿ (ಪಿಟಿಐ): ನಾಲ್ಕನೇ ಹಂತದಲ್ಲಿ ಮತದಾನ ನಡೆಯಲಿರುವ ಲೋಕಸಭಾ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯು ಗುರುವಾರ ಆರಂಭಗೊಂಡಿತು.

ಒಂಬತ್ತು ರಾಜ್ಯಗಳ 96 ಕ್ಷೇತ್ರಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದಲ್ಲಿ ಮೇ 13 ರಂದು ನಾಲ್ಕನೇ ಹಂತದ ಮತದಾನ ನಡೆಯಲಿದೆ.

ಕೋಮು ಉತ್ಪಾತದ ಮುಜಾಫರ್‌ನಗರದಲ್ಲೀಗ ಚುನಾವಣಾ ‘ಕಿಚ್ಚು’


ಅಪ್ಪನ ಸೋಲಿಸಿದ್ದ ಬಾಲಿಯಾನ್‌ಗೆ ಮಗನೇ ‘ಸಂಜೀವಿನಿ’

• ಮಂಜುನಾಥ ಹೆಬ್ಬಾರ್

ನವದೆಹಲಿ: ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಲಾಗಾಯ್ತಿನಿಂದ ಹಿಂದೂ–ಮುಸ್ಲಿಂ ಸ್ನೇಹಭಾವಕ್ಕೆ ಒತ್ತು ಕೊಟ್ಟ ಪಕ್ಷ. ಅಜಿತ್ ಸಿಂಗ್ ಅವರ ‘ಪಕ್ಷಾಂತರ’ ಪಟ್ಟುಗಳಿಗೆ ಬೆದರಿ ಮುಸ್ಲಿಮರು ನಿಧಾನಕ್ಕೆ ಪಕ್ಷದಿಂದ ದೂರ ಸರಿಯತೊಡಗಿದರು. ಕಳೆದ ಲೋಕಸಭಾ ಚುನಾವಣೆಯಲ್ಲಿ 6 ಸಾವಿರ ಚಿಲ್ಲರೆ ಮತಗಳ ಅಂತರದಿಂದ ಅಜಿತ್ ಸಿಂಗ್ ಸೋಲಲು ಅವಕಾಶವಾದಿ ರಾಜಕಾರಣವೂ ಒಂದು ಕಾರಣ. ಅಪ್ಪನನ್ನು ಸೋಲಿಸಿದ ಕಟ್ಟರ್ ಹಿಂದುತ್ವವಾದಿ ಅಭ್ಯರ್ಥಿಯನ್ನೇ ಗೆಲ್ಲಿಸಲು ಇದೀಗ ಪಣ ತೊಟ್ಟು ನಿಂತಿದ್ದಾರೆ ಮಗ ಜಯಂತ್ ಚೌಧರಿ.

ಉತ್ತರ ಪ್ರದೇಶದ ಪಶ್ಚಿಮ ಭಾಗದ ಮುಜಾಫರ್‌ನಗರ 2013ರಲ್ಲಿ ಕೋಮು ಉತ್ಪಾತಕ್ಕೆ ಸಾಕ್ಷಿಯಾದ ಕ್ಷೇತ್ರ. ಕೋಮು ಕಲಹದಿಂದ 62 ಜನರು ಜೀವ ಕಳೆದುಕೊಂಡು 50 ಸಾವಿರಕ್ಕೂ ಅಧಿಕ ಮಂದಿ ನೆಲೆ ಕಳೆದು-ಕೊಂಡಿದ್ದರು. ಗಲಭೆಯಿಂದ ಹಿಂದೂ–ಮುಸ್ಲಿಂ ಭಾವೈಕ್ಯಕ್ಕೆ ಕುತ್ತು ಬಂದಿತ್ತು. ಹಿಂದೂ–ಮುಸ್ಲಿಂ ಮನಸ್ತಾಪ ರಾಜ್ಯದಾದ್ಯಂತ ವಿಸ್ತರಿಸಿತ್ತು. ದುರ್ಘಟನೆ ಘಟಿಸಿ ದಶಕ ಕಳೆದರೂ ಹಿಂದೂ–ಮುಸ್ಲಿಮರ ನಡುವಿನ ಅಪನಂಬಿಕೆ ಇನ್ನೂ ದೂರವಾಗಿಲ್ಲ. ಕ್ಷೇತ್ರದ ಚುನಾವಣಾ ಕಣದಲ್ಲೂ ಆಗಾಗ ಸದ್ದು ಮಾಡುತ್ತಲೇ ಇದೆ.

ಕೋಮು ಕಿಚ್ಚಿನ ಲಾಭ ಪಡೆದು ಉತ್ತುಂಗಕ್ಕೆ ಏರಿದವರು ಸಂಜೀವ್ ಕುಮಾರ್ ಬಾಲಿಯಾನ್.



ಸಂಜೀವ್ ಬಾಲಿಯಾನ್

ಕೇಂದ್ರ ಸಚಿವರೂ ಆಗಿರುವ ಅವರು ಈ ಸಲ ಹ್ಯಾಟ್ರಿಕ್ ಗೆಲುವಿನ ಕನವರಿಕೆಯಲ್ಲಿದ್ದಾರೆ. 2014ರ ಲೋಕಸಭಾ ಚುನಾವಣೆಯಲ್ಲಿ ಎದುರಾಳಿಯನ್ನು 4.5 ಲಕ್ಷ ಮತಗಳ ಅಂತರದಿಂದ ಮಣಿಸಿದ್ದ ಬಾಲಿಯಾನ್ ಅವರು 2019ರಲ್ಲಿ ಗೆದ್ದಿದ್ದು 6 ಸಾವಿರ ಮತಗಳ ಅಂತರದಿಂದ. ಆಗ ಎಸ್‌ಪಿ–ಬಿಎಸ್‌ಪಿ ಅಭ್ಯರ್ಥಿಯಾಗಿದ್ದವರು ಅಜಿತ್ ಸಿಂಗ್. ಈ ಸಲ ಗೆಲುವಿನ ದಟ ಮುಟ್ಟಲು ಜಯಂತ್ ಚೌಧರಿ ‘ಸಂಜೀವಿನಿ’ ಆಗಲಿದ್ದಾರೆ ಎಂಬ ನಿರೀಕ್ಷೆಯಲ್ಲಿ ಬಾಲಿಯಾನ್ ಇದ್ದಾರೆ. ಲೋಕಸಭಾ ಚುನಾವಣೆಗೆ ಮುನ್ನ ಜಯಂತ್ ಅವರು ‘ಪಥ’ ಬದಲಿಸಿರುವುದರಿಂದ ಕಬ್ಬಿನ ನಾಡಿನಲ್ಲಿ ‘ಕಮಲ’ಕ್ಕೆ ಗೆಲುವಿನ ಸಿಹಿ ಸಿಗಲಿದೆ ಎಂಬುದು ಬಿಜೆಪಿ ನಾಯಕರ ವಿಶ್ವಾಸ.

ಆದರೆ, ಬಾಲಿಯಾನ್ ಅವರ ಮುಂದೆ ಕಠಿಣ ಹಾದಿ ಇದೆ. ಜಾಟರ ನಾಡೆಂದೇ ಮುಜಾಫರ್‌ನಗರ ಪ್ರಖ್ಯಾತಿ. ಕೃಷಿ ಕಾಯ್ದೆಯ ವಿರುದ್ಧದ ಹೋರಾಟದಲ್ಲಿ ಈ ಭಾಗದ ಜಾಟ್ ರೈತರು ಮುಂಚೂಣಿಯಲ್ಲಿದ್ದರು. ಈಚಿನ ಚುನಾವಣೆಗಳಲ್ಲಿ ಬಿಜೆಪಿ ಬೆನ್ನಿಗೆ ನಿಂತಿದ್ದ ಜಾಟರ ಮತಗಳು ವಿಭಜನೆಯಾದರೆ ಕಷ್ಟ ಎಂಬ ಭಯವೂ ಅವರಿಗೆ ಇದೆ.

ರಜಪೂತರು ಸಿಟ್ಟಿಗೆದ್ದಿರುವುದು ಅವರ ತಲೆಬಿಸಿಯನ್ನು ಮತ್ತಷ್ಟು ಹೆಚ್ಚಿಸಿದೆ. ‘ನಮಗೆ ಮೋದಿ– ಯೋಗಿ ಬೇಕು. ಆದರೆ, ಈ ಬಾಲಿಯಾನ್ ಬೇಡವೇ ಬೇಡ. ಅವರನ್ನು ಈ ಸಲ ಸೋಲಿಸಿಯೇ ಬಿಡುತ್ತೇವೆ’ ಎಂದು ರಜಪೂತರು ಗರ್ಜಿಸಿ ಪ್ರತಿಭಟಿಸಿದ್ದಾರೆ.

2013ರ ಗಲಭೆಯಿಂದ ‘ರಾಜಕೀಯ ಲಾಭ’ ಪಡೆದವರು ಸಂಗೀತ್ ಸೋಮ್. ಮಾಜಿ ಶಾಸಕರಾದ ಅವರು ಪ್ರಬಲ ರಜಪೂತ ನಾಯಕ. ಬಾಲಿಯಾನ್ ಕಂಡರೆ ಸೋಮ್‌ಗೆ ಅಷ್ಟಕ್ಕಷ್ಟೇ. ಇಬ್ಬರ ನಡುವಿನ ಕಂದಕ ಹೆಚ್ಚಾಗಿದೆ. ಅವರು ಒಳ ಏಟು ನೀಡಬಹುದು ಎಂಬುದನ್ನು ಬಿಜೆಪಿ ನಾಯಕರೇ ಹೇಳುತ್ತಾರೆ.

ಅನುಭವಿ ರಾಜಕಾರಣಿ ಹರೇಂದ್ರ ಸಿಂಗ್ ಮಲಿಕ್ ಅವರನ್ನು ಸಮಾಜವಾದಿ ಪಕ್ಷ ಕಣಕ್ಕಿಳಿಸಿದೆ. ಅವರು ಜಾಟ್ ಸಮುದಾಯದವರು. ಜಾಟ್ ಸಮುದಾಯದ ಮತಗಳಿಗೆ ಅವರು ಒಂದಷ್ಟು ಕನ್ನ ಹಾಕುವ ಸಾಧ್ಯತೆ ಇದೆ. ಬಹುಜನ ಸಮಾಜ ಪಕ್ಷವು ದಾರಾ ಸಿಂಗ್ ಪ್ರಜಾಪತಿ ಅವರಿಗೆ ಮಣೆ ಹಾಕಿದೆ.

ಕ್ಷೇತ್ರದಲ್ಲಿ 2013ರ ಮೊದಲು ಬಿಜೆಪಿಗೆ ಹೆಚ್ಚಿನ ಅಸ್ತಿತ್ವ ಇರಲಿಲ್ಲ. ಗಲಭೆಯಿಂದಾಗಿ ಬಿಜೆಪಿಗೆ ಭೀಮಬಲ ಬಂತು. 2014, 2019ರ ಲೋಕಸಭಾ ಚುನಾವಣೆ ಹಾಗೂ 2017, 2022ರ ವಿಧಾನಸಭಾ ಚುನಾವಣೆಗಳಲ್ಲಿ ಈ ಭಾಗದಲ್ಲಿ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಗೆದ್ದಿತ್ತು. ಮೋದಿ– ಹಿಂದುತ್ವದ ಅಲೆಯನ್ನು ಬಿಜೆಪಿ ಈ ಸಲವೂ ನೆಚ್ಚಿಕೊಂಡಿದೆ.

ಟಿಕಾಯತ್‌ಗೆ ಒಲಿಯದ ರಾಜಕೀಯ

ಈ ಭಾಗದಲ್ಲಿ ಚರಣ್ ಸಿಂಗ್ ನಿಧನದ ಬಳಿಕ ಪ್ರವರ್ಧಮಾನಕ್ಕೆ ಬಂದ ಜಾಟ್ ನಾಯಕ ಮಹೇಂದ್ರ ಸಿಂಗ್ ಟಿಕಾಯತ್ ಅವರು. ‘ಭಾರತೀಯ ಕಿಸಾನ್ ಯೂನಿಯನ್’ ಮೂಲಕ ಅನ್ನದಾತರ ಹೋರಾಟಗಳನ್ನು ಮುನ್ನಡೆಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಂಡಿಯೂರುವಂತೆ ಮಾಡಿದ್ದರು. ಅವರು ನೇಪಥ್ಯಕ್ಕೆ ಸರಿದ ಬಳಿಕ ಪುತ್ರರಾದ ರಾಕೇಶ್ ಟಿಕಾಯತ್ ಹಾಗೂ ನರೇಶ್ ಟಿಕಾಯತ್ ಅವರು ರೈತ ಸಂಘಟನೆಗಳ ಮೂಲಕ ಸರ್ಕಾರಗಳನ್ನು ನಡುಗಿಸಿದ್ದರು. ಜಾಟರ ಜನಸಂಖ್ಯೆ ಹಾಗೂ ರೈತ ಹೋರಾಟವನ್ನು ನೆಚ್ಚಿಕೊಂಡು ನರೇಶ್ ಟಿಕಾಯತ್ ಅವರು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಆದರೆ, ಅವರು ಠೇವಣಿ ಕಳೆದು ಕೊಂಡಿದ್ದರು. ಚುನಾವಣಾ ರಾಜಕಾರಣಕ್ಕೆ ಬಂದಾಗ, ಈ ಭಾಗದ ರೈತರ ಆದ್ಯತೆ ವಿಭಿನ್ನವಾದುದು ಎಂಬುದಕ್ಕೆ ಇದು ಸಾಕ್ಷಿ.

ಚುಟುಕು

ತಮಿಳುನಾಡು: ಒಟ್ಟು ₹ 1,301 ಕೋಟಿ ವಶ



ಚೆನ್ನೈ: ತಮಿಳುನಾಡಿನಲ್ಲಿ ಚುನಾವಣಾ ಅಧಿಕಾರಿಗಳು ಲೋಕಸಭಾ ಚುನಾವಣೆ ಘೋಷಣೆಯಾದ ದಿನದಿಂದ ಏಪ್ರಿಲ್ 17ರವರೆಗೆ ₹1,301.22 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

‘₹173.85 ಕೋಟಿ ನಗದು, ₹6.67 ಕೋಟಿ ಮೌಲ್ಯದ ಮದ್ಯ, ₹1.13 ಕೋಟಿ ಮೌಲ್ಯದ ಮಾದಕವಸ್ತು, ₹1,083.77 ಕೋಟಿ ಮೌಲ್ಯದ ಚಿನ್ನ, ಬೆಳ್ಳಿಯ ಆಭರಣಗಳು, ₹35.78 ಕೋಟಿ ಮೌಲ್ಯದ ಉಡುಗೊರೆ ಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ’ ಎಂದು ಮುಖ್ಯ ಚುನಾವಣಾ ಅಧಿಕಾರಿ ಮಾಹಿತಿ ನೀಡಿದ್ದಾರೆ.

‘ರಾಜ್ಯದ ವಿವಿಧ ಭಾಗಗಳಲ್ಲಿ ಮತದಾರರಿಗೆ ಹಂಚಲು ಸಾಗಿಸುತ್ತಿದ್ದ ವೇಳೆ ಈ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ತಮಿಳುನಾಡಿನ 39 ಲೋಕಸಭಾ ಕ್ಷೇತ್ರಗಳಿಗೆ ಶುಕ್ರವಾರ ಮತದಾನ ನಡೆಯಲಿದೆ. ಒಟ್ಟು 6.23 ಕೋಟಿ ಮತದಾರರು 950 ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಲಿದ್ದಾರೆ.

ಸುಪ್ರಿಯಾ, ಸುನೇತ್ರಾ ನಾಮಪತ್ರ ಸಲ್ಲಿಕೆ

ಪುಣೆ (ಪಿಟಿಐ): ಮೂರು ಬಾರಿಯ ಸಂಸದೆ ಸುಪ್ರಿಯಾ ಸುಳೆ ಮತ್ತು ಅವರ ಸಂಬಂಧಿ ಸುನೇತ್ರಾ ಪವಾರ್ ಅವರು ಬಾರಾಮತಿ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಗುರುವಾರ ನಾಮಪತ್ರ ಸಲ್ಲಿಸಿದರು.

ಸುಪ್ರಿಯಾ ಅವರು ಎನ್‌ಸಿಪಿ ಶರದ್ ಪವಾರ್ ಬಣದಿಂದ ಹಾಗೂ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಅವರು ಎನ್‌ಸಿಪಿ ಅಜಿತ್ ಪವಾರ್ ಬಣದಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ.



ಸುಪ್ರಿಯಾ



ಸುನೇತ್ರಾ

ಕಾಂಗ್ರೆಸ್ ಮುಖಂಡರಾದ ಬಾಳಾಸಾಹೇಬ್ ಥೋರಟ್ ಮತ್ತು ವಿಶ್ವಜಿತ್ ಕದಂ ಅವರು ಸುಪ್ರಿಯಾ ಅವರ ಜೊತೆಗಿದ್ದರು.

ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಎನ್‌ಸಿಪಿ ಅಜಿತ್ ಪವಾರ್ ಬಣದ ಮುಖಂಡ ಪ್ರಫುಲ್ ಪಟೇಲ್ ಅವರು ಸುನೇತ್ರಾ ಅವರ ಜೊತೆಗಿದ್ದರು. ಈ ಕ್ಷೇತ್ರಕ್ಕೆ ಮೇ 7ರಂದು ಮತದಾನ ನಡೆಯಲಿದೆ.

ಮೆಹಬೂಬಾ ನಾಮಪತ್ರ: ಜಮ್ಮು ಮತ್ತು ಕಾಶ್ಮೀರದ ಅನಂತನಾಗ್–ರಜೌರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರು ಗುರುವಾರ ಉಮೇದುವಾರಿಕೆ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಚುನಾವಣೆ ಬಹಿಷ್ಕರಿಸದಂತೆ ಜಮ್ಮು ಮತ್ತು ಕಾಶ್ಮೀರದ ಜನರಿಗೆ ಮನವಿ ಮಾಡಿದರು.

ಎಂಥಾ ಮಾತು!



ಬಿಜೆಪಿಯು ತನ್ನ ಪ್ರಣಾಳಿಕೆಯಲ್ಲಿ ‘ಅಲ್ಪಸಂಖ್ಯಾತ’ರು ಎಂಬ ಪದವನ್ನು ಬಳಸದೆ, ‘ಶೋಷಿತ’ ಎಂಬ ಪದವನ್ನು ಬಳಸಿದೆ. ‘ಅಲ್ಪಸಂಖ್ಯಾತ’ ಪದವನ್ನು ಭಾರತದ ಸಂವಿಧಾನದಲ್ಲಿ ಕೂಡ ಉಲ್ಲೇಖಿಸಲಾಗಿದೆ ಆದರೆ ಬಿಜೆಪಿಯು ಇದನ್ನು ದ್ವೇಷಿಸುತ್ತಿದೆ. ಆ ಪಕ್ಷವು ಪತ್ರಿಕೆಗಳಲ್ಲಿ ನೀಡಿರುವ ಜಾಹೀರಾತು-ಗಳಲ್ಲೂ ಶೋಷಿತ ಸಮುದಾಯಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು ಎಂದು ಹೇಳಿದೆ

ಅಸಾದುದ್ದೀನ್ ಒವೈಸಿ, ಎಐಎಂಐಎಂ ಮುಖ್ಯಸ್ಥ



ಮಧ್ಯಪ್ರದೇಶದ 29 ಲೋಕಸಭಾ ಕ್ಷೇತ್ರಗಳಲ್ಲೂ ಬಿಜೆಪಿಯು ಗೆಲ್ಲಲಿದೆ. ಬಿಜೆಪಿಗೆ ಸರ್ಕಾರ ರಚಿಸಲು ಸಾಧ್ಯವಿದೆ ಎಂಬುದನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸಾಬೀತುಪಡಿ-ಸಿದ್ದರು. 2014ರ ಅನಂತರ ಪ್ರಧಾನಿ ನರೇಂದ್ರ ಮೋದಿ ಅವರು ಅದನ್ನು ಮುಂದುವರಿಸಿದ್ದಾರೆ. ತನ್ನ ಕಾರ್ಯಕರ್ತರಿಂದಾಗಿಯೇ ವಿಶ್ವದಾದ್ಯಂತ ಗುರುತಿಸಿ-ಕೊಂಡಿರುವ ಏಕೈಕ ಪಕ್ಷ ಬಿಜೆಪಿಯಾಗಿದೆ

ಮೋಹನ್ ಯಾದವ್, ಮಧ್ಯಪ್ರದೇಶ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ



ಮಹಾರಾಷ್ಟ್ರದ ಸಾತಾರ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಘಟಾನುಘಟಿಗಳ ಹಣಾಹಣಿಗೆ ವೇದಿಕೆ ಸಿದ್ಧವಾಗಿದೆ. ಬಿಜೆಪಿಯು ಛತ್ರಪತಿ ಶಿವಾಜಿ ಮಹಾರಾಜರ ವಂಶಸ್ಥ ಉದಯನ್ ರಾಜೆ ಭೋಸ್ಲೆ ಅವರನ್ನು ಅಖಾಡಕ್ಕಿಳಿಸಿದರೆ, ಎನ್‌ಸಿಪಿ ಶರದ್ ಪವಾರ್ ಬಣವು ಶಶಿಕಾಂತ ಶಿಂದೆ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. 2019ರ ಚುನಾವಣೆಯಲ್ಲಿ ಎನ್‌ಸಿಪಿಯಿಂದ ಸ್ಪರ್ಧಿಸಿದ್ದ ಭೋಸ್ಲೆ ಅವರು 1,26,528 ಮತಗಳ ಅಂತರದಿಂದ ಶಿವಸೇನಾದ ನರೇಂದ್ರ ಅಣ್ಣಾ ಸಾಹೇಬ್ ಪಾಟೀಲ್ ಅವರನ್ನು ಸೋಲಿಸಿದ್ದರು. ಬಳಿಕ ಇವರು ಎನ್‌ಸಿಪಿ ತೊರೆದು ಬಿಜೆಪಿಗೆ ಸೇರ್ಪಡೆ ಗೊಂಡಿದ್ದರು. ಈ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಭೋಸ್ಲೆ ಅವರನ್ನು ಎನ್‌ಸಿಪಿಯ ಶ್ರೀನಿವಾಸ ಪಾಟೀಲ್ ಅವರು 87,717 ಮತಗಳ ಅಂತರದಿಂದ ಪರಾಭವಗೊಳಿಸಿದ್ದರು. ಅನಂತರ ಭೋಸ್ಲೆ ಅವರು ರಾಜ್ಯಸಭೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಬಿಜೆಪಿಯು ಮಹಾರಾಷ್ಟ್ರದಲ್ಲಿ ‘ಮುಹಾಯುತಿ’ ಮೈತ್ರಿಕೂಟದ ಜೊತೆಗಿರುವುದರಿಂದ ಆ ಪಕ್ಷದ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಹೆಚ್ಚಿದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಬೋಸ್ಲೆ ಮತ್ತು ಶಿಂದೆ ಅವರು ಈ ಹಿಂದೆ ರಾಜ್ಯ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದು, ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. ಈ ಕ್ಷೇತ್ರವು ಎನ್‌ಸಿಪಿಯ ಭದ್ರಕೋಟೆಯಾದರೂ ಪಕ್ಷವು ಎರಡು ಬಣಗಳಾಗಿ ವಿಭಜನೆಯಾಗಿರುವುದರಿಂದ ಈ ಬಾರಿ ಮತದಾರರು ಯಾರ ಕೈಹಿಡಿಯುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಚಂಡೀಗಢ



ಮನೀಷ್ ತಿವಾರಿ
(ಕಾಂಗ್ರೆಸ್)

ಕೇಂದ್ರಾಡಳಿತ ಪ್ರದೇಶವಾದ ಚಂಡೀಗಢದ ಲೋಕಸಭಾ ಕ್ಷೇತ್ರವು ಈ ಬಾರಿ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ನಡುವಿನ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ. ಕಾಂಗ್ರೆಸ್ ಪಕ್ಷವು ಹಿರಿಯ ಮುಖಂಡ ಹಾಗೂ ಮಾಜಿ ಸಚಿವ ಮನೀಷ್ ತಿವಾರಿ ಅವರನ್ನು ಇಲ್ಲಿಂದ ಕಣಕ್ಕಿಳಿಸಿದೆ. ಎಎಪಿಯು ಈ ಬಾರಿ ‘ಇಂಡಿಯಾ‘ ಮೈತ್ರಿಕೂಟದ ಜೊತೆಗಿರು-ವುದರಿಂದ ಮನೀಷ್ ಅವರು ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸ ಕಾಂಗ್ರೆಸ್ ವರಿಷ್ಠರದ್ದು. ಕಳೆದ ಚುನಾವಣೆಯಲ್ಲಿ ಮನೀಷ್ ಅವರು ಆನಂದಪುರ ಸಾಹಿಬ್ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ಎನ್‌ಎಸ್‌ಯುಐನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿರುವ ಇವರು ಪಕ್ಷದ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸುವ ಮೂಲಕ ರಾಷ್ಟ್ರಮಟ್ಟದಲ್ಲಿ ಗುರುತಿಸಿ-ಕೊಂಡವರು. ಪ್ರಜಾಪ್ರಭುತ್ವವು ಅಪಾಯದಲ್ಲಿದೆ ಎಂಬ ವಿಚಾರ ವನ್ನು ಪ್ರಮುಖ ಪ್ರಚಾರ ವಿಷಯವನ್ನಾಗಿಸಿ ಮನೀಷ್ ಅವರು ಮತಯಾಚಿಸುತ್ತಿದ್ದಾರೆ.


V/S



ಸಂಜಯ್ ಟಂಡನ್
(ಬಿಜೆಪಿ)

ಚಂಡೀಗಢದಲ್ಲಿ ಕಾಂಗ್ರೆಸ್‌ನ ಪ್ರಬಲ ಅಭ್ಯರ್ಥಿ ಮನೀಷ್ ತಿವಾರಿ ಅವರನ್ನು ಮಣಿಸಲು ಬಿಜೆಪಿಯು ಸಂಜಯ್ ಟಂಡನ್ ಅವರನ್ನು ಅಖಾಡಕ್ಕಿಳಿಸಿದೆ. ಬಿಜೆಪಿಯ ಚಂಡೀಗಢ ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ಸಂಜಯ್ ಅವರು ಪಕ್ಷ ಸಂಘಟನೆಗಾಗಿ ದುಡಿದವರು. ಇವರು ಇದೇ ಮೊದಲ ಬಾರಿ ಲೋಕಸಭಾ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. 2019ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಕಿರಣ್ ಖೇರ್ ಅವರು ಇಲ್ಲಿಂದ ಸ್ಪರ್ಧಿಸಿ, 46,970 ಮತಗಳ ಅಂತರದಿಂದ ಕಾಂಗ್ರೆಸ್‌ನ ಪವನ್ ಕುಮಾರ್ ಬನ್ಸಲ್ ಅವರನ್ನು ಪರಾಭವಗೊಳಿಸಿದ್ದರು. ಕಿರಣ್ ಖೇರ್ ಅವರು ಇಲ್ಲಿಂದ ಎರಡು ಬಾರಿ ಗೆದ್ದಿದ್ದರು. ಕ್ಷೇತ್ರದಲ್ಲಿ ಈ ಬಾರಿಯೂ ಪಕ್ಷಕ್ಕೆ ಅನುಕೂಲಕರ ವಾತಾವರಣವಿದ್ದು, ಸಂಜಯ್ ಅವರು ಜಯ ಗಳಿಸುತ್ತಾರೆಂಬುದು ಬಿಜೆಪಿ ನಾಯಕರ ವಿಶ್ವಾಸ. ಲೇಖಕರೂ ಆಗಿರುವ ಸಂಜಯ್ ಅವರು ಹಲವು ಕೃತಿಗಳನ್ನು ರಚಿಸಿದ್ದಾರೆ.

ಷೇರುಪೇಟೆ ವಹಿವಾಟು 454



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,147
ಇಂದಿನ ಅಂತ್ಯ	21,995
▼	152
ದಿನದ ಕನಿಷ್ಠ	21,961

ವಿನಿಮಯ ದರ

$ ಡಾಲರ್	83.52
£ ಪೌಂಡ್	104.18
€ ಯುರೊ	89.14
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹485
12 ಕ್ಕೆ	₹65
ಮೈಸೂರು	
100ಕ್ಕೆ	₹487

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ಚಿಲ್ಲರೆ)	₹1500 (1490)
ಸೋಯಾ (ಚಿಲ್ಲರೆ)	₹952 (947)
ಸೂರ್ಯಕಾಂತಿ (ಚಿಲ್ಲರೆ)	₹945 (945)
ಪಾಮೊಲೀನ್	₹942 (945)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹285-500
ದ್ವಿತಳಿ (ಪ್ರ.ಕೆ)	₹312-583

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹16900
ಪಿಬಿ	₹9800
ಆರ್‌ಪಿ	₹17100
ಆರ್‌ಸಿ	₹10480

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-9300
ಕೆ.ಆರ್.ಪೇಟೆ	₹9350-9350
ಮಧುಗಿರಿ	₹7450-8000

ಸಂಕ್ಷಿಪ್ತ ಸುದ್ದಿ

‘ವಿದೇಶಿ ಬೆಟ್ಟಿಂಗ್ ಸಂಸ್ಥೆಗಳಿಗೆ ಕಡಿವಾಣ ಹಾಕಿ’

ನವದೆಹಲಿ: ವಿದೇಶದಲ್ಲಿರುವ ಅನಧಿಕೃತ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್ ಸಂಸ್ಥೆಗಳು ಭಾರತೀಯ ಗ್ರಾಹಕರಿಂದ ಪ್ರತಿ ವರ್ಷ ₹1 ಲಕ್ಷ ಕೋಟಿಯಷ್ಟು ಠೇವಣಿ ಸಂಗ್ರಹಿಸುತ್ತವೆ. ಇದರಿಂದ ದೇಶಕ್ಕೆ ವಾರ್ಷಿಕ ₹20 ಸಾವಿರ ಕೋಟಿಯಷ್ಟು ಜಿಎಸ್‌ಟಿ ನಷ್ಟವಾಗುತ್ತಿದೆ ಎಂದು ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್ (ಎಐಜಿಎಫ್) ಹೇಳಿದೆ.

ಬಳಕೆದಾರರಿಗೆ ನೈಜ ಗೇಮಿಂಗ್ ಮತ್ತು ಅನಧಿಕೃತ ಗೇಮಿಂಗ್ ವೇದಿಕೆಗಳ ಬಗ್ಗೆ ಅರಿವು ಇರುವುದಿಲ್ಲ. ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವ ಇಂತಹ ಸಂಸ್ಥೆಗಳಿಗೆ ಕಡಿವಾಣ ಹಾಕಲು ಕೇಂದ್ರವು ಮುಂದಾಗಬೇಕಿದೆ ಎಂದು ಎಐಜಿಎಫ್‌ನ ಸಿಇಒ ರೋಲ್ಯಾಂಡ್ ಲ್ಯಾಂಡರ್ಸ್ ಒತ್ತಾಯಿಸಿದ್ದಾರೆ.

ವಿದೇಶದಲ್ಲಿರುವ ಈ ಅನಧಿಕೃತ ಸಂಸ್ಥೆಗಳು ಭಾರತದ ಗೇಮಿಂಗ್ ವಲಯಕ್ಕೆ ಧಕ್ಕೆ ತರುತ್ತಿವೆ ಎಂದು ಹೇಳಿದ್ದಾರೆ.

ಜಪಾನ್‌ನಲ್ಲಿ ಪ್ರಬಲ ಭೂಕಂಪ

ಟೋಕಿಯೊ (ಎಪಿ): ಆಗ್ನೇಯ ಜಪಾನ್‌ನಲ್ಲಿ 6.6 ಕಂಪನಾಂಕ ತೀವ್ರತೆಯ ಪ್ರಬಲ ಭೂಕಂಪವು ಬುಧವಾರ ರಾತ್ರಿ ಸಂಭವಿಸಿದ್ದು, ಒಂಬತ್ತು ಮಂದಿಗೆ ಚಿಕ್ಕಪುಟ್ಟ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂಕಂಪದಿಂದ ನೀರಿನ ಕೊಳವೆಗಳಿಗೆ ಹಾನಿಯುಂಟಾಗಿದೆ ಮತ್ತು ಅಲ್ಲಲ್ಲಿ ಸಣ್ಣ ಪ್ರಮಾಣದ ಭೂಕುಸಿತವೂ ಸಂಭವಿಸಿದೆ ಎಂದು ಅವರು ಹೇಳಿದ್ದಾರೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹178
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹162

(ಪ್ರತಿ ಕೆ.ಜಿಗೆ)

ಮುಳುವಾದ ಮಾನದಂಡ: ಖರೀದಿ ಕೇಂದ್ರದಲ್ಲಿ ಗಾತ್ರ, ಎಣ್ಣೆ ಅಂಶ ಪರೀಕ್ಷೆ

ಗುಣಮಟ್ಟದ ಕೊಬ್ಬರಿಯಷ್ಟೇ ಖರೀದಿ

• ಹಿ.ಕೃ. ಚಂದ್ರು

ಹಿರೀಸಾವೆ (ಹಾಸನ ಜಿಲ್ಲೆ): ಹೋಬಳಿಯಲ್ಲಿ ತೆರೆದಿರುವ ಖರೀದಿ ಕೇಂದ್ರದಲ್ಲಿ ಸರ್ಕಾರದ ಮಾನದಂಡದಂತೆ ನಿಗದಿತ ಗಾತ್ರ ಮತ್ತು ಎಣ್ಣೆ ಅಂಶವುಳ್ಳ ಉಂಡೆ ಕೊಬ್ಬರಿಯನ್ನಷ್ಟೇ ಖರೀದಿಸಲಾಗುತ್ತಿದೆ.

ಹಾಗಾಗಿ, ಸಣ್ಣ ಕೊಬ್ಬರಿಯನ್ನು ರೈತರು ಮನೆಗೆ ವಾಪಸು ತೆಗೆದುಕೊಂಡು ಹೋಗುವುದು ಅನಿವಾರ್ಯವಾಗಿದೆ. ಗುಣಮಟ್ಟದ ಕೊಬ್ಬರಿಗಷ್ಟೇ ಬೆಲೆ ಎನ್ನುವಂತಾಗಿದೆ. ಈ ಮಾನದಂಡವು ಬಹುತೇಕ ರೈತರಿಗೆ ಮುಳುವಾಗಿದೆ.

ಹೆಸರು ನೋಂದಾಯಿಸಿದ ರೈತರಿಂದ ಹೋಬಳಿಯ ಬೂಕನ ಬೆಟ್ಟದಲ್ಲಿ 15 ದಿನಗಳಿಂದ ಕೊಬ್ಬರಿ ಖರೀದಿಸಲಾಗುತ್ತಿದೆ. ಏಪ್ರಿಲ್ 30ರ ವರೆಗೆ ವೇಳಾಪಟ್ಟಿಯನ್ನೂ ಪ್ರಕಟಿಸಿರುವುದರಿಂದ ರೈತರಿಗೆ ಅನುಕೂಲವಾಗಿದೆ. ಸರದಿಯಂತೆ



ಹಿರೀಸಾವೆ ಹೋಬಳಿಯ ಬೂಕನಬೆಟ್ಟದಲ್ಲಿ ರೈತರ ಉಂಡೆ ಕೊಬ್ಬರಿಯಲ್ಲಿನ ಎಣ್ಣೆ ಅಂಶದ ಪರೀಕ್ಷೆ ನಡೆಯಿತು

ರೈತರು ಕೊಬ್ಬರಿ ತಂದರೂ ಸರ್ಕಾರದ ಸಾಗಣೆ ಲಾರಿ ಬಂದರಷ್ಟೇ ಕೊಬ್ಬರಿ ಖರೀದಿಸಲು ಸಾಧ್ಯ. ಇಲ್ಲದಿದ್ದರೆ, ರೈತರು ಕೊಬ್ಬರಿಯೊಂದಿಗೆ ದಿನಗಟ್ಟಲೆ ಅಲ್ಲಿಯೇ ಕಾಯುವ ಪರಿಸ್ಥಿತಿ ತಲೆದೋರಿದೆ.

ಕುಡಿಯುವ ನೀರು, ಬೆಳಕಿನ ವ್ಯವಸ್ಥೆ ಇಲ್ಲ. ಮಳೆ ಬಂದರೆ ಕೊಬ್ಬರಿ ತೋಯುತ್ತದೆ. ತೂಕ ಆಗುವರೆಗೆ ರೈತರೇ ಜವಾಬ್ದಾರರು. ನಿಯಮದಂತೆ 75 ಎಂ.ಎಂ. ಸುತ್ತಳತೆ ಮತ್ತು ಎಣ್ಣೆ ಅಂಶ ಇರುವುದನ್ನು ಪರೀಕ್ಷೆ ಮಾಡಿ ಸಣ್ಣ ಕೊಬ್ಬರಿಯನ್ನು ನಿರಾಕರಿಸಲಾಗುತ್ತಿದೆ. ‘ನಿತ್ಯ 100 ರಿಂದ 150 ಕ್ವಿಂಟಲ್ ತೂಕ ಮಾಡುತ್ತಾರೆ. ಹೋಬಳಿಯಲ್ಲಿ ತೆಂಗು ಮಳೆಯಾಶ್ರಿತ ಬೆಳೆಯಾಗಿದ್ದು, ಈ ಭಾಗದಲ್ಲಿ ದಪ್ಪ ಕೊಬ್ಬರಿ ಬರುವುದು ಕಡಿಮೆ. 50 ರಿಂದ 60 ಎಂ.ಎಂ ಸುತ್ತಳತೆ ಕೊಬ್ಬರಿಯೇ ಹೆಚ್ಚು. ಈಗಿನ ನಿಯಮದಿಂದ ನಷ್ಟವೇ ಹೆಚ್ಚು. 60 ಎಂ.ಎಂ. ಗಿಂತ ಹೆಚ್ಚಿನ ಗಾತ್ರದ ಕೊಬ್ಬರಿಯನ್ನಾದರೂ ಖರೀದಿಸಿದರೆ ಅನುಕೂಲವಾಗುತ್ತದೆ’ ಎನ್ನುತ್ತಾರೆ ರೈತರು.

‘ಕೊಬ್ಬರಿ ಅಳತೆಗೆ ಮತ್ತು ಎಣ್ಣೆ ಅಂಶ ಪರೀಕ್ಷೆ ಮಾಡಲು ನಾಫೆಡ್ ಸಲಕರಣೆ ನೀಡಿದೆ. ಈ ಭಾಗದ ಕೊಬ್ಬರಿಯಲ್ಲಿ ಎಣ್ಣೆ ಅಂಶ ಚೆನ್ನಾಗಿದೆ. ರೈತರು ಸಣ್ಣ ಕೊಬ್ಬರಿಯನ್ನು ಸಾಧ್ಯವಾದಷ್ಟು ವಿಂಗಡಣೆ ಮಾಡಿ ತಂದರೆ ಒಳ್ಳೆಯದು’ ಎನ್ನುತ್ತಾರೆ ಗ್ರೇಡ್ ಪರೀಕ್ಷೆ ಮಾಡುವ ಅಧಿಕಾರಿ ಅನ್ನದಾನಿ.

‘ಖರೀದಿ ಕೇಂದ್ರದ ಬಳಿ ನೀರು ಸೇರಿದಂತೆ ಮೂಲ ಸೌಲಭ್ಯಗಳಿಲ್ಲದೇ ಸಮಸ್ಯೆ ಎದುರಿಸುತ್ತಿದ್ದೇವೆ. ಮಳೆ ಬಂದರೆ ಕೊಬ್ಬರಿ ತೋಯುತ್ತದೆ’ ಎಂದು ಬೂಕನಬೆಟ್ಟದ ನವೀನ್ ತಿಳಿಸಿದರು.

‘ನಿತ್ಯ ಇಲ್ಲಿಂದ ಕೊಬ್ಬರಿ ಸಾಗಿಸಲು ಒಂದು ಲಾರಿಯ ಬದಲು ಎರಡು ಲಾರಿಗಳು ಬೇಕು. ಒಂದು ಕಡೆ ತೂಕ ಮಾಡುವ ಬದಲು, ಎರಡು ಕಡೆ ತೂಕ ಮಾಡಿದರೆ, ರೈತರು ದಿನಗಟ್ಟಲೆ ಕಾಯುವುದು ತಪ್ಪುತ್ತದೆ’ ಎಂದು ಹಿರೀಸಾವೆ ಎಚ್.ಪಿ. ಶಂಕರ್ ಹಾಗೂ ಯಾಳನಹಳ್ಳಿಯ ಬಲರಾಮು ಆಗ್ರಹಿಸಿದರು.

ಮುಂದುವರಿದ ಕರಡಿ ಕುಣಿತ

ನಾಲ್ಕು ದಿನದಲ್ಲಿ ಕರಗಿದ ₹9.30 ಲಕ್ಷ ಕೋಟಿ ಸಂಪತ್ತು

ಮುಂಬೈ (ಪಿಟಿಐ): ದೇಶದ ಷೇರು ಮಾರುಕಟ್ಟೆಗಳಲ್ಲಿ ಗುರುವಾರವೂ ನಕಾರಾತ್ಮಕ ವಹಿವಾಟು ನಡೆಯಿತು. ಬ್ಯಾಂಕ್ ಷೇರುಗಳ ಇಳಿಕೆ ಹಾಗೂ ವಿದೇಶಿ ನಿಧಿಯ ಹೊರಹರಿವಿನ ಹೆಚ್ಚಳದಿಂದಾಗಿ ಕರಡಿ ಕುಣಿತ ಮುಂದುವರಿಯಿತು.



ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತದ ಬಗ್ಗೆ ಹೂಡಿಕೆದಾರರಲ್ಲಿ ಭರವಸೆ ಮರೆಯಾಗಿದೆ. ಮತ್ತೊಂದೆಡೆ ಮಧ್ಯಪ್ರಾಚ್ಯ ಬಿಕ್ಕಟ್ಟಿನ ಉಲ್ಬಣವು ಷೇರುಪೇಟೆ ಮೇಲೆ ಪರಿಣಾಮ ಬೀರಿದೆ. ಇದರಿಂದ ಸೂಚ್ಯಂಕಗಳು ಕುಸಿತದ ಹಾದಿ ಹಿಡಿದಿವೆ.

ಒಂದೇ ದಿನ ಹೂಡಿಕೆದಾರರ ಸಂಪತ್ತು ₹1.37 ಲಕ್ಷ ಕೋಟಿ ಕಡಿಮೆಯಾಗಿದೆ. ನಾಲ್ಕು ದಿನಗಳಲ್ಲಿ ಒಟ್ಟು ₹9.30 ಲಕ್ಷ ಕೋಟಿ ಸಂಪತ್ತು ಕರಗಿದೆ.

ಸೆನ್ಸೆಕ್ಸ್ 454 ಅಂಶ ಕುಸಿತ ಕಂಡು 72,488ಕ್ಕೆ ಅಂತ್ಯಗೊಂಡಿತು. ನಿಫ್ಟಿ 152 ಅಂಶ ಇಳಿದು 21,995ಕ್ಕೆ ಕೊನೆಗೊಂಡಿತು.

ಟೈಟನ್, ಎಕ್ಸಿಸ್ ಬ್ಯಾಂಕ್, ಎನ್‌ಟಿಪಿಸಿ, ಟಾಟಾ ಮೋಟರ್ಸ್, ಐಟಿಸಿ, ಟೆಕ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಬಜಾಜ್ ಫೈನಾನ್ಸ್ ಷೇರಿನ ಮೌಲ್ಯ ಇಳಿದಿದೆ.

ಭಾರ್ತಿ ಏರ್‌ಟೆಲ್, ಪವರ್‌ಗ್ರಿಡ್, ಇನ್ಫೊಸಿಸ್ ಮತ್ತು ಲಾರ್ಸನ್ ಆ್ಯಂಡ್ ಟೊಬ್ರೊ ಗಳಿಕೆ ಕಂಡಿವೆ. ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 0.39 ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 0.06ರಷ್ಟು ಇಳಿದಿದೆ.

ಜಸ್ಟ್ ಡಯಲ್ ಷೇರು ಶೇ 13ರಷ್ಟು ಜಿಗಿತ

2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಜಸ್ಟ್ ಡಯಲ್‌ನ ನಿವ್ವಳ ಲಾಭವು ಶೇ 38ರಷ್ಟು ಏರಿಕೆಯಾದ ಬೆನ್ನಲ್ಲೇ ಕಂಪನಿಯ ಷೇರಿನ ಮೌಲ್ಯ ಶೇ 13ರಷ್ಟು ಹೆಚ್ಚಾಗಿದೆ. 52 ವಾರಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಕ್ರಮವಾಗಿ ಶೇ 12.97 ಮತ್ತು ಶೇ 13.38ರಷ್ಟು ಏರಿಕೆಯಾಗಿದೆ. ಪ್ರತಿ ಷೇರಿನ ಬೆಲೆ ₹1,010ಕ್ಕೆ ಮುಟ್ಟಿದೆ. ವಹಿವಾಟಿನಲ್ಲಿ ಷೇರಿನ ಮೌಲ್ಯ ಶೇ 15ರ ವರೆಗೆ ಹೆಚ್ಚಾಗಿತ್ತು.

ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹986 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹8,588 ಕೋಟಿಗೆ ಮುಟ್ಟಿದೆ.

ಭಾರತದೊಟ್ಟಿಗೆ ಎಂಜಿನ್ ತಯಾರಿ ಒಪ್ಪಂದ ಕ್ರಾಂತಿಕಾರಿ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ಭಾರತೀಯ ವಾಯುಪಡೆಯ ಫೈಟರ್ ಜೆಟ್‌ಗಳಿಗೆ(ಯುದ್ಧ ವಿಮಾನ) ಎಂಜಿನ್‌ಗಳನ್ನು ತಯಾರಿಸುವ ಭಾರತ–ಅಮೆರಿಕದ ಜಂಟಿ ಒಪ್ಪಂದವು ಕ್ರಾಂತಿಕಾರಿಯಾಗಿದೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರು ಬಜೆಟ್ ಸಂಬಂಧಿತ ಸಮಿತಿಗೆ ತಿಳಿಸಿದರು. ಭಾರತದೊಂದಿಗೆ ಅಮೆರಿಕ ಹೊಂದಿರುವ ಉತ್ತಮ ಸಂಬಂಧವನ್ನು ಶ್ಲಾಘಿಸಿದರು.

ಕಳೆದ ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಐತಿಹಾಸಿಕ ಅಮೆರಿಕ ಭೇಟಿ ಸಂದರ್ಭದಲ್ಲಿ ಉಭಯ ದೇಶಗಳ ನಡುವಿನ ಈ ಒಪ್ಪಂದವನ್ನು ಘೋಷಿಸಲಾಗಿತ್ತು.

ಭಾರತದಲ್ಲಿ ಎಫ್–414 ಯುದ್ಧ ವಿಮಾನಗಳ ಎಂಜಿನ್‌ಗಳನ್ನು ಜಂಟಿಯಾಗಿ ತಯಾರಿಸಲು ಹಿಂದೂಸ್ತಾನ್ ಏರೋನಾಟಿಕ್ಸ್ ಸಂಸ್ಥೆಯೊಂದಿಗೆ ಜನರಲ್ ಎಲೆಕ್ಟ್ರಿಕ್ ಒಪ್ಪಂದಕ್ಕೆ ಸಹಿ ಹಾಕಿತು.

ಒಪ್ಪಂದದ ಪ್ರಕಾರ ತೇಜಸ್ ಲಘು ಯುದ್ಧ ವಿಮಾನ ‘ಎಂಕೆ2’ಗಾಗಿ ಜಿಇ ಏರೋಸ್ಪೇಸ್‌ನ ಎಫ್–414 ಎಂಜಿನ್‌ಗಳನ್ನು ಭಾರತದಲ್ಲಿ ಉಭಯ ಸಂಸ್ಥೆಗಳ ಸಹಯೋಗದಲ್ಲಿ ತಯಾರಿಸಲಾಗುತ್ತದೆ.

‘ನಾವು ಇತ್ತೀಚೆಗೆ ಭಾರತದಲ್ಲಿ ಜೆಟ್ ಆಯುಧ ಮತ್ತು ಜೆಟ್ ಎಂಜಿನ್ ತಯಾರಿಸಲು ಒಪ್ಪಂದ ಮಾಡಿಕೊಂಡಿದ್ದೇವೆ. ಇದು ಕ್ರಾಂತಿಕಾರಿ ನಡೆಯಾಗಿದೆ. ಇದು ಭಾರತದ ಸಾಮರ್ಥ್ಯ ವರ್ಧನೆಗೆ ಕಾರಣವಾಗುತ್ತದೆ. ನಾವು ಭಾರತದೊಂದಿಗೆ ಶಸ್ತ್ರಸಜ್ಜಿತ ವಾಹನವನ್ನು ಸಹ ತಯಾರಿಸುತ್ತಿದ್ದೇವೆ’ ಎಂದು ಆಸ್ಟಿನ್ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಇನ್ಫೊಸಿಸ್: ₹7,969 ಕೋಟಿ ಲಾಭ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಐ.ಟಿ ಕಂಪನಿ ಇನ್ಫೊಸಿಸ್, 2023–24ನೇ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಒಟ್ಟು ₹7,969 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ನೇ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹6,128 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 30ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ವರಮಾನವು ₹37,441 ಕೋಟಿಯಿಂದ ₹37,923 ಕೋಟಿಗೆ ಹೆಚ್ಚಳವಾಗಿದೆ. 2024–25ನೇ ಹಣಕಾಸು ವರ್ಷದಲ್ಲಿ ವರಮಾನವು ಶೇ 1ರಿಂದ ಶೇ3ರಷ್ಟು ಬೆಳವಣಿಗೆ ಆಗಲಿದೆ ಎಂದು ಕಂಪನಿಯು ಅಂದಾಜಿಸಿದೆ.

ಮಾರ್ಚ್‌ಗೆ ಅಂತ್ಯಗೊಂಡ ಪೂರ್ಣ ಹಣಕಾಸು ವರ್ಷದಲ್ಲಿ ನಿವ್ವಳ ಲಾಭವು ₹24,095 ಕೋಟಿಯಿಂದ ₹26,233 ಕೋಟಿಗೆ (ಶೇ 8.9) ಹೆಚ್ಚಳವಾಗಿದೆ. ವಾರ್ಷಿಕ ವರಮಾನವು ₹1.46 ಲಕ್ಷ ಕೋಟಿಯಿಂದ ₹1.53 ಲಕ್ಷ ಕೋಟಿಗೆ ಮುಟ್ಟಿದೆ.



ಪ್ರತಿ ಈಕ್ವಿಟಿ ಷೇರಿಗೆ ₹20 ಅಂತಿಮ ಲಾಭಾಂಶ ಮತ್ತು ಹೆಚ್ಚುವರಿಯಾಗಿ ಪ್ರತಿ ಈಕ್ವಿಟಿ ಷೇರಿಗೆ ₹8 ವಿಶೇಷ ಲಾಭಾಂಶ ನೀಡಲು ಮಂಡಳಿಯು ಶಿಫಾರಸು ಮಾಡಿದೆ. ಕಂಪನಿಯ ಒಟ್ಟು ಒಪ್ಪಂದ ಮೌಲ್ಯವು 2023–24ರಲ್ಲಿ ₹1.47 ಲಕ್ಷ ಕೋಟಿಗೆ ಮುಟ್ಟಿದೆ. ಜರ್ಮನಿಯ ಇನ್‌ಟೆಕ್‌ನ ಶೇ 100ರಷ್ಟು ಪಾಲನ್ನು ₹4,009 ಕೋಟಿಗೆ ಸ್ವಾಧೀನ-ಪಡಿಸಿಕೊಳ್ಳುವುದಾಗಿ ಕಂಪನಿ ಘೋಷಿಸಿದೆ.

2023–24ನೇ ಹಣಕಾಸು ವರ್ಷದಲ್ಲಿ ಅತ್ಯಧಿಕ ದೊಡ್ಡ ಒಪ್ಪಂದಕ್ಕೆ ತಲುಪಿದ್ದೇವೆ. ಇದು ಗ್ರಾಹಕರಿಗೆ ನಮ್ಮ ಮೇಲಿನ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಜನರೇಟಿವ್ ಕೃತಕ ಬುದ್ಧಿಮತ್ತೆಯಲ್ಲಿನ (ಎ.ಐ) ಕಂಪನಿಯ ಸಾಮರ್ಥ್ಯಗಳು ವಿಸ್ತರಿಸುತ್ತಿವೆ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಲೀಲ್ ಪರೇಖ್ ಹೇಳಿದ್ದಾರೆ.

ಬಜಾಜ್ ಆಟೊಗೆ ಶೇ 35ರಷ್ಟು ಲಾಭ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಬಜಾಜ್ ಆಟೊ, 2023–24ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ತೆರಿಗೆ ನಂತರ, ಶೇ 35ರಷ್ಟು ನಿವ್ವಳ ಲಾಭ ಗಳಿಸಿದೆ.

2022–23ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹1,433 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹1,936 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ವರಮಾನವು ₹8,905 ಕೋಟಿಯಿಂದ ₹11,485 ಕೋಟಿಗೆ ಮುಟ್ಟಿದೆ. ಒಟ್ಟಾರೆ ಶೇ 29ರಷ್ಟು ಹೆಚ್ಚಳವಾಗಿದೆ.

ತೆರಿಗೆ ನಂತರದ ಲಾಭವು 2022–23ರಲ್ಲಿ ₹5,628 ಕೋಟಿ ಇತ್ತು. 2023–24ರಲ್ಲಿ ₹7,479 ಕೋಟಿಗೆ ಹೆಚ್ಚಳವಾಗಿದೆ. ವರಮಾನವು ₹36,428 ಕೋಟಿಯಿಂದ ₹44,685 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-44500
ಚಿತ್ರದುರ್ಗ	
ಅಪಿ	50600-51000
ಬೆಟ್ಟೆ	35700-36100
ಕೆಂಪುಗೋಟು	30600-31000
ರಾಶಿ	50100-50500
ಕಾರ್ಕಳ	
ಹೊಸತು	25000-36500
ಹಳತು	30000-43500
ಕುಮಟ	
ಚಿಪ್ಪು	23480-27369
ಕೋಕ	18190-25689
ಹಳೆಚಾಲಿ	34269-39199
ಹೊಸಚಾಲಿ	28599-34499
ಸಾಗರ	
ಬಿಳಿಗೋಟು	15510-26899
ಚಾಲಿ	28611-34299
ಕೋಕ	16899-28899
ಕೆಂಪುಗೋಟು	19299-36199
ರಾಶಿ	31899-50709
ಸಿಪ್ಪೆಗೋಟು	9561-18729
ಶಿವಮೊಗ್ಗ	
ಬೆಟ್ಟೆ	46659-56199
ಗೊರಬಲು	16159-38869
ರಾಶಿ	31869-52596
ಸರಕು	51000-83300
ಸಿದ್ದಾಪುರ	
ಬಿಳಿಗೋಟು	12689-29899
ಚಾಲಿ	30313-35469
ಕೋಕ	14012-29659
ಹಳೆಚಾಲಿ	30600-36099
ಕೆಂಪುಗೋಟು	26899-30699
ರಾಶಿ	35699-48799
ತಟ್ಟಿಬೆಟ್ಟೆ	26699-36360
ಶಿರಸಿ	
ಬೆಟ್ಟೆ	37609-46599
ಬಿಳಿಗೋಟು	21009-29218
ಚಾಲಿ	32099-35808
ಕೆಂಪುಗೋಟು	26099-30699
ರಾಶಿ	44099-48989
ಯಲ್ಲಾಪುರ	
ಅಪಿ	55209-58369
ಬಿಳಿಗೋಟು	21899-30611
ಕೋಕ	14212-27499
ಹಳೆಚಾಲಿ	36003-38803
ಹೊಸಚಾಲಿ	31899-35999
ಕೆಂಪುಗೋಟು	26899-35619
ರಾಶಿ	43899-54992
ತಟ್ಟಿಬೆಟ್ಟೆ	36769-43199

ಮುಂಬೈ ಧಾರಣೆ

ಶೇಂಗಾ
18-4-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10700-10800
ಕಚ್ಚಾ (ತೆರಿಗೆ ಬಿಟ್ಟು)	1510 (1500)
ಶೇಂಗಾ ಎಣ್ಣೆ (10 ಕೆಜಿಗೆ)	
ಒಂದು ವಾರದ ಡೆಲಿವರಿ	1505 (1495)
ಸೋಯಾ ಕಚ್ಚಾ	905 (905)
ಪಾಮ್ ವಾರದ ಡೆಲಿವರಿ	940 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	875(875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹73,250 (73,700)
ಬೆಳ್ಳಿ ಕೆ.ಜಿ ₹83,000 (83,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದಾಖಲೆ ಮಳೆಯ ದುಷ್ಪರಿಣಾಮ ಎದುರಿಸುತ್ತಿರುವ ಅರಬ್ ರಾಷ್ಟ್ರ

ಸಹಜ ಸ್ಥಿತಿಗೆ ಮರಳಲು ಯುಎಇ ಪ್ರಯಾಸ

ದುಬೈ (ಎಪಿ): ಭಾರಿ ಮತ್ತು ದಾಖಲೆ ಪ್ರಮಾಣದ ಮಳೆಯಾಗಿದ್ದರಿಂದ ಉಂಟಾಗಿರುವ ವ್ಯತ್ಯಯಗಳಿಂದ ಚೇತರಿಸಿಕೊಳ್ಳಲು ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಜನರು ಗುರುವಾರವೂ ಪ್ರಯಾಸಪಟ್ಟರು. ದುಬೈ ಅಂತರರಾಷ್ಟ್ರೀಯ ನಿಲ್ದಾಣದಲ್ಲಿ ವಿಮಾನಗಳ ಕಾರ್ಯಾಚರಣೆಯನ್ನು ಸಹಜ ಸ್ಥಿತಿಗೆ ತರುವ ನಿಟ್ಟಿನಲ್ಲಿ ಪ್ರಯತ್ನ ನಡೆಯಿತಾದರೂ ಫಲ ಕೊಡಲಿಲ್ಲ.

‘ವಿಮಾನಗಳ ಕಾರ್ಯಾಚರಣೆ ಮತ್ತಷ್ಟು ವಿಳಂಬವಾಗಲಿದೆ. ಟಿಕೆಟ್ ಖಾತರಿಯಾಗಿರುವ ಪ್ರಯಾಣಿಕರು ಟರ್ಮಿನಲ್-1ಕ್ಕೆ ಬರಬೇಕು’ ಎಂದು ವಿಮಾನ ನಿಲ್ದಾಣ ಆಡಳಿತವು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿತ್ತು.

ಯುಎಇಯ ಪ್ರಮುಖ ವಿಮಾನಯಾನ ಸಂಸ್ಥೆಯಾದ ಎಮಿರೇಟ್ಸ್ ತನ್ನ ಕಾರ್ಯಾಚರಣೆ-ಯನ್ನು ಸ್ಥಗಿತಗೊಳಿಸಿತ್ತು. ಗುರುವಾರ ಸ್ಥಗಿತ ಹಿಂಪಡೆದ ಸಂಸ್ಥೆಯು ತನ್ನ ಗ್ರಾಹಕರಿಗೆ ವಿಮಾನ ನಿಲ್ದಾಣಕ್ಕೆ ಬರುವಂತೆ ಸೂಚಿಸಿತು. ತಮ್ಮ ಸಾಮಾನು ಸರಂಜಾಮುಗಳನ್ನು ಪಡೆಯಲು ಗಂಟೆಗಟ್ಟಲೆ ಕಾದು ಕುಳಿತ ಅನುಭವವನ್ನು ಹಲವು ಗ್ರಾಹಕರು ವಿವರಿಸಿದರು.

ಮರುಭೂಮಿ ಪ್ರದೇಶವಾದ ಯುಎಇಯಲ್ಲಿ ಪ್ರತಿವರ್ಷ ಸಾಧಾರಣ ಮಳೆಯಾಗುತ್ತದೆ. ಇದಕ್ಕೆ ತಕ್ಕಂತೆ ಅಲ್ಲಿ ಚರಂಡಿ ವ್ಯವಸ್ಥೆ ಮಾಡಲಾಗಿದೆ. ಆದರೆ ಹಠಾತ್ ಮತ್ತು ಭಾರಿ ಮಳೆಯನ್ನು ನಿರ್ವಹಿಸುವ ಸಾಮರ್ಥ್ಯವನ್ನು ಅಲ್ಲಿಯ ಚರಂಡಿ ವ್ಯವಸ್ಥೆ ಹೊಂದಿರಲಿಲ್ಲ. ಹೀಗಾಗಿ ಪ್ರವಾಹ ಪರಿಸ್ಥಿತಿ ಉಂಟಾಯಿತು. ಇದೇ ವೇಳೆ, 12 ಪಥಗಳ ಶೇಖ್ ಝಾಯೆದ್ ಹೆದ್ದಾರಿಯೂ ಜಲಾವೃತವಾದ ಕಾರಣ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು.

> **ಸಂಕಷ್ಟ ಪರಿಸ್ಥಿತಿಯು ನಮ್ಮ ದೇಶದ ಸಾಮರ್ಥ್ಯವನ್ನು ಎತ್ತಿಹಿಡಿದಿದೆ. ದೇಶದ ಪ್ರತಿಯೊಬ್ಬ ನಿವಾಸಿಯೂ ಮತ್ತೊಬ್ಬರಿಗೆ ಕಾಳಜಿ, ಪ್ರೀತಿ ತೋರಿದ್ದಾರೆ**
> **ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಕ್ತೂಮ್,** ದುಬೈ ಆಡಳಿತಗಾರ

ಈ ಪರಿಸ್ಥಿತಿ ಕುರಿತು ಅಬುಧಾಬಿ ಆಡಳಿತಗಾರ ಶೇಖ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್ ಅವರು ದೇಶಕ್ಕೆ ಸಂದೇಶ ನೀಡಿದ್ದಾರೆ. ‘ಯುಎಇ ಮೂಲಸೌಕರ್ಯದ ಸ್ಥಿತಿಗತಿ ಕುರಿತು ಕೂಡಲೇ ಅಧ್ಯಯನ ನಡೆಸಲು ಮತ್ತು ಮಳೆಯಿಂದ ಆಗಿರುವ ಹಾನಿಯಿಂದ ಹೊರಬರಲು ಪರಿಹಾರ ಹುಡುಕಲಾಗುವುದು’ ಎಂದು ಹೇಳಿದ್ದಾರೆ.

ಶಾಲೆಗಳ ರಜೆ ವಿಸ್ತರಣೆ: ಮುಂದಿನ ವಾರದವರೆಗೂ ಶಾಲೆಗಳನ್ನು ಮುಚ್ಚಲಾಗುವುದು ಎಂದು ಅಲ್ಲಿಯ ಆಡಳಿತ ಹೇಳಿದೆ. ರಸ್ತೆಗಳಲ್ಲೇ ನಿಲುಗಡೆಯಾಗಿದ್ದ ತಮ್ಮ ಕಾರುಗಳತ್ತ ಜನರು ನೀರಿನಲ್ಲೇ ಸಾಗಿ, ಅವು ಯಾವ ಸ್ಥಿತಿಯಲ್ಲಿವೆ ಎಂದು ಪರಿಶೀಲಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ದುಬೈನ ಹೊರವಲಯಗಳಲ್ಲಿ ಟ್ಯಾಂಕರ್ ಟ್ರಕ್‌ಗಳ ಕಾರ್ಯಾಚರಣೆ ನಡೆದಿದ್ದು, ನಿಂತ ನೀರನ್ನು ಹೊರಹಾಕಲಾಗುತ್ತಿದೆ.

ಒಬ್ಬ ವ್ಯಕ್ತಿ ಮೃತಪಟ್ಟಿರುವುದನ್ನು ಹೊರತುಪಡಿಸಿದರೆ, ಯಾವುದೇ ಸಾವು, ನೋವು ಅಥವಾ ಬೇರೆ ರೀತಿಯ ಹಾನಿಯಾದ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದುಬೈಗೆ ವಿಮಾನ ಸಂಚಾರ ರದ್ದು

ನವದೆಹಲಿ (ಪಿಟಿಐ): ಅರಬ್ ಸಂಯುಕ್ತ ಸಂಸ್ಥಾನದಲ್ಲಿ ಭಾರಿ ಮಳೆಯಿಂದಾಗಿ ಪ್ರತಿಕೂಲ ಹವಾಮಾನ ಪರಿಸ್ಥಿತಿ ತಲೆದೋರಿದೆ. ಹಾಗಾಗಿ, ದುಬೈಗೆ ಕಾರ್ಯಾಚರಣೆ ನಡೆಸುತ್ತಿದ್ದ ಏರ್ ಇಂಡಿಯಾ ಹಾಗೂ ಇಂಡಿಗೊ ಕಂಪನಿಯ ವಿಮಾನ ಸೇವೆಯು ರದ್ದಾಗಿದೆ.

ವಿಶ್ವದಲ್ಲಿ ಅತಿಹೆಚ್ಚು ಪ್ರಯಾಣಿಕರು ಸಂಚರಿಸುವ ವಿಮಾನ ನಿಲ್ದಾಣಗಳ ಪೈಕಿ ದುಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೂ ಒಂದಾಗಿದೆ. ಮಳೆಯಿಂದಾಗಿ ಈ ನಿಲ್ದಾಣವು ಜಲಾವೃತಗೊಂಡಿದೆ.

ದೇಶದ ವಿವಿಧ ನಗರಗಳಿಂದ ವಾರದಲ್ಲಿ ಏರ್ ಇಂಡಿಯಾದ 72 ವಿಮಾನಗಳು ದುಬೈಗೆ ಹಾರಾಟ ನಡೆಸುತ್ತವೆ. ಸದ್ಯ ಈ ಎಲ್ಲಾ ವಿಮಾನಗಳ ಹಾರಾಟ ಸ್ಥಗಿತಗೊಂಡಿದೆ ಎಂದು ಕಂಪನಿ ತಿಳಿಸಿದೆ.

ಏರ್ ಇಂಡಿಯಾ ಹೊರತಾಗಿ ಏರ್ ಇಂಡಿಯಾ ಎಕ್ಸ್‌ಪ್ರೆಸ್, ವಿಸ್ತಾರಾ, ಇಂಡಿಗೊ ಹಾಗೂ ಸ್ಪೈಸ್‌ಜೆಟ್‌ನಿಂದಲೂ ಗಲ್ಫ್ ರಾಷ್ಟ್ರಕ್ಕೆ ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ. ‘ಕೆಲವೇ ದಿನಗಳಲ್ಲಿ ಪ್ರಯಾಣಿಕರಿಗೆ ಮತ್ತೆ ಸೇವೆ ಒದಗಿಸಲಾಗುವುದು’ ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ.

ಭಾರತೀಯ ಕಾನ್ಸುಲೇಟ್‌ನಿಂದ ಸಹಾಯವಾಣಿ

ದುಬೈ (ಪಿಟಿಐ): ಸಂಯುಕ್ತ ಅರಬ್ ಸಂಸ್ಥಾನದ ಉತ್ತರ ಭಾಗ ಮತ್ತು ದುಬೈ ನಗರದಲ್ಲಿ ಸುರಿದ ಭಾರಿ ಮಳೆಯಿಂದ ಸಂಕಷ್ಟಕ್ಕೀಡಾದ ಭಾರತೀಯರು ಮತ್ತು ಭಾರತೀಯ ಪ್ರಯಾಣಿಕರಿಗಾಗಿ ಅಲ್ಲಿಯ ಭಾರತೀಯ ಕಾನ್ಸುಲೇಟ್ ಸಹಾಯ-ವಾಣಿಯನ್ನು ತೆರೆದಿದೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕಾನ್ಸುಲೇಟ್, ಹವಾಮಾನ ವೈಪರೀತ್ಯದಿಂದ ಸಂಕಷ್ಟಕ್ಕೀಡಾಗಿರುವ ಭಾರತೀಯರು ಸಹಾಯಕ್ಕಾಗಿ ಕರೆ ಮಾಡಬಹುದು ಎಂದು ಹೇಳಿದೆ. 971501205172, 971569950590, 971507347676 ಮತ್ತು 971585754213– ದೂರವಾಣಿ ಸಂಖ್ಯೆಗಳನ್ನು ಒದಗಿಸಿದೆ.

‘ವಿಮಾನ ನಿಲ್ದಾಣದಲ್ಲಿ ಸಿಲುಕಿರುವ ಪ್ರಯಾಣಿಕರಿಗೆ ನೆರವು ಒದಗಿಸುವ ನಿಟ್ಟಿನಲ್ಲಿ ಯುಎಇ ಆಡಳಿತ ಮತ್ತು ವಿಮಾನಯಾನ ಸಂಸ್ಥೆಗಳ ಜೊತೆ ನಾವು ಸಂಪರ್ಕದಲ್ಲಿದ್ದೇವೆ. ವಿಮಾನಯಾನ ಸಂಸ್ಥೆಗಳು ನೀಡುತ್ತಿರುವ ಮಾಹಿತಿಗಳನ್ನು ಪ್ರಯಾಣಿಕರಿಗೆ ತಲುಪಿಸುತ್ತಿದ್ದೇವೆ. ಸಂಕಷ್ಟದಲ್ಲಿರುವ ಭಾರತೀಯ ಪ್ರಯಾಣಿಕರು ಮತ್ತು ಅವರ ಕುಟುಂಬ ಸದಸ್ಯರ ನಡುವೆ ಸಂಪರ್ಕ ಕಲ್ಪಿಸಿದ್ದೇವೆ. ಭಾರತೀಯ ಸಮುದಾಯ ಸಂಘಟನೆಗಳ ಜೊತೆ ಸೇರಿ ನೆರವು ಕಾರ್ಯಗಳನ್ನು ವಿಸ್ತರಿಸಿದ್ದೇವೆ’ ಎಂದು ಭಾರತೀಯ ಕಾನ್ಸುಲೇಟ್ ಹೇಳಿದೆ.

ಇಂಡೊನೇಷ್ಯಾ: ಸುನಾಮಿ ಆತಂಕ

ಜಕಾರ್ತಾ (ಎಪಿ): ಇಂಡೊನೇಷ್ಯಾದ ಸುಲಾವೇಸಿ ದ್ವೀಪದ ಉತ್ತರ ಭಾಗದಲ್ಲಿರುವ ರುವಾಂಗ್ ಪರ್ವತದಲ್ಲಿ ಜ್ವಾಲಾಮುಖಿ ಸ್ಫೋಟಗೊಂಡಿರುವುದರಿಂದ ಅಧಿಕಾರಿಗಳು ಬುಧವಾರ ಸುನಾಮಿ ಎಚ್ಚರಿಕೆ ನೀಡಿದ್ದಾರೆ. 1871ರಲ್ಲಿ ಸಂಭವಿಸಿದಂತೆ ಜ್ವಾಲಾಮುಖಿಯ ಭಾಗವು ಸಮುದ್ರಕ್ಕೆ ಕುಸಿದು, ಸುನಾಮಿ ಸಂಭವಿಸುವ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಮುನ್ನೆಚ್ಚರಿಕೆ ಕ್ರಮವಾಗಿ 11,000ಕ್ಕೂ ಹೆಚ್ಚು ಜನರಿಗೆ ಪ್ರದೇಶವನ್ನು ತೊರೆಯುವಂತೆ ಸೂಚಿಸಿದ್ದಾರೆ. ಕನಿಷ್ಠ 800 ನಿವಾಸಿಗಳು ಬುಧವಾರ ತಮ್ಮ ಪ್ರದೇಶಗಳನ್ನು ತೊರೆದಿದ್ದಾರೆ. 24 ಗಂಟೆಗಳ ಅವಧಿಯಲ್ಲಿ ಪರ್ವತದಲ್ಲಿ ಕನಿಷ್ಠ 5 ದೊಡ್ಡ ಸ್ಫೋಟಗಳು ಸಂಭವಿಸಿವೆ ಎಂದು ಇಂಡೊನೇಷ್ಯಾದ ಜ್ವಾಲಾಮುಖಿ ಮತ್ತು ಭೂವೈಜ್ಞಾನಿಕ ವಿಪತ್ತು ತಗ್ಗಿಸುವ ಕೇಂದ್ರವು ತಿಳಿಸಿದೆ.

ರುವಾಂಗ್ ಪರ್ವತದಿಂದ ಕನಿಷ್ಠ 6 ಕಿ.ಮೀ. ದೂರದಲ್ಲಿರುವಂತೆ ಪ್ರವಾಸಿಗರು ಹಾಗೂ ಇತರರಿಗೆ ಅಧಿಕಾರಿಗಳು ಸೂಚಿಸಿದ್ದಾರೆ.

ಜ್ವಾಲಾಮುಖಿ ಉಂಟಾದ ಸ್ಥಳದಿಂದ ಈಶಾನ್ಯದಲ್ಲಿರುವ ತಗುಲಾಂಡಂಗ್ ದ್ವೀಪವು ಅಪಾಯದಲ್ಲಿದ್ದು, ಇಲ್ಲಿನ ನಿವಾಸಿಗಳಿಗೆ ಸ್ಥಳಾಂತರಗೊಳ್ಳಲು ಸೂಚಿಸಲಾಗಿದೆ. ನಿವಾಸಿಗಳನ್ನು ದ್ವೀಪದ ಹತ್ತಿರದ ನಗರವಾದ ಮನಾಡೋಗೆ ಸ್ಥಳಾಂತರಿಸಲಾಗುವುದು. ಇದು ತಗುಲಾಂಡಂಗ್‌ನಿಂದ ದೋಣಿಯಲ್ಲಿ 6 ಗಂಟೆಗಳ ಪ್ರಯಾಣವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2018ರಲ್ಲಿ ಇಂಡೊನೇಷ್ಯಾದ ಅನಕ್ ಕ್ರಾಕಟೌ ಜ್ವಾಲಾಮುಖಿಯ ಸ್ಫೋಟವು ಸುಮಾತ್ರಾ ಮತ್ತು ಜಾವಾ ಕರಾವಳಿಯಲ್ಲಿ ಸುನಾಮಿಯನ್ನು ಉಂಟುಮಾಡಿತ್ತು. ಇದರಿಂದ 430 ಜನರು ಸಾವನ್ನಪ್ಪಿದ್ದರು. 27 ಕೋಟಿ ಜನಸಂಖ್ಯೆ ಹೊಂದಿರುವ ಇಂಡೋನೇಷ್ಯಾ ದ್ವೀಪಸಮೂಹವು 120 ಸಕ್ರಿಯ ಜ್ವಾಲಾಮುಖಿಗಳನ್ನು ಹೊಂದಿದೆ.

ಮುರಳಿ ಒಲಿಂಪಿಕ್ಸ್ ಕನಸು ಭಗ್ನ

ನವದೆಹಲಿ (ಪಿಟಿಐ): ಭಾರತದ ಅಗ್ರ ಲಾಂಗ್‌ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್ ಅವರು ತರಬೇತಿಯ ವೇಳೆ ಮೊಣಕಾಲು ನೋವಿಗೆ ಒಳಗಾಗಿದ್ದು, ಇದಕ್ಕೆ ಶಸ್ತ್ರಚಿಕಿತ್ಸೆಯ ಅಗತ್ಯವಿರುವ ಕಾರಣ ಪ್ಯಾರಿಸ್ ಒಲಿಂಪಿಕ್ಸ್ ಸೇರಿದಂತೆ ಈ ವರ್ಷದ ಪ್ರಮುಖ ಕೂಟಗಳನ್ನು ಕಳೆದುಕೊಳ್ಳಲಿದ್ದಾರೆ.



ಮುರಳಿ

ಇದರೊಂದಿಗೆ ಅವರ ಒಲಿಂಪಿಕ್ಸ್ ಕನಸು ಭಗ್ನಗೊಂಡಿತು. 2023ರ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಬೆಳ್ಳಿ ಪದಕ ಗೆಲುವಿನ ಹಾದಿಯಲ್ಲಿ 8.37 ಮೀ. ದೂರ ಜಿಗಿದು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲೂ ಅವರು ಬೆಳ್ಳಿ ಗೆದ್ದಿದ್ದರು.

25 ವರ್ಷದ ಮುರಳಿ, ಶಾಂಘೈ ಮತ್ತು ದೋಹಾದಲ್ಲಿ (ಕ್ರಮವಾಗಿ ಏ. 27 ಮತ್ತು ಮೇ 10) ನಡೆಯಲಿರುವ ಡೈಮಂಡ್ ಲೀಗ್ ಕೂಟಗಳಲ್ಲಿ ಭಾಗವಹಿಸಿ ಈ ಋತುವಿನ ಸ್ಪರ್ಧೆ ಆರಂಭಿಸಬೇಕಾಗಿತ್ತು. ಮಂಗಳವಾರ ತರಬೇತಿ ವೇಳೆ ಅವರಿಗೆ ಮೊಣಕಾಲಿನ ನೋವು ಕಾಣಿಸಿಕೊಂಡಿತು.

‘ದುರದೃಷ್ಟವಶಾತ್ ನನ್ನ ಪಾಲಿಗೆ ದುಃಸ್ವಪ್ನವೊಂದು ನಿಜವಾಗಿದೆ. ನನ್ನ ಪ್ಯಾರಿಸ್ ಒಲಿಂಪಿಕ್ಸ್ ಕನಸು ಕೊನೆಯಾಗಿದೆ’ ಎಂದು ಶ್ರೀಶಂಕರ್ ಸಾಮಾಜಿಕ ಜಾಲತಾಣದಲ್ಲಿ ಗುರುವಾರ ಪೋಸ್ಟ್ ಹಾಕಿದ್ದಾರೆ. ಕಳೆದ ಜೂನ್‌ನಲ್ಲಿ ಶ್ರೀಶಂಕರ್ ಅವರು ಡೈಮಂಡ್ ಲೀಗ್ ಕೂಟವೊಂದರಲ್ಲಿ ಮೊದಲ ಮೂರರೊಳಗೆ ಸ್ಥಾನ ಪಡೆದಿದ್ದರು. ಈ ಸಾಧನೆ ಮಾಡಿದ ಭಾರತದ ಮೂರನೇ ಅಥ್ಲೀಟ್ ಎನಿಸಿದ್ದರು. ಆದರೆ ಬುಡಾಪೆಸ್ಟ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅವರು ಅರ್ಹತಾ ಸುತ್ತಿನಲ್ಲೇ ಹೊರಬಿದ್ದು ನಿರಾಸೆ ಮೂಡಿಸಿದ್ದರು.

ಸಂಕ್ಷಿಪ್ತ ಸುದ್ದಿ

ತಾಯ್ನಾಡಿಗೆ ಮರಳಿದ ಆನ್ ಟೆಸ್ಸ



ನವದೆಹಲಿ(ಪಿಟಿಐ): ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ ವಶಪಡಿಸಿಕೊಂಡಿದ್ದ ಇಸ್ರೇಲ್ ಜೊತೆ ನಂಟಿರುವ ನೌಕೆ 'ಎಂಎಸ್‌ಸಿ ಏರೀಸ್'ನಲ್ಲಿದ್ದ 17 ಜನ ಭಾರತೀಯರ ಪೈಕಿ ಏಕೈಕ ಮಹಿಳಾ ಸಿಬ್ಬಂದಿಯಾದ ಆನ್ ಟೆಸ್ಸ ಜೋಸೆಫ್ ಅವರನ್ನು ಬಿಡುಗಡೆ ಮಾಡಲಾಗಿದ್ದು, ಅವರು ತಾಯ್ನಾಡಿಗೆ ಗುರುವಾರ ವಾಪಸಾಗಿದ್ದಾರೆ.

ಅಲ್ಲದೇ, ಉಳಿದ ಭಾರತೀಯ ಸಿಬ್ಬಂದಿಯನ್ನು ಕೂಡ ಬಿಡುಗಡೆ ಮಾಡಿದ್ದು, ಅವರು ತೆರಳಬಹುದು ಎಂಬುದಾಗಿ ಇರಾನ್ ಸರ್ಕಾರ ಭಾರತಕ್ಕೆ ಮಾಹಿತಿ ನೀಡಿದೆ.

ಇದು, ಇರಾನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ನಡೆಸಿದ ಸತತ ಪ್ರಯತ್ನಗಳಿಗೆ ಸಿಕ್ಕ ಜಯವಾಗಿದೆ.

ಕೇರಳದ ತ್ರಿಶ್ಶೂರಿನವರಾದ ಜೋಸೆಫ್ ಅವರು ಕೊಚ್ಚಿ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಧ್ಯಾಹ್ನ ಬಂದಿಳಿದರು. ಅವರನ್ನು ವಿದೇಶಾಂಗ ಸಚಿವಾಲಯದ ಪರವಾಗಿ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿ ಅಧಿಕಾರಿಯೊಬ್ಬರು ಬರಮಾಡಿಕೊಂಡರು.

ಈ ನೌಕೆಯನ್ನು ಏಪ್ರಿಲ್ 13ರಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ ತನ್ನ ವಶಕ್ಕೆ ತೆಗೆದುಕೊಂಡಿತ್ತು. ಇದರ ಬೆನ್ನಲ್ಲೇ, ನೌಕೆಯಲ್ಲಿದ್ದ ಭಾರತೀಯರ ಸುರಕ್ಷಿತ ಬಿಡುಗಡೆಗೆ ಟೆಹರಾನ್‌ನಲ್ಲಿರುವ ರಾಯಭಾರ ಕಚೇರಿಯು ಇರಾನ್ ಸರ್ಕಾರದೊಂದಿಗೆ ಸತತ ಮಾತುಕತೆ ನಡೆಸಿತ್ತು.

ಛತ್ತೀಸಗಢ: 4 ತಿಂಗಳಲ್ಲಿ 80 ಮಂದಿ ನಕ್ಸಲರ ಹತ್ಯೆ

ನವದೆಹಲಿ (ಪಿಟಿಐ): ಛತ್ತೀಸಗಢದಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ಒಟ್ಟು 80 ನಕ್ಸಲರ ಹತ್ಯೆಯಾಗಿದ್ದು, 125 ಜನರನ್ನು ಬಂಧಿಸಲಾಗಿದೆ. ಅಲ್ಲದೆ 150ಕ್ಕೂ ಹೆಚ್ಚು ನಕ್ಸಲರು ಶರಣಾಗಿದ್ದಾರೆ ಎಂದು ಅಧಿಕಾರಿಗಳು ಗುರುವಾರ ಮಾಹಿತಿ ನೀಡಿದ್ದಾರೆ. ರಾಜ್ಯದಲ್ಲಿ ಎರಡು ದಿನಗಳ ಹಿಂದೆಯಷ್ಟೇ ಭದ್ರತಾ ಪಡೆಗಳು 29 ಮಂದಿ ನಕ್ಸಲರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿವೆ.

ಛತ್ತೀಸಗಢದಲ್ಲಿ 2023ರ ಡಿಸೆಂಬರ್‌ನಲ್ಲಿ ವಿಷ್ಣುದೇವ್ ಸಾಯ್ ಸರ್ಕಾರ ರಚನೆ ಆದಾಗಿನಿಂದ ನಕ್ಸಲರ ವಿರುದ್ಧ ಸಕ್ರಿಯ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಕೇಂದ್ರ ಗೃಹ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, ಎಡಪಂಥೀಯ ಉಗ್ರ ಸಂಘಟನೆಗಳ ಹಿಂಸಾಚಾರವು ದೇಶದಲ್ಲಿ ಶೇ 52ರಷ್ಟು ಕಡಿಮೆಯಾಗಿದ್ದರೆ, ನಾಗರಿಕರ ಸಾವಿನ ಪ್ರಮಾಣ ಶೇ 69ರಷ್ಟು ಕಡಿಮೆಯಾಗಿದೆ.

ಅಮಾನತುಲ್ಲಾ ವಿಚಾರಣೆಗೆ ಹಾಜರು



ಅಮಾನತುಲ್ಲಾ ಖಾನ್

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಓಕ್ಲಾ ವಿಧಾನಸಭಾ ಕ್ಷೇತ್ರದ ಎಎಪಿ ಶಾಸಕ, ದೆಹಲಿ ವಕ್ಫ್ ಮಂಡಳಿ ಅಧ್ಯಕ್ಷ ಅಮಾನತುಲ್ಲಾ ಖಾನ್ ಗುರುವಾರ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ವಿಚಾರಣೆಗೆ ಹಾಜರಾದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯ ವಕ್ಫ್ ಮಂಡಳಿಯಲ್ಲಿ ನಡೆದ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ನೀಡುವಂತೆ ಖಾನ್ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಈ ಅರ್ಜಿಯನ್ನು ತಿರಸ್ಕರಿಸಿದ್ದ ನ್ಯಾಯಾಲಯವು, ಏ.18ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು.

20 ಸಾವಿರ ಲಂಚ: ರೈಲ್ವೆ ಎಂಜಿನಿಯರ್ ಬಂಧನ

ನವದೆಹಲಿ (ಪಿಟಿಐ): ಅಧಿಕಾರಿಯೊಬ್ಬರನ್ನು ಹಾಲಿ ಹುದ್ದೆಯಿಂದ ಬಿಡುಗಡೆಗೊಳಿಸಲು ₹20,000 ಲಂಚ ಪಡೆದ ಆರೋಪದ ಮೇಲೆ ವಾರಾಣಸಿಯಲ್ಲಿ ರೈಲ್ವೆಯ ಹಿರಿಯ ಸೆಕ್ಷನ್ ಎಂಜಿನಿಯರ್ ಅವರನ್ನು ಸಿಬಿಐ ಬಂಧಿಸಿದೆ ಎಂದು ಗುರುವಾರ ಅಧಿಕಾರಿಗಳು ತಿಳಿಸಿದ್ದಾರೆ.

ಈಶಾನ್ಯ ರೈಲ್ವೆಯಲ್ಲಿ ಕೆಲಸ ಮಾಡುತ್ತಿರುವ ಬಂಧಿತ ಆರೋಪಿ ಸಂಜಯ್ ಕುಮಾರ್ ಅಧಿಕಾರಿಯೊಬ್ಬರನ್ನು ಪ್ರಸ್ತುತ ಹುದ್ದೆಯಿಂದ ಬಿಡುಗಡೆಗೊಳಿಸಲು ₹50,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಹೀಗಾಗಿ ಕುಮಾರ್ ವಿರುದ್ಧ ಅಧಿಕಾರಿ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ದೂರು ನೀಡಿದ್ದರು.

ಎಫ್‌ಐಆರ್ ದಾಖಲಿಸಿದ ಸಿಬಿಐ ಆರೋಪಿಯ ನಿವಾಸಗಳ ಮೇಲೆ ದಾಳಿ ನಡೆಸಿದೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣ: ತನಿಖೆಯ ಭಾಗವಾಗಿ ಇ.ಡಿ ಕ್ರಮ

ಶಿಲ್ಪಾ ಶೆಟ್ಟಿ, ರಾಜ್ ಕುಂದ್ರಾಗೆ ಸೇರಿದ ಆಸ್ತಿ ಮುಟ್ಟುಗೋಲು

ಮುಖ್ಯಾಂಶಗಳು
- ಕ್ರಿಪ್ಟೊ ಆಸ್ತಿ ಬಳಸಿ ಹೂಡಿಕೆದಾರರಿಗೆ ವಂಚನೆ ಎಸಗಿದ ಪ್ರಕರಣ
- ₹97.79 ಕೋಟಿ ಮೌಲ್ಯದ ಆಸ್ತಿ
- ಪ್ರಕರಣದ ಸೂತ್ರಧಾರ ಅಮಿತ್ ಅವರಿಂದ ಬಿಟ್‌ಕಾಯಿನ್ ಖರೀದಿ

ನವದೆಹಲಿ (ಪಿಟಿಐ): ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮತ್ತು ಅವರ ಪತಿ ರಾಜ್ ಕುಂದ್ರಾ ಅವರಿಗೆ ಸೇರಿದ ₹97.79 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ಹೇಳಿದೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಮುಟ್ಟುಗೋಲು ಹಾಕಿಕೊಳ್ಳಲಾದ ಆಸ್ತಿಯಲ್ಲಿ ಪುಣೆಯಲ್ಲಿ ಇರುವ ಒಂದು ಬಂಗಲೆ, ಮುಂಬೈನ ಜುಹು ಪ್ರದೇಶದಲ್ಲಿ ಶಿಲ್ಪಾ ಅವರ ಹೆಸರಿನಲ್ಲಿರುವ ಫ್ಲ್ಯಾಟ್ ಹಾಗೂ ವಿವಿಧ ಕಂಪನಿಗಳಲ್ಲಿ ಕುಂದ್ರಾ ಅವರು ಹೊಂದಿರುವ ಷೇರುಗಳು ಕೂಡ ಸೇರಿವೆ ಎಂದು ಇ.ಡಿ. ಹೇಳಿದೆ.

ಬಿಟ್‌ಕಾಯಿನ್‌ನಂತಹ ಕ್ರಿಪ್ಟೊ ಆಸ್ತಿ ಬಳಸಿ ಹೂಡಿಕೆದಾರರಿಗೆ ವಂಚನೆ ಎಸಗಿದ ಪ್ರಕರಣ ಕುರಿತು ಇ.ಡಿ ಅಧಿಕಾರಿಗಳು 'ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ'ಯ (ಪಿಎಂಎಲ್‌ಎ) ಅಡಿಯಲ್ಲಿ ತನಿಖೆ ನಡೆಸುತ್ತಿದ್ದಾರೆ.

ಶಿಲ್ಪಾ ಮತ್ತು ಕುಂದ್ರಾ ಅವರ ವಿರುದ್ಧದ ಆರೋಪಗಳಿಗೆ ಆಧಾರ ಇಲ್ಲ. ಅವರಿಬ್ಬರೂ ತನಿಖೆಗೆ ಸಹಕರಿಸಲಿದ್ದಾರೆ ಎಂದು ಅವರ ವಕೀಲರು ಹೇಳಿದ್ದಾರೆ.

ಮಹಾರಾಷ್ಟ್ರ ಮತ್ತು ದೆಹಲಿ ಪೊಲೀಸರು 'ವೇರಿಯೆಬಲ್ ಟೆಕ್ ಪ್ರೈವೇಟ್ ಲಿಮಿಟೆಡ್' ಹೆಸರಿನ ಕಂಪನಿ ಹಾಗೂ ಅಮಿತ್ ಭಾರದ್ವಾಜ್, ಅಜಯ್ ಭಾರದ್ವಾಜ್, ವಿವೇಕ್ ಭಾರದ್ವಾಜ್, ಸಿಂಪಿ ಭಾರದ್ವಾಜ್ ಮತ್ತು ಮಹೇಂದರ್ ಭಾರದ್ವಾಜ್ ಎನ್ನುವವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಇವರು ಸಾರ್ವಜನಿಕರಿಂದ ಬಿಟ್‌ಕಾಯಿನ್ ರೂಪದಲ್ಲಿ ₹6,600 ಕೋಟಿ ಹಣ ಸಂಗ್ರಹಿಸಿ, ಅವರಿಗೆ ತಿಂಗಳಿಗೆ ಶೇಕಡ 10ರಷ್ಟು ಲಾಭ ಕೊಡುವುದಾಗಿ ತಿಳಿಸಿದ್ದರು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ. ಇ.ಡಿ. ನಡೆಸುತ್ತಿರುವ ತನಿಖೆಗೆ ಮೂಲ ಈ ಎಫ್‌ಐಆರ್.



ರಾಜ್ ಕುಂದ್ರಾ, ಶಿಲ್ಪಾ ಶೆಟ್ಟಿ – ಸಂಗ್ರಹ ಚಿತ್ರ

ಬಿಟ್‌ಕಾಯಿನ್ ರೂಪದಲ್ಲಿ ಸಂಗ್ರಹಿಸಿದ ಹಣವನ್ನು ಬಿಟ್‌ಕಾಯಿನ್ ಮೈನಿಂಗ್‌ಗೆ ಬಳಸಿಕೊಳ್ಳಬೇಕಿತ್ತು. ಹೂಡಿಕೆದಾರರಿಗೆ ಕ್ರಿಪ್ಟೊ ಆಸ್ತಿಗಳ ರೂಪದಲ್ಲಿ ಭಾರಿ ಪ್ರಮಾಣದ ಲಾಭ ಸಿಗಬೇಕಿತ್ತು. ಆದರೆ ಪ್ರವರ್ತಕರು ಹೂಡಿಕೆದಾರರಿಗೆ ಮೋಸ ಮಾಡಿದ್ದಾರೆ. ಅಲ್ಲದೆ, ಅಕ್ರಮವಾಗಿ ಸಿಕ್ಕ ಬಿಟ್‌ಕಾಯಿನ್‌ಗಳನ್ನು ಅವರು ಆನ್‌ಲೈನ್ ವಾಲೆಟ್‌ಗಳಲ್ಲಿ ಇರಿಸಿಕೊಂಡಿದ್ದಾರೆ ಎಂದು ಇ.ಡಿ ಆರೋಪಿಸಿದೆ.

ಪ್ರಕರಣದ ಸೂತ್ರಧಾರ ಅಮಿತ್ ಅವರಿಂದ ಕುಂದ್ರಾ ಅವರು 285 ಬಿಟ್‌ಕಾಯಿನ್ ಪಡೆದಿದ್ದರು. ಅವುಗಳಿಂದ ಉಕ್ರೇನ್‌ನಲ್ಲಿ ಬಿಟ್‌ಕಾಯಿನ್ ಮೈನಿಂಗ್ ಘಟಕ ಆರಂಭಿಸುವವರಿದ್ದರು. ಅಮಿತ್ ಅವರು ಈ ಬಿಟ್‌ಕಾಯಿನ್‌ಗಳನ್ನು ಹೂಡಿಕೆದಾರರಿಂದ ಪಡೆದುಕೊಂಡಿರುವುದು ಕಾನೂನುಬಾಹಿರವಾಗಿದೆ ಎಂದು ಇ.ಡಿ. ಆರೋಪಿಸಿದೆ.

'ಅಂದುಕೊಂಡ ಕೆಲಸ ಆಗಿಲ್ಲವಾದ ಕಾರಣ, ಕುಂದ್ರಾ ಅವರ ಬಳಿ ಈಗಲೂ 285 ಬಿಟ್‌ಕಾಯಿನ್‌ಗಳು ಇವೆ. ಅವುಗಳ ಈಗಿನ ಮೌಲ್ಯ ₹150 ಕೋಟಿಗಿಂತ ಹೆಚ್ಚು' ಎಂದು ಇ.ಡಿ. ಹೇಳಿದೆ.

ದೇಶೀಯ ತಂತ್ರಜ್ಞಾನದ ಕ್ರೂಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲೇಶ್ವರ (ಒಡಿಶಾ) (ಪಿಟಿಐ): 'ದೇಶೀಯ ತಂತ್ರಜ್ಞಾನದ ಕ್ರೂಸ್ ಕ್ಷಿಪಣಿ'ಯ(ಐಟಿಸಿಎಂ) ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಕರಾವಳಿಯಲ್ಲಿ ಗುರುವಾರ ಯಶಸ್ವಿಯಾಗಿ ನೆರವೇರಿಸಲಾಯಿತು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿಆರ್‌ಡಿಒ) ಗುರುವಾರ ತಿಳಿಸಿದೆ.

'ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಈ ಪರೀಕ್ಷಾರ್ಥ ಪ್ರಯೋಗ ನಡೆಸಲಾಯಿತು. ನಿರೀಕ್ಷೆಯಂತೆ, ಕ್ಷಿಪಣಿಯ ಎಲ್ಲ ವ್ಯವಸ್ಥೆಗಳ ಕಾರ್ಯವು ಸಮರ್ಪಕವಾಗಿ ಇರುವುದು ಕಂಡುಬಂತು' ಎಂದು ತಿಳಿಸಿದೆ.

'ಬೆಂಗಳೂರು ಮೂಲದ ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್(ಜಿಟಿಆರ್‌ಇ) ಅಭಿವೃದ್ಧಿಪಡಿಸಿರುವ ಪ್ರೊಪಲ್ಷನ್ ವ್ಯವಸ್ಥೆಯನ್ನು ಈ ಕ್ಷಿಪಣಿಯಲ್ಲಿ ಅಳವಡಿಸಲಾಗಿದೆ. ಪ್ರೊಪಲ್ಷನ್ ವ್ಯವಸ್ಥೆಯ ಕಾರ್ಯವನ್ನು ಸಹ ಈ ಪರೀಕ್ಷೆ ದೃಢೀಕರಿಸಿದೆ' ಎಂದು ಡಿಆರ್‌ಡಿಒ ತಿಳಿಸಿದೆ.

ಇಡೀ ಕ್ಷಿಪಣಿ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿರುವ ಡಿಆರ್‌ಡಿಒ ಅಂಗಸಂಸ್ಥೆಯಾದ ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (ಎಡಿಇ) ಅಭಿವೃದ್ಧಿಪಡಿಸಿದೆ. ಇತರ ಪ್ರಯೋಗಾಲಯಗಳು ಮತ್ತು ಉದ್ದಿಮೆಗಳು ಸಹ ಈ ಕಾರ್ಯದಲ್ಲಿ ಕೈಜೋಡಿಸಿವೆ.

'ರಾಡಾರ್, ಇಒಟಿಎಸ್ ಹಾಗೂ ಟೆಲಿಮೆಟ್ರಿಯಂತಹ ಸಂವೇದಕಗಳ ಮೂಲಕ ಈ ಕ್ಷಿಪಣಿ ವ್ಯವಸ್ಥೆಯ ಮೇಲ್ವಿಚಾರಣೆ ನಡೆಸಲಾಗಿತ್ತು. ಈ ಸಂವೇದಕಗಳಲ್ಲದೇ, ಸುಖೋಯ್-30-ಎಂಕೆಐ ಯುದ್ಧವಿಮಾನದ ಮೂಲಕವೂ ಮೇಲ್ವಿಚಾರಣೆ ನಡೆಸಲಾಯಿತು' ಎಂದು ತಿಳಿಸಿದೆ.


ರಾಜನಾಥ್ ಸಿಂಗ್ ಅಭಿನಂದನೆ: ಐಟಿಸಿಎಂಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿರುವುದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ ಅನ್ನು ಅಭಿನಂದಿಸಿದ್ದಾರೆ



'ಕ್ರೂಸ್ ಕ್ಷಿಪಣಿ' ಯ (ಐಟಿಸಿಎಂ) ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಡಿಆರ್‌ಡಿಒ ಗುರುವಾರ ಯಶಸ್ವಿಯಾಗಿ ನೆರವೇರಿಸಿತು –ಪಿಟಿಐ ಚಿತ್ರ

ಜಾಮೀನು ಪಡೆಯಲು ತಂತ್ರ: ಕೇಜ್ರಿವಾಲ್ ವಿರುದ್ಧ ಇ.ಡಿ ಆರೋಪ

'ಅಧಿಕ ಸಕ್ಕರೆ ಅಂಶವುಳ್ಳ ಆಹಾರ ಸೇವನೆ'



ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): 'ತಮಗೆ ಟೈಪ್ 2 ಮಧುಮೇಹ ಇದ್ದರೂ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಾವಿನ ಹಣ್ಣುಗಳು ಹಾಗೂ ಆಲೂ ಪೂರಿ ಸೇರಿದಂತೆ ಅಧಿಕ ಸಕ್ಕರೆ ಅಂಶ ಹೊಂದಿರುವ ಖಾದ್ಯಗಳನ್ನು ನಿತ್ಯವೂ ಸೇವಿಸುತ್ತಿದ್ದಾರೆ. ವೈದ್ಯಕೀಯ ಕಾರಣಗಳನ್ನು ನೀಡಿ ಜಾಮೀನು ಪಡೆಯುವುದಕ್ಕಾಗಿ ಅವರು ಈ ರೀತಿ ಮಾಡುತ್ತಿದ್ದಾರೆ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಇಲ್ಲಿನ ನ್ಯಾಯಾಲಯಕ್ಕೆ ಗುರುವಾರ ತಿಳಿಸಿದೆ.

ಸಿಬಿಐ ಮತ್ತು ಇ.ಡಿ ಪ್ರಕರಣಗಳ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರಿದ್ದ ಪೀಠಕ್ಕೆ ಇ.ಡಿ ಅಧಿಕಾರಿಗಳು ವಿಷಯ ತಿಳಿಸಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿರುವ ಕೇಜ್ರಿವಾಲ್, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಸಕ್ಕರೆ ಮಟ್ಟದಲ್ಲಿ ಏರುಪೇರು ಆಗುತ್ತಿರುವ ಕಾರಣ ವಿಡಿಯೊ ಕಾನ್ಫರೆನ್ಸ್ ಮೂಲಕ ನನ್ನ ಕುಟುಂಬದ ವೈದ್ಯರೊಂದಿಗೆ ಸಮಾಲೋಚನೆ ನಡೆಸುವುದಕ್ಕೆ ಅನುಮತಿ ನೀಡಬೇಕು' ಎಂದು ಕೋರಿ ಕೇಜ್ರಿವಾಲ್ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ವೇಳೆ, ಇ.ಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಈ ಮಾಹಿತಿ ನೀಡಿದ್ದಾರೆ.

ಸಿಸೋಡಿಯಾ ನ್ಯಾಯಾಂಗ ಬಂಧನ 26ರ ವರೆಗೆ ವಿಸ್ತರಣೆ

ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿನ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿರುವ ಆಮ್ ಆದ್ಮಿ ಪಕ್ಷದ ಮುಖಂಡ ಮನೀಷ್ ಸಿಸೋಡಿಯಾ ಅವರ ನ್ಯಾಯಾಂಗ ಬಂಧನವನ್ನು ಏಪ್ರಿಲ್ 26ರ ವರೆಗೆ ವಿಸ್ತರಿಸಿ ನ್ಯಾಯಾಧೀಶೆ ಕಾವೇರಿ ಆದೇಶಿಸಿದರು.

ಸಿಸೋಡಿಯಾ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ಅಬಕಾರಿ ನೀತಿ ಹಗರಣಕ್ಕೆ ಸಂಬಂಧ, ಸಿಸೋಡಿಯಾ ವಿರುದ್ಧ ಸಿಬಿಐ ಭ್ರಷ್ಟಾಚಾರ ಪ್ರಕರಣ ದಾಖಲಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಸಿಸೋಡಿಯಾ ಅವರ ನ್ಯಾಯಾಂಗ ಬಂಧನ ಕೂಡ ಏಪ್ರಿಲ್ 26ರಂದು ಅಂತ್ಯಗೊಳ್ಳಲಿದೆ.

ಚನ್‌ಪ್ರೀತ್ ಸಿಂಗ್‌ಗೆ ನ್ಯಾಯಾಂಗ ಬಂಧನ: 2022ರಲ್ಲಿ ನಡೆದ ಗೋವಾ ವಿಧಾನಸಭೆ ಚುನಾವಣೆ ವೇಳೆ ಆಮ್ ಆದ್ಮಿ ಪಕ್ಷದ ಹಣಕಾಸು ನಿರ್ವಹಣೆ ಮಾಡಿದ ಆರೋಪ ಎದುರಿಸುತ್ತಿರುವ ಚನ್‌ಪ್ರೀತ್ ಸಿಂಗ್ ಅವರಿಗೆ ಏಪ್ರಿಲ್ 23ರ ವರೆಗೆ ನ್ಯಾಯಾಂಗ ಬಂಧನ ವಿಧಿಸಿ ನ್ಯಾಯಾಧೀಶೆ ಕಾವೇರಿ ಆದೇಶಿಸಿದರು. ಇ.ಡಿ ಕಸ್ಟಡಿ ಅಂತ್ಯಗೊಂಡಿದ್ದರಿಂದ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು.

'ಇ.ಡಿ ಸುಳ್ಳು ಹೇಳಿದೆ; ಕೇಜ್ರಿವಾಲ್ ಕೊಲ್ಲಲು ಸಂಚು'



ಆತಿಶಿ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧಿತರಾಗಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಮನೆ ಆಹಾರವನ್ನು ನಿರಾಕರಿಸುವ ಮೂಲಕ ಅವರನ್ನು ಕೊಲ್ಲಲು ದೊಡ್ಡ ಸಂಚು ನಡೆದಿದೆ ಎಂದು ದೆಹಲಿ ಸಚಿವೆ ಆತಿಶಿ ಗುರುವಾರ ಆರೋಪಿಸಿದ್ದಾರೆ.

'ಟೈಪ್ 2 ಮಧುಮೇಹ ಹೊಂದಿದ್ದರೂ ಕೇಜ್ರಿವಾಲ್ ಅವರು ನಿತ್ಯ ಮಾನಿವಹಣ್ಣು ಮತ್ತು ಸಿಹಿ ತಿಂಡಿಗಳಂತಹ ಹೆಚ್ಚಿನ ಸಕ್ಕರೆ ಅಂಶವಿರುವ ಆಹಾರವನ್ನು ಸೇವಿಸುತ್ತಿದ್ದಾರೆ. ಈ ಮೂಲಕ ಅವರು ವೈದ್ಯಕೀಯ ಜಾಮೀನಿಗೆ ಆಧಾರಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆ' ಎಂದು ಇ.ಡಿ ನ್ಯಾಯಾಲಯಕ್ಕೆ ಹೇಳಿದ ಬೆನ್ನಲ್ಲೇ, ಸಚಿವೆ ಪ್ರತಿಕ್ರಿಯಿಸಿದ್ದಾರೆ. 'ಕೇಜ್ರಿವಾಲ್ ಅವರು ಸಕ್ಕರೆಯೊಂದಿಗೆ ಚಹಾ ಮತ್ತು ಸಿಹಿ ತಿನಿಸುಗಳನ್ನು ಸೇವಿಸುತ್ತಿದ್ದಾರೆ. ಆಲೂ ಪೂರಿ ತಿನ್ನುತ್ತಿದ್ದಾರೆ ಎಂದು ಇ.ಡಿ ಸುಳ್ಳು ಹೇಳುತ್ತಿದೆ. ಅವರು ನವರಾತ್ರಿ ಮೊದಲ ದಿನವಷ್ಟೇ ಪೂರಿ ತಿಂದಿದ್ದು. ದೆಹಲಿ ಸಿ.ಎಂಗೆ ಮನೆಯ ಆಹಾರ ನಿಲ್ಲಿಸಲು ಇ.ಡಿ ಪ್ರಯತ್ನಿಸುತ್ತಿದೆ' ಎಂದು ಸಚಿವೆ ಗುರುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಒಂದು ವೇಳೆ ಅವರಿಗೆ ಮನೆಯ ಆಹಾರ ನಿರಾಕರಿಸಿದರೆ, ಜೈಲಿನಲ್ಲಿ ಯಾವ ಆಹಾರ, ಯಾವಾಗ ನೀಡಲಾಗುತ್ತಿದೆ ಎಂಬುದು ತಿಳಿಯುವುದಿಲ್ಲ' ಎಂದು ಅವರು ಹೇಳಿದರು. 'ಕೆಲ ದಿನಗಳಿಂದ ಕೇಜ್ರಿವಾಲ್ ಅವರ ಸಕ್ಕರೆಯ ಮಟ್ಟ ಏರುತ್ತಿದೆ. ಅವರಿಗೆ ತಿಹಾರ್ ಜೈಲಿನ ಅಧಿಕಾರಿಗಳು ಇನ್ಸುಲಿನ್ ನಿರಾಕರಿಸಿದ್ದಾರೆ' ಎಂದು ಆರೋಪಿಸಿದರು.

ವಾದ-ಪ್ರತಿವಾದ ಆಲಿಸಿದ ಬಳಿಕ, ಕೇಜ್ರಿವಾಲ್ ತೆಗೆದುಕೊಳ್ಳುವ ಪಥ್ಯಾಹಾರ ಸೇರಿದಂತೆ ಅವರ ಆರೋಗ್ಯ ಕುರಿತಂತೆ ಶುಕ್ರವಾರ ವರದಿ ಸಲ್ಲಿಸುವಂತೆ ತಿಹಾರ್ ಜೈಲು ಅಧಿಕಾರಿಗಳಿಗೆ ನ್ಯಾಯಾಧೀಶೆ ನಿರ್ದೇಶನ ನೀಡಿದರು.

ಕೇಜ್ರಿವಾಲ್ ಅವರ ಅರ್ಜಿಯ ವಿಚಾರಣೆಯನ್ನು ಶುಕ್ರವಾರ ನಡೆಸುವ ಸಾಧ್ಯತೆ ಇದೆ.

'ಡಿಡಿ ನ್ಯೂಸ್' ಲಾಂಛನಕ್ಕೆ ಕೇಸರಿ ಬಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ 'ಡಿಡಿ ನ್ಯೂಸ್'ನ ಲಾಂಛನದ ಬಣ್ಣ ಬದಲಾಗಿರುವುದು ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

ಈ ವರೆಗೆ ಲಾಂಛನದ ಬಣ್ಣ ಕೆಂಪು ಇತ್ತು. ಈಗ ಅದರ ಬಣ್ಣವನ್ನು ಕೇಸರಿಗೆ ಬದಲಾಯಿಸಲಾಗಿದೆ. ಜೊತೆಗೆ, 'ನ್ಯೂಸ್' ಎಂಬುದನ್ನು ಇಂಗ್ಲಿಷ್ ಬದಲಾಗಿ ಹಿಂದಿಯಲ್ಲಿ ಬರೆಯಲಾಗಿದೆ.

ಕೇಸರಿ ಬಣ್ಣವನ್ನು ಆಡಳಿತಾರೂಢ ಬಿಜೆಪಿ ತನ್ನ ಬಾವುಟದಲ್ಲಿ ಬಳಸುತ್ತಿದೆ. ಇನ್ನೊಂದೆಡೆ ದೇಶದಲ್ಲಿ ಈಗ ಲೋಕಸಭಾ ಚುನಾವಣೆ ನಡೆಯುತ್ತಿದೆ. ಇಂತಹ ಹೊತ್ತಿನಲ್ಲಿ ಲಾಂಛನದಲ್ಲಿ ತಂದಿರುವ ಈ ಬದಲಾವಣೆಗಳು ಟೀಕೆಗೆ ಗುರಿಯಾಗಿವೆ.

ಲಾಂಛನದ ಜೊತೆಗೆ ಸುದ್ದಿ ಪ್ರಸ್ತುತಿ ಶೈಲಿಯಲ್ಲಿಯೂ 'ಡಿಡಿ ನ್ಯೂಸ್' ಬದಲಾವಣೆ ತಂದಿದೆ.

ಈ ಬದಲಾವಣೆ ಕುರಿತು 'ಡಿಡಿ ನ್ಯೂಸ್' ಏಪ್ರಿಲ್ 16ರಂದು ತನ್ನ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಾಗೂ ವಿಡಿಯೊವೊಂದನ್ನು ಹಂಚಿಕೊಂಡಿದೆ.



ಡಿಡಿ ನ್ಯೂಸ್ ಎಕ್ಸ್ ಖಾತೆ ಚಿತ್ರ

'ನಾವೀಗ ಹೊಸ ಅವತಾರದಲ್ಲಿ ಲಭ್ಯ. ಆದರೆ, ನಮ್ಮ ಮೌಲ್ಯಗಳು ಹಾಗೆಯೇ ಇವೆ. ಈ ಹಿಂದೆಂದಿಗಿಂತಲೂ ಭಿನ್ನವಾದ ಸುದ್ದಿಗಳಿಗಾಗಿ ಹೊಸ ಪಯಣಕ್ಕೆ ಸಿದ್ಧರಾಗಿ. ಹೊಸ ರೂಪದಲ್ಲಿ ಡಿಡಿ ನ್ಯೂಸ್ ಪ್ರಸ್ತುತಿ ಅನುಭವಿಸಿ' ಎಂದು ಪೋಸ್ಟ್ ಮಾಡಲಾಗಿದೆ.

'ವೇಗಕ್ಕಿಂತ ನಿಖರತೆ, ಹೇಳಿಕೆಗಳಿಗಿಂತ ವಾಸ್ತವ ಸಂಗತಿಗಳು, ಸಂವೇದನೆಗಿಂತಲೂ ಸತ್ಯವನ್ನು ಪ್ರಸ್ತುತಪಡಿಸುವ ಧೈರ್ಯ ಹೊಂದಿದ್ದೇವೆ. ಇದು ಡಿಡಿ ನ್ಯೂಸ್‌ನಲ್ಲಿದೆ ಎಂದರೆ ಅದು ಸತ್ಯವೇ ಎಂದರ್ಥ! ಡಿಡಿ ನ್ಯೂಸ್–ಸತ್ಯದ ಭರವಸೆ' ಎಂದೂ ಪೋಸ್ಟ್‌ನಲ್ಲಿ ಹೇಳಲಾಗಿದೆ.

ಆದರೆ, ಲಾಂಛನದ ಬಣ್ಣವನ್ನು ಬದಲಾಯಿಸಿರುವ ಕುರಿತು ಈ ಪೋಸ್ಟ್‌ನಲ್ಲಿ ಉಲ್ಲೇಖವಿಲ್ಲ.

ಟೀಕೆ: ಡಿಡಿ ನ್ಯೂಸ್ ನಡೆಯನ್ನು ಪ್ರಸಾರ ಭಾರತಿ ಮಾಜಿ ಸಿಇಒ ಹಾಗೂ ಟಿಎಂಸಿಯ ರಾಜ್ಯಸಭಾ ಸದಸ್ಯ ಜವಾಹರ್ ಸರ್ಕಾರ್ ಟೀಕಿಸಿದ್ದಾರೆ.

'ರಾಷ್ಟ್ರೀಯ ಸುದ್ದಿವಾಹಿನಿ ದೂರದರ್ಶನ ತನ್ನ ಐತಿಹಾಸಿಕ ಲಾಂಛನಕ್ಕೆ ಕೇಸರಿ ಬಣ್ಣ ಬಳಿದಿದೆ. ಈ ಸಂಸ್ಥೆಯ ಮಾಜಿ ಸಿಇಒ ಆಗಿರುವ ನಾನು, ಇದರ ಕೇಸರೀಕರಣವನ್ನು ಬಹಳ ಎಚ್ಚರಿಕೆಯಿಂದ ಗಮನಿಸುತ್ತಿದ್ದೇನೆ. ಇದು ಪ್ರಸಾರ ಭಾರತಿ ಆಗಿ ಉಳಿದಿಲ್ಲ– ಇದು ಈಗ ಪ್ರಚಾರ ಭಾರತಿ' ಎಂದು ಜವಾಹರ್ ಸರ್ಕಾರ್ ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಬಂಗಾಳ ರಾಜ್ಯಪಾಲ ಬೋಸ್ ವಿರುದ್ಧ ಟಿಎಂಸಿ ದೂರು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ರಾಜ್ಯಪಾಲರಾದ ಸಿ.ವಿ ಆನಂದ ಬೋಸ್ ಅವರ ವಿರುದ್ಧ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಗುರುವಾರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.

ರಾಜ್ಯದ ಲೋಕಸಭೆ ಚುನಾವಣೆಯಲ್ಲಿ ಆನಂದ ಬೋಸ್ ಅವರು ಪದೇ ಪದೇ ಮಧ್ಯ ಪ್ರವೇಶಿಸುತ್ತಿದ್ದಾರೆ ಮತ್ತು ಮತದಾನದ ದಿನದಂದು ಮತದಾನ ನಡೆಯುವ ಪ್ರದೇಶಗಳಿಗೆ ಭೇಟಿ ನೀಡಲು ಯತ್ನಿಸಿದ್ದಕ್ಕಾಗಿ ಆಯೋಗಕ್ಕೆ ದೂರು ನೀಡಲಾಗಿದೆ ಎಂದು ಟಿಎಂಸಿ ನಾಯಕರು ತಿಳಿಸಿದ್ದಾರೆ.

ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನದ ಮುನ್ನಾದಿನವಾದ ಏ.18ರಂದು ಉದ್ದೇಶಿತ ಕೂಚ್ ಬಿಹಾರ್ ಪ್ರವಾಸವನ್ನು ರದ್ದುಗೊಳಿಸುವಂತೆ ಆನಂದ ಬೋಸ್ ಅವರಿಗೆ ಚುನಾವಣಾ ಆಯೋಗವು ಸಲಹೆ ನೀಡಿತ್ತು. ಬೋಸ್ ಅವರು ಭೇಟಿ ನೀಡಿದರೆ ಅದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

'ಸೆರೆಲಾಕ್'ನಲ್ಲಿ ಸಕ್ಕರೆ ಅಂಶ ಅಧಿಕ

ಒಂದನೇ ಪುಟದಿಂದ...

ಶಿಶು ಆಹಾರವಾದ 'ಸೆರೆಲಾಕ್'ನಲ್ಲಿ ಹೆಚ್ಚುವರಿ ಸಕ್ಕರೆ ಬೆರೆಸುತ್ತಿದೆ ಎಂದು ಹೇಳಲಾಗಿದೆ.

'ನೆಸ್ಲೆ ವಿರುದ್ಧ ಕೇಳಿಬಂದಿರುವ ಆರೋಪ ಕುರಿತು ಕೂಲಂಕಷವಾಗಿ ಪರಿಶೀಲಿಸಲಾಗುತ್ತದೆ. ನಿಯಮ ಉಲ್ಲಂಘಿಸಿರುವುದು ಕಂಡುಬಂದರೆ ಕಂಪನಿಯ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು' ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಬೆಳಕಿಗೆ ಬಂದಿದ್ದು ಹೇಗೆ?: ನೆಸ್ಲೆ ಕಂಪನಿಯು ಶಿಶು ಉತ್ಪನ್ನಗಳಲ್ಲಿ ಸಕ್ಕರೆ ಅಂಶ ಬೆರೆಸುತ್ತಿರುವ ಬಗ್ಗೆ ಸ್ವಿಟ್ಜರ್‌ಲೆಂಡ್‌ನ ಸ್ವಯಂಸೇವಾ ಸಂಸ್ಥೆ ಪಬ್ಲಿಕ್ ಐ ಹಾಗೂ ಇಂಟರ್‌ನ್ಯಾಷನಲ್ ಬೇಬಿ ಫುಡ್ ಆ್ಯಕ್ಷನ್ ನೆಟ್‌ವರ್ಕ್ (ಐಬಿಎಫ್‌ಎಎನ್) ತನಿಖೆಗೆ ಮುಂದಾಗಿದ್ದವು. ಕಂಪನಿಯು ವಿವಿಧ ದೇಶಗಳಲ್ಲಿ ಮಾರಾಟ ಮಾಡುವ 150 ಬಗೆಯ ಶಿಶು ಉತ್ಪನ್ನಗಳ ಬಗ್ಗೆ ಅಧ್ಯಯನ ನಡೆಸಿ ಈ ಕುರಿತು ವರದಿ ಪ್ರಕಟಿಸಿವೆ. ಇದನ್ನು ಉಲ್ಲೇಖಿಸಿ ದಿ ಗಾರ್ಡಿಯನ್ ಪತ್ರಿಕೆ ವರದಿ ಪ್ರಕಟಿಸಿದೆ.

ಭಾರತ ಸೇರಿ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಮಾರಾಟ ಮಾಡುವ ಉತ್ಪನ್ನಗಳಲ್ಲಿ ಹೆಚ್ಚಿನ ಸಕ್ಕರೆ ಅಂಶವನ್ನು ಸೇರಿಸುತ್ತಿದೆ. ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕದ ದೇಶಗಳಲ್ಲೂ ಇದೇ ಮಾದರಿಯನ್ನು ಅನುಸರಿಸುತ್ತಿದೆ. ಆದರೆ, ಯುರೋಪ್ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಉತ್ಪನ್ನಗಳು ಸಕ್ಕರೆ ಅಂಶದಿಂದ ಮುಕ್ತವಾಗಿವೆ ಎಂದು ವರದಿ ತಿಳಿಸಿದೆ.

ನೆಸ್ಲೆ ಆರು ತಿಂಗಳ ಶಿಶುಗಳಿಗೆ ಸೆರೆಲಾಕ್ ಆಹಾರ ನೀಡುತ್ತದೆ. ಬ್ರಿಟನ್ ಮತ್ತು ಜರ್ಮನಿಯಲ್ಲಿ ಮಾರಾಟ ಮಾಡುವ ಗೋಧಿ ಆಧಾರಿತ ಈ ಉತ್ಪನ್ನದಲ್ಲಿ ಸಕ್ಕರೆ ಅಂಶ ಬೆರೆಸುವುದಿಲ್ಲ. ಆದರೆ, ಭಾರತದಲ್ಲಿ ಮಾರಾಟ ಮಾಡುವ 15 ಸೆರೆಲಾಕ್ ಉತ್ಪನ್ನಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಒಂದು ಬಾರಿ ಮಗುವಿಗೆ ಕೊಡುವ ಸೆರೆಲಾಕ್‌ನಲ್ಲಿ 2.7 ಗ್ರಾಂನಷ್ಟು ಸಕ್ಕರೆ ಬೆರೆಸಿರುವುದು ಪತ್ತೆಯಾಗಿದೆ ಎಂದು ಹೇಳಿದೆ.

ಅಲ್ಲದೆ, ಪ್ಯಾಕಿಂಗ್ ಮೇಲೂ ಸಕ್ಕರೆ ಅಂಶ ಇರುವ ಬಗ್ಗೆ ಪ್ರಕಟಿಸಲಾಗಿದೆ ಎಂದು ತಿಳಿಸಿದೆ. ಥಾಯ್ಲೆಂಡ್‌ನಲ್ಲಿ ಮಾರಾಟ ಮಾಡುವ ಉತ್ಪನ್ನಗಳಲ್ಲಿ (ಒಂದು ಬಾರಿ ಮಕ್ಕಳಿಗೆ ನೀಡುವಷ್ಟು ಸೆರೆಲಾಕ್‌ನಲ್ಲಿ) 6 ಗ್ರಾಂನಷ್ಟು ಸಕ್ಕರೆ ಅಂಶವಿದೆ. ಫಿಲಿಪ್ಪೀನ್ಸ್‌ನಲ್ಲಿ ಮಾರಾಟವಾಗುವ ಉತ್ಪನ್ನಗಳಲ್ಲಿ 7.3 ಗ್ರಾಂನಷ್ಟು ಸಕ್ಕರೆ ಅಂಶ ಕಂಡುಬಂದಿದೆ. ಈ ದೇಶದಲ್ಲಿ ಎಂಟು ಉತ್ಪನ್ನಗಳ ಪೈಕಿ ಐದರಲ್ಲಿ ಪರೀಕ್ಷೆ ನಡೆಸಿದಾಗ ಈ ಸಂಗತಿ ಬಯಲಾಗಿದೆ. ಆದರೆ, ಪ್ಯಾಕಿಂಗ್ ಮೇಲೆ ಈ ಮಾಹಿತಿಯನ್ನು ಕಂಪನಿಯು ನಮೂದಿಸಿಲ್ಲ. 'ಸೆರೆಲಾಕ್'ನ ಧಾನ್ಯಗಳ ಉತ್ಪನ್ನದಲ್ಲಿಯೂ ಹೆಚ್ಚುವರಿ ಸಕ್ಕರೆ ಇದೆ ಎಂದು ವಿವರಿಸಿದೆ.

ಇಂತಹ ಆಹಾರವನ್ನು ಶಿಶುಗಳು ಸೇವಿಸಿದರೆ ಸ್ಥೂಲಕಾಯ ಮತ್ತು ದೀರ್ಘಕಾಲದ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಅಪಾಯ ಇದೆ ಎಂದು ಹೇಳಲಾಗಿದೆ.



ಲೋಕಸಭಾ ಚುನಾವಣೆಯ ಪ್ರಚಾರಕ್ಕಾಗಿ ಬಿಜೆಪಿ ನಾಯಕರೊಬ್ಬರು ಭೇಟಿ ನೀಡುವುದನ್ನು ವಿರೋಧಿಸಿದ್ದ ರೈತರ ಮೇಲೆ ಕಲ್ಲು ತೂರಾಟ ನಡೆಸಿದ್ದರು ಎನ್ನಲಾದ ಬಿಜೆಪಿ ಕಾರ್ಯಕರ್ತರ ವರ್ತನೆಯನ್ನು ಖಂಡಿಸಿ ರೈತರು ಅಮೃತಸರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ರೈತರ ಧರಣಿ: ರೈಲು ಸಂಚಾರ ವ್ಯತ್ಯಯ

ಅಂಬಾಲಾ (ಪಿಟಿಐ): ಹರಿಯಾಣ ಪೊಲೀಸರು ಬಂಧಿಸಿರುವ ಮೂವರು ರೈತರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಹಾಗೂ ಕಿಸಾನ್ ಮಜ್ದೂರ್ ಮೋರ್ಚಾ ಸದಸ್ಯರು ಪಟಿಯಾಲಾ ಜಿಲ್ಲೆಯಲ್ಲಿ ರೈಲು ಹಳಿಗಳ ಮೇಲೆ ಕುಳಿತು ಧರಣಿ ಮುಂದುವರಿಸಿದ್ದಾರೆ.

ರೈತರ ಈ ಕ್ರಮದ ಪರಿಣಾಮವಾಗಿ ಹೆಚ್ಚುವರಿಯಾಗಿ 53 ರೈಲುಗಳ ಸಂಚಾರ ರದ್ದುಪಡಿಸಲಾಗಿದೆ, 12 ರೈಲುಗಳ ಸಂಚಾರವನ್ನು ಮೊಟಕುಗೊಳಿಸಲಾಗಿದೆ, 23 ರೈಲುಗಳ ಮಾರ್ಗ ಬದಲಾಯಿಸಲಾಗಿದೆ ಎಂದು ಅಂಬಾಲಾ ರೈಲ್ವೆ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ರೈಲು ಸಂಚಾರದಲ್ಲಿನ ವ್ಯತ್ಯಯದ ಕಾರಣದಿಂದಾಗಿ ಪ್ರಯಾಣಿಕರಿಗೆ ತೊಂದರೆ ಆಯಿತು. ಬಂಧಿತ ರೈತರನ್ನು ಬಿಡುಗಡೆ ಮಾಡುವವರಿಗೆ ತಾವು ಧರಣಿಯಿಂದ ಹಿಂದೆ ಸರಿಯುವುದಿಲ್ಲ ಎಂದು ರೈತರು ಹೇಳಿದ್ದಾರೆ.

ಎಸ್‌ಕೆಎಂ (ರಾಜಕೀಯೇತರ) ಮತ್ತು ಕೆಎಂಎಂ ಸಂಘಟನೆಗಳು, ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿಯನ್ನು ಒದಗಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ 'ದೆಹಲಿ ಚಲೋ' ಪ್ರತಿಭಟನೆಯನ್ನು ಮುನ್ನಡೆಸುತ್ತಿವೆ. ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ನಡುವಿನ ಶಂಭು ಹಾಗೂ ಖನೌರಿ ಗಡಿಗಳಲ್ಲಿ ರೈತರನ್ನು ಭದ್ರತಾ ಸಿಬ್ಬಂದಿ ತಡೆದಿದ್ದಾರೆ. ರೈತರು ಅಲ್ಲಿಯೇ ಬೀಡುಬಿಟ್ಟಿದ್ದಾರೆ.

'ತಾಲ್ಲೂಕು ಆರೋಗ್ಯ ಅಧಿಕಾರಿಗೆ ಎಂಬಿಬಿಎಸ್ ಪದವಿ ಕಡ್ಡಾಯ'

ಬೆಂಗಳೂರು: 'ಎಂಬಿಬಿಎಸ್ ಪದವಿ ಪಡೆಯದ ದಂತವೈದ್ಯರನ್ನು ರಾಜ್ಯ ಸರ್ಕಾರಿ ಸೇವೆಗಳ ವ್ಯಾಪ್ತಿಗೆ ಒಳಪಡುವ ತಾಲ್ಲೂಕು ಆರೋಗ್ಯ ಅಧಿಕಾರಿ ಹುದ್ದೆಗೆ ನಿಯೋಜಿಸುವಂತಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ತಮ್ಮನ್ನು ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕು ಆರೋಗ್ಯ ಕಚೇರಿಯ ವೈದ್ಯಾಧಿಕಾರಿಯಾಗಿ ನಿಯೋಜಿಸಿದ್ದ ಆದೇಶ ಹಿಂಪಡೆದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಡಾ.ವಿದ್ಯಾವತಿ ಯು. ಪಾಟೀಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಮತ್ತು ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

'ಸರ್ಕಾರ 2021ರ ಜೂನ್ 1ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ, ಜನರಲ್ ಡ್ಯೂಟಿ ಮೆಡಿಕಲ್ ಆಫೀಸರ್ (ಸಾಮಾನ್ಯ ಕರ್ತವ್ಯನಿರತ ವೈದ್ಯಾಧಿಕಾರಿ) ತಾಲ್ಲೂಕು ಆರೋಗ್ಯ ಅಧಿಕಾರಿ ಹುದ್ದೆ ಹೊಂದಲು ಅರ್ಹರಾಗಿರುತ್ತಾರೆ. 1992ರ ಜುಲೈ 17ರಂದು ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯವು ಹೊರಡಿಸಿರುವ ಅಧಿಸೂಚನೆ ಪ್ರಕಾರ ಜನರಲ್ ಡ್ಯೂಟಿ ಮೆಡಿಕಲ್ ಆಫೀಸರ್ ಎಂಬಿಬಿಎಸ್ ಪದವಿ ಪಡೆದಿರಬೇಕು. ಪ್ರಕರಣದಲ್ಲಿ ಅರ್ಜಿದಾರರು ದಂತವೈದ್ಯರಾಗಿದ್ದು, ಎಂಬಿಬಿಎಂಪಿ ಪದವಿ ಪಡೆದಿಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ಮೊದಲ ಹಂತದ ಚುನಾವಣೆ ಕಣದಲ್ಲಿ ಇರುವ ಪ್ರಮುಖರು

ಬಿಜೆಪಿ
ನಿತಿನ್ ಗಡ್ಕರಿ (ನಾಗ್ಪುರ)
ಕಿರಣ್ ರಿಜಿಜು (ಅರುಣಾಚಲ ಪ್ರದೇಶ ಪಶ್ಚಿಮ)
ಅರ್ಜುನ್ ರಾಮ್ ಮೇಘವಾಲ್ (ಬಿಕಾನೇರ್)
ಸರ್ಬಾನಂದ ಸೊನೋವಾಲ್ (ದಿಬ್ರುಗಢ)
ಸಂಜೀವ್ ಬಾಲಿಯಾನ್ (ಮುಜಾಫ್ಫರ್‌ನಗರ)
ಜಿತೇಂದ್ರ ಸಿಂಗ್ (ಉಧಂಪುರ)
ಭೂಪೇಂದ್ರ ಯಾದವ್ (ಅಲ್ವಾರ್)
ತಮಿಳ್‌ಇಸೈ ಸೌಂದರರಾಜನ್ (ಚೆನ್ನೈ ದಕ್ಷಿಣ)
ಕೆ. ಅಣ್ಣಾಮಲೈ (ಕೊಯಮತ್ತೂರು)
ಕಾಂಗ್ರೆಸ್
ನಕುಲ್ ನಾಥ್ (ಛಿಂದವಾಡ)
ಗೌರವ್ ಗೊಗೊಯಿ (ಜೊರಹಾಟ್)
ರಾಹುಲ್ ಕಸ್ವಾನ್ (ಚುರು)
ವೆ. ವೈದ್ಯಲಿಂಗಂ (ಪುದುಚೇರಿ)
ಡಿಎಂಕೆ
ಕನಿಮೊಳಿ (ತೂತ್ತುಕುಡಿ)

ಜಾಮೀನು: ಪೂರಕ ದಾಖಲೆ ಸಲ್ಲಿಸಲು ಸೂಚನೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದ ಆರೋಪದಲ್ಲಿ ಬಂಧಿತರಾಗಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶಾಸಕ ಮಾಣಿಕ್ ಭಟ್ಟಾಚಾರ್ಯ ಅವರಿಗೆ ತಮ್ಮ ಜಾಮೀನು ಅರ್ಜಿಗೆ ಪೂರಕವಾದ ಹೆಚ್ಚಿನ ದಾಖಲೆಗಳನ್ನು ಒದಗಿಸಲು ಸುಪ್ರೀಂ ಕೋರ್ಟ್ ಕಾಲಾವಕಾಶ ನೀಡಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಹಾಗೂ ಪಂಕಜ್ ಮಿಥಲ್ ಅವರ ಪೀಠವು ಮಾಣಿಕ್ ಅವರ ಜಾಮೀನು ಅರ್ಜಿಯ ವಿಚಾರಣೆ ನಡೆಸಿತು. ಮಾಣಿಕ್ ಅವರ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಸಿದ್ಧಾರ್ಥ್ ಲೂಥ್ರಾ ಅವರು ತಾವು ಕೆಲ ದಾಖಲೆಗಳನ್ನು ಸಲ್ಲಿಸಲು ಬಯಸುವುದಾಗಿ ತಿಳಿಸಿದರು.

ಅಲ್ಲದೇ ಪ್ರಕರಣದಲ್ಲಿ ಮಾಣಿಕ್ ಪ್ರಮುಖ ಆರೋಪಿಯಲ್ಲ ಎಂದು ತಿಳಿಸಿದರು. ಆಗ ಪೀಠವು 2 ವಾರಗಳ ಬಳಿಕ ದಾಖಲೆಗಳನ್ನು ಸಲ್ಲಿಸಿ ಎಂದು ಸೂಚಿಸಿತು.

ಜೆಎನ್‌ಯು ಕುಲಪತಿ ಶಾಂತಿಶ್ರೀ ಡಿ.ಪಂಡಿತ್ ಹೇಳಿಕೆ

ತುಕ್ಡೆ, ತುಕ್ಡೆ ಗ್ಯಾಂಗ್ ಭಾಗ ಆಗಿರಲಿಲ್ಲ



ಶಾಂತಿಶ್ರೀ ಡಿ.ಪಂಡಿತ್

ನವದೆಹಲಿ (ಪಿಟಿಐ): 'ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಎಂದಿಗೂ ರಾಷ್ಟ್ರ ವಿರೋಧಿ ಆಗಿರಲಿಲ್ಲ. ತುಕ್ಡೆ, ತುಕ್ಡೆ ಗ್ಯಾಂಗ್‌ನ ಭಾಗವೂ ಆಗಿರಲಿಲ್ಲ' ಎಂದು ಕುಲಪತಿ ಶಾಂತಿಶ್ರೀ ಡಿ.ಪಂಡಿತ್ ಪ್ರತಿಪಾದಿಸಿದ್ದಾರೆ.

ಜೆಎನ್‌ಯು ಎಂದಿಗೂ ಬೆಚ್ಚನೆಯ ಅಭಿಪ್ರಾಯಭೇದ ಹೊಂದಿದ್ದ, ಚರ್ಚೆಗೆ ವೇದಿಕೆಯಾಗಿದ್ದ, ಪ್ರಜಾಸತ್ತಾತ್ಮಕ ಸಂಸ್ಥೆಯಾಗಿತ್ತು ಎಂದು ಅವರು ಗುರುವಾರ ಹೇಳಿದ್ದಾರೆ.

ಜೆಎನ್‌ಯುವಿನ ಮೊದಲ ಮಹಿಳಾ ಕುಲಪತಿಯೂ ಆದ ಅವರು ಗುರುವಾರ ಪಿಟಿಐ ಸುದ್ದಿಸಂಸ್ಥೆಯ ಮುಖ್ಯ ಕಚೇರಿಯಲ್ಲಿ ನಡೆದ ಸಂವಾದದಲ್ಲಿ ಪಾಲ್ಗೊಂಡಿದ್ದರು. ವಿಶ್ವವಿದ್ಯಾಲಯವು ಕೇಸರೀಕರಣವಾಗಿಲ್ಲ. ನಿತ್ಯದ ಕಾರ್ಯವೈಖರಿಯಲ್ಲಿ ಕೇಂದ್ರ ಸರ್ಕಾರದ ಒತ್ತಡವೂ ಇಲ್ಲ ಎಂದು ಪ್ರತಿಪಾದಿಸಿದರು.

'ನಾನು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಜೊತೆಗೆ ಗುರುತಿಸಿಕೊಂಡಿದ್ದೇನೆ ಎಂಬುದಕ್ಕೆ ವಿಷಾದವು ಇಲ್ಲ, ಅದನ್ನು ನಾನು ಮರೆಮಾಚಿಯೂ ಇಲ್ಲ' ಎಂದು ತಿಳಿಸಿದರು.

ಚೆನ್ನೈನ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ ಅವರು ಬದುಕಿನ ಹಾದಿಯನ್ನು ಮೆಲುಕು ಹಾಕಿದರು. 'ಜೆಎನ್‌ಯುಗೆ ಉನ್ನತ ಕ್ಯೂಎಸ್ ಶ್ರೇಣಿ ತಂದ ಸಂಘಿ ವಿ.ಸಿ' ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ ಎಂದರು.

ಒಂದು ವಿಶ್ವವಿದ್ಯಾಲಯವಾಗಿ ನಾವು ಕೇಸರೀಕರಣವನ್ನು ಮೀರಿದ್ದೇವು. ಇದು, ದೇಶಕ್ಕಾಗಿ ಇರುವ ಸಂಸ್ಥೆ. ಸದಾ ಅಭಿವೃದ್ಧಿಯ ಪರವಾಗಿ ಇದೆ. ವೈಯಕ್ತಿಕವಾಗಿ ನಾನು ಕೂಡಾ ಅಭಿವೃದ್ಧಿ, ಪ್ರಜಾಪ್ರಭುತ್ವ, ಭಿನ್ನಾಭಿಪ್ರಾಯ, ವೈವಿಧ್ಯ, ಚರ್ಚೆ, ಸಂವಾದದ ಪರವಾಗಿಯೇ ಇದ್ದೇನೆ ಎಂದು ಹೇಳಿದರು.

'ಜೆಎನ್‌ಯು ರಾಷ್ಟ್ರವಿರೋಧಿ' ಎಂಬ ಅಭಿಪ್ರಾಯ ಮೂಡಿತ್ತು ಎಂಬ ಪ್ರಶ್ನೆಗೆ, 'ಇಂಥ ಉಲ್ಲೇಖ ಸರಿಯಲ್ಲ. ಹಿಂದೆ ಎರಡೂ ಕಡೆಯಿಂದ ತಪ್ಪುಗಳಾಗಿವೆ. ಟೀಕೆಗಳು ಇದ್ದೇ ಇರುತ್ತವೆ. ಟೀಕಿಸುತ್ತಾರೆ, ಭಿನ್ನಾಭಿಪ್ರಾಯಗಳಿವೆ ಎಂಬ ಮಾತ್ರಕ್ಕೆ ರಾಷ್ಟ್ರವಿರೋಧಿ ಎನ್ನಲಾಗದು. ಬಹುಶಃ ಇದನ್ನು ವಿಶ್ವವಿದ್ಯಾಲಯದ ಆಗಿನ ಆಡಳಿತ ಅರ್ಥ ಮಾಡಿಕೊಳ್ಳಲಿಲ್ಲ ಎಂದು ಅಭಿಪ್ರಾಯಪಟ್ಟರು.

'ನಾನು ಈ ವಿ.ವಿ.ಯಲ್ಲಿ ಕಲಿಯುವಾಗ ಎಡರಂಗದ ಪ್ರಾಬಲ್ಯವಿತ್ತು. ಆಗಲೂ ಕೂಡ ಯಾರೂ ರಾಷ್ಟ್ರ ವಿರೋಧಿಯಾಗಿರಲಿಲ್ಲ' ಎಂದು ಹೇಳಿದರು.



ಸೂರ್ಯ ಅರ್ಧಶತಕ • ಬೂಮ್ರಾ, ಜೆರಾಲ್ಡ್‌ಗೆ ಮೂರು ವಿಕೆಟ್ • ಮುಂಬೈಗೆ ರೋಚಕ ಜಯ

ಹೋರಾಡಿ ಸೋತ ಪಂಜಾಬ್

ಮುಲ್ಲನಪುರ, ಪಂಜಾಬ್ (ಪಿಟಿಐ): ಸೂರ್ಯಕುಮಾರ್ ಯಾದವ್ ಅವರ ಮಿಂಚಿನ ಬ್ಯಾಟಿಂಗ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಪರಿಣಾಮಕಾರಿ ಬೌಲಿಂಗ್ ದಾಳಿ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಗುರುವಾರ ಐಪಿಎಲ್‌ನ ರೋಚಕ ಹಣಾಹಣಿಯಲ್ಲಿ 9 ರನ್‌ಗಳಿಂದ ಪಂಜಾಬ್ ಕಿಂಗ್ಸ್ ತಂಡವನ್ನು ಮಣಿಸಿತು.

ಮಹಾರಾಜ ಯಾದವೇಂದ್ರಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸೂರ್ಯಕುಮಾರ್ (78; 53ಎ, 4x7, 6x3) ಅವರ ಆಟದ ಬಲದಿಂದ ಮುಂಬೈ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 192 ರನ್ ಕಲೆ ಹಾಕಿತು.

ಈ ಗುರಿಯನ್ನು ಬೆನ್ನತ್ತಿದ ಪಂಜಾಬ್ ತಂಡಕ್ಕೆ ವೇಗದ ಬೌಲರ್‌ಗಳಾದ ಜೆರಾಲ್ಡ್ ಕೋಟ್ಜಿ ಮತ್ತು ಬೂಮ್ರಾ ಆರಂಭದಲ್ಲೇ ಪೆಟ್ಟು ನೀಡಿದರು. ಕೇವಲ 14 ರನ್ ಗಳಿಸುವಷ್ಟರಲ್ಲಿ ಪ್ರಮುಖ ನಾಲ್ಕು ವಿಕೆಟ್ ಕಳೆದುಕೊಂಡು ತಂಡವು ಸಂಕಷ್ಟಕ್ಕೆ ಸಿಲುಕಿತು. ನಾಯಕ ಸ್ಯಾಮ್ ಕರನ್ (6), ಪ್ರಭಸಿಮ್ರನ್ ಸಿಂಗ್ (0), ರಿಲಿ ರುಸೊ (1) ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ (1) ನಿರಾಸೆ ಮೂಡಿಸಿದರು.

ಹರಪ್ರೀತ್ ಸಿಂಗ್ (13) ಮತ್ತು ಜಿತೇಶ್ ಶರ್ಮಾ (9) ಕೂಡ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಆದರೆ, ಈ ಹಿಂದೆ ತಂಡ ಸಂಕಷ್ಟದಲ್ಲಿದ್ದಾಗ ಆಡಿದ್ದ ಶಶಾಂಕ್ ಸಿಂಗ್ (41; 25ಎ, 4x2, 6x3) ಮತ್ತು ಅಶುತೋಷ್ ಶರ್ಮಾ (61; 28ಎ, 4x2, 6x7) ಮತ್ತೊಮ್ಮೆ ಪಂಜಾಬ್‌ನ ಹೋರಾಟಕ್ಕೆ ನೆರವಾದರು. ಅವರು ಏಳನೇ ವಿಕೆಟ್ ಜೊತೆಯಾಟದಲ್ಲಿ 17 ಎಸೆತಗಳಲ್ಲಿ 34 ರನ್ ಸೇರಿಸಿದರು. ಶಶಾಂಕ್ ನಿರ್ಗಮಿಸಿದ ಬಳಿಕ ಹರಪ್ರೀತ್ ಬ್ರಾರ್ (21) ಅವರೊಂದಿಗೆ ಅಶುತೋಷ್ 8ನೇ ವಿಕೆಟ್‌ಗೆ 57 ರನ್ (32ಎ) ಸೇರಿಸಿ ತಂಡದ ಗೆಲುವಿನ ಆಸೆ ಚಿಗುರಿಸಿದರು.

ಈ ಹಂತದಲ್ಲಿ ಜಯಕ್ಕೆ 18 ಎಸೆತಗಳಲ್ಲಿ 25 ರನ್ ಅಗತ್ಯವಿತ್ತು. ಆದರೆ, 18ನೇ ಓವರ್‌ನ ಮೊದಲ ಎಸೆತದಲ್ಲಿ ಅಶುತೋಷ್ ಅವರು ಜೆರಾಲ್ಡ್ ಅವರಿಗೆ ವಿಕೆಟ್ ಒಪ್ಪಿಸುವುದರೊಂದಿಗೆ ಪಂದ್ಯವು ಮತ್ತೆ ಮುಂಬೈನತ್ತ ವಾಲಿತು. ಜೆರಾಲ್ಡ್ ಮತ್ತು ಬೂಮ್ರಾ ತಲಾ ಮೂರು ವಿಕೆಟ್ ಪಡೆದರು. ಹಾರ್ದಿಕ್ ಪಾಂಡ್ಯ, ಶ್ರೇಯಸ್ ಗೋಪಾಲ್ ಮತ್ತು ಆಕಾಶ್ ಮಧ್ವಲ್ ತಲಾ ಒಂದು ವಿಕೆಟ್ ಗಳಿಸಿದರು.

ಸೂರ್ಯ ಮಿಂಚಿನ ಅರ್ಧಶತಕ: ಇದಕ್ಕೂ ಮೊದಲು ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿಯೇ ಇಶಾನ್ ಕಿಶನ್ (8 ರನ್) ಔಟಾದರು. ಕ್ರೀಸ್‌ನಲ್ಲಿದ್ದ ರೋಹಿತ್ ಅವರೊಂದಿಗೆ ಸೇರಿದ ಸೂರ್ಯ ಎರಡನೇ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು.

ರೋಹಿತ್ ಮೂರು ಸಿಕ್ಸರ್, ಎರಡು ಬೌಂಡರಿಗಳಿದ್ದ 36 ರನ್ ಗಳಿಸಿದರು. ಸೂರ್ಯ ತಮ್ಮ ಎಂದಿನ ಶೈಲಿಯಲ್ಲಿ ಚೆಂಡನ್ನು ಬೌಂಡರಿಗೆರೆ ದಾಟಿಸಿದರು. ಸ್ಕೂಪ್, ಫ್ಲಿಕ್, ಡ್ರೈವ್‌ಗಳ ಮೂಲಕ ರನ್ ಸೂರೆ ಮಾಡಿದರು.

12ನೇ ಓವರ್‌ನಲ್ಲಿ ರೋಹಿತ್ ಅವರು ಸ್ಯಾಮ್ ಕರನ್ ಬೌಲಿಂಗ್‌ನಲ್ಲಿ ಹರಪ್ರೀತ್ ಬ್ರಾರ್‌ಗೆ ಕ್ಯಾಚಿತ್ತರು. ಸೂರ್ಯ ಜೊತೆಗೂಡಿದ ತಿಲಕ್ ವರ್ಮಾ (ಔಟಾಗದೆ 34) ರನ್ ಗಳಿಕೆಗೆ ವೇಗ ನೀಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 49 ರನ್ ಸೇರಿಸಿದರು. 17ನೇ ಓವರ್‌ನಲ್ಲಿ ಸೂರ್ಯ ಕ್ಯಾಚ್ ಪಡೆದ ಪ್ರಭಸಿಮ್ರನ್ ಸಿಂಗ್ ಸಂಭ್ರಮಿಸಿದರು. ಕರನ್ ವಿಕೆಟ್ ಪಡೆದರು. ಆದರೆ ಇದಾದ ನಂತರದ 22 ಎಸೆತಗಳಲ್ಲಿ ಮುಂಬೈ ಖಾತೆಗೆ 44 ರನ್‌ಗಳು ಹರಿದುಬಂದವು. ಇದಕ್ಕೆ ಕಾರಣವಾಗಿದ್ದು ವರ್ಮಾ ಅವರ ಬೀಸಾಟ. ಹಾರ್ದಿಕ್ 6 ಎಸೆತಗಳಲ್ಲಿ 10 ಹಾಗೂ ಟಿಮ್ ಡೇವಿಡ್ 7 ಎಸೆತಗಳಲ್ಲಿ 14 ರನ್‌ಗಳ ಕಾಣಿಕೆ ನೀಡಿದರು. ಪಂಜಾಬ್ ವೇಗಿ ಹರ್ಷಲ್ ಪಟೇಲ್ ಈ ಹೊತ್ತಿನಲ್ಲಿ ಮೂರು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 192 (ರೋಹಿತ್ ಶರ್ಮಾ 36, ಸೂರ್ಯಕುಮಾರ್ ಯಾದವ್ 78, ತಿಲಕ್ ವರ್ಮಾ ಔಟಾಗದೆ 34, ಟಿಮ್ ಡೇವಿಡ್ 14, ಹರ್ಷಲ್ ಪಟೇಲ್ 31ಕ್ಕೆ3, ಸ್ಯಾಮ್ ಕರನ್ 41ಕ್ಕೆ2, ಕಗಿಸೊ ರಬಾಡ 42ಕ್ಕೆ1). **ಪಂಜಾಬ್ ಕಿಂಗ್ಸ್:** 19.1 ಓವರ್‌ಗಳಲ್ಲಿ 183 (ಶಶಾಂಕ್ ಸಿಂಗ್ 41, ಅಶುತೋಷ್ 61, ಹರಪ್ರೀತ್ ಬ್ರಾರ್ 21; ಜೆರಾಲ್ಡ್ ಕೋಟ್ಜಿ 32ಕ್ಕೆ 3, ಜಸ್‌ಪ್ರೀತ್ ಬೂಮ್ರಾ 21ಕ್ಕೆ 3, ಶ್ರೇಯಸ್ ಗೋಪಾಲ್ 26ಕ್ಕೆ 1). **ಪಂದ್ಯದ ಆಟಗಾರ:** ಜಸ್‌ಪ್ರೀತ್ ಬೂಮ್ರಾ. **ಫಲಿತಾಂಶ:** ಮುಂಬೈ ಇಂಡಿಯನ್ಸ್‌ಗೆ 9 ರನ್‌ಗಳ ಜಯ.



ಅರ್ಧಶತಕ ಗಳಿಸಿದ ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್ –ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	7	6	1	12	0.677
ಕೋಲ್ಕತ್ತ ನೈಟ್ ರೈಡರ್ಸ್	6	4	2	8	1.399
ಚೆನ್ನೈ ಸೂಪರ್ ಕಿಂಗ್ಸ್	6	4	2	8	0.726
ಸನ್‌ರೈಸರ್ಸ್ ಹೈದರಾಬಾದ್	6	4	2	8	0.502
ಲಖನೌ ಸೂಪರ್ ಜೈಂಟ್ಸ್	6	3	3	6	0.038
ಡೆಲ್ಲಿ ಕ್ಯಾಪಿಟಲ್ಸ್	6	3	4	6	-0.074
ಮುಂಬೈ ಇಂಡಿಯನ್ಸ್	7	3	4	6	-0.133
ಗುಜರಾತ್ ಟೈಟನ್ಸ್	7	3	4	6	-1.303
ಪಂಜಾಬ್ ಕಿಂಗ್ಸ್	7	2	5	4	-0.251
ಆರ್‌ಸಿಬಿ (ಬೆಂಗಳೂರು)	7	1	6	2	-1.185

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (361 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (13 ವಿಕೆಟ್)

ರಾಹುಲ್ ಬಳಗ–ಋತುರಾಜ್ ಪಡೆ ಮುಖಾಮುಖಿ ಇಂದು

‘ಸೂಪರ್’ ಹಣಾಹಣಿಗೆ ಲಖನೌ ಸಜ್ಜು



ಲಖನೌ ಸೂಪರ್ ಜೈಂಟ್ಸ್ ತಂಡದ ನಿಕೊಲಸ್ ಪೂರನ್

ಚೆನ್ನೈ ಸೂಪರ್ ಕಿಂಗ್ಸ್ ತಂಡದ ವೇಗಿ ಮಥೀಷ ಪಥಿರಾಣ –ಪಿಟಿಐ ಚಿತ್ರಗಳು

ಲಖನೌ (ಪಿಟಿಐ): ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಆತಿಥೇಯ ಲಖನೌ ಸೂಪರ್ ಜೈಂಟ್ಸ್ ತಂಡದ ಸ್ಫೋಟಕ ಶೈಲಿಯ ಬ್ಯಾಟರ್‌ಗಳು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಬೌಲರ್‌ಗಳ ನಡುವಣ ಹಣಾಹಣಿಯಾಗುವ ನಿರೀಕ್ಷೆ ಇದೆ.

ಏಕನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯ ದಲ್ಲಿ ಗೆದ್ದು ಸೋಲಿನ ಸರಪಳಿ ಕಳಚಿಕೊಳ್ಳುವ ತವಕದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡವಿದೆ. ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಋತುರಾಜ್ ಗಾಯಕವಾಡ ಅವರ ಚೆನ್ನೈ ತಂಡವು ಗೆಲುವಿನ ಓಟವನ್ನು ಮುಂದುವರಿಸುವತ್ತ ಚಿತ್ತ ನೆಟ್ಟಿದೆ.

ಲಖನೌ ತಂಡವು ಐದನೇ ಸ್ಥಾನ ದಲ್ಲಿದೆ. ತನ್ನ ಕಳೆದ ಎರಡೂ ಪಂದ್ಯಗಳಲ್ಲಿ ಸೋತಿದೆ. ಅದೇ ಚೆನ್ನೈ ಸತತ ಎರಡು ಪಂದ್ಯಗಳನ್ನು ಜಯಿಸಿದೆ. ಅದರಲ್ಲಿ ಚೆನ್ನೈ ಬೌಲರ್‌ಗಳು ಮಿಂಚಿದ್ದರು. ಮಥೀಷ ಪಥಿರಾಣ ಯಾರ್ಕರ್‌ಗಳು, ಮುಸ್ತಫಿಜುರ್ ರೆಹಮಾನ್ ಅವರ ಕಟರ್ಸ್ ಮತ್ತು ಸ್ವಿಂಗ್ ಎಸೆತಗಳಿಗೆ ಬ್ಯಾಟರ್‌ಗಳು ಶರಣಾಗಿದ್ದರು. ಇನ್ನೊಂದೆಡೆ ರವೀಂದ್ರ ಜಡೇಜ ಸ್ಪಿನ್ ಮೋಡಿಯೂ ನಡೆಯುತ್ತಿದೆ. ಲಖನೌ ಕ್ರೀಡಾಂಗಣದ ಪಿಚ್ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆ ಇದ್ದು, ಜಡೇಜ ಪರಿಣಾಮ ಬೀರುವ ಸಾಧ್ಯತೆ ಇದೆ.

ಲಖನೌ ತಂಡದ ಪ್ರಮುಖ ಬ್ಯಾಟರ್‌ಗಳಾದ ಕ್ವಿಂಟನ್ ಡಿಕಾಕ್, ರಾಹುಲ್, ನಿಕೊಲಸ್ ಪೂರನ್ ಅವರನ್ನು ಕಟ್ಟಿಹಾಕುವುದು ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು. ಮಾರ್ಕಸ್ ಸ್ಟೊಯಿನಿಸ್, ದೇವದತ್ತ ಪಡಿಕ್ಕಲ್ ಹಾಗೂ ಕೃಣಾಲ್ ಪಾಂಡ್ಯ ತಮ್ಮ ನೈಜ ಲಯಕ್ಕೆ ಮರಳಿದರೆ ಲಖನೌ ತಂಡವು ಹೆಚ್ಚು ರನ್ ಕಲೆ ಹಾಕಬಹುದು.

ಆತಿಥೇಯ ತಂಡದ ಸ್ಪಿನ್ನರ್ ರವಿ ಬಿಷ್ಣೋಯಿ, ನವೀನ್ ಉಲ್ ಹಕ್, ಶಾಮರ್ ಜೋಸೆಫ್ ಮತ್ತು ಮೊಹಸಿನ್ ಖಾನ್ ಅವರ ಮುಂದಿರುವ ಸವಾಲು ಕೂಡ ಸಣ್ಣದಲ್ಲ. ಚೆನ್ನೈ ತಂಡದ ಆರಂಭಿಕ ಬ್ಯಾಟರ್ ಋತುರಾಜ್, ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ, ಡ್ಯಾರಿಲ್ ಮಿಚೆಲ್ ಮತ್ತು ಮಹೇಂದ್ರಸಿಂಗ್ ಧೋನಿ ಉತ್ತಮ ಲಯದಲ್ಲಿದ್ದಾರೆ. ಡೆವೊನ್ ಕಾನ್ವೆ ಗಾಯಗೊಂಡಿರುವುದರಿಂದ ವಿಶ್ರಾಂತಿ ಪಡೆದಿದ್ದು, ಅವರ ಬದಲಿಗೆ ರಿಚರ್ಡ್ ಗ್ಲೀಸನ್ ಅವರನ್ನು ಸೇರ್ಪಡೆ ಮಾಡಿಕೊಂಡಿದೆ. ರಚಿನ್ ರವೀಂದ್ರ ಮತ್ತು ಅಜಿಂಕ್ಯ ರಹಾನೆ ಲಯಕ್ಕೆ ಮರಳಿದರೆ ಬ್ಯಾಟಿಂಗ್ ವಿಭಾಗ ಮತ್ತಷ್ಟು ಗಟ್ಟಿಯಾಗಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ : ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

28ರಂದು ಸ್ಪರ್ಧೆ: ಅಂತರರಾಷ್ಟ್ರೀಯ ಅಥ್ಲೀಟ್‌ಗಳು ಭಾಗಿ

ಟೆನ್‌ಕೆ ಓಟಕ್ಕೆ 30 ಸಾವಿರ ಸ್ಪರ್ಧಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟಿಸಿಎಸ್ ವಿಶ್ವ 10ಕೆ ಬೆಂಗಳೂರು-2024’ ಓಟ ಇದೇ ತಿಂಗಳ 28ರಂದು ಉದ್ಯಾನಗರಿಯಲ್ಲಿ ನಡೆಯಲಿದ್ದು, ಒಟ್ಟು 30 ಸಾವಿರ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ.

ಮೊದಲ ಬಾರಿಗೆ ಗ್ರೌಂಡ್ ಮತ್ತು ವರ್ಚುವಲ್ (ಹೈಬ್ರೀಡ್) ವಿಭಾಗದಲ್ಲಿ ಕೆನ್ಯಾ, ಇಥಿಯೋಪಿಯಾ, ಭಾರತ ಸೇರಿದಂತೆ ವಿವಿಧ ದೇಶಗಳ ಸ್ಪರ್ಧಿಗಳು ಭಾಗವಹಿಸುತ್ತಿದ್ದು, ಇದರಲ್ಲಿ 1500 ಓಟಗಾರರು ವರ್ಚುವಲ್ ಆಗಿ ಪಾಲ್ಗೊಳ್ಳುತ್ತಿರುವುದು 16ನೇ ಆವೃತ್ತಿಯ ವಿಶೇಷ.

ವಿಶ್ವದ ಎರಡನೇ ಅತಿ ವೇಗದ ಟೆನ್‌ಕೆ ಓಟಗಾರ್ತಿ ಕೆನ್ಯಾದ ಇಮಾಕ್ಯುಲೇಟ್ ಅನ್ಯಾಂಗೊ ಅಕೋಲ್, ಬೆಂಗಳೂರು ಓಟದ ಪ್ರಚಾರ ರಾಯಭಾರಿಯಾಗಿರುವ ಶಾಟ್‌ಪಟ್ ಥ್ರೊ ಸ್ಪರ್ಧಿ ವೇಲೇರಿ ಆ್ಯಡಮ್ಸ್, ಭಾರತದ ತಂಶಿ ಸಿಂಗ್, ಸಂಜೀವಿನಿ ಜಾಧವ್ ಅವರು ಓಟಕ್ಕೆ ಮೆರಗು ನೀಡಲಿದ್ದಾರೆ ಎಂದು ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮಾಣೆಕ್ ಷಾ ಪರೇಡ್ ಮೈದಾನದಿಂದ ಆರಂಭವಾಗುವ ರೇಸ್ ಪ್ರಮುಖ ರಸ್ತೆಗಳಲ್ಲಿ ಸಾಗಿ ಅದೇ ಸ್ಥಳದಲ್ಲಿ ಕೊನೆಗೊಳ್ಳಲಿದೆ. ಫೀಚರ್ ರೇಸ್ ಓಪನ್ 10ಕೆ, ಅಂಗವಿಕಲರು, ಹಿರಿಯ ನಾಗರಿಕರು ಮತ್ತು ಮಜಾ ರನ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ವೃತ್ತಿಪರ ಮತ್ತು ಹವ್ಯಾಸಿ ಓಟಗಾರರು ಭಾಗವಹಿಸುವರು.

ಹಾಲಿ ಚಾಂಪಿಯನ್ ತಂಶಿ ಸಿಂಗ್ ಮತ್ತು ಎರಡು ಬಾರಿಯ ಚಾಂಪಿಯನ್ ಸಂಜೀವನಿ ಜಾಧವ್ ಅವರನ್ನೊಳಗೊಂಡ ಭಾರತ ಎಲೀಟ್ ಮಹಿಳಾ ತಂಡ ಕಣಕ್ಕಿಳಿಯಲಿದೆ. ಪುರುಷರ ವಿಭಾಗದಲ್ಲಿ ಕಳೆದ ವರ್ಷದ ರನ್ನರ್ ಅಪ್ ಹರ್ಮನ್‌ಜೋತ್ ಸಿಂಗ್ ಮತ್ತೆ ಸ್ಪರ್ಧಿಸುತ್ತಿದ್ದಾರೆ.

ಓಟವು ಒಟ್ಟು ₹ 1,75,41,405 ಬಹುಮಾನ ಮೊತ್ತ ಹೊಂದಿದ್ದು, ಭಾರತದ ಪುರುಷರ ಮತ್ತು ಮಹಿಳಾ ವಿಭಾಗಗಳ ವಿಜೇತರಿಗೆ ತಲಾ ₹ 2.75 ಲಕ್ಷ ನಗದು ನೀಡಲಾಗುವುದು. ಅಲ್ಲದೇ ಕೂಟ ದಾಖಲೆಗೆ ಬೋನಸ್ ಆಗಿ ಹೆಚ್ಚುವರಿ ₹ 2 ಲಕ್ಷ ನಗದು ದೊರೆಯಲಿದೆ. ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಓಟ ಪೂರ್ಣಗೊಳಿಸುವ ಸಾವಿರ ಸ್ಪರ್ಧಿಗಳಿಗೆ ಎಸಿಕ್ಸ್ ವತಿಯಿಂದ ಟಿ ಶರ್ಟ್ ನೀಡಲಾಗುತ್ತದೆ. ಪ್ರಶಸ್ತಿ ಪ್ರದಾನ ಸಮಾರಂಭದ ವೇಳೆ ಅವಿನಾಶ್ ಗುಪ್ತಾ, ಅಭಿಷೇಕ್ ಸೋನಿ ಅವರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹೀರೊ ಮೊಟೊಕಾರ್ಪ್ ಚೀಫ್ ಬಿಸಿನೆಸ್ ಆಫೀಸರ್ ಡಾ.ಸ್ವದೇಶ್ ಶ್ರೀವಾಸ್ತವ್ ಇದ್ದರು.



‘ಟಿಸಿಎಸ್ ವಿಶ್ವ 10ಕೆ ಬೆಂಗಳೂರು2024’ ಓಟದ ಪೋಷಾಕು ಬಿಡುಗಡೆ ಮಾಡಲಾಯಿತು. (ಎಡದಿಂದ) ಎಸಿಕ್ಸ್ ಇಂಡಿಯಾ ನಿರ್ದೇಶಕ ಸೌರಭ್ ಶರ್ಮಾ, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಮುಖ್ಯ ಮಾರುಕಟ್ಟೆ ಅಧಿಕಾರಿ ನಾರಾಯಣ್, ಟಿಸಿಎಸ್‌ನ ಬಿಲಾತ್ ಥೋಂಗ್ರಾಮ್, ಟಿಸಿಎಸ್ ಪ್ರಾದೇಶಿಕ ಮುಖ್ಯಸ್ಥ ಸುನಿಲ್ ದೇಶಪಾಂಡೆ, ಮಾಜಿ ಅಥ್ಲೀಟ್ ಅಂಜು ಬಾಬಿ ಜಾರ್ಜ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ –ಪ್ರಜಾವಾಣಿ ಚಿತ್ರ

‘ಆಲ್‌ರೌಂಡರ್ ಬೆಳವಣಿಗೆಗೆ ‘ಇಂಪ್ಯಾಕ್ಟ್ ಪ್ಲೇಯರ್’ ಅಡ್ಡಿ’



ರೋಹಿತ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿರುವ ಇಂಪ್ಯಾಕ್ಟ್ ಪ್ಲೇಯರ್ ನಿಯಮವು ಆಲ್‌ರೌಂಡರ್‌ಗಳ ಬೆಳವಣಿಗೆಗೆ ಅಡ್ಡಿಯಾಗಲಿದೆ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ಹಾಗೂ ಮುಂಬೈ ಇಂಡಿಯನ್ಸ್ ಆಟಗಾರ ರೋಹಿತ್ ಶರ್ಮಾ ಅಭಿಪ್ರಾಯಪಟ್ಟಿದ್ದಾರೆ.

ಹೋದ ವರ್ಷದ ಐಪಿಎಲ್ ಆವೃತ್ತಿಯಲ್ಲಿ ಈ ನಿಯಮವನ್ನು ಜಾರಿಗೆ ತರಲಾಗಿತ್ತು. ತಂಡಗಳು ಪಂದ್ಯದಲ್ಲಿ ಬದಲೀ ಆಟಗಾರರನ್ನು (ಬ್ಯಾಟರ್ ಅಥವಾ ಬೌಲರ್) ತಮ್ಮ ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಳ್ಳುವ ಒಂದು ಅವಕಾಶ ಇರುತ್ತದೆ.

‘ಈ ನಿಯಮವು ಆಲ್‌ರೌಂಡರ್‌ಗಳ ಬೆಳವಣಿಗೆಗೆ ಮಾರಕವಾಗಲಿವೆ. ವಾಷಿಂಗ್ಟನ್ ಸುಂದರ್, ಶಿವಂ ದುಬೆ ಅವರಂತಹ ಆಲ್‌ರೌಂಡರ್‌ಗಳು ಬ್ಯಾಟಿಂಗ್‌ಗೆ ಮಾತ್ರ ಸೀಮಿತವಾಗುತ್ತಾರೆ. ಅವರು ಬೌಲಿಂಗ್ ಮಾಡಲು ಅವಕಾಶ ಸಿಗುತ್ತಿಲ್ಲ. ನಮಗೆ (ಭಾರತ ತಂಡ) ಪಾಲಿಗೆ ಇದು ನಿಜಕ್ಕೂ ಒಳ್ಳೆಯದಲ್ಲ’ ಎಂದು ರೋಹಿತ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರು ಮೈಕೆಲ್ ವಾನ್ ಮತ್ತು ಆ್ಯಡಂ ಗಿಲ್‌ಕ್ರಿಸ್ಟ್ ಅವರೊಂದಿಗೆ ಯೂಟ್ಯೂಬ್ ವಾಹಿನಿಯ ‘ಕ್ಲಬ್ ಪ್ರೈರೀ ಫೈರ್’ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಕ್ರಿಕೆಟ್ ಆಟವು ತಂಡದಲ್ಲಿ 11 ಆಟಗಾರರೊಂದಿಗೆ ಆಡುವುದಾಗಿದೆ. 12 ಆಟಗಾರರಿಂದ ಅಲ್ಲ. ಇಂಪ್ಯಾಕ್ಟ್ ಪ್ಲೇಯರ್ ನಿಯಮ ನನಗೇನೂ ಇಷ್ಟವಿಲ್ಲ. ಅಲ್ಪಸಲ್ಪ ಮನರಂಜನೆ ಹೆಚ್ಚಿಸಲು ಆಟದ ಸತ್ವವನ್ನು ಕಳೆದುಕೊಳ್ಳಲಾಗುತ್ತಿದೆ’ ಎಂದರು.

‘12 ಆಟಗಾರರು ಇರುವುದರಿಂದ ಮನರಂಜನೆ ಹೆಚ್ಚುತ್ತದೆ. ಪಂದ್ಯದ ಸ್ಥಿತಿಯನ್ನು ಅವಲೋಕಿಸಿ ಅಗತ್ಯಕ್ಕೆ ತಕ್ಕಂತೆ ಆಟಗಾರನನ್ನು ಬದಲಿಸಬಹುದು. ಪಿಚ್ ಸ್ಥಿತಿಯ ಮೇಲೂ ಇಂಪ್ಯಾಕ್ಟ್ ಪ್ಲೇಯರ್ ನಿಯಮ ಬಳಸಿಕೊಳ್ಳಬಹುದು. ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಚೆನ್ನಾಗಿ ಆಡುತ್ತಿರುವಾಗ 6 ಅಥವಾ 7 ಬೌಲರ್‌ಗಳಿಗೆ ಸ್ಥಾನ ನೀಡಬಹುದು. ಆಗ ಹೆಚ್ಚುವರಿ ಬ್ಯಾಟರ್ ಅಗತ್ಯವೇ ಇರುವುದಿಲ್ಲ’ ಎಂದು ಹೇಳಿದರು.

‘ಸುಳ್ಳು ಸುದ್ದಿ’: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದ ಆಯ್ಕೆಗಾಗಿ ತಾವು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಆಗರಕರ್ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರನ್ನು ಭೇಟಿಯಾಗಿಲ್ಲ. ಈ ಕುರಿತು ಹರಡಿರುವ ಸುದ್ದಿಗಳು ಸುಳ್ಳು ಎಂದು ರೋಹಿತ್ ಶರ್ಮಾ ಹೇಳಿದರು.

‘ನಾನು ಯಾರನ್ನೂ ಭೇಟಿಯಾಗಿಲ್ಲ. ಅಜಿತ್ ದುಬೈನಲ್ಲಿ ಗಾಲ್ಫ್ ಆಡುತ್ತಿರಬಹುದು. ರಾಹುಲ್ ಭಾಯ್ (ದ್ರಾವಿಡ್) ತಮ್ಮ ಮಗ ಆಡುವುದನ್ನು ವೀಕ್ಷಿಸಲು ಮುಂಬೈನಲ್ಲಿದ್ದಾರೆ. ಅವರ ಮಗ ಬ್ರೆಬೋರ್ನ್ ಕ್ರೀಡಾಂಗಣದ ಕೆಂಪು ಮಣ್ಣಿನಂಕಣದಲ್ಲಿ ಆಡುತ್ತಿದ್ದಾರೆ’ ಎಂದು ರೋಹಿತ್ ಸ್ಪಷ್ಟಪಡಿಸಿದರು.

ಡ್ರಾ ಪಂದ್ಯದಲ್ಲಿ ಗುಕೇಶ್, ಕರುವಾನಾ

ಕ್ಯಾಂಡಿಡೇಟ್ಸ್ ಚೆಸ್: ಪ್ರಗ್ಗು, ವಿದಿತ್‌ಗೆ ಸೋಲಿನ ಆಘಾತ

ಟೊರಾಂಟೊ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ 11ನೇ ಸುತ್ತಿನಲ್ಲಿ, ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ ಜೊತೆ ‘ಡ್ರಾ’ ಸಾಧಿಸಿ ಗಮನ ಸೆಳೆದರು. ಆದರೆ ಅವರು ಜಂಟಿ ಎರಡನೇ ಸ್ಥಾನಕ್ಕೆ ಸರಿದರು. ಭಾರತದ ಇನ್ನಿಬ್ಬರು ಗ್ರ್ಯಾಂಡ್‌ಮಾಸ್ಟರ್‌ಗಳಾದ ಆರ್. ಪ್ರಜ್ಞಾನಂದ ಮತ್ತು ವಿದಿತ್ ಗುಜರಾತಿ ಅವರು ಬುಧವಾರ ನಿರಾಸೆ ಅನುಭವಿಸಿದರು.

ಇಲ್ಲಿನ ‘ಗ್ರೇಟ್ ಹಾಲ್’ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಅಮೆರಿಕದ ಅನುಭವಿ ಆಟಗಾರ ಹಿಕಾರು ನಕಾಮುರಾ ಅವರು ಪ್ರಜ್ಞಾನಂದ ಅವರನ್ನು ಸೋಲಿಸಿದರೆ, ಕಳೆದ ಬಾರಿಯ ಚಾಂಪಿಯನ್ ಇಯಾನ್ ನೆಪೊಮ್‌ನಿಯಾಚಿ ಅವರು ವಿದಿತ್ ಎದುರು ಗೆಲುವು ಪಡೆದು ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಆಟಗಾರ ಅಲಿರೇಝಾ ಫಿರೋಜ್ ಅವರಿಗೆ ಅಜರ್‌ಬೈಜಾನ್‌ನ ನಿಜತ್ ಅಬಸೋವ್ ವಿರುದ್ಧ ಗೆಲುವು ದೊರೆಯಿತು. ಅಬಸೋವ್ ಇಲ್ಲಿ ಪಾಲ್ಗೊಂಡಿರುವ ಅತಿ ಕಡಿಮೆ (114ನೇ) ಕ್ರಮಾಂಕದ ಆಟಗಾರ ಎನಿಸಿದ್ದಾರೆ.

ಇನ್ನು ಮೂರು ಸುತ್ತುಗಳಷ್ಟೇ ಉಳಿದಿದ್ದು, ಇಲ್ಲಿ ಸತತ ಮೂರನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ನೆಪೊಮ್‌ನಿಯಾಚಿ ಏಳು ಪಾಯಿಂಟ್ಸ್ ಸಂಗ್ರಹಿಸಿ, ತಮ್ಮ ಸ್ಥಾನವನ್ನು ಇನ್ನಷ್ಟು ಗಟ್ಟಿಗೊಳಿಸಿದರು. 17 ವರ್ಷದ ಗುಕೇಶ್, ನಕಾಮುರಾ ಅವರೊಂದಿಗೆ (ತಲಾ 6.5) ಎರಡನೇ ಸ್ಥಾನದಲ್ಲಿದ್ದಾರೆ. ಕರುವಾನಾ (6) ನಾಲ್ಕನೇ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ (5.5) ಮತ್ತು ವಿದಿತ್ (5) ನಂತರದ ಸ್ಥಾನಗಳಲ್ಲಿದ್ದಾರೆ. ಅಲಿರೇಝಾ (4.5), ಅಬಸೋವ್ (3) ಏಳು ಮತ್ತು ಎಂಟನೇ ಸ್ಥಾನದಲ್ಲಿದ್ದಾರೆ.

ಮಹಿಳಾ ವಿಭಾಗದಲ್ಲಿ ಚೀನಾದ ಚೆಸ್ ತಾರೆಯರು ಮೇಲುಗೈ ಸಾಧಿಸಿದರು. ಝೊಂಗ್‌ಯಿ ತಾನ್ ಅವರು ರಷ್ಯಾದ ಕ್ಯಾತರಿನಾ ಲಾಗ್ನೊ ಅವರನ್ನು ಸೋಲಿಸಿ, ಏಳೂವರೆ ಪಾಯಿಂಟ್ಸ್‌ನೊಡನೆ ಮತ್ತೆ ಅಗ್ರಸ್ಥಾನಕ್ಕೆ ಲಗ್ಗೆಯಿಟ್ಟರು. ಚೀನಾದ ಮತ್ತೋರ್ವ ಆಟಗಾರ್ತಿ ಟಿಂಗ್ಜಿ ಲೀ, ಉಕ್ರೇನ್‌ನ ಅನ್ನಾ ಮುಝಿಚುಕ್ (4.5) ಅವರ ಜೊತೆ ಪಾಯಿಂಟ್ ಹಂಚಿಕೊಂಡರು.



ವಿದಿತ್ ಗುಜರಾತಿ (ಎಡಗಡೆ) ಮತ್ತು ನೆಪೊಮ್‌ನಿಯಾಚಿ ನಡುವಣ ಪಂದ್ಯ –ಪಿಟಿಐ ಚಿತ್ರ

ಗೆದ್ದ ಹಂಪಿ, ವೈಶಾಲಿ

ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ವೈಶಾಲಿ ಮಹಿಳಾ ವಿಭಾಗದ 11ನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (ರಷ್ಯಾ) ಅವರನ್ನು 70 ನಡೆಗಳಲ್ಲಿ ಸೋಲಿಸಿ, ಜಯದ ಹಳಿಗೆ ಮರಳಿದರು. ಹಂಪಿ, ಬಲ್ಗೇರಿಯಾದ ನುರ್ಗ್ಯುಲ್ ಸಲಿಮೋವಾ (4) ಅವರನ್ನು ಮಣಿಸಿದರು. ಆ ಮೂಲಕ ಟೂರ್ನಿಯ ಮೊದಲ ರೌಂಡ್‌ರಾಬಿನ್ ಲೀಗ್‌ನಲ್ಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡರು. ಝೊಂಗ್‌ಯಿ ತಾನ್ ಏಳು ಪಾಯಿಂಟ್‌ಗಳೊಡನೆ ಅಗ್ರಸ್ಥಾನದಲ್ಲಿದ್ದಾರೆ. ಲೀ ಟಿಂಗ್ಜಿ ಅರ್ಧ ಪಾಯಿಂಟ್ ಅಂತರದಿಂದ 2ನೇ ಸ್ಥಾನದಲ್ಲಿದ್ದಾರೆ. ವೈಶಾಲಿ ಎದುರು ಹಿನ್ನಡೆಯಿಂದ ಗೊರ್ಯಾಚ್ಕಿನಾ ಪ್ರಶಸ್ತಿ ಆಸೆಗೆ ಹಿನ್ನಡೆಯಾಗಿದೆ.

ಸಂಕ್ಷಿಪ್ತ ಸುದ್ದಿ

ಪ್ಯಾರಿಸ್ ಒಲಿಂಪಿಕ್ಸ್: ದೋಣಿಗಳಲ್ಲಿ ಪರೇಡ್

ಪ್ಯಾರಿಸ್ (ಎಪಿ): ಬೆಳದಿಂಗಳಲ್ಲಿ ಕಂಗೊಳಿಸುವ ಸೀನ್ ನದಿಯಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭ ನಡೆಯಲಿದೆ.

80ಕ್ಕೂ ಹೆಚ್ಚು ದೋಣಿಗಳಲ್ಲಿ 205 ತಂಡಗಳ ಪ್ರತಿನಿಧಿಗಳು ಪರೇಡ್ ಮೂಲಕ ಸಾಗಲಿದ್ದಾರೆ. ಪೂರ್ವದಿಂದ ಪಶ್ಚಿಮಾಭಿಮುಖವಾಗಿ (ಐಫೆಲ್ ಟವರ್ ಕಡೆ) 6 ಕಿ.ಮೀ. ದೂರ (3.7 ಮೈಲಿ) ಅಥ್ಲೀಟುಗಳು ದೋಣಿಯಲ್ಲಿ ಸಾಗಲಿದ್ದಾರೆ. ಒಟ್ಟಾರೆ ಕಾರ್ಯಕ್ರಮ ಮಧ್ಯಾಹ್ನ 3.45ಕ್ಕೆ ಆರಂಭವಾಗುತ್ತದೆ. ಆದರೆ ರಾತ್ರಿ 11.15ರವರೆಗೆ ನಡೆಯಲಿದೆ. ಅಥ್ಲೀಟುಗಳ ಪರೇಡ್‌ಗೆ ಮುನ್ನ ಕಲಾವಿದರಿಂದ ಕಾರ್ಯಕ್ರಮಗಳು ನಡೆಯಲಿವೆ. ಬಿಗಿ ಭದ್ರತಾ ವ್ಯವಸ್ಥೆಯ ನಡುವೆ 3,20,000 ಮಂದಿ ಕಾರ್ಯಕ್ರಮ ವೀಕ್ಷಿಸಲಿದ್ದಾರೆ.

ಮೊಮೊಟಾ ವಿದಾಯ



ಟೋಕಿಯೊ (ಎಎಫ್‌ಪಿ): ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್‌ನಿಂದ ನಿವೃತ್ತರಾಗುವುದಾಗಿ ಎರಡು ಬಾರಿಯ ವಿಶ್ವ ಚಾಂಪಿಯನ್, ಜಪಾನ್‌ನ ಕೆಂಟೊ ಮೊಮೊಟಾ ಅವರು ಹೇಳಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಾಯಾಳಾದ ನಂತರ ತಮಗೆ ಮೊದಲಿನಂತೆ ಆಡಲು ಸಾಧ್ಯವಾಗಲಿಲ್ಲ ಎಂದು 29 ವರ್ಷದ ಮೊಮೊಟಾ ಒಪ್ಪಿಕೊಂಡಿದ್ದಾರೆ. ಬ್ಯಾಡ್ಮಿಂಟನ್ ಸೂಪರ್‌ಸ್ಟಾರ್ ಎನಿಸಿದ್ದ ಅವರು 2019ರಲ್ಲಿ 11 ಪ್ರಶಸ್ತಿಗಳನ್ನು ಗೆದ್ದುಕೊಂಡು ಬೀಗಿದ್ದರು.

ಒಲಿಂಪಿಕ್ ಕೋಟಾ ಮೇಲೆ ವಿನೇಶಾ ಕಣ್ಣು

ಬಿಷ್ಕೆಕ್ (ಕಿರ್ಗಿಸ್ತಾನ) (ಪಿಟಿಐ): ಎರಡು ಬಾರಿಯ ಒಲಿಂಪಿಯನ್ ವಿನೇಶಾ ಫೋಗಾಟ್ ಅವರು ಶುಕ್ರವಾರ ಇಲ್ಲಿ ಪ್ರಾಂಭವಾಗುವ ಏಷ್ಯಾ ಒಲಿಂಪಿಕ್ ಅರ್ಹತಾ ಪಂದ್ಯಗಳಲ್ಲಿ ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಸ್ಥಾನಕ್ಕೆ ಭಾರತದ ಇತರೆ 16 ಕುಸ್ತಿಪಟುಗಳೊಂದಿಗೆ ಪೈಪೋಟಿ ನಡೆಸಲಿದ್ದಾರೆ.

ಭಾರತದ ಉಳಿದ ಕುಸ್ತಿಪಟುಗಳಾದ ವಿನೇಶಾ (50 ಕೆಜಿ), ರೀತಿಕಾ ಹೂಡಾ (76 ಕೆಜಿ), ಪ್ರಸ್ತುತ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್ ಅಂಶು (57 ಕೆಜಿ), ಮಾನ್ಸಿ (62 ಕೆಜಿ) ಮತ್ತು ನಿಶಾ (68 ಕೆಜಿ) ಅವರು ತಮ್ಮ ಕೋಟಾ ಸ್ಥಾನ ಭದ್ರಪಡಿಸಿಕೊಳ್ಳಲು ಇದು ಸಕಾಲವಾಗಿದೆ.

‘ನಾಯಕತ್ವ ಲಭಿಸಿದ್ದು ಹೆಮ್ಮೆಯ ವಿಷಯ’

ಮುಂಬೈ: ‘ಬಾಲ್ಯದಿಂದಲೂ ದೇಶದ ತಂಡಕ್ಕಾಗಿ ಆಡುವ ಕನಸು ಕಂಡಿದ್ದೆ. ಇದೀಗ ತಂಡವನ್ನು ನಾಯಕನಾಗಿ ಮುನ್ನಡೆಸುವ ಅವಕಾಶ ಸಿಕ್ಕಿರುವುದು ಹೆಮ್ಮೆಯ ವಿಷಯ’ ಎಂದು ಕಿವೀಸ್ ತಂಡದ ನಾಯಕ ಮಿಚೆಲ್ ಬ್ರೇಸ್‌ವೆಲ್ ಹೇಳಿದ್ದಾರೆ.

‘ಗಾಯದಿಂದ ದೀರ್ಘ ಕಾಲ ಕ್ರಿಕೆಟ್‌ನಿಂದ ಹೊರಗಿದ್ದೆ. ಆ ಸಂದರ್ಭದಲ್ಲಿ ಮನೋಬಲ ಗಟ್ಟಿ ಯಾಗಿರಬೇಕು. ಅದೊಂದು ಸವಾಲಾಗಿತ್ತು. ಆದರೂ ಅದರಲ್ಲಿ ಗೆದ್ದು ಬಂದಿರುವೆ. ಟಿ20 ವಿಶ್ವಕಪ್ ಹೊಸ್ತಿಲಲ್ಲಿ ನಮ್ಮ ತಂಡದ ನಾಯಕತ್ವ ವಹಿಸುತ್ತಿದ್ದೇನೆ. ಇದು ಉತ್ತಮ ಅವಕಾಶ’ ಎಂದು ಸೋನಿ ನೆಟ್‌ವರ್ಕ್ ಆಯೋಜಿಸಿದ್ದ ವರ್ಚುವಲ್ ಸಂವಾದದಲ್ಲಿ ಅವರು ಹೇಳಿದರು.